# ಕನ್ನಡ ಸಿನಿಮಾ

## ಇತಿಹಾಸದ ಪುಟಗಳಲ್ಲಿ

ಗಂಗಾಧರ ಮೊದಲಿಯಾರ್


ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಕನ್ನಡ ಸಿನಿಮಾ

## ಇತಿಹಾಸದ ಪುಟಗಳಲ್ಲಿ

ಗಂಗಾಧರ ಮೊದಲಿಯಾರ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - 560 018



***History of Kannada Cinema* - by *Gangadhara Mudaliar,*** *Chief Sub Editor, "PRAJAVANI" Kannada daily, 75, M. G. Road, Bangalore-560 001, Published by Kannada Pusthaka Pradhikara (Kannada Book Authority) Chamarajpet, Bangalore-560 018.*

First Edition 1998

Pages : VI + 210

© ಈ ಮುದ್ರಣದ ಹಕ್ಕು : ಕನ್ನಡ ಪುಸ್ತಕ ಪ್ರಾಧಿಕಾರ.

ಬೆಲೆ : ರೂ. 275

ಮುಖಪುಟ ಹಾಗೂ ವಿನ್ಯಾಸ : **ರಾ. ಸೂರಿ**
ಸಹಾಯ : **ಗಂಗಾಧರ ಪಿ.**

ಛಾಯಾಚಿತ್ರಗಳು :
ಎಸ್. ತಿಪ್ಪೇಸ್ವಾಮಿ
ಕೆ. ಜಿ. ಶಿವಯೋಗಿ
ಡಿ. ಸಿ. ನಾಗೇಶ್
ಚಲನಚಿತ್ರ ಭಂಡಾರ/ವಾರ್ತಾ ಇಲಾಖೆ
ಎಸ್. ಶ್ರೀಧರ ಮೂರ್ತಿ
ಸನತ್ ಕುಮಾರ್
ಜಿ. ಶ್ರೀನಿವಾಸ ಮೂರ್ತಿ

ಮುದ್ರಕರು :
**ಗೀತಾಂಜಲಿ ಪ್ರಿಂಟರ್ಸ್**
ನಂ.5, ಎಂ. ಎಸ್. ರಾಮಯ್ಯ ಕೈಗಾರಿಕಾ ಬಡಾವಣೆ
ಗೋಕುಲ, ಬೆಂಗಳೂರು - 560 054

# ಮುನ್ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುದೆಂದರೆ ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗಿರುವ ಕೃತಿಗಳನ್ನು ಲೇಖಕರಿಂದ, ಪ್ರಕಾಶಕರಿಂದ ಕೊಂಡು, ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣಿತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು.

ಜಗತ್ತಿನಲ್ಲಿ ಸಿನಿಮಾ ಆವಿಷ್ಕಾರದ ನೂರನೇ ವರ್ಷದ ಸಂಭ್ರಮವನ್ನು ಸಡಗರದಿಂದಲೇ ಆಚರಿಸಲಾಗುತ್ತಿದೆ. ವಿಶ್ವ ಸಿನಿಮಾಕ್ಕೆ ನೂರು ವರ್ಷವಾದ ಸಂಭ್ರಮ ವಿಶ್ವದ ಎಲ್ಲೆಡೆ ಕಾಣಬರುತ್ತಿದೆ. ನೂರು ವರ್ಷಗಳ ಸಾಧನೆ ನಡೆದು ಬಂದ ದಾರಿಯ ಹಲವಾರು ಆಂಗ್ಲ ಪುಸ್ತಕಗಳು ಹೊರಬಂದು ದಾಖಲೆಯನ್ನು ನಿರಂತರಗೊಳಿಸುವ ಯತ್ನ ನಡೆದಿದೆ. ಇದೇ ಸಂದರ್ಭದಲ್ಲಿ ಭಾರತೀಯ ಚಿತ್ರರಂಗ ಈಗ 85ನೇ ವರ್ಷಕ್ಕೆ ಕಾಲಿಟ್ಟಿದೆ. ಕನ್ನಡ ಚಿತ್ರರಂಗವೂ 60ನೇ ವರ್ಷ ದಾಟಿ ಮಹತ್ವದ ಹೆಜ್ಜೆಯನ್ನಿಟ್ಟಿರುವುದು ಹೆಮ್ಮೆಯ ವಿಷಯ.

ಕನ್ನಡ ಚಿತ್ರರಂಗ ಈಗ ರಾಷ್ಟ್ರದಲ್ಲೇ ಎಲ್ಲರೂ ಕುತೂಹಲದಿಂದ ನಿರೀಕ್ಷಿಸುವಂತಹ ಮಟ್ಟದ ಚಿತ್ರಗಳ ನಿರ್ಮಾಣದಲ್ಲಿ ತೊಡಗಿರುವುದು ವಿಶೇಷ. ನಾಲ್ಕು ವರ್ಷಗಳ ಹಿಂದೆ 60 ವರ್ಷದ ಮಹತ್ವದ ಘಟ್ಟ ತಲುಪಿದ ವಜ್ರಮಹೋತ್ಸವದ ಆಚರಣೆ ನಡೆಯಿತು. ಆಗ ಕನ್ನಡ ಚಲನಚಿತ್ರರಂಗ ನಡೆದು ಬಂದ ದಾರಿಯ ಬಗ್ಗೆ ಹಲವಾರು ಸಮಾರಂಭಗಳು ನಡೆದವು. ಆ ಸಂದರ್ಭದಲ್ಲಿಯೇ ಪತ್ರಕರ್ತ ಗಂಗಾಧರ ಮೊದಲಿಯಾರ್ ಅವರು ತಾವು ಸಿದ್ಧಪಡಿಸಿದ ಕನ್ನಡ ಚಲನಚಿತ್ರರಂಗ ನಡೆದು ಬಂದ ದಾರಿಯ ಬಗ್ಗೆ ಸಮಗ್ರ ಮಾಹಿತಿಯಿರುವ ಪುಸ್ತಕ ಪ್ರಕಟಿಸುವ ಬಗ್ಗೆ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದರು.

ಕನ್ನಡ ಚಿತ್ರರಂಗ 64 ವರ್ಷಗಳನ್ನು ದಾಟಿ, ಹಲವಾರು ಮಹತ್ವದ ಹೆಜ್ಜೆ ಗುರುತುಗಳನ್ನು ನಿರ್ಮಿಸಿದ್ದರೂ, ಇದುವರೆಗೆ ಕನ್ನಡದಲ್ಲಿ ಕನ್ನಡ ಚಲನಚಿತ್ರರಂಗದ ಸಂಪೂರ್ಣ ಮಾಹಿತಿ ಒಂದು ಕಡೆಯೇ ಸಮಗ್ರವಾಗಿ ದೊರಕದ ಸ್ಥಿತಿ ಇದೆ. ಹೀಗಾಗಿ ಕನ್ನಡ ಸಿನಿಮಾ ಕುರಿತ ಮೊದಲ ಪುಸ್ತಕ ಪ್ರಕಟಿಸಿ, ಕನ್ನಡ ಸಿನಿಮಾದ ವಜ್ರಮಹೋತ್ಸವ ಆಚರಣೆಗೆ ದನಿಗೂಡಿಸುವ ಉದ್ದೇಶದಿಂದ ಈ ಪುಸ್ತಕ ಪ್ರಕಟಣೆಗೆ ಪ್ರಾಧಿಕಾರದ ಸಮಿತಿ ನಿರ್ಣಯಿಸಿತು. ಎರಡು ವರ್ಷಗಳ ಹಿಂದೆಯೇ ಪ್ರಕಟವಾಗಬೇಕಿದ್ದ ಈ ಪುಸ್ತಕ ಹಲವಾರು ಕಾರಣಗಳಿಂದ ತಡವಾಗಿದೆ. ಆದರೂ ಈ ರೀತಿಯ ಆಕರ್ಷಕ ಪುಸ್ತಕವನ್ನು ಹೊರತಂದ ನೆಮ್ಮದಿ ನಮ್ಮದಾಗಿದೆ.

1934ರಲ್ಲಿ ವಾಕ್ಚಿತ್ರಯುಗ ಆರಂಭವಾಯಿತಾದರೂ 1921ರಿಂದಲೇ ಮೂಕಿ ಚಿತ್ರಗಳ ತಯಾರಿಕೆ ಮೂಲಕ ಕನ್ನಡಿಗರು ಈ ಹೊಸ ಮಾಧ್ಯಮದ ಬಗ್ಗೆ ಆಕರ್ಷಿತರಾಗಿದ್ದರು. ಉದ್ದಕ್ಕೂ ನಮ್ಮ ಗಮನ ಸೆಳೆಯುವ ಅಂಶವೆಂದರೆ, ಕನ್ನಡದ ಹೆಸರಾಂತ ಸಾಹಿತಿಗಳು ಚಲನಚಿತ್ರ ನಿರ್ಮಾಣ ವಿಷಯದಲ್ಲಿ ಸಕ್ರಿಯರಾಗಿದ್ದರು. ಟಿ.ಪಿ. ಕೈಲಾಸಂ, ಬಿ. ಪುಟ್ಟಸ್ವಾಮಯ್ಯ, ದೇವುಡು, ಬೆಳ್ಳಾವೆ ನರಹರಿಶಾಸ್ತ್ರಿ, ಅ.ನ.ಕೃ., ಮ. ರಾಮಮೂರ್ತಿ ಅವರುಗಳು ಆರಂಭ ಕಾಲದಲ್ಲಿ ಚಲನಚಿತ್ರ ಸಾಹಿತ್ಯವನ್ನು ಸತ್ವಯುತಗೊಳಿಸಲು ಶ್ರಮಿಸಿರುವ ವಿಷಯ ದಾಖಲೆ ಆಗಬೇಕಾದ್ದೇ. ಶಿವರಾಮ ಕಾರಂತರಿಂದ, ಯು.ಆರ್. ಅನಂತಮೂರ್ತಿವರೆಗೆ ಜ್ಞಾನಪೀಠ ಪುರಸ್ಕೃತ ಸಾಹಿತಿಗಳು ಕೂಡ ಚಲನಚಿತ್ರ ಇತಿಹಾಸದಲ್ಲಿ ತಮ್ಮ ಛಾಪು ಮೂಡಿಸಿರುವುದು ಗಮನಾರ್ಹ. 1977ರಲ್ಲಿ ಸಾಹಿತಿ ಪಿ. ಲಂಕೇಶ್ ನಿರ್ದೇಶಿಸಿದ 'ಪಲ್ಲವಿ' ಚಿತ್ರದ ನಿರ್ದೇಶನಕ್ಕೆ ಅತ್ಯುತ್ತಮ ರಾಷ್ಟ್ರ ಪ್ರಶಸ್ತಿ ದೊರತದ್ದು ವಿಶೇಷ.

ಕನ್ನಡ ಚಲನಚಿತ್ರರಂಗದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೂಡ ಉದಾರ ಸಹಾಯ ಹಸ್ತ ಚಾಚಿದೆ. ಆರಂಭದಲ್ಲಿ ಕರ್ನಾಟಕದಲ್ಲಿ ಸ್ಟುಡಿಯೋ ಸೌಲಭ್ಯಗಳೇ ಇಲ್ಲದೆ, ನಿರ್ಮಾಪಕರು ನೆರೆರಾಜ್ಯಗಳಿಗೆ ಹೋಗಬೇಕಾದಂತಹ ಪರಿಸ್ಥಿತಿ ಇದ್ದಾಗ ಅದನ್ನು ತಪ್ಪಿಸಿ ರಾಜ್ಯದಲ್ಲೇ ಚಿತ್ರರಂಗ ಬೆಳೆಸಿ, ಉಳಿಸುವ ಉದ್ದೇಶದಿಂದ 1966ರಲ್ಲೇ ಸಹಾಯಧನ ಯೋಜನೆ ಜಾರಿಗೆ ತರಲಾಗಿದೆ. ಈಗ ತೆರಿಗೆ ವಿನಾಯಿತಿ ನೀಡಲಾಗಿದೆ. ಕನ್ನಡ ಚಲನಚಿತ್ರಗಳ ಅಭಿವೃದ್ಧಿಗೆ ಸಮಗ್ರ ಕೊಡುಗೆ ನೀಡಿದ ಗಣ್ಯರಿಗೆ, ನಿರ್ದೇಶಕರಿಗೆ, ಗುಬ್ಬಿವೀರಣ್ಣ ಹಾಗೂ ಪುಟ್ಟಣ್ಣ ಕಣಗಾಲ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲಾಗಿದೆ. ಉತ್ತಮ ಗುಣಮಟ್ಟದ ಚಿತ್ರ ನಿರ್ಮಿಸಿ, ಸಮಾಜಕ್ಕೆ ಗಣನೀಯ ಕೊಡುಗೆ ನೀಡಬೇಕೆಂದು ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವ ಎಂ.ಸಿ. ನಾಣಯ್ಯ ಪದೇ ಪದೇ ಮನವಿ ಮಾಡುತ್ತಿರುವುದು ಕೂಡ ಸರ್ಕಾರ ಚಲನಚಿತ್ರರಂಗದ ಅಭಿವೃದ್ಧಿಗೆ ಪಣ ತೊಟ್ಟಿರುವ ಹಿನ್ನೆಲೆಯಲ್ಲಿ. ಅಲ್ಲದೆ, ಸಿನಿಮಾ ಅಕಾಡೆಮಿ ಸ್ಥಾಪನೆಗೂ ಸರ್ಕಾರ ಮುಂದಾಗಿರುವುದು ಉತ್ತಮ ಬೆಳವಣಿಗೆ.

ಆರಂಭದ ದಶಕಗಳಿಂದ ಇಂದಿನವರೆಗೆ ಡಾ. ರಾಜಕುಮಾರ್ ಅವರಂತಹ ಮೇರುನಟ ಚಲನಚಿತ್ರ ಇತಿಹಾಸದ ಎಲ್ಲ ಮಟ್ಟಗಳಲ್ಲಿ ಕಾಣಿಸಿಕೊಂಡಿರುವುದು ಗಣನೀಯ ಸಾಧನೆಯೇ ಹೌದು. ಮೂಕಿ ಚಿತ್ರಕಾಲದಿಂದ ಹೊಸ ಅಲೆಯ ಇಂದಿನ ದಿವಸದವರೆಗೂ ಕನ್ನಡ ಚಿತ್ರರಂಗ ನಡೆದು ಬಂದ ದಾರಿಯನ್ನು ಈ ಪುಸ್ತಕದಲ್ಲಿ ಕಾಣಬಹುದು. ಈ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಲು ಅನುಮತಿ ಇತ್ತ ಗಂಗಾಧರ ಮೊದಲಿಯಾರ್ ಅವರಿಗೆ ಪ್ರಾಧಿಕಾರವು ಋಣಿಯಾಗಿದೆ. ಈ ಪುಸ್ತಕಕ್ಕೆ ಅಂದವಾದ ಪುಟ ವಿನ್ಯಾಸವನ್ನು ಮಾಡಿಕೊಟ್ಟು ಮುಖಚಿತ್ರ ರಚಿಸಿಕೊಟ್ಟವರು ಶ್ರೀ ಸೂರಿ ಅವರು, ಪುಸ್ತಕವು ಅಂದವಾಗಿ ಹೊರಬರಲು ಕಾರಣರಾದವರು ಗೀತಾಂಜಲಿ ಪ್ರಿಂಟರ್ಸ್ ಅವರು. ಇವರೆಲ್ಲರಿಗೂ ಕೃತಜ್ಞತೆಗಳು ಸಲ್ಲುತ್ತವೆ. ಈ ಪುಸ್ತಕದ ಬಗ್ಗೆ ಸಹೃದಯದ ಕನ್ನಡಿಗರ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತೇನೆ.

**ನೆಲಮನೆ ಕೆ. ದೇವೇಗೌಡ**

ಬೆಂಗಳೂರು

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

# ಒಂದು ಮಾತು

ಸಿನಿಮಾ ಇಂದಿಗೂ ನನಗೆ ಜಗತ್ತಿನ ಒಂದು ಅದ್ಭುತವಾಗಿಯೇ ಕಾಣುತ್ತಿದೆ. ಬಡತನ, ಗೊಂದಲ, ಅಸಹಾಯಕತೆಗಳು ತುಂಬಿರುವ ಸಮಾಜದ ಕೋಟ್ಯಂತರ ಜನರ ಕನಸು ಇದಾಗಿರುವುದರಿಂದ, ತಮ್ಮೆಲ್ಲ ಹುಳುಕುಗಳನ್ನು, ಸಂಕಷ್ಟಗಳನ್ನು ಮರೆಮಾಚುವ ಅವ್ಯಕ್ತ ನಿಗೂಢ ಶಕ್ತಿಯ ಸೆಲೆಯನ್ನು ಈ ಜನ ಇದರಲ್ಲಿ ಕಂಡುಕೊಂಡಿರುವುದರಿಂದ ಈ ಮಾಧ್ಯಮದ ಶಕ್ತಿಸ್ವರೂಪವನ್ನು ನನ್ನನ್ನೇ ನಾನು ಚಿಂತಿಸುತ್ತಿರುತ್ತೇನೆ. ದೇಶದ ನಿರ್ಗತಿಕರ, ಸೋಮಾರಿಗಳ, ನಿರುದ್ಯೋಗಿಗಳ, ಹಗಲುಗನಸು ಕಾಣುವವರ ಸರ್ವಸ್ವವೂ ಈ ಸಿನಿಮಾದಲ್ಲಿ ಅಡಗಿದೆ. ವಿಶ್ವ ಚಲನಚಿತ್ರ ಉದಯವಾಗಿ ನೂರು ವರ್ಷ ಕಳೆದರೂ, ಕತ್ತಲೆ ಭವನದೊಳಗಿನ ಎರಡೂವರೆ ಗಂಟೆಕಾಲದ ಮೋಡಿಯ ಮಾಯೆ ಮಸುಕಾಗಿಲ್ಲ, ಟಿ. ವಿ ಚಾನಲ್‌ಗಳು ಮನೆಮನೆಗೆ ನುಗ್ಗಿದ್ದರೂ, ಬೆಳ್ಳಿತೆರೆಯ ಪ್ರಪಂಚ ತನ್ನದೇ ಆದ ಆಕರ್ಷಣೆಯನ್ನು ಹಾಗೇ ಉಳಿಸಿಕೊಂಡಿದೆ. ಇಂದಿಗೂ ಇದು ನಮ್ಮ ನಡುವಿನ ಸೆಳೆತವಾಗಿಯೇ ಇದೆ.

ವಿಶ್ವ ಸಿನಿಮಾಕ್ಕೆ ಈಗ ನೂರು ವರ್ಷ. ನೂರಾಯಿತೇ ಎಂದು ಉದ್ಗಾರ ತೆಗೆಯುತ್ತಿದ್ದಂತೆಯೇ ಕನ್ನಡ ಸಿನಿಮಾಕ್ಕೂ ಅರವತ್ತ ಮೂರು ವರ್ಷ. ಕೈಯಿಂದ ತಿರುಗಿಸುವ ಕ್ಯಾಮರಾದಿಂದ ನಾಟಕಗಳನ್ನೇ ಚಿತ್ರೀಕರಿಸಿ, ಬಯಾಸ್ಕೋಪ್ ಎಂದು ತೋರಿಸುತ್ತಿದ್ದ ದಿನಗಳಿಂದ ಆರಂಭಿಸಿ, ಕೋಟ್ಯಂತರ ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದು ಈಗ ಅವಸಾನವಾಗಿರುವ ಪೆಡಂಭೂತಗಳನ್ನು ಜೀವಂತವಾಗಿ ತೋರಿಸುತ್ತಾ ಮೂಕವಿಸ್ಮಿತರನ್ನಾಗಿಸುವವರೆಗಿನ ಯುಗದವರೆಗೆ ನಾವು ನಡೆದು ಬಂದಿದ್ದೇವೆ. ನಾವು ತೆರೆಯ ಮೇಲೆ ಒಬ್ಬ ನಟ ಹಾಕುವ ಶ್ರೀಕೃಷ್ಣ ಪರಮಾತ್ಮನ ವೇಷವನ್ನೇ ನೈಜವೆಂದು ಭಾವಿಸಿ, ಅವನ ಮಾತನ್ನೇ ವೇದವಾಕ್ಯವನ್ನಾಗಿ ಪರಿವರ್ತಿಸುತ್ತೇವೆ. ಒಬ್ಬ ಬಸ್ ಕಂಡಕ್ಟರನ ಹಾವಭಾವಗಳೇ ಕೋಟ್ಯಂತರ ಜನರ ಹಾವಭಾವಗಳಾಗಿ ಕಾಣಿಸಿಕೊಳ್ಳುತ್ತವೆ. ಹೂಕಟ್ಟುತ್ತಾ, ಎಲೆ ಮಾರುತ್ತಾ ಜೀವನ ಸಾಗಿಸುತ್ತಿದ್ದ ಸಹೋದರಿಯರು ದಿಢೀರನೆ ಬೆಳ್ಳಿ ತೆರೆಯ ಮಹಾ ತಾರೆಯರಾಗಿ ವಿಜೃಂಭಿಸುತ್ತಾರೆ. ಇಂತಹ ಅರ್ಥಕ್ಕೆ ಎಟುಕದ ವಿಷಯವೈವಿಧ್ಯ ಚಲನಚಿತ್ರ ಲೋಕದ ಇತಿಹಾಸದ ಪುಟಗಳಲ್ಲಿ ಅಡಗಿರುವುದರಿಂದ ಅಂತಹ ಪುಟಗಳನ್ನು ತಿರುವಿ ಹಾಕಲು ನಾನು ತವಕಿಸುತ್ತಿದ್ದೆ. ಆದರೆ ನಿರಾಶೆ ಕಾದಿತ್ತು. ಕನ್ನಡ ಚಲನಚಿತ್ರ ಬೆಳೆದು ಬಂದ ದಾರಿಯನ್ನು ಗುರುತಿಸುವ ಗ್ರಂಥ ಕನ್ನಡದಲ್ಲಿ ಇದುವರೆಗೆ ನನಗೆ ದೊರಕಿಲ್ಲ. ಅಂತಹ ಒಂದು ಕೃತಿ ಹೊರತರಬೇಕೆಂಬ ಬಯಕೆ ನನ್ನೊಳಗೇ ಚಿಗುರುತ್ತಿತ್ತು.

1980ರಲ್ಲಿ 'ಸುಧಾ' ವಾರ ಪತ್ರಿಕೆಯ ಚಲನ ಚಿತ್ರ ವರದಿಗಾರನಾದ ನಂತರ ನಾನು ಚಲನಚಿತ್ರ ರಂಗದಲ್ಲಿ ದುಡಿದವರ, ನಿರ್ಮಾಪಕ, ನಿರ್ದೇಶಕರ, ಕಲಾವಿದರ, ತಂತ್ರಜ್ಞರ ವ್ಯಾಪಕ ಸಂದರ್ಶನ ನಡೆಸಿದೆ. ಇಂತಹ ಅವಕಾಶ ಒದಗಿಸಿಕೊಟ್ಟವರು "ಪ್ರಜಾವಾಣಿ" ಸಂಪಾದಕರೂ, ದಿ. ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ಮಾಲೀಕರೂ ಆದ ಶ್ರೀ ಕೆ. ಎನ್. ಹರಿಕುಮಾರ್ ಅವರು. ಅವರಿಗೆ ಅದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಈ ಭೇಟಿ, ಮಾತುಕತೆ, ಚರ್ಚೆ ಎಲ್ಲವೂ ಕೃತಿರಚನೆಗೆ ನೆರವಾಗಿವೆ. ಈ ಮುಂಚೆ 'ಸಂಯುಕ್ತ ಕರ್ನಾಟಕ' ಬಳಗದ 'ಚಿತ್ರದೀಪ' ಸಿನಿಮಾ ವಾರ ಪತ್ರಿಕೆಯ ವರದಿಗಾರನಾಗಿದ್ದ ಅನುಭವ ಕೂಡ ನೆರವಿಗೆ ಬಂತು. 1984 ಕನ್ನಡ ಚಲನಚಿತ್ರರಂಗಕ್ಕೆ ಸುವರ್ಣ ಮಹೋತ್ಸವ ಸಂಭ್ರಮ. 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ 'ಕನ್ನಡ ಚಿತ್ರರಂಗದ 50 ವರ್ಷಗಳ ಚಿನ್ನದ ಹಬ್ಬ' ಕುರಿತ ಲೇಖನ ಸಿದ್ಧಪಡಿಸಬೇಕಾಗಿತ್ತು, ಆದರೆ ಪೂರಕ ಸಾಹಿತ್ಯದ ಅಭಾವ ತೀವ್ರವಾಗಿತ್ತು. ಆಕರ ಗ್ರಂಥಗಳಿಲ್ಲದೆ ಚಲನಚಿತ್ರ ಇತಿಹಾಸವನ್ನು ಬರೆಯುವುದೆಂದರೆ ಹುಡುಗಾಟದ ವಿಷಯವಲ್ಲ. ಆಗ ನನಗೆ ಮಾರ್ಗದರ್ಶಕರಾಗಿ ಬಂದವರು ಎಂ. ಬಿ. ಸಿಂಗ್. ಕನ್ನಡದಲ್ಲಿ ಆರಂಭಕಾಲದ ಸಿನಿಮಾ ಪತ್ರಕರ್ತರಾಗಿ ಜನಪ್ರಿಯ. 'ಸುಧಾ', ಮಯೂರ, ಹಾಗೂ 'ಪ್ರಜಾವಾಣಿ' ಪತ್ರಿಕೆಗಳ ಸಂಪಾದಕರಾಗಿದ್ದ ಎಂ. ಬಿ. ಸಿಂಗ್, ತಮ್ಮ ಸಂಗ್ರಹವಾಗಿದ್ದ ಹಲವಾರು ಮಾಹಿತಿಗ್ರಂಥ, ಸಿನಿಮಾ ಪತ್ರಿಕೆಗಳನ್ನು ನೀಡಿ ನೆರವಾದರು. ಎಂ. ಬಿ. ಸಿಂಗ್ ಅವರಿಗೆ ಕೃತಜ್ಞತೆಗಳು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿರುವ ನನ್ನ ಸಹೋದರ ಎಸ್. ಶ್ರೀಧರಮೂರ್ತಿ ಅವರ ಬೆಂಬಲವಿಲ್ಲದಿದ್ದರೆ ಈ ಕೃತಿ ಹೊರಬರಲು ಕಷ್ಟವಾಗುತ್ತಿತ್ತು. ಸಿನಿಮಾ ವಿಷಯದಲ್ಲಿ ಆಳ ಅಧ್ಯಯನ ನಡೆಸಿರುವ ಅವರು, ಅಪಾರ ಚಲನಚಿತ್ರ ಪುಸ್ತಕಗಳು, ಹಾಗೂ 1947ರ 'ಮಹಾತ್ಮ ಕಬೀರ್' ನಿಂದ ಆರಂಭಿಸಿ ಬಹುತೇಕ ಎಲ್ಲ ಚಿತ್ರಗಳ ಹಾಡಿನ ಪುಸ್ತಕಗಳನ್ನು ಸಂಗ್ರಹಿಸಿದ್ದು ಅವುಗಳನ್ನೆಲ್ಲಾ ನನಗೆ ನೀಡಿ ಪ್ರೋತ್ಸಾಹಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕರ್ನಾಟಕ ವಿಷಯ ವಿಶ್ವಕೋಶದಲ್ಲಿ ಕನ್ನಡ ಚಲನಚಿತ್ರ ಕುರಿತ ಅವರ ಲೇಖನ ನನಗೆ ನೆರವಾಗಿರುವುದನ್ನು ಸ್ಮರಿಸಲೇ ಬೇಕಾಗಿದೆ.

ಹದಿನೇಳು ವರ್ಷಗಳಿಂದ ಸಂಗ್ರಹಿಸುತ್ತಾ ಬಂದ ಮಾಹಿತಿಗಳಿಗೆ ಒಂದು ರೂಪ ನೀಡಲು ಸಾಧ್ಯವಾದದ್ದು 'ಕನ್ನಡ ಪುಸ್ತಕ ಪ್ರಾಧಿಕಾರ' ನೀಡಿದ ಬೆಂಬಲದಿಂದ. 'ಕನ್ನಡ ಚಲನಚಿತ್ರರಂಗ' ವಜ್ರ ಮಹೋತ್ಸವ ಸಂದರ್ಭದಲ್ಲಿ ಕನ್ನಡ ಚಿತ್ರರಂಗ ಬೆಳೆದು ಬಂದ ದಾರಿಯನ್ನು ಕುರಿತು ನಾನು ಬರೆದಿರುವ ಗ್ರಂಥವನ್ನು ಪರಿಶೀಲಿಸುವಂತೆ ನಾನು ಮಾಡಿಕೊಂಡ ಮನವಿಯನ್ನು ಪರಿಶೀಲಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ನೆಲಮನೆ ದೇವೇಗೌಡ ಅವರು ಹಾಗೂ ಸಮಿತಿಯ ಸದಸ್ಯರು ನನಗೆ ಈ ಅವಕಾಶ ಒದಗಿಸಿಕೊಟ್ಟರು. ಎಲ್ಲ ರೀತಿಯ ಪ್ರೋತ್ಸಾಹ ನೀಡಿದ ನೆಲಮನೆ ದೇವೇಗೌಡ ಅವರಿಗೂ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ವೆಂ. ಶ್ರೀನಿವಾಸ್ ಅವರಿಗೂ ಧನ್ಯವಾದಗಳು. ಪುಸ್ತಕದ ಮುಖಪುಟದಿಂದ ಹಿಡಿದು ಪ್ರತಿಯೊಂದು ಪುಟದ ವಿನ್ಯಾಸವನ್ನೂ ಅತ್ಯುತ್ಸಾಹದಿಂದ ರೂಪಿಸಿದ ಕಲಾವಿದ ರಾ. ಸೂರಿ ಅವರಿಗೆ ಕೃತಜ್ಞತೆಗಳು. ಎಷ್ಟು ಬಾರಿ ಕರೆಕ್ಷನ್ ಹಾಕಿದರೂ ತಾಳ್ಮೆಯಿಂದಲೇ ಎಲ್ಲವನ್ನೂ ಸಹಿಸಿಕೊಂಡ, ಎಷ್ಟು ಬಾರಿ ವಿನ್ಯಾಸ ಬದಲಿಸಿದರೂ ಪುಸ್ತಕ ಸುಂದರವಾಗಿ ಹೊರತರಲು ಶ್ರಮಿಸಿದ ಡಿ.ಟಿ.ಪಿ. ಆಪರೇಟರ್ ಸಿ. ಜೆ. ಶಂಕರೇಗೌಡ ಅವರಿಗೂ ವಂದನೆಗಳು. ಪುಸ್ತಕವನ್ನು ಆಕರ್ಷಕಗೊಳಿಸಲು ಹಾಗೂ ಅದಕ್ಕೊಂದು ಸುಂದರ ಮುದ್ರಣ ರೂಪ ನೀಡಲು ನೆರವಾದವರು ಗೀತಾಂಜಲಿ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ನಾಗಸುಂದರ್ ಹಾಗೂ ಅಶಿತ್ ದೇಸಾಯಿ ಅವರಿಗೂ ನನ್ನ ಕೃತಜ್ಞತೆಗಳು.

ನಮಸ್ಕಾರಗಳೊಂದಿಗೆ,

3/2 'ಸಿ', ನಂದಿನಿ ಬಡಾವಣೆ,
ಬೆಂಗಳೂರು-560 096


ನಿಮ್ಮ
*ಗಂಗಾಧರ ಮೊದಲಿಯಾರ್*

# ಒಳ ಪುಟಗಳತ್ತ








ಮೂಕಚಿತ್ರಗಳ ಯುಗ.................. 01

ಮೊದಲ ವಾಕ್ಚಿತ್ರ.......................... 25

ಆರಂಭದ ಹೆಜ್ಜೆ ಗುರುತುಗಳು........ 39

ಸ್ವಾತಂತ್ರ್ಯ.................................... 65

ಸ್ಟುಡಿಯೋಗಳ ಪಾತ್ರ.................... 79

ಪರಿವರ್ತನಾ ಯುಗ.......................91

ಸುವರ್ಣ ಯುಗ........................ 125

ಹೊಸ ಅಲೆ................................ 165

ಡಾ. ರಾಜ್‌ಕುಮಾರ್................. 183

ಹೊಸ ಪೀಳಿಗೆ............................ 194

## ಗ್ರಂಥ ಋಣ/ಪೂರಕ ಸಾಹಿತ್ಯ ನೆರವು


*Indian Filmography/firoze Rangoonwalla*

*Kannada Cinema/Edited by V.N. Subba Rao,*

*M. V. Ramakrishnaiah, Dr. Vijaya*

ಕಲೆಯೇ ಕಾಯಕ / ಗುಬ್ಬಿ ವೀರಣ್ಣ

ಇದು ನನ್ನ ಕಥೆ / ಆರ್. ನಾಗೇಂದ್ರರಾವ್

ಕರ್ನಾಟಕದ ರಂಗ ಕಲಾವಿದರು / ಹ. ವೆಂ. ಸೀತಾರಾಮಯ್ಯ

ಪದ್ಮಾಂತರಂಗ / ಸಂ. ಡಾ. ವಿಜಯಾ

ಕನ್ನಡ ಚಲನಚಿತ್ರಗಳು / ಎಂ. ವಿ. ಕೃಷ್ಣಸ್ವಾಮಿ

ಕನ್ನಡ ಚಲನಚಿತ್ರರಂಗ / ಪಿ. ಜಿ. ಶ್ರೀನಿವಾಸಮೂರ್ತಿ

ಜ್ಞಾನಪೀಠ ಪ್ರಶಸ್ತಿ ವಿಜೇತರು ಮತ್ತು ಕನ್ನಡ ಚಿತ್ರರಂಗ /

ಎನ್. ಜಗನ್ನಾಥ ಪ್ರಕಾಶ್, ಕೆ. ಪುಟ್ಟಸ್ವಾಮಿ

ಬಿ. ಜಯಮ್ಮ ಗೌರವ ಸಂಚಿಕೆ / ಸಂ. ಹ. ವೆಂ. ಸೀತಾರಾಮಯ್ಯ

ವೃತ್ತಿರಂಗದರ್ಶನ / ಸಂ. ಡಾ. ಎಚ್. ಕೆ. ರಂಗನಾಥ್

ಎಂ. ವಿ. ವರದಾಚಾರ್ಯರ ಶತಮಾನೋತ್ಸವ ಸ್ಮರಣ ಸಂಚಿಕೆ

ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ

ಎಂ. ಬಿ. ಸಿಂಗ್

ಚಿತ್ರ ಸಮಾಚಾರ್

ಪ್ರಜಾವಾಣಿ

ಸುಧಾ

ವಿಜಯಚಿತ್ರ ವಿಶೇಷಾಂಕಗಳು

ರೂಪತಾರಾ

ಚಿತ್ರದೀಪ

ಕನ್ನಡ ಪ್ರಭ

ಸಿನಿಮಾ ವಿಷನ್ ಇಂಡಿಯಾ

ಕನ್ನಡ ವಾಕ್ಚಿತ್ರ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ 1984

# ಮೂಕ ಚಿತ್ರಗಳ ಯುಗ

ಪ್ಯಾರಿಸ್‌ನಲ್ಲಿ 1895ರಲ್ಲಿ ಚಲನಚಿತ್ರದ ಉದಯವಾಯಿತು. ಕರ್ನಾಟಕದಲ್ಲಿ ಆಗ ನಾಟಕಗಳೇ ಮನರಂಜನೆಯ ಮಾಧ್ಯಮ. ಮರುವರ್ಷವೇ ಭಾರತಕ್ಕೂ ಕಾಲಿಟ್ಟ ಬಯಾಸ್ಕೋಪ್ ದಕ್ಷಿಣ ಭಾರತಕ್ಕೆ ಬರಲು ಹತ್ತು ವರ್ಷ ಹಿಡಿಯಿತು. ಈ ವೇಳೆಯಲ್ಲೂ ಕರ್ನಾಟಕ ತಟಸ್ಥ. 1903ರಲ್ಲಿ ಮೂಕಿ ಚಿತ್ರಗಳ ತಯಾರಿಕೆ ಆರಂಭವಾದರೂ ಅಂತಹ ಒಂದು ಪ್ರಾರಂಭಿಕ ಪ್ರಯತ್ನವಾದರೂ ಕರ್ನಾಟಕದಲ್ಲಿ ನಡೆಯಬೇಕಾದರೆ 26 ವರ್ಷ ಬೇಕಾಯಿತು. ಈ ಶತಮಾನದ ಆರಂಭ ಕಾಲದಲ್ಲೇ ರಂಗಭೂಮಿಯ ಇತಿಹಾಸವನ್ನು ಆರಂಭಿಸಿದ 'ರತ್ನಾವಳಿ ಥಿಯೇಟ್ರಿಕಲ್ ಕಂಪನಿ (ರತ್ನಾವಳಿ ನಾಟಕ ಸಭಾ : ಸ್ಥಾಪನೆ : 1902) ಮನರಂಜನೆಯ ಹೊಸ ಮಾಧ್ಯಮವೊಂದರ ಅಗತ್ಯವನ್ನು ಜನತೆಯ ಹೃದಯದಲ್ಲಿ ಗಟ್ಟಿಯಾಗಿ ಮೂಡಿಸಿತ್ತು. ರಾಜರ ಆಸ್ಥಾನದಲ್ಲೂ ಈ ಕಂಪನಿಯ ಸ್ಥಾಪಕ ನಟ ಎ.ವಿ. ವರದಾಚಾರ್ಯರು ಜನಪ್ರಿಯ ನಟರಾಗಿದ್ದರು.

1896ರಿಂದ 1912ರ ಕಾಲವನ್ನು ಚಲನಚಿತ್ರದ ಉದಯದ ಕಾಲ ಎಂದು ಕರೆಯಬಹುದು. ಈ ಅವಧಿಯಲ್ಲಿ ಭಾರತದಲ್ಲಿ ಸಾಕ್ಷ್ಯಚಿತ್ರ ಮುಂತಾದ ಕಿರುಚಿತ್ರಗಳ ಪ್ರಯೋಗವಷ್ಟೇ ನಡೆದಿತ್ತು. 1912ರಿಂದ 1934ರವರೆಗಿನ ಕಾಲವನ್ನು ಮೂಕಿ ಚಿತ್ರಗಳ ಯುಗ ಎಂದು ನಾವು ವಿಂಗಡಿಸಬಹುದು. ಮೂಕಿ ಚಿತ್ರಗಳ ತಯಾರಿಕೆಗೆ ಆರಂಭದಲ್ಲಿ ಉತ್ಸಾಹ ಕಂಡು ಬರದಿದ್ದರೂ ಆನಂತರದ ದಿನಗಳಲ್ಲಿ ಹೆಚ್ಚಿನ ನಿರ್ಮಾಪಕರು ಮುಂದೆ ಬಂದರು. ಅದುವರೆಗೆ ಮನರಂಜನೆಯ ಲೋಕದಲ್ಲಿ ಎತ್ತಿದ ಕೈ ಆಗಿದ್ದ ನಾಟಕ ಮಂಡಳಿಗಳು, ಚಲನಚಿತ್ರಗಳಿಂದಾಗಿ ತಮ್ಮ ನಾಟಕಕ್ಕೆ ಬರುತ್ತಿದ್ದ ಪ್ರೇಕ್ಷಕರ ಸಂಖ್ಯೆ ಇಳಿಮುಖವಾಗಲಾರಂಭಿಸಿದ್ದನ್ನು ಗಮನಿಸಿ ಚಿತ್ರ ತಯಾರಿಕೆಯತ್ತ ಮನ ಹರಿಸಲಾರಂಭಿಸಿದರು. ಹೀಗಾಗಿ ಚಲನಚಿತ್ರ ಬೆಳೆಯಲಾರಂಭಿಸಿದಂತೆಯೇ ವೃತ್ತಿನಿರತ ನಾಟಕ ಕಂಪನಿಗಳ ಅವಸಾನದ ಕಾಲವೂ ಆರಂಭವಾಯಿತು.

ನಾಟಕರಂಗದ ನಟನಟಿಯರೆಲ್ಲಾ ಚಲನ ಚಿತ್ರಗಳಲ್ಲಿ ಅಭಿನಯಿಸಲು ತೆರಳಲಾರಂಭಿಸಿ ಕಂಪನಿಗಳು ಬಡವಾಗಲಾರಂಭಿಸಿದವು. ಈ ಎಲ್ಲ ಬೆಳವಣಿಗೆ ಯೊಂದಿಗೆ 22 ವರ್ಷಗಳ ಈ ಘಟ್ಟದಲ್ಲಿ ಭಾರತದಲ್ಲಿ 1279 ಮೂಕಿಚಿತ್ರಗಳು ತಯಾರಾದವು. 1896ರಿಂದ 1912ರವರೆಗೆ ಕಿರುಚಿತ್ರಗಳನ್ನಷ್ಟೇ ನಾವು ಕಾಣುತ್ತೇವೆ. ಸಂಪೂರ್ಣ ಕಥಾನಕ ಚಿತ್ರಗಳು ನಮಗೆ ದೊರೆಯುವುದಿಲ್ಲ.



ಕನ್ನಡ ರಂಗಭೂಮಿಯ ಮೊದಲ ನಾಯಕನಟ ಎ. ವಿ. ವರದಾಚಾರ್ಯ. ಚಲನ ಚಿತ್ರ ಹುಟ್ಟುವುದಕ್ಕೆ ಮೊದಲ 30 ವರ್ಷಗಳ ಕಾಲ ರಂಗಭೂಮಿಯಲ್ಲಿ ಜನಪ್ರಿಯ ನಾಯಕ ನಟನಾಗಿ ಮೆರೆದ ಶ್ರೇಯಸ್ಸು ಇವರದು. "ಶಾಕುಂತಲಾ" ನಾಟಕದಲ್ಲಿ ದುಷ್ಯಂತನಾಗಿ ಅವರ ರಾಜಗಾಂಭೀರ್ಯದ ಈ ನಿಲುವು ಮಹಾರಾಜರ ಕುಟುಂಬದಿಂದಲೂ ಪ್ರಶಂಸೆ ಪಡೆದಿತ್ತಂತೆ. ಅವರ "ನಿರುಪಮಾ" ನಾಟಕವನ್ನೇ ಮಹಾರಾಜರು ಕೈಯಿಂದ ಸುತ್ತಿ ಚಿತ್ರ ತೆಗೆಯುವ ಕ್ಯಾಮರಾದಿಂದ ಚಿತ್ರೀಕರಿಸಿದ್ದರು. ಆದ್ದರಿಂದ ಎ. ವಿ. ವರದಾಚಾರ್ಯರೇ ಕನ್ನಡದ ಮೊದಲ ನಾಯಕ ನಟ. ಅಂದಿನ ನಾಟಕಗಳಲ್ಲಿ ಮಹಾರಾಜರ ಹಾಗೇ ವೇಷಭೂಷಣ ಧರಿಸುವುದು ಪಾತ್ರಧಾರಿಗಳ ಒಂದು ವಿಶೇಷವಾಗಿತ್ತು.

1912ರಿಂದ 1934ರ ಅವಧಿಯಲ್ಲಿ ಭಾರತದಲ್ಲಿ 1279 ಮೂಕಿ ಚಿತ್ರಗಳು ತಯಾರಾಗಿರುವುದು ಸೆನ್ಸಾರ್ ಮಂಡಳಿ ದಾಖಲೆಗಳಿಂದ ತಿಳಿದು ಬರುತ್ತದೆ. ರಾಷ್ಟ್ರೀಯ ಚಲನಚಿತ್ರ ಭಂಡಾರದಲ್ಲಿ ಈಗ ಸಂಗ್ರಹಿಸಿಡಲಾಗಿರುವ ಚಿತ್ರಗಳಲ್ಲಿ 13 ಮೂಕಿ ಚಿತ್ರಗಳಿವೆ. ಭಾರತದ ಮೊದಲ ವಾಕ್ಚಿತ್ರ **ಆಲಂಆರ** (1931) ಸಂಗ್ರಹದಲ್ಲಿದೆ. ಆರು ದಾದಾಸಾಹೇಬ್ ಫಾಲ್ಕೆ ನಿರ್ಮಿಸಿದ ಚಿತ್ರಗಳಾಗಿದ್ದು, ಬಹಳಷ್ಟು ಅಪೂರ್ಣವಾಗಿವೆ.

ಭಾರತದ ಚಿತ್ರರಂಗವನ್ನು ಬೆಳೆಸಲು ಹಾಗೂ ಶ್ರೀಮಂತಗೊಳಿಸಲು ಕನ್ನಡನಾಡು ಕೂಡ ತನ್ನ ಅಳಿಲುಸೇವೆ ಸಲ್ಲಿಸಿದೆ. ಸಿನಿಮಾ ತನ್ನ ಮೂಕತನವನ್ನು ಕಳೆದುಕೊಂಡು ಮಾತನಾಡಲು ಆರಂಭಿಸುವವರೆಗೂ ಭಾರತದ ಇತರ ಪ್ರದೇಶಗಳಲ್ಲಿ ನಡೆಯುತ್ತಿದ್ದ ನಿರ್ಮಾಣ ಚಟುವಟಿಕೆಗೆ ಪೂರಕವಾದ ಚಲನಚಿತ್ರ ತಯಾರಿಕೆಯ ಚಟುವಟಿಕೆ ಕರ್ನಾಟಕದ ನೆಲದಲ್ಲೂ ನಡೆದಿತ್ತು. ಕರ್ನಾಟಕದಲ್ಲಿ ಸುಮಾರು 175 ಮೂಕಿ ಚಿತ್ರಗಳು ತಯಾರಾಗಿರಬಹುದು ಎಂಬುದು ಒಂದು ಅಂದಾಜು.

ಕರ್ನಾಟಕದಲ್ಲಿ ಮೂಕಿಚಿತ್ರಗಳ ತಯಾರಿಕೆ ಆರಂಭವಾದದ್ದು ಯಾವಾಗ ಎಂಬ ಬಗ್ಗೆ ವಾದ ವಿವಾದಗಳಿವೆ. 1929ರಲ್ಲಿ ಬೆಂಗಳೂರಿನಲ್ಲಿ ತಯಾರಾದ **ವಸಂತಸೇನ** ಕನ್ನಡದ ನೆಲದಲ್ಲಿ ತಯಾರಿಸಿದ ಮೊದಲ ಮೂಕಿ ಚಿತ್ರ ಎಂಬ ವಾದವಿದೆ. ಆದರೆ ಇದಕ್ಕೂ ಮೊದಲು ಮೂಕಿ ಚಿತ್ರಗಳು ತಯಾರಾದ ಎರಡು ಉದಾಹರಣೆಗಳಿವೆ. 1921ರಲ್ಲಿ "ರತ್ನಾವಳಿ ಥಿಯೇಟ್ರಿಕಲ್ ಕಂಪನಿ"ಯ ಎ.ವಿ. ವರದಾಚಾರ್ಯರು ಅರಮನೆಯಲ್ಲಿ **ನಿರುಪಮಾ** ನಾಟಕವನ್ನು ಆಡುತ್ತಿದ್ದರು. ಹಲವಾರು ಬಾರಿ ವಿದೇಶ ಪ್ರವಾಸ ಮಾಡಿ ವಿಷಯ ಅರಿತಿದ್ದ ಯುವರಾಜರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್‌ರವರು ಕೈಯಿಂದ




ಸುತ್ತಿ ಚಿತ್ರ ತೆಗೆಯುವ ಕ್ಯಾಮರಾದಿಂದ ಅದನ್ನು ಚಿತ್ರೀಕರಿಸಿದ್ದರು. ಸಂಸ್ಕರಣದ ನಂತರ ಅದನ್ನು ವಿದೇಶಿ ಅತಿಥಿಗಳಿಗೆ ತೋರಿಸುತ್ತಿದ್ದರಂತೆ. ಹೀಗಾಗಿ ಕನ್ನಡ ಚಲನಚಿತ್ರರಂಗದ ಇತಿಹಾಸದಲ್ಲಿ ಎ.ವಿ. ವರದಾಚಾರ್ಯರೇ ಮೊದಲ ನಾಯಕನಟ. ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರೇ ಮೊದಲ ನಿರ್ಮಾಪಕ - ನಿರ್ದೇಶಕ. **ನಿರುಪಮಾ** ಇಂಗ್ಲಿಷ್ ನಾಟಕವೊಂದರ ಅನುವಾದವಾಗಿದ್ದು, ವರದಾಚಾರ್ಯರು ಸಂತಾಪಕನ ಪಾತ್ರ ವಹಿಸುತ್ತಿದ್ದರು.

ಗುಬ್ಬಿಕಂಪನಿಯ 'ಮಹಾತ್ಮ ಕಬೀರ್' ನಾಟಕದ ಒಂದು ದೃಶ್ಯ. ಇಡೀ ನಾಟಕ ಚಿತ್ರೀಕರಣಗೊಂಡು ಕನ್ನಡದ ಎರಡನೆಯ ಮೂಕಚಿತ್ರವಾಯಿತು.

ಇದಾದ ನಂತರ 1925ರಲ್ಲಿ ಮತ್ತೊಂದು ಮೂಕಿಚಿತ್ರ ತಯಾರಾದ ಸಂಗತಿ ತಿಳಿದುಬರುತ್ತದೆ. ಆಗ ಸಿನಿಮಾಕ್ಕೆ ದೇಶೀಯವಾಗಿ ಜನಪ್ರಿಯವಾಗಿದ್ದ ಹೆಸರು "ಬಯಾಸ್ಕೋಪ್". ಈ ಬಯಾಸ್ಕೋಪ್ ಕಾಲದಲ್ಲಿ ಅಂದರೆ 1925ರಲ್ಲಿ ಗುಬ್ಬಿ ವೀರಣ್ಣನವರ ಜನಪ್ರಿಯ ನಾಟಕ **ಮಹಾತ್ಮ ಕಬೀರ್** ಮೂಕಿ ಚಿತ್ರವಾಗಿ ತಯಾರಾಗಿತ್ತು. ಆಗ ಬಹಳ ಜನಪ್ರಿಯ ನಾಟಕ ಕಂಪನಿಯಾಗಿದ್ದ ಗುಬ್ಬಿ ಚನ್ನಬಸವೇಶ್ವರ ನಾಟಕ ಮಂಡಳಿಯು ತರೀಕೆರೆ ಸಂತೆ ಮೈದಾನದಲ್ಲಿ ಕ್ಯಾಂಪ್ ಹಾಕಿ **ಮಹಾತ್ಮ ಕಬೀರ್** (ಕಬೀರ್‌ದಾಸ್) ನಾಟಕ ಪ್ರದರ್ಶಿಸುತ್ತಿತ್ತು. ಮದರಾಸಿನ ರಂಗಯ್ಯನಾಯ್ಡು ಅವರು ತಮ್ಮ ಸಂಸ್ಥೆಯ ವತಿಯಿಂದ ಈ ನಾಟಕ ನಡೆಯುತ್ತಿರುವಂತೆಯೇ ಅದನ್ನು ನಾಲ್ಕು ದಿನಗಳ ಕಾಲ ಚಿತ್ರೀಕರಿಸಿದರು. ನಾಟಕದಲ್ಲಿ ಸಿ.ಬಿ. ಮಲ್ಲಪ್ಪನವರು ಕಬೀರ್ ಪಾತ್ರದಲ್ಲಿದ್ದರು. ಜಿ.ಎಚ್. ವೀರಣ್ಣ (ವೈಶ್ಯ), ಹೂಡಲಿ ನಾರಾಯಣರಾವ್ (ಬೇಬಿ), ಡಂಕಣಿಕೋಟೆ ನಾರಾಯಣ ನಾಯಿಡು (ಶ್ರೀರಾಮ), ಎಂ.ಎಸ್. ಗಂಗಾಧರರಾವ್ (ಕಾಕೋಧರ), ಜಿ. ನಾಗೇಶರಾವ್ (ರತ್ನಾಕರ), ಯು.ಕೆ. ವ್ಯಾಸರಾವ್ (ಮಧುಮೋಹಿನಿ), ಮೈಸೂರು ಬಸವರಾಜು ಪಾತ್ರ ವರ್ಗದಲ್ಲಿದ್ದರು.

ಈ ರೀತಿ ತಮ್ಮ ನಾಟಕವನ್ನೇ ಚಿತ್ರೀಕರಿಸುವ ವಿಚಾರ ಯುವರಾಜರ ನಿರುಪಮಾ ಚಿತ್ರೀಕರಣದಿಂದಲೇ ಗುಬ್ಬಿ ವೀರಣ್ಣನವರಿಗೆ ಇಲ್ಲವೇ ರಂಗಯ್ಯನಾಯಿಡು ಅವರಿಗೆ ಪ್ರಚೋದನೆಯಾಗಿರಬೇಕು. ಕಬೀರರ ಪಾತ್ರ ವಹಿಸಿದ್ದ, ಭಕ್ತಿರಸ ಪ್ರಧಾನಪಾತ್ರಗಳಲ್ಲಿ ಹೆಸರಾಗಿದ್ದ ಸಿ. ಬಿ. ಮಲ್ಲಪ್ಪ ಕನ್ನಡ





ಮೈಸೂರಿನ ಯುವರಾಜರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್. ಕನ್ನಡದಲ್ಲಿ ಮೊದಲ ಚಲನಚಿತ್ರ ನಿರ್ಮಾಪಕ ಎಂದು ಕರೆಯಬಹುದಾದ ಗೌರವ ಇವರಿಗೆ.

ಚಲನಚಿತ್ರರಂಗದ ಎರಡನೆಯ ನಾಯಕ ನಟ ಎಂದು ಕರೆಯಬಹುದಾದ ಸಿ. ಬಿ. ಮಲ್ಲಪ್ಪ, ಕಬೀರ್ ಪಾತ್ರದಲ್ಲಿ ರಂಗಪ್ರವೇಶಿಸಿದರೆ, ಕಬೀರರಾಗಿಯೇ ಪರಿವರ್ತನೆಯಾಗುತ್ತಿದ್ದಂತಹ ಭಕ್ತಿಪ್ರಧಾನ ಅಭಿನಯಕ್ಕೆ ಹೆಸರು.

ಚಲನಚಿತ್ರರಂಗದ ಎರಡನೇಯ ನಾಯಕನಟ ಎನ್ನಬಹುದು.

ಈ ಬಗೆಯ ನಾಟಕವನ್ನು ಯಥಾವತ್ತಾಗಿ ಚಿತ್ರೀಕರಿಸುವ ಪ್ರಯತ್ನಗಳು ಆ ವೇಳೆಗೆ ಮುಂಬಯಿ ಹಾಗೂ ಕಲ್ಕತ್ತಾಗಳಲ್ಲಿಯೂ ನಡೆದಿತ್ತು. 1912ರಲ್ಲಿ ಪುಂಡಲೀಕ ನಾಟಕವನ್ನು ಆರ್.ಜಿ. ತೋರಣೆ ಮತ್ತು ಎನ್. ಜಿ. ಚಿತ್ರೆ ಚಿತ್ರೀಕರಿಸಿದ್ದರು. ಕನ್ನಡದ ನೆಲದಲ್ಲಿ ಬಯಾಸ್ಕೋಪಿನ ಯುಗ ಆರಂಭವಾದದ್ದು ಹೀಗೆ. ಈ ವೇಳೆಗಾಗಲೇ ಸಾಕಷ್ಟು ಮೂಕಿ ಚಿತ್ರಗಳು ಬೇರೆಡೆ ತಯಾರಾಗಿ ಪ್ರದರ್ಶನಕ್ಕೆ ಬಂದು ಇಲ್ಲಿನ ಕಲಾವಿದರೂ ಸೇರಿದಂತೆ ಜನಕ್ಕೆ ಸಿನಿಮಾ ವ್ಯಾಮೋಹ ಬೆಳೆಸಿತ್ತು.



ಆದರೆ ನಾಲ್ಕು ವರ್ಷಗಳ ಬಳಿಕ 1929ರಲ್ಲಿ ಬೆಂಗಳೂರಿನಲ್ಲಿ ತಯಾರಾದ **ವಸಂತಸೇನ** (ಮೃಚ್ಛಕಟಿಕ) ಭಾರತೀಯ ಮೂಕಿಚಿತ್ರಗಳ ಸಾಲಿನಲ್ಲೊಂದು ಅಪೂರ್ವ ಘಟನೆ ಎನಿಸಿಕೊಂಡಿತಲ್ಲದೆ, ಮುಂದೆ ಮೂರು ನಾಲ್ಕು ವರ್ಷಗಳವರೆಗೆ ಬೆಂಗಳೂರು, ಮೂಕಿಚಿತ್ರ ನಿರ್ಮಾಣಕ್ಕೆ ಪ್ರಮುಖ ಕೇಂದ್ರವಾಗಲು ಭದ್ರ ಬುನಾದಿ ಹಾಕಿತು. ಮೈಸೂರಿನ ದಸರಾ ಬಗ್ಗೆ ಸಾಕ್ಷ್ಯಚಿತ್ರ ತಯಾರಿಸಲು ಬಂದಿದ್ದ ಮುಂಬೈನ ಅಜಂತಾ ಸಿನಿಟೋನ್ ಒಡೆಯ ಮೋಹನ ಭವನಾನಿ ಮತ್ತು ಕನ್ನಡ ನಾಟಕಕಾರ ಟಿ.ಪಿ. ಕೈಲಾಸಂ ಒಮ್ಮೆ ಭೇಟಿಯಾಗಿದ್ದರಂತೆ. ಲೋಕಾಭಿರಾಮದ ಮಾತುಕತೆಯ ನಡುವೆ ಶೂದ್ರಕ ಮಹಾಕವಿಯ "ಮೃಚ್ಛಕಟಿಕ"ದ ಮಾತು ಬಂತು. ಮಾತಿನ ನಡುವೆ ಭವನಾನಿಯವರಿಗೆ ಈ ಕತೆಯನ್ನೇ ಏಕೆ ಚಿತ್ರ ಮಾಡಬಾರದು ಎನಿಸಿತು. ಜರ್ಮನಿಯಲ್ಲಿ ಛಾಯಾಗ್ರಹಣ ಕಲೆಯಲ್ಲಿ ತರಬೇತಿ ಪಡೆದಿದ್ದ ಮೋಹನ್‌ಭವನಾನಿ ನಿರ್ದೇಶಕರಾದರು. ಕಲಾವಿಮರ್ಶಕರಾಗಿ ಆ ವೇಳೆಗಾಗಲೇ ಹೆಸರು ಮಾಡಿದ್ದ ಜಿ. ವೆಂಕಟಾಚಲಂ ಕಲಾನಿರ್ದೇಶಕರಾದರು. ಶಕಾರನ ಪಾತ್ರದಲ್ಲಿ ಕೈಲಾಸಂ ಕಾಣಿಸಿಕೊಂಡರು. ಚಾರುದತ್ತನ ಪಾತ್ರದಲ್ಲಿ ಜೆ.ಕೆ. ನಂದಾ (ಜೈಕಿಷನ್‌ನಂದ), ವಸಂತಸೇನೆಯಾಗಿ ಏಣಾಕ್ಷಿ ರಾಮರಾವ್ ಅಭಿನಯಿಸಿದರು. ಉಳಿದ ಮುಖ್ಯ ಪಾತ್ರಗಳಲ್ಲಿ ಡಾ. ಎನ್.ಎಸ್. ನಾರಾಯಣಶಾಸ್ತ್ರಿ, ನಳಿನಿ ತರ್ಕಾಡ್, ಕಮಲಾದೇವಿ ಚಟ್ಟೋಪಾಧ್ಯಾಯ, ಕತೆಗಾರ ಆನಂದ (ಅಜ್ಜಂಪುರ ಸೀತಾರಾಂ), ಡಾ.ಡಿ.ಕೆ. ಭಾರದ್ವಾಜ್ ಮತ್ತು ಅವರ ಪುತ್ರ ಹರೀಂದ್ರ, ಕೆ. ಸೀತಾರಾಂ, ಬಿ.ಎಸ್. ರಾಮರಾವ್ ಮತ್ತು ವಿ. ಕೃಷ್ಣ ಅಭಿನಯಿಸಿದ್ದರು. ಡಾ. ಜೆ.ಎಚ್. ಕಸಿನ್ಸ್ ಚಿತ್ರಕಥೆ ರಚಿಸಿದ್ದರು. ಮೈಸೂರಿನ ಜಟ್ಟಿತಾಯಮ್ಮ ನೃತ್ಯ ಸಂಯೋಜನೆ ಮಾಡಿದ್ದರು. ರಂಗಭೂಮಿಯಲ್ಲಿ ಪ್ರಖ್ಯಾತರಾಗಿದ್ದ ರವಳಪ್ಪ ಮೇಕಪ್ ಮತ್ತು ವೇಷಭೂಷಣಗಳ ಮೇಲ್ವಿಚಾರಕರಾಗಿದ್ದರು. ಸುಮಾರು ಎಂಟು ಸಾವಿರ ಅಡಿ ಉದ್ದದ **ವಸಂತಸೇನ** ನಿರ್ಮಾಣಕ್ಕೆ ಆದ ವೆಚ್ಚ ಸುಮಾರು ಒಂದು ಲಕ್ಷ ರೂ. ಎನ್ನಲಾಗಿದೆ.

ಚಲನಚಿತ್ರವೆಂದರೆ ಮೈಲಿಗೆಯ ವಿಷಯವಾಗಿದ್ದ ಆ ಕಾಲದಲ್ಲಿ ಪ್ರಸಿದ್ಧ ಕ್ಷೇತ್ರಗಳಲ್ಲಿ ಚಿತ್ರೀಕರಣ ನಡೆಸಲು ಅನುಮತಿ ಸುಲಭವಾಗಿ ಸಿಗುತ್ತಿರಲಿಲ್ಲ. ಕೈಲಾಸಂ ಅವರ ಹೆಸರು, ಪ್ರಭಾವದಿಂದಾಗಿ ಮೋಹನ ಭವನಾನಿಯವರ ಕೆಲಸ ಸುಲಭವಾಯಿತು. ಕನ್ನಡ ನಾಡಿನ ಬಹುತೇಕ ಆಕರ್ಷಣೀಯ ಸ್ಥಳಗಳಲ್ಲಿ, ಹೊಯ್ಸಳ ಶಿಲ್ಪಕಲೆಗೆ ಪ್ರಖ್ಯಾತವಾದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಪರಿಸರ

"ವಸಂತಸೇನ" ಮೂಕಿಚಿತ್ರದ ಕೆಲವು ದೃಶ್ಯಗಳು.

ಹಾಗೂ ಶ್ರೀರಂಗಪಟ್ಟಣದ ಟಿಪ್ಪು ಅರಮನೆ, ಶ್ರವಣಬೆಳಗೊಳ, ಬೆಂಗಳೂರಿನ ಲಾಲ್‌ಬಾಗ್, ತಮಿಳುನಾಡಿನ ಮಧುರೆ, ರಾಮೇಶ್ವರ ದೇವಾಲಯಗಳಲ್ಲಿ ಚಿತ್ರದ ಚಿತ್ರೀಕರಣ ಕಾರ್ಯ ನಡೆಯಿತು. ಒಳಾಂಗಣ ಚಿತ್ರೀಕರಣ ಬೆಂಗಳೂರಿನ ರಿಚ್‌ಮಂಡ್ ರಸ್ತೆಯಲ್ಲಿರುವ "ದಿಲ್‌ಕುಷ್" ಕಟ್ಟಡದಲ್ಲಿದ್ದ ಸ್ಟುಡಿಯೋದಲ್ಲಿ ನಡೆಯಿತು. ಚಿತ್ರೀಕರಣವನ್ನು ಕಣ್ಣು ಕೋರೈಸುವ ಬಿಸಿಲು ಇದ್ದ ಸಮಯದಲ್ಲಿ ಮಾತ್ರ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿ ಅಂದಿನ ದಿನಗಳಲ್ಲಿತ್ತು. ಪಿ.ಎ. ಪಿಕ್ಚರ್ಸ್ ಲಾಂಛನದಲ್ಲಿ ತಯಾರಾದ ಈ ಚಿತ್ರವನ್ನು ಬೆಲ್ ಅಂಡ್ ಹೂವೆಲ್ ಕ್ಯಾಮರಾ ಮೂಲಕ ಚಿತ್ರೀಕರಿಸಲಾಯಿತು. ಬೆಂಗಳೂರಿನ ನ್ಯೂ ಎಂಪೈರ್ ಥಿಯೇಟರ್‌ನಲ್ಲಿ ತೆರೆಕಂಡು ಜನಪ್ರಿಯವಾದ **ವಸಂತಸೇನ**, ನಿರ್ಮಾಪಕರಿಗೆ ಅಪಾರ ಲಾಭ ತಂದುಕೊಟ್ಟಿತೆನ್ನಲಾಗಿದೆ. ಇದು ಇತರ ಚಿತ್ರ ತಯಾರಕರಿಗೆ ಸ್ಫೂರ್ತಿ ತಂದಿತು.



**ವಸಂತಸೇನ**ದ ಮತ್ತೊಂದು ವೈಶಿಷ್ಟ್ಯವೆಂದರೆ ಅದರ ಬಣ್ಣ. ಜರ್ಮನಿಯ ಯು.ಎಫ್.ಎ. ಸ್ಟುಡಿಯೋಸ್‌ನಲ್ಲಿ ಇಲ್ಲಿಂದ ತೆಗೆದುಕೊಂಡು ಹೋಗಿದ್ದ ಕಪ್ಪು ಬಿಳುಪು ಚಿತ್ರಕ್ಕೆ ಹ್ಯಾಂಡ್ ಕಲರ್ ಹಾಕಿಸಿ ತರಲಾಯಿತು. ಎರಡು ವರ್ಷಗಳ ನಂತರ ಅಂದರೆ 11-4-1931ರಲ್ಲಿ ಮತ್ತೆ ನ್ಯೂ ಎಂಪೈರ್ ಥಿಯೇಟರಿನಲ್ಲಿ ಬಿಡುಗಡೆಯಾಗಿ ಮೂರು ವಾರಗಳ ಕಾಲ ಪ್ರದರ್ಶನಗೊಂಡಿತು. ಕ್ರಿಸ್‌ಮಸ್ ವೇಳೆಗೆ ಜರ್ಮನಿಯಲ್ಲೂ ತೆರೆಕಂಡಿತ್ತು ಎನ್ನಲಾಗಿದೆ.

ಯಾವುದೇ ಸ್ಟುಡಿಯೋ ಸೌಲಭ್ಯವಾಗಲಿ, ಸ್ಥಳೀಯವಾಗಿ ಬೆಳೆದ ತಾಂತ್ರಿಕ ಜ್ಞಾನವಾಗಲಿ ಇನ್ನೂ ಪರಿಪಕ್ವವಾಗದಿದ್ದ ಕಾಲದಲ್ಲೇ ಅಂತರರಾಷ್ಟ್ರೀಯ ಮಾರುಕಟ್ಟೆಯ ದೃಷ್ಟಿಯಿಂದ ಸಂಪೂರ್ಣವಾಗಿ ಆಗಿನ ಮೈಸೂರು ರಾಜ್ಯದಲ್ಲೇ ಚಿತ್ರೀಕರಣವಾದ **ವಸಂತಸೇನ** ಮೂಕಿಚಿತ್ರವನ್ನು ಭಾರತದ ರಾಷ್ಟ್ರೀಯ ಚಲನಚಿತ್ರ ಪ್ರತಿಭೆಯ ಅಪೂರ್ವ ಸಂಗಮ ಎಂದು ಬಣ್ಣಿಸುತ್ತಾರೆ. ಭಾರತದ ಚಿತ್ರರಂಗದಲ್ಲಿ ಸ್ಟಂಟ್, ಟ್ರಿಕ್‌ಶಾಟ್ ಚಿತ್ರಗಳೇ ಮೇಲುಗೈ ಆಗಿದ್ದ ಸಮಯದಲ್ಲಿ ಈ ರೀತಿಯ ಗಂಭೀರ ಸಾಹಸ ಕರ್ನಾಟಕದ ನೆಲದಲ್ಲಿ ನಡೆಯಿತು.

ಚಲನಚಿತ್ರ ಕಲೆ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗಲೇ ಸುಶಿಕ್ಷಿತ, ಸುಸಂಸ್ಕೃತ ಕುಟುಂಬಗಳಿಗೆ ಸೇರಿದವರು ಕ್ಯಾಮರಾ ಎದುರಿಸಿ ನಿಂತದ್ದು ಗಮನಾರ್ಹ ವಿಷಯ. ಸಾಹಿತ್ಯ, ಸಂಗೀತ, ಕಲಾರಂಗದ ಪ್ರತಿಭಾ ಸಂಪನ್ನರು ಹೊಸತನ್ನು ಮಾಡಬೇಕು, ವಿಶಿಷ್ಟವಾದುದನ್ನು ನೀಡಬೇಕು ಎಂಬ ಮನೋಭಾವದಲ್ಲಿ ಬೆರೆತು ಕಲಾತ್ಮಕವಾದುದನ್ನು ಸಾಧಿಸಿದರು. ಈ ಸಾಧನೆಯಿಂದಾಗಿ **ವಸಂತಸೇನ** ಕನ್ನಡ ಚಲನಚಿತ್ರರಂಗದ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ.

**ವಸಂತಸೇನ** ಮೂಕಿಚಿತ್ರ ತಯಾರಿಕೆಯ ದಿನಗಳ ಘಟನೆಗಳನ್ನು ಸಾಹಿತಿ ರಾ.ಶಿ. ಅವರು ಈ ರೀತಿ ನೆನಪಿಸಿಕೊಂಡಿದ್ದಾರೆ : "ಭವನಾನಿಯವರು **ವಸಂತಸೇನ**ವನ್ನು ಛಾಯಾಚಿತ್ರದಲ್ಲಿ ಹಿಡಿಯುವುದಕ್ಕೆಂದು 1929ರಲ್ಲಿ ಬೆಂಗಳೂರಿಗೆ ಬಂದರು. ಪಾಶ್ಚಾತ್ಯ ದೇಶಗಳಲ್ಲಿ ಸುತ್ತಿ ಬಂದಿದ್ದ ಅವರು ವಿದ್ಯಾವಂತ ಅಂದರೆ ಪದವೀಧರರನ್ನೇ ಆರಿಸಿಕೊಂಡು ಚಲನಚಿತ್ರ ಮಾಡಬೇಕೆಂಬ ಹಂಬಲವನ್ನಿಟ್ಟುಕೊಂಡಿದ್ದರು. ಶ್ರೀಮತಿ ಏಣಾಕ್ಷಿರಾಮರಾಯರು ವಸಂತಸೇನೆಯ



*1929ರಲ್ಲಿ ತಯಾರಾದ ಮೊದಲ ಮೂಕಿಚಿತ್ರ ವಸಂತಸೇನ (ಮೃಚ್ಛಕಟಿಕ)ದಲ್ಲಿ ಏಣಾಕ್ಷಿ ರಾಮರಾವ್ ಮತ್ತು ಜಿ. ಕೆ. ನಂದಾ*

ಮೊದಲ ಪೂರ್ಣ ಪ್ರಮಾಣದ ಮೂಕಿಚಿತ್ರ 'ವಸಂತಸೇನ' ತಯಾರಿಕೆಗೆ ಪೂರ್ಣ ಹೊಣೆಗಾರಿಕೆ ಹೊತ್ತ ತ್ಯಾಗರಾಜ ಪರಮಶಿವ ಕೈಲಾಸಂ. ಈ ಚಿತ್ರದಲ್ಲಿ ಶಕಾರನ ಪಾತ್ರ ವಹಿಸಿದ್ದಾರೆ.

ಪಾತ್ರ ವಹಿಸುವುದೆಂದು ನಿರ್ಧಾರವಾಗಿತ್ತು. ಶಕಾರನ ಪಾತ್ರವನ್ನು ವಹಿಸಲು ಪ್ರಸಿದ್ಧ ಸಾಹಿತಿ ಟಿ.ಪಿ. ಕೈಲಾಸಂ ಅವರನ್ನು ಒಪ್ಪಿಸಿದ್ದರು. ಮಿಕ್ಕ ಪಾತ್ರಗಳಿಗೆ ಬೆಂಗಳೂರಿನ ಯುವಕ ಯುವತಿಯರನ್ನು ಆಯ್ಕೆ ಮಾಡುವುದೆಂದು ಅವರು ಯೋಚಿಸಿದ್ದರು. ಆ ಕಾಲದಲ್ಲಿ ಪದವೀಧರ ಯುವತಿಯರ ಸಂಖ್ಯೆಯೇ ಕಡಿಮೆ. ಸಿನಿಮಾಕ್ಕೆ ಸೇರಿ ನಟಿಯಾಗಲು ಯಾವ ಯುವತಿಯೂ ಮುಂದೆ ಬರಲಿಲ್ಲ. ಯುವಕರನ್ನು ಹುಡುಕುವ ಸಲುವಾಗಿ ಭವನಾನಿಯವರು ಕೈಲಾಸಂ ಸಲಹೆ ಕೇಳಿದರು. ಅವರು ಪ್ರೊಫೆಸರ್ ಕೆ.ವಿ. ಅಯ್ಯರ್ ಅವರ ವ್ಯಾಯಾಮ ಶಾಲೆಯಲ್ಲಿ ಅರ್ಹ ಯುವಕರು ಸಿಗಬಹುದು ಎಂದು ಹೇಳಿದರು. ಅವರ ವ್ಯಾಯಾಮ ಶಾಲೆಗೆ ನಾನು ಹೋಗುತ್ತಿದ್ದೆ. ಅಯ್ಯರ್ ಅವರು ನೀನೂ ಸೇರುವೆಯಾ ಎಂದು ಕೇಳಿದರು. ಮಾನಸಿಕವಾಗಿಯೂ, ಆರ್ಥಿಕವಾಗಿಯೂ ಬಹಳ ಹೀನಾಯ ಸ್ಥಿತಿಯಲ್ಲಿದ್ದ ನಾನು ಒಂದು ಕೈ ನೋಡುವ ಎಂದೆ. ನಳಿನಿ ಎಂಬ ಮಹಾರಾಷ್ಟ್ರದ ಪದವೀಧರೆಯೂ ಸಹಾಯಕ ಪಾತ್ರಕ್ಕೆಂದು ಬಂದಿದ್ದಳು. ನಳಿನಿ ಮತ್ತು ನಾನು ಹೊರಾಂಗಣದಲ್ಲಿದ್ದ ತುಳಸೀಕಟ್ಟೆಯ ಬಳಿ, ಭವನಾನಿಯವರು ಹೇಳಿದಂತೆ ಹತ್ತಾರು ಹೆಜ್ಜೆ ಅಡ್ಡಾಡಿದೆವು. ಕಾರಣಾಂತರ ಆ ಕೆಲಸಕ್ಕೆ ಸೇರಲಿಲ್ಲ.'

'ಶಕಾರನ ಪಾತ್ರದಲ್ಲಿ ಅಭಿನಯಿಸುವಾಗ ಹಲವಾರು ರಸಗಳನ್ನು ಮುಖದಲ್ಲಿಯೇ ತೋರಿಸುವುದಾಗಿ ಕೈಲಾಸಂ ನಂಬಿದ್ದರು. ಆದರೆ ಪಾತ್ರ ವಹಿಸುವಾಗ ಕೋಪವಾಗಲಿ, ದುರಾಸೆಯಾಗಲಿ ಅವರ ಮುಖದಲ್ಲಿ ಕಾಣಬರುತ್ತಿರಲಿಲ್ಲ. ಉದ್ದನೆ ಗೆರೆಗಳು ಅಥವಾ ಅಡ್ಡಡ್ಡ ಗೆರೆಗಳು ಎದ್ದು ಕಾಣುತ್ತಿದ್ದವು. ವೇಷಭೂಷಣಗಳು ಡಿಖಾವಾಗಿ ಸಾಂಪ್ರದಾಯಿಕವಾಗಿ, ವರತರೇಖ ಮತ್ತು ರಂಗು ರಂಗಿನ ಬಟ್ಟೆಗಳಿಂದ ಮೋಜು ಕಾಣಿಸುತ್ತಿತ್ತು. ಆದರೆ ಮುಖಚರ್ಯೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಕಾಣಿಸುತ್ತಿರಲಿಲ್ಲ. ನನ್ನ ಕುಹಕ ಬುದ್ಧಿಗೆ ಇದೇನು? ಹಾಸ್ಯ ಪಾತ್ರಧಾರಿಯೇ? ಎಂದು ಅನುಮಾನ ತರಿಸುತ್ತಿತ್ತು. ಅಂತೂ ಚಿತ್ರ ಹೊರಬಂತು.'

**ಸೂರ್ಯ ಫಿಲಂ ಕಂಪನಿ**

ಇದೇ ಅವಧಿಯಲ್ಲಿ ಬೆಂಗಳೂರಿನಲ್ಲಿ ಮೂಕಚಿತ್ರಗಳ ತಯಾರಿಕೆಯಲ್ಲಿ ನಿರತವಾಗಿದ್ದ ಮತ್ತೊಂದು ತಂಡವೆಂದರೆ ಸೂರ್ಯ ಫಿಲಂ ಕಂಪನಿ. ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಸೂರ್ಯ ಫಿಲಂ ಕಂಪನಿಯ ಪಾತ್ರ ಕೂಡ ಮಹತ್ತರವಾದುದು. ತನ್ನದೇ ಆದ ಸ್ಟುಡಿಯೊವೊಂದನ್ನು ಬೆಂಗಳೂರಿನಲ್ಲಿ ಆರಂಭಿಸಿ ಸುಮಾರು 40 ಮೂಕಚಿತ್ರಗಳನ್ನು ನಿರ್ಮಿಸಿದ ಈ ಸಂಸ್ಥೆಯದೇ ಒಂದು ದೊಡ್ಡ ಕತೆ.

ಈ ಕಂಪನಿಯಿಂದ ಹೊರಬಂದ ಪ್ರಥಮ ಮೂಕಚಿತ್ರ **ರಾಜಹೃದಯ** (1929). ಆಗಿನ ಪದ್ಧತಿಯಂತೆ ಇಂಗ್ಲೀಷಿನಲ್ಲಿಟ್ಟಿದ್ದ ಹೆಸರು **ಹಾರ್ಟ್ ಆಫ್ ದಿ ಕಿಂಗ್**. ಕೇಶವಲಾಲ್ ಜೋಶಿ ನಿರ್ದೇಶಕರಾಗಿದ್ದ ಈ ಚಿತ್ರದ ಛಾಯಾಗ್ರಾಹಕರು : ಮಾಮಾ. ಜೋಶಿಯವರಿಗೆ ಬಾಬುರಾವ್ ಚವಾಣ್ ಸಹಾಯಕರಾಗಿದ್ದರು. ಪವಲಂಕರ್ ಕಲಾನಿರ್ದೇಶಕರಾಗಿದ್ದರು. ಬಾಬುರಾವ್ ಮೇಕಪ್ ಹೊಣೆ ವಹಿಸಿಕೊಂಡಿದ್ದರು. ಆಗ ಸ್ಟಂಟ್ ಪಾತ್ರಗಳಿಗೆ ಭಾರತದಾದ್ಯಂತ ಹೆಸರು ಪಡೆದಿದ್ದ ಗಜಾನನ ಗಣಪತ್ ಬಾಕ್ರೆ ಈ ಚಿತ್ರದ ನಾಯಕರಾಗಿದ್ದರು. ಲಕ್ಷ್ಮೀಬಾಯಿ ಅವರು ಅಭಿನಯಿಸಿದ ಪ್ರಥಮ ಚಿತ್ರವೂ ಇದೆ.



ಸೂರ್ಯ ಫಿಲಂ ಕಂಪನಿ 1929 ರಲ್ಲಿ ತಯಾರಿಸಿದ "ರಾಜಹೃದಯ" ಮೂಕಚಿತ್ರದಲ್ಲಿ ಗಣಪತ್ ಬಾಕ್ರೆ. ಈ ಚಿತ್ರವನ್ನು ಹರಿಭಾಯ್ ದೇಸಾಯಿ ನಿರ್ದೇಶಿಸಿದ್ದಾರೆ. ಆಫಘಾನಿಸ್ತಾನ ಮೂಲದ ಈ ನಟ, ಕತ್ತಿವರಸೆ, ಕುಸ್ತಿ ಮೊದಲಾದವುಗಳಲ್ಲಿ ನಿಪುಣ. ಮಾರಾಮಾರಿ ಚಿತ್ರಗಳಿಗೆ ಹೇಳಿ ಮಾಡಿಸಿದ ನಟ, ಹೀಗಾಗಿ ಸೂರ್ಯ ಫಿಲಂ ಕಂಪನಿಯ ಬಹುತೇಕ ಮೂಕಚಿತ್ರಗಳಲ್ಲಿ ಈತನೇ ನಾಯಕ.

1927-28ರ ಸಮಯ. ಭಾರತದಲ್ಲಿ ಆಗ ಮೂಕಚಿತ್ರಗಳ ಯುಗ ಆರಂಭವಾಗಿತ್ತು. ಮೂಕಿ ಚಿತ್ರೋದ್ಯಮಕ್ಕೂ ಆಗ ಮುಂಬಯಿಯೇ ಕೇಂದ್ರ. ಶಾರದಾ ಫಿಲಂ ಕಂಪನಿ ಆಗ ಮುಂಬೈನಲ್ಲಿ ಅಗ್ರಮಾನ್ಯತೆ ಪಡೆದಿದ್ದ ಸಂಸ್ಥೆ. ಈ ಸಂಸ್ಥೆಯ ಪಾಲುದಾರರಾದ ಭೋಗಿಲಾಲ್ ಸಿ.ದವೆ ಮತ್ತು ಹರಿಭಾಯ್ ಆರ್. ದೇಸಾಯಿ ಅವರಿಗೆ ಹೊಸದು ಮಾಡಬೇಕೆಂಬ ತವಕ. ದಕ್ಷಿಣ ಭಾರತದ ವಿವಿಧ

ಪ್ರೇಕ್ಷಣೀಯ ಸ್ಥಳಗಳ ಹಿನ್ನೆಲೆಯಲ್ಲಿ ಮೂಕಚಿತ್ರವೊಂದನ್ನು ನಿರ್ಮಿಸಬೇಕೆಂಬ ಅದಮ್ಯ ಉತ್ಸಾಹದಲ್ಲಿ ಅವರಿಬ್ಬರೂ ತಮ್ಮ ತಂಡದೊಂದಿಗೆ ದಕ್ಷಿಣದತ್ತ ಹೊರಟರು. ಸಂಚಾರದ ವೇಳೆಯಲ್ಲಿ ಬೆಂಗಳೂರಿಗೂ ಬಂದ ಅವರಿಗೆ ವಾತಾವರಣ ಹಿಡಿಸಿತು. ಚಲನಚಿತ್ರ ನಿರ್ಮಾಣಕ್ಕೆ ಅತ್ಯಂತ ಉತ್ತೇಜನಕಾರಿಯಾದ, ಸಹಕಾರಿಯಾದ ವಾತಾವರಣ, ಪರಿಸರವಿರುವ ಬೆಂಗಳೂರಿನಲ್ಲೇ ಏಕೆ ಸ್ಟುಡಿಯೋ ಸ್ಥಾಪಿಸಬಾರದು ಎನ್ನುವ ಆಲೋಚನೆ ಹರಿಭಾಯಿ ಆರ್. ದೇಸಾಯಿ ಅವರಲ್ಲಿ ಮಿಂಚಿತು. ಹೊರಾಂಗಣಕ್ಕೆ ಹೊರಟ ತಂಡದೊಡನೆ ಬಂದ ಹರಿಭಾಯಿ ಆರ್. ದೇಸಾಯಿ ಅವರು ಮತ್ತೆ ಹಿಂತಿರುಗಲೇ ಇಲ್ಲ. ಮೈಸೂರು ರಾಜ್ಯದ ಬಗ್ಗೆ ಅವರಲ್ಲಿ ಬೆಳೆದ ಒಲವು ಕನ್ನಡನಾಡಿನ ಪ್ರಥಮ ಮೂಕಿಚಿತ್ರ ತಯಾರಿಕೆಯ ಸ್ಟುಡಿಯೋ ಸ್ಥಾಪನೆಗೆ ನಾಂದಿ ಹಾಡಿತು.

1928ರ ಅಕ್ಟೋಬರ್‌ನಲ್ಲಿ ಹರಿಭಾಯ್ ದೇಸಾಯಿ ಹಾಗೂ ಗೆಳೆಯ ಪುರುಷೋತ್ತಮದಾಸ್ ಜೊತೆಗೂಡಿದರು. ಇಬ್ಬರೂ ಬೆಂಗಳೂರಿನಲ್ಲಿ ಸೂರ್ಯ ಫಿಲಂ ಕಂಪನಿ ಸ್ಥಾಪಿಸಿದರು. ಬೆಂಗಳೂರಿನ ಹಿಂದಿನ ದಂಡು ಪ್ರದೇಶದಲ್ಲಿದ್ದ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿ ಮೈಸೂರಿನ ದಿವಾನರಾಗಿದ್ದ ಮಿರ್ಜಾರವರಿಗೆ ಸೇರಿದ್ದ ದೊಡ್ಡ ಬಂಗಲೆಯೊಂದನ್ನು ಬಾಡಿಗೆಗೆ ಪಡೆದರು. ಅಲ್ಲಿ ಸ್ಟುಡಿಯೋ ಸ್ಥಾಪಿಸಿದರು. ಅದಕ್ಕೆ ಅವರಿಟ್ಟ ಹೆಸರು ಸೂರ್ಯ ಫಿಲಂ ಕಂಪನಿ ಸ್ಟುಡಿಯೋಸ್. (ಸನ್‌ಲೈಟ್). ಹೀಗೆ ಕನ್ನಡದ ನೆಲದ ಪ್ರಥಮ ಸ್ಟುಡಿಯೋ ಸನ್‌ಲೈಟ್ ಅಸ್ತಿತ್ವಕ್ಕೆ ಬಂದಿತು.

ಕನ್ನಡದಲ್ಲಿ ವಾಕ್ಚಿತ್ರಯುಗ ಆರಂಭವಾದ ಮೇಲೂ ಕನ್ನಡ ಚಿತ್ರಗಳಲ್ಲಿ ನಾಯಕಿಯಾಗಿ ಜನಪ್ರಿಯವಾಗಿದ್ದ ಲಕ್ಷ್ಮೀಬಾಯಿ, ಸೂರ್ಯ ಫಿಲಂ ಕಂಪನಿಯ ಖಾಯಂ ನಾಯಕಿ. **ರಾಜಹೃದಯ** ಚಿತ್ರದಿಂದ ಅಭಿನಯವನ್ನಾರಂಭಿಸಿದ ಲಕ್ಷ್ಮೀಬಾಯಿಯನ್ನು 'ಸೂರ್ಯ ಸ್ಟಾರ್' ಎಂದೇ ಸಂಸ್ಥೆಯವರು ಕರೆಯುತ್ತಿದ್ದರು. ಈ ಸಂಸ್ಥೆ ತಯಾರಿಸಿದ 40 ಚಿತ್ರಗಳ ಪೈಕಿ 15 ಚಿತ್ರಗಳಲ್ಲಿ ಲಕ್ಷ್ಮೀಬಾಯಿಯೇ ನಾಯಕಿ. ಈ ಕಂಪನಿಯ ಲಾಂಛನದಲ್ಲಿ ಹೊರಬಂದ ಹಲವಾರು ಚಿತ್ರಗಳಲ್ಲಿ ಪಾತ್ರವಹಿಸಿದ್ದ ಇತರ ಮುಖ್ಯ ಕಲಾವಿದರು : ನಾಯಕ ಪಾತ್ರಧಾರಿಗಳು : ಟಿ.ಜೆ. ಅಂತ್ಲೆಸೆರಿಯ, ಮಾಸ್ಟರ್ ಬಾಬು, ಜಮದಗ್ನಿ, ಗಣಪತ್ ಬಾಕ್ರೆ, (ಅಫಘಾನಿಸ್ತಾನದಲ್ಲಿ ಹುಟ್ಟಿ ಬೆಳೆದ ಅಬ್ದುಲ್ ರಹಮಾನ್ ಬಾಬು) ನಾಯಕಿಯರು : ಲಕ್ಷ್ಮೀಬಾಯಿ, ಕಮಲಾಬಾಯಿ, ಎಲ್ಲಾದ್ರಿಗ್ಗಿ, ಹಾಡು ಮತ್ತು ನೃತ್ಯಕ್ಕೆ ಪ್ರಖ್ಯಾತರಾಗಿದ್ದ ಜೆನಾಭಾಯಿ ಪವಾರ್, ಶಾರದ ಹಾಗೂ





ಅಕ್ಕ ಲಕ್ಷ್ಮೀಬಾಯಿ ಜತೆಜತೆಯಲ್ಲೇ ಇದ್ದು ಮೂಕಚಿತ್ರಗಳ ತಾರೆಯಾದ ಕಮಲಾಬಾಯಿ.

ರಾಧೇಶ್ಯಾಂ ಮೂಕಚಿತ್ರದ ಮೂಲಕ ಕಮಲಾಬಾಯಿ ಬೆಳ್ಳಿತೆರೆ ಪ್ರವೇಶ

ಜೇಬುನ್ನೀಸಾ. ಹಾಸ್ಯ ಪಾತ್ರಗಳನ್ನು ನಿರ್ವಹಿಸುವುದಕ್ಕೆ ಹೆಸರಾಗಿದ್ದವರು : ಜಮೂಭಾಯ್ ರಾಮಭಾಯ್ ಪಟೇಲ್, ಬಾಬುರಾವ್ ಗಡೆ, ಖಳನಾಯಕನಿಗೇ ಹೆಚ್ಚು ಆದ್ಯತೆಯಿದ್ದ ಆ ಕಾಲದ ಸೂರ್ಯ ಕಂಪನಿ ಚಿತ್ರಗಳಲ್ಲಿ ಖಳನಟರಾಗಿ ಹೆಸರು ಮಾಡಿದ್ದವರು : ದ್ರುಪದ್‌ರಾಯ್, ಝುಂಝಾರಾಮ್, ಗಣಪತ್‌ರಾವ್ ಪವಾರ್, ವಾಮನರಾವ್ ಕುಲಕರ್ಣಿ, ಸೂರ್ಯ ಕಂಪನಿಯ ಚಿತ್ರಗಳ ಮುಖ್ಯ ಪ್ರಚಾರಾಧಿಕಾರಿಯಾಗಿದ್ದವರು ಚತುರ್ಭುಜ್ ದೋಷಿ. ಅವರ ಬಳಿ ಪಬ್ಲಿಸಿಸ್ಟ್ ಬಕುಲೇಶ್.

ಸೂರ್ಯ ಫಿಲಂ ಕಂಪನಿ ಸ್ಟುಡಿಯೋಸ್ ತನ್ನದೇ ಆದ, ಕೈಯಿಂದ ತಿರುಗಿಸಿ ಚಾಲೂ ಮಾಡುತ್ತಿದ್ದ ಕ್ಯಾಮರಾಗಳನ್ನು ಹೊಂದಿತ್ತಲ್ಲದೆ. ಸ್ವಂತ ಸಂಸ್ಕರಣ ಸೌಲಭ್ಯವನ್ನೂ ಹೊಂದಿತ್ತು. ಪುಟ್ಟ ಮೃಗಾಲಯವೊಂದನ್ನೂ ಹೊಂದಿತ್ತು, ಸೂರ್ಯ ಫಿಲಂ ಕಂಪನಿಯ ಚಿತ್ರಗಳಿಗೆ ಆಗ ಹೆಸರಿಗೆ ತಕ್ಕಂತೆ ಸೂರ್ಯನ ಬೆಳಕೇ ಮೂಲಾಧಾರ. ಛಾವಣಿ ಇಲ್ಲದ, ದೊಡ್ಡ ಜೋಪಡಿಗಳ ರೀತಿಯ ಫ್ಲೋರ್‌ಗಳಲ್ಲಿ ಚಿತ್ರೀಕರಣ. ಇಲ್ಲದಿದ್ದರೆ ಹೊರಾಂಗಣ.

ಆ ಕಾಲದಲ್ಲೇ ಸೂರ್ಯ ಫಿಲಂ ಕಂಪನಿ ಪ್ರಚಾರದಿಂದ ಹಿಡಿದು ಫೋಟೋಗ್ರಫಿಯವರೆಗೆ ವಿವಿಧ ವಿಭಾಗಗಳನ್ನು ವ್ಯವಸ್ಥಿತ ರೀತಿಯಲ್ಲಿ ಹೊಂದಿತ್ತೆಂಬುದು ಗಮನಾರ್ಹ. ಸ್ವತಃ ಅರ್ಥಶಾಸ್ತ್ರದಲ್ಲಿ ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದಿದ್ದ ಹರಿಭಾಯ್ ದೇಸಾಯಿ ಅವರು ಯುರೋಪ್‌ಗೆ ಭೇಟಿ ನೀಡಿ ಅಲ್ಲಿನ ಚಲನಚಿತ್ರ ಉದ್ಯಮವನ್ನು ಸಮೀಪದಿಂದ ನೋಡಿ ಬಂದಿದ್ದರಿಂದ ಅವರಿಗೆ ಪ್ರತಿಯೊಂದು ವಿಭಾಗವನ್ನೂ ಅಷ್ಟೊಂದು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಲು ಸಾಧ್ಯವಾಯಿತೆಂಬುದು ಅಲ್ಲಿದ್ದ ಕಲಾವಿದರನೇಕರ ಅಭಿಮತ.

ನಾನಾಬಾಯ್ ದೇಸಾಯಿ ಎಂಬುವವರು ಸೂರ್ಯಫಿಲಂ ಕಂಪನಿಯ ಕಥಾವಿಭಾಗದ ಮುಖ್ಯಸ್ಥರಾಗಿದ್ದರು. ಆಗ ಭಾರತದಲ್ಲೇ ಅತ್ಯುತ್ತಮ ತಂತ್ರಜ್ಞ ಎಂದು ಹೆಸರಾಗಿದ್ದ ವಿಷ್ಣುಸಾವಂತ್ ಮುಖ್ಯ ಛಾಯಾಗ್ರಾಹಕರಾಗಿದ್ದರು. ಲ್ಯಾಬೋರೇಟರಿಯ, ಟ್ರಿಕ್ ಫೋಟೋಗ್ರಫಿ ವಿಭಾಗದ ಹೊಣೆ ಹೊತ್ತಿದ್ದವರು ಮಹಮದ್ ಎ. ರಹಮಾನ್, ಸಂಕಲನಕ್ಕೆ ನಗೀನ್ ಪಾಂಡ್ಯ ಅವರು ಮುಖ್ಯಸ್ಥರು. ರಾಮಚಂದ್ರ ಮಹಾದಿಪ್ ಎನ್ನುವವರು ನಗೀನ್ ಪಾಂಡ್ಯ ಅವರ ಸಹಾಯಕರಾಗಿದ್ದು ಜಾಯಿಂಟರ್ ಮತ್ತು ಫಿಲ್ಮ್‌ಕಟರ್ ಆಗಿದ್ದರು. ಹಲವಾರು ಚಿತ್ರಗಳಿಗೆ ಡಿ. ಚವಾಣ್ ಅವರೂ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದರು. ಪರಶುರಾಂ ಚವಾಣ್, ಜಿ.ಪಿ. ಪವಾರ್, ಸುಂದರರಾವ್ ನಾಡಕರ್ಣಿ, ದ್ರುಪದ್‌ರಾಯ್ ಸಂಸ್ಥೆಯ ಚಿತ್ರ ನಿರ್ದೇಶಕರುಗಳ ಪೈಕಿ ಪ್ರಮುಖರು. ಹಲವಾರು ಯಶಸ್ವಿ ತಮಿಳು ಚಿತ್ರಗಳನ್ನು ನಿರ್ದೇಶಿಸಿದ್ದ ಎಂ.ವಿ. ರಾಮನ್ (ಲೈಫ್, ಕೊಂಜುಂ ಸಲಂಗೈ ಖ್ಯಾತಿ) ಅವರೂ ಈ ಸಂಸ್ಥೆಯ ಎಡಿಟಿಂಗ್ ವಿಭಾಗದಲ್ಲಿದ್ದರೆಂಬುದೂ ಗಮನಾರ್ಹ. ಬಹಳಷ್ಟು ಮೂಕಿಚಿತ್ರಗಳಿಗೆ ದಿವಂಗತ ಪದ್ಮನಾಭಶಾಸ್ತ್ರಿಗಳು ಸಂಗೀತ ನಿರ್ದೇಶನ ಮಾಡಿದ್ದಾರೆ.

ನಮ್ಮ ಕಾಲದ ಚಿತ್ರಗಳು ಹಾಗಿದ್ದವು ಎಂದು ಇಂದಿಗೂ ನೆನೆಪಿಸಿಕೊಳ್ಳುವ ಹಳೆಯ ತಲೆಮಾರಿನ ಜನರು ಇಂದಿಗೂ ಆರಂಭದ ದಿನಗಳಲ್ಲಿ ಸೂರ್ಯ ಫಿಲಂ ಕಂಪನಿಯು ಅನುಸರಿಸುತ್ತಿದ್ದ ನವ್ಯಪ್ರಚಾರ, ಪ್ರದರ್ಶನಗಳನ್ನು ಮರೆತಿಲ್ಲ. ಸಂಸ್ಥೆಯ ಕಲಾವಿದರನೇಕರು ವೇಷ ಭೂಷಣಗಳೊಡನೆ ಮೇಕಪ್ ಸಹಿತ ಜೀವಂತ ಹುಲಿಮರಿಗಳು, ಚಿರತೆಗಳು, ಕೋತಿಗಳು ಮುಂತಾದ ಪ್ರಾಣಿಗಳನ್ನು ಹಿಡಿದು ಕುಳಿತು ಅಲಂಕೃತ ವಾಹನದಲ್ಲಿ ಬೆಂಗಳೂರು ನಗರದ ಬೀದಿಗಳಲ್ಲಿ ಮೆರವಣಿಗೆ ಬರುತ್ತಿದ್ದರಂತೆ. ಅವರ ಜತೆಗೆ ವಾಹನದಲ್ಲಿ ಕ್ಯಾಮರಾ ಸಹಿತ ಛಾಯಾಗ್ರಾಹಕನೂ ಇರುತ್ತಿದ್ದ. ಆತ ಬೆರಗುಗಣ್ಣಿನಿಂದ ಮೆರವಣಿಗೆ ನೋಡುತ್ತಾ ನಿಂತ ಜನರನ್ನೂ ಚಿತ್ರೀಕರಿಸುತ್ತಿದ್ದ. ಚಿತ್ರ ಬಿಡುಗಡೆಯ ಕಾಲದಲ್ಲಿ ಹಂಚುತ್ತಿದ್ದ ಕರಪತ್ರಗಳಲ್ಲಿ 'ಸಿನಿಮಾ ನೋಡಿ, ಜತೆಗೆ ನಿಮ್ಮನ್ನೂ ರಜತಪರದೆಯ ಮೇಲೆ ವೀಕ್ಷಿಸಿ ಆನಂದಿಸಿ' ಎಂದು ಮುದ್ರಿಸಲಾಗುತ್ತಿತ್ತು. ಜನರಿಗೆ ಅದೇ ಒಂದು ಆಕರ್ಷಣೆ. ಫಲ : ಚಿತ್ರಮಂದಿರ ಭರ್ತಿ.

## ಲಕ್ಷ್ಮೀಬಾಯಿ ನೆನಪು

ಬೆಂಗಳೂರಿನ ಸೂರ್ಯ ಫಿಲಂ ಕಂಪನಿ ತಯಾರಿಸಿದ 15 ಮೂಕಚಿತ್ರಗಳಲ್ಲಿ ಸ್ಥಾಯಿ ನಾಯಕಿ ಲಕ್ಷ್ಮೀಬಾಯಿ.

ಮೂಕಿಚಿತ್ರಗಳ ಯಶಸ್ವಿ ತಾರೆಯಾಗಿದ್ದ ಲಕ್ಷ್ಮೀಬಾಯಿ, ತಾವು ಮೂಕಿಚಿತ್ರರಂಗ ಪ್ರವೇಶಿಸಿದ ದಿನಗಳನ್ನು 'ಸುಧಾ' ವಾರಪತ್ರಿಕೆಯಲ್ಲಿ ಸ್ಮರಿಸಿಕೊಂಡಿರುವುದು ಹೀಗೆ : "ಬೆಂಗಳೂರು ಜಿಲ್ಲೆಯ



ಮತ್ತೀಕೆರೆಯಲ್ಲಿ 1918ರಲ್ಲಿ ನನ್ನ ಜನನ. ತಂದೆ ಹನುಮಂತಪ್ಪ, ತಾಯಿ ತಾಯಮ್ಮ. ತಂದೆ ಸೈನಿಕ ವೃತ್ತಿಯಲ್ಲಿದ್ದರು. ನನ್ನ ತಂದೆ, ತಾಯಿಗಳಿಗೆ ನಾನು ಹಿರಿಯ ಮಗಳು. ತಂಗಿ ಕಮಲಾಬಾಯಿ ಕಿರಿಯ ಮಗಳು. ಸುಖ ಸಂತೋಷ ಕಾಣಬೇಕಾಗಿದ್ದ ಬಾಲ್ಯದಲ್ಲಿಯೇ ನಾವು ವಿಧಿಯ ಕ್ರೂರ ದೃಷ್ಟಿಗೆ ಬಿದ್ದು ಕಷ್ಟಕ್ಕೆ ಸಿಲುಕಿದೆವು.

"ಮೊದಲನೆಯ ಮಹಾಯುದ್ಧದಲ್ಲಿ ನನ್ನ ತಂದೆ ಗುಂಡೇಟಿನಿಂದ ಮಡಿದುದರಿಂದ ನಾವು ತಬ್ಬಲಿಗಳಾದೆವು. ಆಗ ನನಗೆ ಎರಡು ವರ್ಷ. ನಮ್ಮನ್ನು ಸಾಕಿ, ಸಲಹಲು ನನ್ನ ತಾಯಿ ಮೈಸೂರಿನ ಮಹಾರಾಣಿ ಆಸ್ಪತ್ರೆಯಲ್ಲಿ ಮಿಡ್‌ವೈಫ್ ಆದರು. ತಾಯಿಗೆ ಬರುತ್ತಿದ್ದ ಸಂಬಳ ಸಾಲುತ್ತಿರಲಿಲ್ಲ. ಅವರಿಗೆ ನೆರವಾಗಲು ನಿಶ್ಚಯಿಸಿ ನಾನೂ ನನ್ನ ತಂಗಿ ಹೂ ಕಟ್ಟುವುದು, ಎಲೆ ಮಾರುವುದು ಮೊದಲಾದ ಕೆಲಸವನ್ನು ಕೈಗೊಂಡೆವು. ಇಡೀ ರಾತ್ರಿ ಕುಳಿತು ಇನ್ನೂರು ಎಲೆ ಹಚ್ಚಿ, ಬೆಳಿಗ್ಗೆ ಅಂಗಡಿಗೆ ತೆಗೆದುಕೊಂಡು ಹೋಗಿ ಮಾರಿ ಹಣ ತೆಗೆದುಕೊಂಡು ಬರುತ್ತಿದ್ದೆ.

"ತಾಯಿಯ ಸೆರಗಿನ ಅಡಿಯಲ್ಲಿಯೇ ಜೀವನ ನೌಕೆ ಸಾಗುತ್ತಿದ್ದಾಗ ಚಲನಚಿತ್ರರಂಗಕ್ಕೆ ಧುಮುಕುವ ಸಾಹಸ ಕೈಗೊಂಡೆ. ನಾನು ಪ್ರೌಢಶಾಲೆಯಲ್ಲಿದ್ದಾಗ (ನನ್ನ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ.ಯವರೆಗೆ ಸಾಗಿತು. ಪರೀಕ್ಷೆಗೆ ಹಣ ಕಟ್ಟಲು ಸಾಧ್ಯವಾಗದೆ ವಿದ್ಯಾಭ್ಯಾಸಕ್ಕೆ ಕೊನೆಯ ನಮಸ್ಕಾರ ಹೊಡೆಯಬೇಕಾಯಿತು.) ನಡೆದ ಒಂದು ಘಟನೆ ನಾನು ಚಲನಚಿತ್ರರಂಗ ಪ್ರವೇಶಿಸಲು ನನಗೆ ಅರಿವಿಲ್ಲದಂತೆಯೇ ಕಾರಣವಾಯಿತು.

"ಕನ್ನಡ ರಂಗಭೂಮಿಯ ಪ್ರಸಿದ್ಧ ಅಭಿನೇತ್ರಿ ಕೆ. ಅಶ್ವತ್ಥಮ್ಮ ನಾನು ಓದುತ್ತಿದ್ದ ಸ್ಕೂಲಿನಲ್ಲಿಯೇ (ಸಿದ್ದಿಕಟ್ಟೆ ಮಿಷನ್ ಸ್ಕೂಲ್) ಓದುತ್ತಿದ್ದರು. ಅವರ ತಂದೆ ವಿಶ್ವೇಶ್ವರ ಶಾಸ್ತ್ರಿಗಳು ಅದೇ ಶಾಲೆಯಲ್ಲಿ ಸಂಗೀತ ಮಾಸ್ತರರಾಗಿದ್ದರು. ಒಮ್ಮೆ ಶಾಲೆಯಲ್ಲಿ ಸಮಾರಂಭವೊಂದಕ್ಕಾಗಿ ನಾಟಕದ ರಿಹರ್ಸಲ್ ಮಾಡುತ್ತಿದ್ದರು. ಆ ನಾಟಕದಲ್ಲಿ ಅಶ್ವತ್ಥಮ್ಮನವರಿಗೂ ಪ್ರಮುಖ ಪಾತ್ರವಿತ್ತು. ನನಗೆ ರಿಹರ್ಸಲ್ ಬಗ್ಗೆ ಎಲ್ಲಿಲ್ಲದ ಕುತೂಹಲ. ಅಭ್ಯಾಸ ಸಾಗುತ್ತಿದ್ದ ಕೊಠಡಿಯ ಕಿಟಕಿಯಲ್ಲಿ ಇಣಕಿ ಹಾಕಿದೆ. ಒಳಗಿದ್ದವರು ನನ್ನನ್ನು ಗದರಿಸಿ ಓಡಿಸಿದರು. "ಒಂದಲ್ಲಾ ಒಂದು ದಿನ ನಾನೂ ಸಹ ನಾಟಕವಾಡಿ ಇವರಿಗೆ ತೋರಿಸಿಯೇ ಬಿಡುತ್ತೇನೆ" ಎಂದು ಮನಸ್ಸಿನಲ್ಲಿಯೇ ಸಂಕಲ್ಪ ಮಾಡಿದೆ....

"ಇದೇ ಸಮಯದಲ್ಲೇ ನಾವು ಮತ್ತೀಕೆರೆಯಲ್ಲಿದ್ದ ನಮ್ಮ ಮನೆಯನ್ನು ಬಳೇಪೇಟೆಗೆ ಬದಲಾಯಿಸಿದೆವು. ಈ ಮನೆಯಿಂದಲೇ ನನ್ನ ಬಣ್ಣದ ಬದುಕು ಪ್ರಾರಂಭವಾಯಿತು ಎನ್ನಬಹುದು. ನಮ್ಮ ಮನೆಯ ಎದುರು ಸೂರ್ಯ ಫಿಲಂ ಕಂಪನಿಯ ಮೂಕಿಚಿತ್ರಗಳ ತಾರೆ ಕೃಷ್ಣಾಬಾಯಿ ವಾಸ ಮಾಡುತ್ತಿದ್ದರು. ಅಲ್ಪ ಕಾಲದಲ್ಲಿಯೇ ಅವರಿಗೂ ನನಗೂ ಪರಸ್ಪರ ಪರಿಚಯವಾಯಿತು. ಆಕೆ ಪ್ರತಿನಿತ್ಯವೂ ಕಾರಿನಲ್ಲೇ ಹೋಗಿ ಬರುತ್ತಿದ್ದುದನ್ನು ನಾನು ಗಮನಿಸುತ್ತಿದ್ದೆ. ಎಲ್ಲಿಗೆ ಹೋಗಿ ಬರುತ್ತಾರೆ ಎಂಬ ಕುತೂಹಲ ಉಂಟಾಯಿತು. ಧೈರ್ಯ ಮಾಡಿ "ನೀವು ದಿನವೂ ಕಾರಿನಲ್ಲಿ ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿಯೇ ಬಿಟ್ಟೆ.

"ಆಕೆ ನಸುನಗುತ್ತಾ ಸ್ಟುಡಿಯೋಕ್ಕೆ ಹೋಗುತ್ತೇನೆ ಎಂದುತ್ತರಿಸಿದರು.

"ಸ್ಟುಡಿಯೋ ಎಂದರೆ ಏನು? ಅಲ್ಲಿ ಏನು ಮಾಡುತ್ತಾರೆ? ಎಂದು ಪ್ರಶ್ನಿಸಿದೆ.

"'ಅಲ್ಲಿ ಚಲನಚಿತ್ರಗಳನ್ನು ನಿರ್ಮಿಸುತ್ತಾರೆ' ಎಂದರು. ನನಗೆ ಅರ್ಥವಾಗದೆ "ಹಾಗೆಂದರೆ ಏನು?" ಎಂದು ಕೇಳಿದೆ. ಅವರು ಜೋರಾಗಿ ನಕ್ಕು 'ಬಾಯಲ್ಲಿ ಹೇಳಿದರೆ ನಿನಗೆ ತಿಳಿಯುವುದಿಲ್ಲ. ಸ್ಟುಡಿಯೋಕ್ಕೇ ನಿನ್ನನ್ನು ಕರೆದುಕೊಂಡು ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನೆಲ್ಲಾ ತೋರಿಸುತ್ತೇನೆ' ಎಂದು ಹೇಳಿದರು. ಆಗ ನನ್ನ ವಯಸ್ಸು ಹದಿನಾರು. ಸ್ಟುಡಿಯೋ ನೋಡಲು ನಾನು ತಾಯಿಯ ಅನುಮತಿ ಕೇಳಿದೆ. ನನ್ನ ತಾಯಿ ಮೊದಲು ಒಪ್ಪಲಿಲ್ಲ. ನಾನು ಹಿಡಿದ ಹಠ ಬಿಡಲಿಲ್ಲ. ಕೊನೆಗೆ ಅವರೇ ಸೋತು ಒಪ್ಪಿಗೆ ನೀಡಿದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ.

"ಕೃಷ್ಣಾಬಾಯಿ ಅವರೊಂದಿಗೆ ಸ್ಟುಡಿಯೋಕ್ಕೆ ಹೋದೆ. ಆಗ ಬೊಂಬಾಯಿಯ ಸೂರ್ಯ ಫಿಲಂ ಕಂಪನಿಯವರು ಮೂಕಿ ಚಿತ್ರಗಳನ್ನು ನಿರ್ಮಿಸುತ್ತಿದ್ದರು. ಯೂರೋಪ್ ರಾಷ್ಟ್ರಗಳಲ್ಲಿ ಚಲನಚಿತ್ರರಂಗವನ್ನು

ನಿಕಟವಾಗಿ ಕಂಡುಬಂದ ಅರ್ಥಶಾಸ್ತ್ರ ಪದವೀಧರರಾದ ಹರಿಭಾಯ್ ದೇಸಾಯಿ ಈ ಸಂಸ್ಥೆಯ ಮಾಲೀಕರು. ಬೆಂಗಳೂರು ದಂಡು ಪ್ರದೇಶದ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿದ್ದ ಬೃಹತ್ ಬಂಗಲೆಯೊಂದರಲ್ಲಿ ಸ್ಟುಡಿಯೋ ರೂಪು ತಾಳಿತ್ತು. ಮಾಡು ಇಲ್ಲದ ಫ್ಲೋರ್, ಸೂರ್ಯನ ಬಿಸಿಲಿನಲ್ಲಿಯೇ ಚಿತ್ರೀಕರಣ. ಫಿಲ್ಮ್ ಪ್ರೊಸೆಸಿಂಗ್ ಘಟಕ ಈ ಸ್ಟುಡಿಯೋದಲ್ಲಿದ್ದಿತು. ಅಲ್ಲಿನ ಕಾರ್ಯ ಚಟುವಟಿಕೆಗಳನ್ನು ನೋಡಿ ಅಚ್ಚರಿಗೊಂಡು ನಾನು ಒಂದೇ ಸಮನೆ ಚಿತ್ರೀಕರಣವನ್ನು ನೋಡತೊಡಗಿದೆ.

"ಕಲಾವಿದರು-ಅಭಿನೇತ್ರಿಯರು ವೇಷ ಧರಿಸಿ ಅಭಿನಯಿಸುತ್ತಿದ್ದರು. ಒಂದು ಫೋಟೋ ತೆಗೆದ ನಂತರ ಮತ್ತೊಂದು ದೃಶ್ಯ ಪ್ರಾರಂಭ. ಹೀಗೆಯೇ ಹಲವಾರು ಬಾರಿ ತೆಗೆದರು. ಅಂದಿನ ಕೆಲಸ ಮುಕ್ತಾಯವಾಯಿತು ಎನ್ನುವಾಗ ನಾನು ಹೊರಡಲು ಸಿದ್ಧಳಾದೆ. ಅಷ್ಟರಲ್ಲಿ ನನಗೆ ದೇಸಾಯಿ ಅವರಿಂದ ಕರೆ ಬಂದಿತು. ನನ್ನ ಬಗ್ಗೆ ವಿಚಾರ ಮಾಡಿದ ಅವರು "ಹುಡುಗಿ ಲಕ್ಷಣವಾಗಿದ್ದಾಳೆ. ಮೇಕಪ್ ಟೆಸ್ಟ್ ಮಾಡಿ" ಎಂದು ಮೇಕಪ್ ಮ್ಯಾನ್‌ಗೆ ಹೇಳಿದರು. ನನ್ನ ವಿಳಾಸ ಬರೆದುಕೊಂಡ ಮೇಲೆ ಮನೆಗೆ ಹಿಂದಿರುಗಿದೆ.

"ಅಂದೇ ರಾತ್ರಿ ದೇಸಾಯಿ ಅವರು ನಮ್ಮ ಮನೆಗೆ ಬಂದರು. 'ನಮ್ಮ ಚಿತ್ರದಲ್ಲಿ ನಟಿಸಲು ನಿಮ್ಮ ಮಗಳನ್ನು ಕಳುಹಿಸಿ ಕೊಡಿ' ಎಂದು ನಮ್ಮ ತಾಯಿಯನ್ನು ಕೇಳಿದರು. ತಾಯಿ ಗಾಬರಿಗೊಂಡರು. ಅದಕ್ಕೆ ಕಾರಣ ಕಾಫಿ ತೋಟಕ್ಕೆ ಮನುಷ್ಯರನ್ನೂ ಕರೆದುಕೊಂಡು ಹೋಗಿ ಬಲಿ ಕೊಡುತ್ತಿದ್ದಾರೆ ಎಂಬ ಸುದ್ದಿ ಅಂದು ಎಲ್ಲೆಲ್ಲೂ ಹರಡಿತ್ತು. ನಮ್ಮ ತಾಯಿ ಇದನ್ನು ಪ್ರಬಲವಾಗಿ ನಂಬಿದ್ದರು. ಅವರು ಎಷ್ಟೇ ವಿಧವಾಗಿ ಕೇಳಿಕೊಂಡರೂ ಒಪ್ಪಲೇ ಇಲ್ಲ. ಆ ದಿನ ದೇಸಾಯಿ ಅವರು ತುಸು ಬೇಸರದಿಂದಲೇ ಹೊರಟು ಹೋದರು. ಅಂದು ಹೋದ ಅವರು ಎರಡು ದಿನಗಳ ನಂತರ ಮತ್ತೆ ನಮ್ಮ ಮನೆಗೆ



ಮೂಕಚಿತ್ರ "ರಾಜಹೃದಯ" ದಲ್ಲಿ ಲಕ್ಷ್ಮೀಬಾಯಿ, ಮೀರಾ ಹಾಗೂ ಸುಂದರಬಾಯಿ.

ಬಂದರು. ಆ ದಿನವೂ ತಾಯಿಯಿಂದ ಅವರಿಗೆ ಅನುಮತಿ ಸಿಕ್ಕಲಿಲ್ಲ. ಮೂರನೆ ಬಾರಿ ಮತ್ತೆ ಬಂದರು. 'ತಿಂಗಳಿಗೆ ಇನ್ನೂರೈವತ್ತು ರೂಪಾಯಿ ಸಂಬಳ, ಇರಲು ಮನೆ ಕೊಡುತ್ತೇನೆ ಯೋಚಿಸಿ ನೋಡಿ' ಎಂದರು.

"ಇದಕ್ಕೂ ತಾಯಿ ಒಪ್ಪಲೇ ಇಲ್ಲ. ನನಗೆ ನಟಿಸುವ ಆಸೆ. ಇಷ್ಟು ಭಾರೀ ಹಣದಿಂದ ನಮ್ಮ ಬಡತನದ ಬವಣೆ ನೀಗುತ್ತದೆ ಎಂದು ಲೆಕ್ಕ ಹಾಕಿದೆ. ತಾಯಿಯನ್ನು ಕಾಡಿ ಬೇಡಿ, ಕಣ್ಣೀರು ಸುರಿಸಿ ಒಪ್ಪಿಸಿದೆ. ದೇಸಾಯಿ ಅವರು ಒಂದು ಗೊತ್ತಾದ ದಿನವನ್ನು ಹೇಳಿ ಅಂದು ತಪ್ಪದೆ ಬರಬೇಕೆಂದು ತಿಳಿಸಿ ಹೊರಟುಹೋದರು. ಗೊತ್ತಾದ ದಿನ ಹತ್ತಿರ ಬರುತ್ತಿದ್ದಂತೆಯೇ ನನಗೆ ಹೆದರಿಕೆ ಪ್ರಾರಂಭವಾಯಿತು. ತಾಯಿಯೊಡನೆ ಸ್ಟುಡಿಯೋಕ್ಕೆ ಹೋದೆ. ದೇಸಾಯಿ ಅವರು ನನ್ನನ್ನು ನೋಡಿ ಮೇಕಪ್ ಮಾಡಿಸಿಕೊಳ್ಳಲು ಹೇಳಿದರು. ದಢೂತಿಯಾದ ಫಾತಿಮಾ ಎಂಬ ಮಹಿಳೆ ನನ್ನನ್ನು ನೋಡಿ "ಅಂದರ್ ಆವ್" ಎಂದಳು. ಒಳಗಡೆ ಹೋದೆ. "ಅಲ್ಲಿ ಕೊಳಾಯಿ ಇದೆ. ನಿನ್ನ ಮುಖವನ್ನು ಚೆನ್ನಾಗಿ ತೊಳೆದುಕೊಂಡು ಬಾ" ಎಂದಳು. ನಲ್ಲಿಯ ಬಳಿಗೆ ಹೋಗಿ ಮುಖವನ್ನು ಉಜ್ಜಿ ತೊಳೆದುಕೊಂಡೆ. "ಬೈಠ್" ಎಂದಳು. ಕುಳಿತುಕೊಂಡೆ. ಬಣ್ಣದಿಂದ ನನ್ನ ಮುಖವನ್ನು ಶೃಂಗರಿಸಿ "ಉಠ್" ಎಂದಳು. ಇದೆಲ್ಲಾ ನನಗೆ ತೀರಾ ಹೊಸದಾಗಿತ್ತು. ಇವಳಿಂದ ಪಾರಾಗಿ ಹೋದರೆ ಸಾಕು ಎನಿಸಿತು. ಮುಖಕ್ಕೆ ನೀರು ಸಿಂಪಡಿಸಿಕೊಂಡು ಬಾ ಎಂದಳು. ನಾನು ಮುಖವನ್ನು ಚೆನ್ನಾಗಿ ಉಜ್ಜಿ ತೊಳೆದೆ. ಬಣ್ಣ ಕಲಸಿಕೊಂಡಿತು. ಅದನ್ನು ನೋಡಿದ ಫಾತಿಮಾಳ ಕಣ್ಣು ಕೆಂಪಗಾಯಿತು. ಮಾಲೀಕರನ್ನು ಕರೆದು ತೋರಿಸಿದಳು. ಮತ್ತೊಮ್ಮೆ ಮೇಕಪ್ ಮಾಡಿಸಿಕೊ ಎಂದು ಹೇಳಿ ಮಾಲೀಕರು ಹೊರಟು ಹೋದರು.

"ನನ್ನ ಮುಖವನ್ನು ನಿಲುವುಗನ್ನಡಿಯಲ್ಲಿ ನೋಡಿಕೊಂಡೆ. ಬಾಬಯ್ಯನ ಹಬ್ಬಕ್ಕೆ ಹುಲಿವೇಷ ಹಾಕಿಕೊಂಡ ಹಾಗಿತ್ತು. ವೈಟ್ ಲೆಡ್, ವ್ಯಾಸಲಿನ್, ರೆಡ್ ಕಲರ್‌ಗಳನ್ನು ಮಿಶ್ರ ಮಾಡಿದ್ದ ಬಣ್ಣವಾಗಿದ್ದರಿಂದ ಮುಖವೆಲ್ಲಾ ಬಣ್ಣದ ಮುದ್ದೆಯಾಗಿತ್ತು. ಎಣ್ಣೆ ಹಚ್ಚಿಕೊಂಡು ಬಣ್ಣವನ್ನೆಲ್ಲಾ ತೊಳೆದುಕೊಂಡು ಎರಡನೆಯ ಬಾರಿಗೆ ಮೇಕಪ್ ಮಾಡಿಸಿಕೊಂಡೆ. ಮೇಕಪ್ ಆದ ನಂತರ ಮಾಲೀಕ ದೇಸಾಯ್ ಅವರ ಮುಂದೆ ನಿಂತೆ. ಓಡು ಎಂದರು. ಓಡಿದೆ. ನಗು ಎಂದರು ನಕ್ಕೆ. ಅಳು ಎಂದರು. ಬರುವುದಿಲ್ಲ ಎಂದೆ. ಸಮಯ ಬಂದಾಗ ನಾವು ಅಳುವುದನ್ನು ಕಲಿಸುತ್ತೇವೆ ಎಂದರು.

"ನಾನು ಅಭಿನಯಿಸಿದ ಪ್ರಥಮ ಚಿತ್ರ **ರಾಜಹೃದಯ**. ಅದು ಮೂಕಿಚಿತ್ರ. ಈಗಿನಂತೆ ಆಗ ಅಭಿನಯ ಸುಲಭವಾಗಿರಲಿಲ್ಲ. ಅಂದು ತಯಾರಾಗುತ್ತಿದ್ದ ಬಹುತೇಕ ಚಿತ್ರಗಳೆಲ್ಲಾ ಸ್ಟಂಟ್ ಚಿತ್ರಗಳೇ ಆಗಿದ್ದವು. ನಟನೇ ಆಗಲಿ, ನಟಿಯೇ ಆಗಲಿ ಕುದುರೆ ಸವಾರಿ, ಈಜು, ಮರ ಹತ್ತುವುದು, ಬಿಲ್ಲುಬಾಣ ಎಲ್ಲವನ್ನೂ ಕಲಿಯಬೇಕಾಗಿತ್ತು. ನಾನು ಇವೆಲ್ಲವುಗಳನ್ನೂ ಶ್ರಮಪಟ್ಟು ಕಲಿತೆ. ಎಲ್ಲರೂ ನನ್ನ ಅಭಿನಯವನ್ನು ಮೆಚ್ಚಿದರು. ಮಾಲೀಕರೂ ನನ್ನ ಅಭಿನಯಕ್ಕೆ ತಲೆ ತೂಗಿದರು. ಒಪ್ಪಂದ ಸಿದ್ಧವಾಯಿತು. ತಿಂಗಳೊಂದಕ್ಕೆ 250 ರೂ. ಸಂಭಾವನೆ.

"**ರಾಜ ಹೃದಯ** ಮೂಕಿಚಿತ್ರದ ನಾಯಕಿಯ ಪಾತ್ರ ನನಗೆ ಹಣ ಹಾಗೂ ಕೀರ್ತಿ ಎರಡನ್ನೂ ತಂದಿತು. ಚಿತ್ರದ ಯಶಸ್ಸಿನಿಂದಾಗಿ ದೇಸಾಯಿ ಅವರು ಮುಂದೆ ನಿರ್ಮಿಸಿದ 15 ಮೂಕಿ ಚಿತ್ರಗಳಲ್ಲೂ ನನಗೆ ನಾಯಕಿಯ ಪಾತ್ರವಿತ್ತರು. ಗಣಪತ್ ಬಾಕ್ರೆ ಅಥವಾ ಅಬ್ದುಲ್ ರಹಮಾನ್ ಬಾಬಾ, ಅಫಘಾನಿಸ್ತಾನದ ಕಲಾವಿದ. ಅವರು ಈ ಎಲ್ಲಾ ಚಿತ್ರಗಳಲ್ಲೂ ನಾಯಕನ ಪಾತ್ರ ವಹಿಸಿದರು. ಅಂದು ಚಿತ್ರ ತಯಾರಾಗುತ್ತಿದ್ದ ಪದ್ಧತಿಯೇ ಬೇರೆ. ಚಿತ್ರಕ್ಕೆ ಸಂಬಂಧಪಟ್ಟ ನಟ-ನಟಿಯರನ್ನೆಲ್ಲಾ ಒಂದೆಡೆ ಕೂಡಿಸಿಕೊಂಡು ಚಿತ್ರದ ಕಥೆ ಹೇಳುತ್ತಿದ್ದರು. ನಂತರ ಪಾತ್ರಧಾರಿಗಳು ವಹಿಸಬೇಕಾಗಿದ್ದ ಪಾತ್ರವನ್ನೂ ವಿವರಿಸುತ್ತಿದ್ದರು. ನಟ-ನಟಿಯರಿಗೆಲ್ಲಾ ಅವರವರ ಪಾತ್ರಗಳ ಬಗ್ಗೆ ಮನದಟ್ಟಾದಾಗ ಚಿತ್ರೀಕರಣ ಮುಕ್ತಾಯವಾಗುತ್ತಿತ್ತು. ಒಂದೊಂದು ದೃಶ್ಯಕ್ಕೂ ಕನ್ನಡದಲ್ಲಿ "ಸಬ್ ಟೈಟಲ್" ತೋರಿಸುತ್ತಿದ್ದರು. ಇದರಿಂದ ಚಿತ್ರ ವೀಕ್ಷಿಸುತ್ತಿದ್ದವರಿಗೆ ಚಿತ್ರದ ಬಗ್ಗೆ ಆಸಕ್ತಿ ಹುಟ್ಟುತ್ತಿತ್ತು. ಮೂಕಿ ಚಿತ್ರಗಳು ಹೆಚ್ಚಾಗಿ ಹೊರಾಂಗಣದಲ್ಲೇ ಚಿತ್ರೀಕರಣವಾಗುತ್ತಿತ್ತು.

"ಒಮ್ಮೆ ಶ್ರೀರಂಗಪಟ್ಟಣದಲ್ಲಿ ಚಿತ್ರೀಕರಣ ನಡೆಯುತ್ತಿತ್ತು. ನಾಯಕಿಯ ಪಾತ್ರ ವಹಿಸಿದ್ದ ನಾನು ದೃಶ್ಯವೊಂದರಲ್ಲಿ ಅಳಬೇಕಾಗಿತ್ತು. ಇದುವರೆವಿಗೂ ನಾನು ಪಾತ್ರ ವಹಿಸಿದ್ದ ಎಲ್ಲಾ ಮೂಕಿಚಿತ್ರಗಳೂ



ಪ್ರಣಯ ಕಥಾವಸ್ತುವನ್ನೆ ಹೊಂದಿದ್ದರಿಂದ ಅಳುವ ಸಮಸ್ಯೆ ನನ್ನ ಪಾಲಿಗೆ ಬಂದಿರಲಿಲ್ಲ. ಏನು ಮಾಡಿದರೂ ಅಳು ಬರಲಿಲ್ಲ. ಕೊನೆಗೆ ನಿರ್ಮಾಪಕರು ಒಂದು ಬೆತ್ತದಿಂದ ನನ್ನನ್ನು ಚೆನ್ನಾಗಿ ಹೊಡೆದರು. ಜೋರಾಗಿ ಅಳಲು ಪ್ರಾರಂಭಿಸಿದೆ. ಚಿತ್ರಕ್ಕೆ ಬೇಕಾದ ಎಫೆಕ್ಟ್ ಬಂದಿತು. ಚಿತ್ರೀಕರಣ ಸಾಗಿತು. ಎಲ್ಲರ ಎದುರಿಗೂ ನಿರ್ಮಾಪಕ ದೇಸಾಯಿ ಅವರು ಥಳಿಸಿದ್ದರಿಂದ ನನಗೆ ಪ್ರಚಂಡ ಕೋಪ ಬಂದಿತ್ತು. ಇನ್ನು ಈ ಕಂಪನಿಯ ಸಹವಾಸವೇ ಬೇಡ ಎಂಬ ತೀರ್ಮಾನಕ್ಕೆ ಬಂದೆ. ಒಂದೇ ಸಮನೆ ಕಣ್ಣೀರು ಹಾಕುತ್ತಿದ್ದ ನನ್ನನ್ನು ನೋಡಿ ದೇಸಾಯಿ ಅವರು, "ಚಿತ್ರದ ಎಫೆಕ್ಟ್‌ಗೋಸ್ಕರ ನಾನು ಆ ರೀತಿ ಮಾಡಿದೆ. ಉದ್ದೇಶ ಪೂರ್ವಕವಾಗಿ ಅಲ್ಲ. ಆದ್ದರಿಂದ ಅನ್ಯಥಾ ಭಾವಿಸಬೇಡ. ಇನ್ನು ಮುಂದೆ ದೊಡ್ಡ ಕನ್ನಡಿಯ ಮುಂದೆ ನಿಂತು ಅಳುವುದನ್ನು ಪ್ರಾಕ್ಟೀಸ್ ಮಾಡು" ಎಂದು ಸಮಾಧಾನ ಮಾಡಿದರು. ಅಂದಿನಿಂದ ನಾನು ಅಳುವುದನ್ನು ಅಭ್ಯಾಸ ಮಾಡಿದೆ. ಇದರಿಂದಾಗಿ ಮುಂದೆ ಅಳುವ ದೃಶ್ಯಗಳಲ್ಲಿ ನೈಜವಾಗಿ ಅಭಿನಯಿಸಲು ಸಾಧ್ಯವಾಯಿತು."

"ಈ ವೇಳೆಗೆ ಮುಂಬೈನಲ್ಲಿ ಟಾಕಿಚಿತ್ರಗಳು ತಯಾರಾಗುತ್ತಿದ್ದವು. ಸೂರ್ಯ ಫಿಲಂ ಕಂಪನಿಯವರೂ ಬೆಂಗಳೂರಿನಲ್ಲಿ ಟಾಕಿಚಿತ್ರಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಟಾಕಿಯಲ್ಲೂ ನಾನೇ ನಾಯಕಿಯಾಗಿ ಅಭಿನಯಿಸಬೇಕಾಗಿತ್ತು. ಈ ಮಧ್ಯೆ ಕಂಪನಿಯವರಿಗೂ ನನಗೂ ಭಿನ್ನಾಭಿಪ್ರಾಯ ಉಂಟಾಗಿ ಸೂರ್ಯ ಫಿಲಂ ಕಂಪನಿಯ ಸಂಪರ್ಕ ಕಡಿದುಕೊಂಡೆ. ಈ ವೇಳೆಗೆ ಮೂಕಿ ಚಿತ್ರಗಳು ಸ್ಥಗಿತಗೊಂಡು ವಾಕ್ಚಿತ್ರಗಳ ಕಾಲ ದೇಶಾದ್ಯಂತ ಪ್ರಾರಂಭವಾಯಿತು. ಮಾತನಾಡುವ ಚಿತ್ರಗಳು ಜನರನ್ನು ಅಯಸ್ಕಾಂತದಂತೆ ಆಕರ್ಷಿಸತೊಡಗಿದವು. ನಮ್ಮ ಮನೆಯ ಬಳಿಯೇ ಪ್ರಸಿದ್ಧ ವ್ಯಾಪಾರಿಗಳಾದ ಚಮನ್‌ಲಾಲ್ ಡೊಂಗಾಜಿ ಎಂಬುವವರಿದ್ದರು. ಇವರಿಗೆ ಕನ್ನಡ ಚಿತ್ರವೊಂದನ್ನು ನಿರ್ಮಿಸುವ ಇಚ್ಛೆ ಉಂಟಾಗಿ 1934ರ ಆರಂಭದಲ್ಲಿ **ಸತಿಸುಲೋಚನ** ವಾಕ್ಚಿತ್ರ ತಯಾರಿಕೆಗೆ ಸಿದ್ಧತೆ ನಡೆಸಿದರು. ಈ ಚಿತ್ರದ ಅಭ್ಯಾಸ ಬೆಂಗಳೂರಿನಲ್ಲಿ ನಡೆಯುತ್ತಿದ್ದಾಗಲೇ ಇಂದ್ರಜಿತು ಪಾತ್ರ ನಿರ್ವಹಿಸಲು ನಿಯೋಜಿತರಾಗಿದ್ದ

'ಗೋರ ಕುಂಬಾರ'ದ ಭಕ್ತೆಯಾಗಿ ಪ್ರೌಢ ಅಭಿನಯ









ರಂಗಭೂಮಿಯ ಖ್ಯಾತನಟ ಎಂ.ವಿ. ಸುಬ್ಬಯ್ಯನಾಯ್ಡು ಅವರಿಗೂ ನನಗೂ ನಿಕಟ ಸಂಪರ್ಕ ಬೆಳೆಯಿತು. **ಸತಿಸುಲೋಚನ** ಚಿತ್ರದ ಶೂಟಿಂಗ್‌ಗೆ ಕೊಲ್ಲಾಪುರಕ್ಕೆ ಹೊರಡುವ ಮುನ್ನವೇ ನನ್ನ ಮತ್ತು ನಾಯ್ಡು ಅವರ ಗಾಂಧರ್ವ ವಿವಾಹ ನಡೆಯಿತು. ನಾವು ತಾರಾ ದಂಪತಿಗಳಾದೆವು" ಎಂದು ಮೂಕಿ ಕಾಲದ ಚಲನಚಿತ್ರದ ದಿನಗಳನ್ನು ದಾಖಲು ಮಾಡಿರುವ ಲಕ್ಷ್ಮೀಬಾಯಿ, ***ಸತಿಸುಲೋಚನ*** ದ ನಂತರ ಮುಂಬೈನಲ್ಲಿದ್ದ ಇಂಪೀರಿಯಲ್ ಸ್ಟುಡಿಯೋದವರು ತಮ್ಮ ಚಿತ್ರಗಳಲ್ಲಿ ಅಭಿನಯಿಸಲು ನೀಡಿದ ಕರೆಯನ್ನು ಒಪ್ಪದೆ, ನಾಯ್ಡು ಸ್ಥಾಪಿಸಿದ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯಲ್ಲೇ ಉಳಿದರು. 1981ನೇ ಅಕ್ಟೋಬರ್ 18ರಂದು ತಮ್ಮ 63ನೇ ವಯಸ್ಸಿನಲ್ಲಿ ಲಕ್ಷ್ಮೀಬಾಯಿ ಕಣ್ಮರೆಯಾದರು.

"ಹಿಸ್ ಲವ್ ಅಫೇರ್" ಮೂಕಿಚಿತ್ರದಲ್ಲಿ ಎಚ್. ಎಲ್. ಎನ್. ಸಿಂಹ ಮತ್ತು ಬಿ. ಜಯಮ್ಮ

"ಹಿಸ್ ಲವ್ ಅಫೇರ್" ಮೂಕಿಚಿತ್ರದಲ್ಲಿ ಬಿ. ಜಯಮ್ಮ ಮತ್ತು ಗುಬ್ಬಿ ವೀರಣ್ಣ ಈ ಚಿತ್ರದ ಚಿತ್ರೀಕರಣ ಸಮಯದಲ್ಲೇ ಇವರಿಬ್ಬರಲ್ಲೂ ಪ್ರೀತಿ ಅಂಕುರವಾಯಿತು. ನಂತರದ ದಿನಗಳಲ್ಲಿ ಗುಬ್ಬಿ ವೀರಣ್ಣ, ಬಿ. ಜಯಮ್ಮ ಅವರನ್ನು ಗಾಂಧರ್ವ ವಿವಾಹದ ಮೂಲಕ ಎರಡನೇ ಉಪಪತ್ನಿಯಾಗಿ ಸ್ವೀಕರಿಸಿದರು.

ಬಿ. ಜಯಮ್ಮ ನವರ ಸೈಕಲ್‌ಗೆ ಕಾರು ಡಿಕ್ಕಿಯಾದ ದೃಶ್ಯ.

ಲಕ್ಷ್ಮೀಬಾಯಿ ಅವರ ತಂಗಿ ಕಮಲಾಬಾಯಿ 1930ರ ವೇಳೆಗೆ **ರಾಧೇಶ್ಯಾಂ** ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದರು.

ಸುಮಾರು ಹತ್ತು ಮೂಕ ಚಿತ್ರ ಸೇರಿ ಒಟ್ಟು 30 ಚಿತ್ರಗಳಲ್ಲಿ ಅಭಿನಯಿಸಿದ ಕಮಲಾಬಾಯಿ, ಸಹೋದರಿ ನಟಿ ಲಕ್ಷ್ಮೀಬಾಯಿ ಅವರ ಜತೆಯಲ್ಲೇ ಉಳಿದು, 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ' ಯಲ್ಲೇ ಉಳಿದರು. 'ಭೂಕೈಲಾಸ' ನಾಟಕದಲ್ಲಿ ಅವರ ಪಾತ್ರ ಜನಪ್ರಿಯವಾಯಿತು. ಆರ್. ನಾಗೇಂದ್ರರಾವ್ ಅವರನ್ನು ವಿವಾಹವಾಗಿ ನಂತರ **ಜಾತಕಫಲ** (1953) ಚಿತ್ರದಲ್ಲಿ ಅಭಿನಯಿಸಿದರು. **ವಸಂತಸೇನ** (1941), ಮಹಾತ್ಮ ಕಬೀರ್ (1947), **ಅಳಿಯ ಗೆಳೆಯ**(1971) ಅವರು ಅಭಿನಯಿಸಿದ ಇತರ ಚಿತ್ರಗಳು.)

ಸೂರ್ಯ ಫಿಲಂ ಕಂಪನಿ ಸ್ಟುಡಿಯೋವಿನ ತಯಾರಿಕೆಗಳು ದಕ್ಷಿಣ ಮಾತ್ರವಲ್ಲದೆ ಉತ್ತರ ಭಾರತದಲ್ಲೂ ಅಪಾರ ಜನಪ್ರಿಯವಾಗಿದ್ದುವಂತೆ. ಉತ್ತರದಲ್ಲಿ ತಯಾರಾದ ಮೂಕಿಚಿತ್ರಗಳನ್ನು ಆಗ ದಕ್ಷಿಣ ಭಾರತದ ಸರ್ಕೀಟಿಗೆ ಕೊಳ್ಳಲಿಕ್ಕಿದ್ದ ಬೆಲೆ ಕೇವಲ ಮೂರು ಸಾವಿರ ರೂ. ಆದರೆ ಅದೇ ಸೂರ್ಯ ಫಿಲಂ ಸ್ಟುಡಿಯೋದ ಚಿತ್ರಗಳೆಂದರೆ ಉತ್ತರ ಭಾರತದ ಸರ್ಕೀಟಿಗೆ ಕೊಡುತ್ತಿದ್ದ ಕನಿಷ್ಠ ಮಾರಾಟದ ಬೆಲೆ ಎಂಟರಿಂದ ಹತ್ತು ಸಾವಿರ ರೂಪಾಯಿ. ಇಲ್ಲಿನ ಚಿತ್ರಗಳೆಂದರೆ ಅಷ್ಟೊಂದು ಆಕರ್ಷಣೆ. 1938ರಲ್ಲಿ ಮೋಷನ್ ಪಿಕ್ಚರ್ಸ್ ಸೊಸೈಟಿಯು ಪ್ರಕಟಿಸಿದ "ದಿ ಇಂಡಿಯನ್ ಸಿನಿಮಾಟೋಗ್ರಾಫ್ ಇಯರ್ ಬುಕ್"ನಲ್ಲಿ ಸೂರ್ಯ ಫಿಲಂ ಕಂಪನಿ ಸ್ಟುಡಿಯೋ ತಯಾರಿಸಿದ ಚಿತ್ರಗಳ ಬಗೆಗೆ ಬರೆದಿರುವ ಈ ಕೆಳಕಂಡ ಸಾಲುಗಳೇ ಅವುಗಳ ಜನಪ್ರಿಯತೆಗೊಂದು ಸಾಕ್ಷಿ : "ಸಂಸ್ಥೆಯು 1933ರ ಕೊನೆಯವರೆಗೆ ಮೂಕಿಚಿತ್ರಗಳನ್ನು ತಯಾರಿಸುತ್ತಿತ್ತು. ಮೂಕಿಚಿತ್ರಯುಗದಲ್ಲಿ ಕಂಪನಿಯು ಭಾರೀ ಖ್ಯಾತಿಯನ್ನು ಸಂಪಾದಿಸಿದ್ದಿತು. ಅದು ತಯಾರಿಸಿದ ಚಿತ್ರಗಳು ಭಾರತದಾದ್ಯಂತ ಪ್ರಬಲ ಜನ ಮೆಚ್ಚುಗೆಯನ್ನು ಗಳಿಸಿದ್ದವು. ಸಂಸ್ಥೆಯ ತಯಾರಿಕೆಗಳಲ್ಲಿ ಕುದುರೆ, ನಾಯಿ, ಚಿರತೆ, ಕೋತಿ ಮುಂತಾದ ಪ್ರಾಣಿಗಳನ್ನು ಮುಖ್ಯ ಸನ್ನಿವೇಶಗಳಲ್ಲಿ ಬಳಸಲಾಗುತ್ತಿತ್ತು.

ಸೂರ್ಯ ಫಿಲಂ ಕಂಪನಿ ತಯಾರಿಸಿದ ಚಿತ್ರಗಳು, ಪಡೆದ ಯಶಸ್ಸು, ತಿಂಗಳಿಗೊಂದರಂತೆ ಈ ಕಂಪನಿ ತಯಾರಿಸುತ್ತಿದ್ದ ಚಿತ್ರಗಳು ಸ್ಥಳೀಯ ಉದ್ಯಮಶೀಲರ ಮೇಲೆ ಪ್ರಭಾವ ಬೀರಲಾರಂಭಿಸಿತ್ತು. ಸೂರ್ಯ ಫಿಲಂ ಕಂಪನಿ ಚಿತ್ರ ತಯಾರಿಕೆಗೆ ಇಳಿದ ಒಂದು ವರ್ಷದ ನಂತರ ಕನ್ನಡನಾಡಿನಲ್ಲಿ ಕನ್ನಡಿಗರಿಂದಲೇ ತಯಾರಾದ ಅಂತರರಾಷ್ಟ್ರೀಯ ಮಟ್ಟದ **ವಸಂತಸೇನ** ಹಾಗೂ ರಮೇಶ್ ಫಿಲಂ ಕಂಪನಿಯ ಚಿತ್ರಗಳು ಚಲನಚಿತ್ರ ಮಾಧ್ಯಮದ ವ್ಯಾಪಕತೆ ಹಾಗೂ ಪರಿಣಾಮ ತೀವ್ರತೆಯನ್ನು ಬಿಂಬಿಸಲಾರಂಭಿಸಿತು. ಈ ಮಾಧ್ಯಮಕ್ಕೆ ಇರುವ ಭವಿಷ್ಯ ಹಾಗೂ ಮನರಂಜನೆಯ ಮಾಧ್ಯಮವಾಗಿ ಇದನ್ನು ಬಳಸಿಕೊಳ್ಳಬಹುದಾದ ಸಾಧ್ಯತೆ ಎಲ್ಲ ಪ್ರಜ್ಞಾವಂತರ ಅರಿವಿಗೂ ಬರಲಾರಂಭಿಸಿತ್ತು.

1928-31ರ ಸಮಯದಲ್ಲಿ ದೇಶದಲ್ಲಿ ಆರ್ಥಿಕ ಬಿಕ್ಕಟ್ಟು. ಇದರಿಂದಾಗಿ ಇನ್ನೂ ಶೈಶವಾವಸ್ಥೆಯಲ್ಲಿದ್ದ ಮೂಕಚಿತ್ರಗಳ ಆದಾಯಕ್ಕೆ ಧಕ್ಕೆ ಬಂದೊದಗಿತು. ಆಗ ಚಿತ್ರಮಂದಿರಕ್ಕೆ ಜನರನ್ನು ಸೆಳೆಯಲು ಮೂಕ ಚಿತ್ರ ತಯಾರಕರು ನಾನಾ ಆಕರ್ಷಣೆಗಳನ್ನು ಏರ್ಪಡಿಸಲಾರಂಭಿಸಿದರು. ಚಿತ್ರದ ನಡುವೆ ನರ್ತಕಿಯರಿಂದ ನೃತ್ಯ ಪ್ರದರ್ಶನ ಈ ರೀತಿಯ ಒಂದು ವಿಧಾನ. ರಾಮ್‌ಪ್ಯಾರೀ, ಭಿಕ್ಷಾವತಿ ಎಂಬ ನರ್ತಕಿಯರು ಈ ರೀತಿಯ ನರ್ತನದಲ್ಲಿ ಆಗ ಬಹಳ ಪ್ರಖ್ಯಾತರಾಗಿದ್ದರು. ದೇಶಾದ್ಯಂತ ಈ ನರ್ತಕಿಯರು ಸಂಚರಿಸಿ ಮೂಕಚಿತ್ರಗಳ ಪ್ರದರ್ಶನದ ನಡುವೆ ನೃತ್ಯ ಮಾಡುತ್ತಿದ್ದರು. ಈ ವಿಧಾನವೇ ಮುಂದೆ ಚಲನಚಿತ್ರಗಳಲ್ಲಿ ಕ್ಯಾಬರೆಗೆ ಪ್ರೇರಣೆಯಾಗಿರಬಹುದು. ಆಗ ಮೂಕಿಚಿತ್ರ ವೀಕ್ಷಣೆಗೆ ಪ್ರವೇಶ ದರ 2 ಆಣೆ.

ಶಿವರಾಮ ಕಾರಂತರು ಕೂಡ ತಮ್ಮ ಮೂಕಚಿತ್ರ ಪ್ರದರ್ಶನದ ನಡುವೆ 'ಯಕ್ಷಗಾನ ಪ್ರಸಂಗ' ನಡೆಸುತ್ತಿದ್ದರಂತೆ.

**ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್**

ಸೂರ್ಯ ಫಿಲಂ ಕಂಪನಿ ಹಾಗೂ ಸ್ಟುಡಿಯೋ ಪಡೆದ ಯಶಸ್ಸು ಹಾಗೂ ಜನಪ್ರಿಯತೆ ಸ್ಥಳೀಯರನ್ನೂ ಸ್ಟುಡಿಯೋ ನಿರ್ಮಿಸುವಂತೆ ಪ್ರಚೋದಿಸಿತು. ಸಾಹಿತ್ಯ, ನಾಟ್ಯ, ನಾಟಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಒಳ್ಳೆಯ ಹೆಸರು ಪಡೆದಿದ್ದವರೆಲ್ಲಾ ಸ್ಟುಡಿಯೋ ಸ್ಥಾಪನೆ ಕೆಲಸಕ್ಕೆ ಮುಂದಾದದ್ದು ಇಲ್ಲಿಯ ವೈಶಿಷ್ಟ್ಯ, ಸಂಸ್ಕೃತ ವಿದ್ವಾಂಸ, ಕನ್ನಡ ಸಾಹಿತಿ ದಿವಂಗತ ದೇವುಡು ನರಸಿಂಹಶಾಸ್ತ್ರಿ ಈ ಉದ್ಯಮದಲ್ಲಿ ಆಸಕ್ತಿ ತಳೆದರು. ಸ್ಟುಡಿಯೋ ಸ್ಥಾಪನೆಯ ಯೋಜನೆಯನ್ನು ಗೆಳೆಯ ಓರಿಯಂಟಲ್ ಬ್ಯಾಂಕ್‌ನ ಶ್ರೀನಿವಾಸಮೂರ್ತಿ ಅವರ ಬಳಿ ಪ್ರಸ್ತಾಪಿಸಿದರು. ಆ ಕಾಲಕ್ಕೆ ಗುಬ್ಬಿ ವೀರಣ್ಣನವರು ಕರ್ನಾಟಕದ



ದೇವುಡು ಕಾದಂಬರಿ ಆಧರಿಸಿದ ಮೂಕಚಿತ್ರ 'ಸಾಂಗ್ ಆಫ್ ಲೈಫ್' ನಲ್ಲಿ ಜಿ. ಪಿ. ಪವಾರ್, ಸ್ವರ್ಣಮ್ಮ

ರಂಗಭೂಮಿಯಲ್ಲಿ ನಟರಾಗಿ, ನಾಟಕ ಮಂಡಳಿಯ ಮಾಲೀಕರಾಗಿ ಹೆಸರಾಗಿದ್ದರು. ಅವರ ನೆರವು ಪಡೆದರೆ ಅನುಕೂಲ ಎಂದು ಭಾವಿಸಿದ ಇಬ್ಬರೂ ಗುಬ್ಬಿ ವೀರಣ್ಣನವರ ಮುಂದೆ ತಮ್ಮ ಯೋಜನೆಯನ್ನು ಮಂಡಿಸಿದರು. 1925ರಲ್ಲೇ ಚಿತ್ರ ತಯಾರಿಕೆಯ ರುಚಿ ಕಂಡಿದ್ದ ವೀರಣ್ಣನವರು ಇದಕ್ಕೆ ಒಪ್ಪಿದರು. ಕನ್ನಡದ ನೆಲದಲ್ಲಿ ಸಿನಿಮಾ ಉಸಿರಾಡಲು ಆರಂಭಿಸಿದ ಆರಂಭದ ಕಾಲದಲ್ಲೇ ಮೂಕಚಿತ್ರ ತಯಾರಿಕೆಯ ಎರಡನೆಯ ಸ್ಟುಡಿಯೋ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಥಾಪನೆಯಾದದ್ದು ಹೀಗೆ.

ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಗುಬ್ಬಿ ವೀರಣ್ಣ ಆಯ್ಕೆಯಾದರು. ಆಗಿನ ಮೈಸೂರು ಸಂಸ್ಥಾನದ ಪ್ರಮುಖ ವ್ಯಕ್ತಿಗಳು ಡೈರೆಕ್ಟರುಗಳ ಮಂಡಳಿಯಲ್ಲಿ ಸೇರಿಕೊಂಡರು. ಹೊಸ ಕಂಪನಿಗೆ 20 ಸಾವಿರ ರೂ. ನಗದು ಮತ್ತು 40 ಸಾವಿರ ರೂಪಾಯಿ ಮೌಲ್ಯದ ಷೇರುಗಳು ಸಂಗ್ರಹವಾಗುವುದು ಕಷ್ಟವಾಗಲಿಲ್ಲ. ಮೈಸೂರು ಸರ್ಕಾರದಲ್ಲಿ ಆಗ ಕೌನ್ಸಿಲರ್ ಆಗಿದ್ದ ರಾವ್ ಬಹದ್ದೂರ್ ಎಚ್.ವಿ. ನಂಜುಂಡಯ್ಯ ಅವರಿಗೆ ಸೇರಿದ ಮಲ್ಲೇಶ್ವರಂ ಬಡಾವಣೆಯಲ್ಲಿನ ಬಂಗಲೆಯೊಂದನ್ನು ಬಾಡಿಗೆಗೆ ಪಡೆಯಲಾಯಿತು. ಮದರಾಸಿನ ವೇಲ್ ಸ್ಟುಡಿಯೋ ಹಾಗೂ ಮುಂಬೈನ ಸ್ಟುಡಿಯೋ ಒಂದರಿಂದ ಸ್ಟುಡಿಯೋಗೆ ಅಗತ್ಯವಾದ ಉಪಕರಣಗಳನ್ನು ತರಿಸಲಾಯಿತು. ಸಂಪೂರ್ಣ ಸ್ಥಳೀಯರ ಸಾಹಸ ಎಂಬ ಹೆಮ್ಮೆಯೊಂದಿಗೆ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋ ಉದ್ಘಾಟನೆಯಾಯಿತು.

ಒಂದು ಕ್ಯಾಮರಾ, ಎಡಿಟಿಂಗ್ ಟೇಬಲ್, ಸಣ್ಣದೊಂದು ಲ್ಯಾಬೋರೇಟರಿ ಜತೆಗೆ ಮುಂಬೈನಿಂದ ತರಲಾಗಿದ್ದ ಭಾರೀ ಪ್ರಮಾಣದ ಕಾಸ್ಟ್ಯೂಮ್‌ಗಳು ಇವೆಲ್ಲಾ ಸೇರಿ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋ ಸ್ಥಾಪನೆಗೆ ತಗುಲಿದ ಒಟ್ಟು ವೆಚ್ಚ 40 ಸಾವಿರ ರೂಪಾಯಿ ಎಂದು ದೇವುಡು ನರಸಿಂಹಶಾಸ್ತ್ರಿಗಳು ಒಂದೆಡೆ ಹೇಳಿದ್ದಾರೆ.

ಗುಬ್ಬಿ ವೀರಣ್ಣನವರು ಮೂಕಚಿತ್ರ ತಯಾರಿಕೆಗೆ ತಾವು ಕೈ ಹಾಕಿದ್ದು ಒಂದು ಕಹಿ ಅನುಭವ ಎನ್ನುತ್ತಾರೆ. "ಕಲೆಯೇ ಕಾಯಕ" ಎಂಬ ತಮ್ಮ ಆತ್ಮಕಥೆಯ "ಮೂಕಚಿತ್ರ ಪ್ರಪಂಚ ಕಹಿ ಅನುಭವ" ಎಂಬ ಅಧ್ಯಾಯದಲ್ಲಿ ಇದರ ಅನುಭವವನ್ನು ಅವರು ಈ ರೀತಿ ಹೇಳುತ್ತಾರೆ:

"1928ರ ಜನವರಿ ತಿಂಗಳಲ್ಲಿ ಕಡೂರಿನಲ್ಲಿ ನಾವು ನಾಟಕಗಳನ್ನಾಡುವಾಗ ಮಿತ್ರರಾದ ದೇವುಡು ನರಸಿಂಹಶಾಸ್ತ್ರಿ ಹಾಗೂ ಶ್ರೀನಿವಾಸಮೂರ್ತಿಗಳು ನನ್ನ ಬಳಿಗೆ ಬಂದು ಷೇರ್‌ಗಳನ್ನು ಹಾಕಿ ಒಂದು




'ಹಿಸ್ ಲವ್ ಅಫೇರ್' ನಲ್ಲಿ ಗುಬ್ಬಿ ವೀರಣ್ಣ, ಎಚ್. ಎಲ್. ಎನ್. ಸಿಂಹ.

ಫಿಲಂ ಲಿಮಿಟೆಡ್ ಕಂಪನಿಯನ್ನು ರಿಜಿಸ್ಟರ್ ಮಾಡೋಣವೆಂದು ಒತ್ತಾಯ ಮಾಡಿದರು. ನನ್ನ ನಾಟಕದ ವ್ಯವಹಾರವೊಂದನ್ನು ಬಿಟ್ಟು ಮತ್ತೇನೂ ಗೊತ್ತಿಲ್ಲವೆಂದರೂ ಬಿಡದೆ ನನ್ನನ್ನೂ ಮ್ಯಾನೇಜಿಂಗ್ ಡೈರೆಕ್ಟರ್‌ನನ್ನಾಗಿ ಮಾಡಿ, ನನ್ನ ಜೊತೆಯಲ್ಲಿ ಅವರೂ ಸೇರಿಕೊಂಡು ನನ್ನಿಂದ ಷೇರಿಗಾಗಿ 2500 ರೂಪಾಯಿಗಳನ್ನು ತೆಗೆದುಕೊಂಡು ನಿಬಂಧನೆಗಳಂತೆ ರೂಲ್ಸುಗಳನ್ನು ಅನುಸರಿಸಿ ಕಂಪನಿಯನ್ನು ರಿಜಿಸ್ಟರ್ಡ್ ಮಾಡಿದರು. ಅದಕ್ಕೆ ಯಜಮಾನ್ ಅಂಡ್ ಸನ್ಸ್, ಎ.ವಿ. ಅಯ್ಯಂಗಾರ್, ರಿಟೈರ್ಡ್ ಎಲೆಕ್ಟ್ರಿಕಲ್ ಎಂಜಿನಿಯರ್



ಗುಬ್ಬಿ ವೀರಣ್ಣ - ವರ್ಸಟೈಲ್ ಕಮಿಡಿಯನ್



"ಹಿಸ್ ಲವ್ ಅಫೇರ್" ಮೂಕಿಚಿತ್ರದಲ್ಲಿ ಎಂ. ವಿ. ಸುಬ್ಬಯ್ಯ ನಾಯ್ಡು. ಈ ಚಿತ್ರ ಸುಬ್ಬಯ್ಯ ನಾಯ್ಡು ಅವರ ಪ್ರಥಮ ಚಿತ್ರ. ಈ ಚಿತ್ರದಲ್ಲಿ ಸುಬ್ಬಯ್ಯನಾಯ್ಡು ಅವರೊಂದಿಗೆ ವೀರಣ್ಣ ಎಚ್.ಎಲ್. ಎನ್. ಸಿಂಹ ಕೂಡಾ ಅಭಿನಯಿಸಿದ್ದಾರೆ.

ಪುಟ್ಟಸ್ವಾಮಯ್ಯ, ಕೃಷ್ಣರಾವ್, ಸಬ್‌ಜಡ್ಜಿ ಇವರುಗಳು ಡೈರೆಕ್ಟರಾಗಿದ್ದರು. ಸಂಸ್ಥೆಯು ಹಾಸನಕ್ಕೆ ಹೋಗಿ ಅಲ್ಲಿಂದ ಸಕಲೇಶಪುರಕ್ಕೆ ಹೋಗಿ ಕ್ಯಾಂಪ್ ಹಾಕಿತು.

"ಈ ಮಧ್ಯೆ ಬೆಂಗಳೂರಿನಲ್ಲಿ 1929ರಲ್ಲಿ ಸಿ.ವಿ. ನರಸಿಂಹ ಅಯ್ಯಂಗಾರ್‌ರವರ ಸ್ಥಳವನ್ನು ಒಂದು ಸಾವಿರ ರೂಪಾಯಿಗಳಂತೆ 12 ವರ್ಷಕ್ಕೆ ಗೊತ್ತು ಮಾಡಿ ಕರಾರನ್ನು ಮಾಡಿಕೊಂಡು ಥಿಯೇಟರ್ ಕಟ್ಟಿ, ಶಿವಾನಂದ ಥಿಯೇಟರ್ ಎಂಬ ಹೆಸರಿನಿಂದ ದಿವಾನ್ ಮಿರ್ಜಾರವರ ಅಮೃತಹಸ್ತದಿಂದ 1930ನೇ ಮೇ ತಿಂಗಳಲ್ಲಿ ಪ್ರಾರಂಭ ಮಾಡಿಸಿದೆ. (ಅದೇ ಇಂದಿನ ಮೂವಿಲ್ಯಾಂಡ್ ಚಿತ್ರಮಂದಿರ).

"ಆಗ ರಿಜಿಸ್ಟರ್ಡ್ ಆಗಿದ್ದ ಕರ್ನಾಟಕ ಫಿಲಂ ಕಾರ್ಪೋರೇಷನ್ನಿಗೆ ಹಣ ವಸೂಲಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ನನ್ನನ್ನೇ ಸಕಲೇಶಪುರದಲ್ಲಿ ಮುಂದಾಳಾಗಿ ಬಿಟ್ಟರು...ಸಕಲೇಶಪುರ, ಬಾಳ್ಳು, ಹಾಸನ ಈ ಮೂರು ಊರುಗಳಲ್ಲಿ 40 ಸಾವಿರದವರೆಗೂ ಷೇರುಗಳನ್ನು ಕ್ಯಾನ್ವಾಸ್ ಮಾಡಿಕೊಂಡು ಬಂದು ಮದ್ರಾಸಿನ ವೇಲ್ ಪಿಕ್ಚರಿನವರಿಂದ ಸ್ಟುಡಿಯೋ ಸಾಮಗ್ರಿಗಳನ್ನು ತರಿಸಿದುದಾಯಿತು. ಸ್ಟುಡಿಯೋ ಎಂದರೆ ಈಗಿನ ಕಾಲದಂತೆ ದೊಡ್ಡ ದೊಡ್ಡ ಬಿಲ್ಡಿಂಗ್ ಇರಲಿಲ್ಲ. ಕಬ್ಬಿಣದ ಪೈಪ್ ಹೂಳಿ, ಅದರ ಮೇಲೆ ಪೈಪ್‌ಗಳನ್ನು ಫಿಟ್ ಮಾಡಿ ಮೇಲೆ ಡೇರೆ ಎಳೆಯುತ್ತಿದ್ದರು. ಬಿಸಿಲು ಬೇಕಾದಾಗ ಮೇಲೆ ಆಚ್ಛಾದಿಸಲ್ಪಟ್ಟ ಬಟ್ಟೆಯನ್ನು ನೂಕಿಕೊಂಡು ಬಿಸಿಲನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಕನ್ನಡಿಗಳನ್ನಿಟ್ಟುಕೊಂಡು (ರಿಫ್ಲೆಕ್ಟ್) ಬಿಸಿಲಿನ ಬೆಳಕನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತಲಿದ್ದರು. ಅದರಂತೆಯೇ ನಾವು ಸಹಾ ಮಲ್ಲೇಶ್ವರದ ಎಚ್.ವಿ. ನಂಜುಂಡಯ್ಯನವರ ಬಂಗಲೆಯನ್ನು ತಿಂಗಳೊಂದಕ್ಕೆ 250

ರೂಪಾಯಿಗಳಂತೆ ಬಾಡಿಗೆಗೆ ತೆಗೆದುಕೊಂಡು ರೂಮುಗಳಲ್ಲಿ ಫಿಲಂ ತೊಳೆಯುವುದಕ್ಕೂ, ಹಾಲ್‌ನಲ್ಲಿ ಫಿಲಂ ಆರಿಸುವುದಕ್ಕೂ ಮತ್ತು ಕೆಲವು ರೂಂಗಳನ್ನು ಡಾರ್ಕ್-ರೂಂಗಳನ್ನಾಗಿ ಮಾಡಿಕೊಂಡು ಕೆಲಸ ಮಾಡುತ್ತಿದ್ದೆವು. **ಹಿಸ್ ಲವ್ ಅಫೇರ್**, **ಸಾಂಗ್ ಆಫ್ ಲೈಫ್**, (ಕಳ್ಳರ ಕೂಟ), **ಹರಿಮಾಯ** ಎನ್ನುವ ಮೂರು ಮೂಕಚಿತ್ರಗಳನ್ನು ತೆಗೆಸಿದೆವು. ಬೆಲ್ಜಿಯಂನ ಆಲ್‌ಗುಡ್ ಎಂಬುವವರು **ಹಿಸ್ ಲವ್ ಅಫೇರ್** ಚಿತ್ರಕ್ಕೆ ಡೈರೆಕ್ಟರ್ ಆಗಿದ್ದರು. ಅಗ್ಗೆ ಲಲಿತಾ ಪವಾರ್ ಎಂಬ ಮುಂಬೈ ನಟಿ ಇದ್ದರು. ರೇಲಿಂಗೀ ಎಂಬ ಕ್ಯಾಮರಾಮನ್ ಇದ್ದರು. ಚಿತ್ರದಲ್ಲಿ ಪಾತ್ರ ವಹಿಸುತ್ತಿರುವುದು ಹೊಸತಾದ್ದರಿಂದ ರಿಫ್ಲೆಕ್ಟರುಗಳನ್ನಿಟ್ಟಾಗ ಆ ಸೂರ್ಯನ ಪ್ರಕಾಶಕಿರಣಗಳಿಂದಾಗಿ ನಟರು ಕಣ್ಣು ಬಿಡಲಿಕ್ಕಾಗದೇ ಕೆಲವು ಸಾರಿ ಮುಕ್ಕಾಲು ಕಣ್ಣು ಮುಚ್ಚಿಯೇ ನಟಿಸುತ್ತಿದ್ದರು. "ಕ್ರೀಂ" ಇದ್ದರೂ ಅದರ ಉಪಯೋಗ ತಿಳಿಯದ್ದರಿಂದ ಬಣ್ಣವನ್ನು ಅಳಿಸುವುದೂ ಗೊತ್ತಿರಲಿಲ್ಲ. ಅಲ್ಲದೆ ಬೊಂಬಾಯಿ ಸ್ಟುಡಿಯೋ ಲಾಸಾಗಿದ್ದುದರಿಂದ ಅಲ್ಲಿಯ ಸಾಮಾನುಗಳನ್ನು ತಂದಿದ್ದೆವು. ಹೀಗೆ ಚಿತ್ರಗಳನ್ನು ಅವ್ಯವಸ್ಥೆಯಿಂದ ತೆಗೆದದ್ದಾಯಿತು.


"ಈ ಮಧ್ಯೆ ಎಲ್ಲಾ ಕಡೆಯಲ್ಲೂ ಡಿಪ್ರೆಷನ್‌ನಿಂದಾಗಿ ಕಲೆಕ್ಷನ್ ಕಡಿಮೆಯಾಗುತ್ತಾ ಬಂತು. **ಹರಿಮಾಯ, ಹಿಸ್ ಲವ್ ಅಫೇರ್** ಎಂಬ ಮೂಕಚಿತ್ರಗಳನ್ನು ಡಿಸ್ಟ್ರಿಬ್ಯೂಟಿಗೆ ತೆಗೆದುಕೊಂಡಿದ್ದ ಡೈರೆಕ್ಟರು ಸರಿಯಾಗಿ ಚಿತ್ರಗಳನ್ನು ನಡೆಸದೆ, ಸರಿಯಾಗಿ ಲೆಕ್ಕಗಳನ್ನು ಕೊಡದೆ ತುಂಬಾ ಅನ್ಯಾಯ ಮಾಡಿದರು. ನಾನು ಫಿಲಂ ಕಂಪನಿ ಮಾಡಿ ಸ್ಥಳದಲ್ಲಿರದೆ, ಸಂಚಾರಕ್ಕೆ ಹೋದದ್ದೇ ಈ ಅವ್ಯವಸ್ಥೆಗೆ ಕಾರಣವಾಯಿತಲ್ಲದೆ, ನಷ್ಟವೂ ಸಂಭವಿಸಿತು.


"ಆರಂಭವಾದ ಮೂರೇ ವರ್ಷಗಳಲ್ಲಿ ಅಪಾರ ನಷ್ಟ ಅನುಭವಿಸಿದ ಸ್ಟುಡಿಯೋವನ್ನು ಮುಚ್ಚಲಾಯಿತು. ಈ ಅವಧಿಯಲ್ಲಿ ಈ ಸಂಸ್ಥೆಯ ಮೂಲಕ ತಯಾರಾಗಿ ಹೊರಬಂದದ್ದು ಕೇವಲ ಮೂರು ಚಿತ್ರಗಳು ಮಾತ್ರ."

ಕರ್ನಾಟಕ ಪಿಕ್ಚರ್ಸ್‌ನ ಮೊದಲನೆ ತಯಾರಿಕೆ "**ಸಾಂಗ್ ಆಫ್ ಲೈಫ್**" ದೇವುಡು ನರಸಿಂಹ ಶಾಸ್ತ್ರಿಗಳ ನೀಳ್ಗತೆ ಆಧರಿಸಿ ತಯಾರಾದ ಮೊದಲ ಚಿತ್ರ. ಪ್ರಕಟಿತ ಕನ್ನಡ ಕತೆ ಆಧರಿಸಿದ ಮೊದಲ ಚಿತ್ರ ಎಂದೂ ಇದನ್ನು ಕರೆಯಬಹುದು. ಮೂಕಿ ಯುಗದಲ್ಲಿ ತಯಾರಾಗುವ ಎಲ್ಲ ಚಿತ್ರಗಳಿಗೆ ಇಂಗ್ಲೀಷ್ ಹೆಸರಿಡುವ ವಾಡಿಕೆಯಂತೆ ಈ ಚಿತ್ರಕ್ಕೆ ಸಾಂಗ್ ಆಫ್ ಲೈಫ್ ಎಂದು ಹೆಸರಿಡಲಾಗಿದೆ. ಈ ಚಿತ್ರದಲ್ಲಿ ಗುಬ್ಬಿವೀರಣ್ಣನವರಾಗಲಿ, ಬಿ. ಜಯಮ್ಮನವರಾಗಲಿ ಅಭಿನಯಿಸಿಲ್ಲ. ಈ ಚಿತ್ರವನ್ನು ಮುಂಬೈನ ಜಿ. ಪಿ. ಪವಾರ್ ನಿರ್ದೇಶಿಸಿದ್ದಾರೆ. ಲಲಿತಾ ಪವಾರ್, ಅಂಬು ಮೊದಲಾದವರು ತಾರಾಂಗಣದಲ್ಲಿದ್ದಾರೆ. ಫಿರೋಜ್ ರಂಗೂನ್‌ವಾಲಾ ಅವರೂ ತಮ್ಮ 'ಇಂಡಿಯನ್ ಫಿಲ್ಮೋಗ್ರಫಿ' ಎಂಬ ಪುಸ್ತಕದಲ್ಲೂ ಇದು ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್‌ನ ಮೊದಲ ಚಿತ್ರವೆಂದು ಸೂಚಿಸಿದ್ದಾರೆ. ಈ ಚಿತ್ರದ ಬಗ್ಗೆ ಗುಬ್ಬಿವೀರಣ್ಣನವರಾಗಲಿ, ಬಿ. ಜಯಮ್ಮನವರಾಗಲಿ ತಮ್ಮ ಆತ್ಮಕಥೆಯಲ್ಲಿ ಸೂಕ್ತ ಪ್ರಸ್ತಾಪ ಮಾಡಿಲ್ಲ. ಹುಟ್ಟಿನಿಂದ ಕನ್ನಡತಿಯಾಗಿ ಕೊಲ್ಹಾಪುರದಲ್ಲಿದ್ದ ಲಲಿತಾಪವಾರ್ ನಾಟಕರಂಗದಿಂದ 'ಸಾಂಗ್ ಆಫ್ ಲೈಫ್' ಮೂಲಕ ಚಿತ್ರರಂಗಕ್ಕೆ ಗುಬ್ಬಿ ಸಂಸ್ಥೆಯ ಮೂಲಕ ಪ್ರವೇಶಿಸಿದರು.

ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್‌ನ ಎರಡನೇ ತಯಾರಿಕೆ **ಹರಿಮಾಯ** ಪೌರಾಣಿಕ. ಮುಂಬೈನಲ್ಲಿ ಹಲವಾರು ಮೂಕಿಚಿತ್ರಗಳಲ್ಲಿ ಅಭಿನಯಿಸಿ ಬೆಂಗಳೂರಿಗೆ ವಾಪಸ್ ಆಗಿದ್ದ ವೈ.ವಿ. ರಾವ್ ಇದರ ನಿರ್ದೇಶಕರಷ್ಟೇ ಅಲ್ಲದೆ ಚಿತ್ರದಲ್ಲಿನ ಕೃಷ್ಣನ ಪಾತ್ರವನ್ನೂ ವಹಿಸಿದ್ದರು. ರಂಗಭೂಮಿಯಲ್ಲಿ ಹೆಸರಾಂತರಾಗಿದ್ದ ಎಂ.ವಿ. ಸುಬ್ಬಯ್ಯನಾಯ್ಡು, ಬಿ. ಜಯಮ್ಮ, ಜಿ. ಸುಂದರಮ್ಮ, ಗುಬ್ಬಿ ವೀರಣ್ಣ ಅವರುಗಳು ಈ ಚಿತ್ರದ ಮೂಲಕ ಬೆಳ್ಳಿ ತೆರೆಗೆ ಪರಿಚಯಗೊಂಡರು. ಇವರಲ್ಲದೆ, ರುಕ್ಮಿಣಿ, ಪಾರ್ವತಮ್ಮ ಹಿಮಾಂಶು ಶಾಸ್ತ್ರಿಗಳೂ **ಹರಿಮಾಯ**ದಲ್ಲಿ ಅಭಿನಯಿಸಿದ್ದರು. **ಹರಿಮಾಯ** ನಿರ್ಮಿಸಲು ವೈ.ವಿ. ರಾವ್ ಅವರೊಂದಿಗೆ ಶ್ರಮಿಸಿದವರು ಸರ್ವೋತ್ತಮ ಬಾದಾಮಿ. ಹದಿನಾಲ್ಕು ಸಾವಿರ ಅಡಿ ಉದ್ದದ **ಹರಿಮಾಯ** ತಯಾರಿಸಲು ಆದ ವೆಚ್ಚ 40 ಸಾವಿರ ರೂಪಾಯಿ. ಚಿತ್ರ ದಕ್ಷಿಣ ಭಾರತದಲ್ಲಿ ಜಯಭೇರಿ ಬಾರಿಸಿತು. "ಶಮಂತಕ ಮಣಿ" ಕತೆ ಆಧರಿಸಿದ ಈ ಚಿತ್ರದಲ್ಲಿ ಸತ್ಯಭಾಮೆಯಾಗಿ ವೈ.ವಿ. ರಾವ್ ಅವರ ಪತ್ನಿ ರುಕ್ಮಿಣಿ, ಜಾಂಬವತಿಯಾಗಿ ಬಿ. ಜಯಮ್ಮ ಅಭಿನಯಿಸಿದ್ದರು. ಶಿವಗಂಗೆಯಲ್ಲಿ ಹೊರಾಂಗಣ ಚಿತ್ರೀಕರಣ ನಡೆಯಿತು. "ಸೆಲೆಕ್ಟ್" (ಗೀತಾ) ಚಿತ್ರಮಂದಿರದಲ್ಲಿ ಈ ಚಿತ್ರ ಮೂರು ವಾರ ನಡೆಯಿತು.

"ಹರಿಮಾಯ" ಮೂಕಚಿತ್ರದಲ್ಲಿ ಕೃಷ್ಣ ಪಾತ್ರಧಾರಿ ವೈ. ವಿ.ರಾವ್. (ಯರಗುಡಿಪತಿ ವರದರಾವ್) ಇವರ ಪುತ್ರಿ ಜ್ಯೂಲಿ ಲಕ್ಷ್ಮಿ ಕೂಡಾ ಜನಪ್ರಿಯ ತಾರೆ. 1930ರಿಂದಲೇ ಮೂಕಚಿತ್ರಗಳ ನಾಯಕ ನಟರಾಗಿದ್ದ ವೈ. ವಿ. ರಾವ್, ಗಜೇಂದ್ರ ಮೋಕ್ಷ, ಗರುಡ ಗರ್ವಭಂಗ, ಸಾರಂಗಧರ, ಭೋಜರಾಜ, ಪಾಂಡವ ಅಜ್ಞಾತವಾಸ ಮೊದಲಾದ ಮೂಕಚಿತ್ರಗಳಲ್ಲಿ ಅಭಿನಯಿಸಿದ್ದರು. 1930ರಲ್ಲಿ ಗುಬ್ಬಿ ವೀರಣ್ಣ ಅವರಿಗಾಗಿ 'ಹರಿಮಾಯ' ಚಿತ್ರ ನಿರ್ದೇಶಿಸಿ ನಟಿಸಿದರು.





ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್‌ನ ಮೂರನೆಯ ತಯಾರಿಕೆ ಸಾಮಾಜಿಕ **ಹಿಸ್ ಲವ್ ಅಫೇರ್** ಇನ್ನೂ ಶೈಶವಾವಸ್ಥೆಯಲ್ಲಿದ್ದಂತಹ ಸ್ಟುಡಿಯೋ ಒಂದರ ಪಾಲಿಗೆ ಸಾಮಾಜಿಕ ಚಿತ್ರ ತಯಾರಿಕೆಯ ವಿಷಯ ಸಾಹಸವೇ ಆಗಿತ್ತು. ಶೈಕ್ಷಣಿಕ ಚಿತ್ರಗಳ ಪ್ರದರ್ಶನಕ್ಕಾಗಿ ಆಗಿನ ಮೈಸೂರು ಸರ್ಕಾರದ ಆಹ್ವಾನದಂತೆ ಆಗಮಿಸಿದ್ದ ಬೆಲ್ಜಿಯಂ ದೇಶೀಯ ಆಲ್‌ಗುಡ್ ಎಂಬ ನಿರ್ದೇಶಕ ನಿರ್ದೇಶಿಸಿದ ಈ ಚಿತ್ರದಲ್ಲಿದ್ದವರೆಲ್ಲಾ ಸ್ಥಳೀಯ ಪ್ರತಿಭೆಗಳೇ. ಎಚ್.ಎಲ್.ಎನ್.ಸಿಂಹ, ಎಂ.ವಿ. ಸುಬ್ಬಯ್ಯ ನಾಯ್ಡು ಈ ಚಿತ್ರದ ಸಹ ನಿರ್ದೇಶಕರಾಗಿದ್ದರು.

**ಹಿಸ್ ಲವ್ ಅಫೇರ್** ಚಿತ್ರದಲ್ಲಿ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ನೇತಾರ ಎಂ.ವಿ. ಸುಬ್ಬಯ್ಯ ನಾಯ್ಡು ಕಾಲೇಜು ವಿದ್ಯಾರ್ಥಿಯ ಪಾತ್ರ ವಹಿಸಿದ್ದರು. **ಹರಿಮಾಯ** ಮೂಲಕ 15ನೇ ವಯಸ್ಸಿನಲ್ಲೇ ನಾಯಕಿಯಾಗಿದ್ದ ಬಿ. ಜಯಮ್ಮ ಕಾಲೇಜು ಹುಡುಗಿಯ ಪಾತ್ರ ವಹಿಸಿದ್ದರು. **ಹಿಸ್ ಲವ್ ಅಫೇರ್** ಚಿತ್ರದಲ್ಲಿ ಅಭಿನಯಿಸುವಾಗಿನ ಅನುಭವವನ್ನು ಬಿ. ಜಯಮ್ಮ ಮೆಲುಕು ಹಾಕಿದ್ದು ಹೀಗೆ : "ಅಂದು ಚಲನಚಿತ್ರದಲ್ಲಿ ಅಭಿನಯಿಸುವಾಗ ಪ್ರತಿಯೊಂದರಲ್ಲೂ ನಟನಟಿಯರೇ ತಮಗೆ ವಹಿಸಿದ ಕೆಲಸ ಮಾಡಬೇಕಾಗಿತ್ತು. ಈ ಚಿತ್ರದಲ್ಲಿ ಸೈಕಲ್ ಅಪಘಾತದ ಸನ್ನಿವೇಶವೊಂದಿತ್ತು. ಅದರಲ್ಲಿ ನನ್ನದು ಕಾಲೇಜು ಹುಡುಗಿಯ ಪಾತ್ರ. ನನಗೆ ಸೈಕಲ್ ರೈಡ್ ಮಾಡುವುದನ್ನು ಹೇಳಿಕೊಟ್ಟವರು ದಿವಂಗತ ಎಚ್.ಎಲ್.ಎನ್. ಸಿಂಹ. ಡ್ಯೂಪ್ ಅನ್ನುವ ಪದವೇ ಆಗ ಅಪರಿಚಿತ. ಹತ್ತಾರು ಸಲ ರಿಹರ್ಸಲ್ ಮಾಡಿ ಆಕ್ಸಿಡೆಂಟ್ ಮಾಡಿದ್ದಾಯಿತು. ಇನ್ನೊಮ್ಮೆ ಹಗ್ಗ ಹಿಡಿದು ಇಳಿಯುವ ಸನ್ನಿವೇಶ. ಸುಮಾರು 30-40 ಅಡಿ ಹಗ್ಗವದು. ಹುರಿ ಮಾಡಿದ ಹಗ್ಗ ಬೇರೆ. ಹತ್ತಾರು ಬಾರಿ ರಿಹರ್ಸಲ್ ಮಾಡುವ ವೇಳೆಗೆ ಬೆರಳೆಲ್ಲ ಊದಿಕೊಂಡು ರಕ್ತ ಸುರಿಯುತ್ತಿದ್ದುದು ಮರೆಯಲಾಗದಂತಹ ಅನುಭವ. ಪ್ರತಿಯೊಬ್ಬ ಕಲಾವಿದರೂ ಇಂಥ "ಸಾಹಸ" ಮಾಡಲೇಬೇಕಿತ್ತು. ಈ ಚಿತ್ರದ ಹೊರಾಂಗಣ ಶ್ರೀರಂಗಪಟ್ಟಣ, ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಯಿತು. ದೇವುಡು ಅವರೇ ಈ ಚಿತ್ರಕ್ಕೆ ಚಿತ್ರಕಥೆ ರಚಿಸಿದ್ದರು. ಎ.ವಿ. ಸುಬ್ಬಯ್ಯನಾಯ್ಡು, ಜಿ.ಎಚ್. ವೀರಣ್ಣ, ಬಿ. ಜಯಮ್ಮ ಬಿ. ಸುಂದರಮ್ಮ ಚಂದ್ರಮ್ಮ ಎಚ್.ಎಲ್.ಎನ್. ಸಿಂಹ ಅಭಿನಯಿಸಿದ್ದರು. ಆಲ್ಗುಡ್ ನಿರ್ದೇಶನದ ಚಿತ್ರ ಸೆಲೆಕ್ಟ್ ಚಿತ್ರ ಮಂದಿರದಲ್ಲೇ ಬಿಡುಗಡೆಯಾಯಿತು. ದುರದೃಷ್ಟದಿಂದ ಚಿತ್ರಗಳು ಚೆನ್ನಾಗಿ ಓಡಿದರೂ ನಷ್ಟ ಉಂಟಾಗಿ ಸ್ಟುಡಿಯೋ ಮುಚ್ಚಲಾಯಿತು."


## ಶಿವರಾಮ ಕಾರಂತರ ಸಾಹಸ

1930-31ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಶಿವರಾಮ ಕಾರಂತರು **ಭೂತರಾಜ್ಯ** ಮತ್ತು **ಡೊಮಿಂಗೊ** ಎಂಬ ಎರಡು ಮೂಕಚಿತ್ರಗಳನ್ನು ತಯಾರಿಸಿದ್ದಾರೆ.

ಜ್ಞಾನಪೀಠ ಪುರಸ್ಕೃತ ಸಾಹಿತಿ ಶಿವರಾಮ ಕಾರಂತರನ್ನು 'ನಡೆದಾಡುವ ವಿಶ್ವಕೋಶ' ಎಂದು ಕರೆಯುತ್ತಿದ್ದುದು ಅರ್ಥಪೂರ್ಣವಾಗಿಯೇ ಇದೆ. ಅವರು ಕೈ ಹಾಕದಿದ್ದ ಕ್ಷೇತ್ರ ಯಾವುದು? ಮೂಕಚಿತ್ರಗಳ ತಯಾರಿಕೆಯಲ್ಲೂ ಅವರು ಮುಂದಾಗಿದ್ದುಂಟು.

ಮೂಕಚಿತ್ರಗಳ ಯುಗದಲ್ಲಿ ಅಭಿನಯ ಆರಂಭಿಸಿದ "ಅಭಿನೇತ್ರಿ" ಬಿ. ಜಯಮ್ಮ

1930ರಲ್ಲಿ ಕಾರಂತರು "ಡೊಮಿಂಗೊ" ಎಂಬ ಮೂಕ ಚಿತ್ರ ತಯಾರಿಸಿದರು. ಹರಿಜನರನ್ನು ಕುರಿತಾದ ಚಿತ್ರಕಥೆ ಶಿವರಾಮ ಕಾರಂತರದೇ. ಕಿನೆಮಾ ಹ್ಯಾಂಡ್ ಕ್ಯಾಮರಾದಲ್ಲಿ ಅವರೇ ಛಾಯಾಗ್ರಹಣ ಮಾಡಿದ್ದರು. ಚಿತ್ರದಲ್ಲಿ ಅವರೂ ಅಭಿನಯಿಸಿದ್ದರು. ಎಂಟು ಸಾವಿರ ಅಡಿ ಉದ್ದದ ಈ ಚಿತ್ರವನ್ನು ನಿರ್ಮಿಸಲು ಶಿವರಾಮ ಕಾರಂತರಿಗೆ ಆ ದಿನಗಳಲ್ಲಿ ನಾಲ್ಕು ಸಾವಿರ ರೂ. ಖರ್ಚಾಯಿತಂತೆ. ಪುತ್ತೂರಿನಲ್ಲೇ ಡೆವಲಪ್ ಆದ ಈ ಚಿತ್ರ ಸರಿಕಾಣದ್ದರಿಂದ ಕಾರಂತರು ಮುಂಬಯಿಗೆ ತೆರಳಿ, ಸ್ವತಃ ಸ್ಟಾಂಡರ್ಡ್ ಲ್ಯಾಬೋರೇಟರಿಯಲ್ಲಿ ಡೆವಲಪಿಂಗ್ ಕಲಿತು ಕೆಲಸ ಮಾಡಿಸಿಕೊಂಡರು. ಆಮೇಲೆ ಈ ಚಿತ್ರವನ್ನು




ಅಲ್ಲಿ ಮೂಕಚಿತ್ರಗಳನ್ನು ತಯಾರಿಸುತ್ತಿದ್ದ ದೇವಕಿ ಮತ್ತು ವಾಡಿಯಾ ಸಂಸ್ಥೆಗಳಿಗೆ ಕೊಟ್ಟು ಕೈ ತೊಳೆದುಕೊಂಡರು.

1931ರಲ್ಲಿ ಶಿವರಾಮ ಕಾರಂತರು **ಭೂತರಾಜ್ಯ** (ಡೆವಿಲ್ಸ್ ಲ್ಯಾಂಡ್) ಎಂಬ ಇನ್ನೊಂದು ಚಿತ್ರ ತಯಾರಿಸಿದರು. ಉಷಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ತಯಾರಾದ **ಭೂತರಾಜ್ಯ** ರೋಮಾಂಚನಕಾರಿ ಚಿತ್ರವಾಗಿತ್ತು. ಕತೆ, ಚಿತ್ರಕತೆ, ಛಾಯಾಗ್ರಹಣ, ನಿರ್ಮಾಣ, ನಿರ್ದೇಶನ ಎಲ್ಲವೂ ಶಿವರಾಮ ಕಾರಂತರದೇ. ಈ ಚಿತ್ರದಲ್ಲಿ ಬಿ. ವಾಸುದೇವನಾಯಕ್ ಅವರು ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ವಾಸುದೇವ ನಾಯಕ್ ಸಂದರ್ಶನವೊಂದರಲ್ಲಿ ನೆನಪಿಸಿಕೊಂಡಿರುವ ಪ್ರಕಾರ **ಭೂತರಾಜ್ಯ** ಮಂಗಳೂರಿನ ಚಿತ್ರಾ ಟಾಕೀಸಿನಲ್ಲಿ ಮೂರು ದಿನಗಳ ಕಾಲ ನಡೆಯಿತು. ಪದ್ಮನಾಭ ಹೊಳ್ಳ ಎಂಬ ಹುಡುಗ ಈ ಚಿತ್ರದಲ್ಲಿ ಸ್ತ್ರೀಪಾತ್ರ ವಹಿಸಿದ್ದ. ಚಿತ್ರೀಕರಣ ಪಂಜ ಹಾಗೂ ಪುತ್ತೂರಿನಲ್ಲಿ ನಡೆಯಿತು. ಕೊಲಂಬೋದಲ್ಲಿನ ಒಲಿಂಪಿಯಾ ಥಿಯೇಟರ್‌ನಲ್ಲಿ ಚಿತ್ರ ಪ್ರದರ್ಶನ ನಡೆದಿದ್ದಾಗ ಪ್ರಿಂಟ್ ಅಲ್ಲೇ ಸುಟ್ಟು ಹೋಯಿತು ಎನ್ನಲಾಗಿದೆ.

ಶಿವರಾಮ ಕಾರಂತರು ಮೂಕ ಚಿತ್ರಗಳ ತಯಾರಿಕೆಯಲ್ಲಷ್ಟೇ ಅಲ್ಲ ವಾಕ್ಚಿತ್ರ ತಯಾರಿಕೆ ಕಾಲದಲ್ಲೂ ಚಲನಚಿತ್ರ ತಯಾರಿಕೆಯತ್ತ ಗಮನ ಹರಿಸಿದ್ದಾರೆ. ಅವರದೇ ಕಾದಂಬರಿ "ಕುಡಿಯರ ಕೂಸು" ಆಧರಿಸಿ ಅವರು **ಮಲೆಯ ಮಕ್ಕಳು** ಚಿತ್ರ ನಿರ್ಮಿಸಿದರು. ಆನಂತರ ಚಲನಚಿತ್ರರಂಗದಲ್ಲಿ ತಮ್ಮ ಅನಿಸಿಕೆಗಳನ್ನು ಹೇಳುವ ವಿಷಯಕ್ಕೆ ವಿದಾಯ ಹೇಳಿದರು. ಕಾರಂತರ ಕಾದಂಬರಿ ಆಧರಿಸಿದ **ಚೋಮನ ದುಡಿ** ಬಿ. ವಿ. ಕಾರಂತ ಅವರ ನಿರ್ದೇಶನದಲ್ಲಿ ತೆರೆಗೆ ಬಂದು ರಾಷ್ಟ್ರಪ್ರಶಸ್ತಿ ಗಳಿಸಿದ ಅತ್ಯುತ್ತಮ ಚಿತ್ರವೆನಿಸಿತು.

ಮೂಕಿಚಿತ್ರಗಳ ತಯಾರಿಕೆಯ ಕಾಲದಿಂದಲೂ ಬುದ್ಧಿ ಜೀವಿಗಳು ಮತ್ತು ಸಾಹಿತಿಗಳು ಚಲನಚಿತ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. 1931ರ ವೇಳೆಗೆ ಭಾರತದ ಪ್ರಥಮ ಮಾತನಾಡುವ ಚಿತ್ರ **ಆಲಂ ಆರಾ** ತೆರೆ ಕಾಣುವುದರೊಂದಿಗೆ ಮೂಕಿಚಿತ್ರಗಳ ಯುಗ ಕೊನೆಗೊಂಡಿತು. ಕನ್ನಡದಲ್ಲೂ ಪ್ರಥಮ ವಾಕ್ಚಿತ್ರ ಸತಿ ಸುಲೋಚನ 1934ರಲ್ಲಿ ತೆರೆಗೆ ಬಂದ ನಂತರ ಮೂಕಿಯ ಕಾಲ ಮುಗಿದಂತಾಯಿತು.

ಆದರೂ ವಾಕ್ಚಿತ್ರಗಳ ಭರಾಟೆಯ ನಡುವೆಯೂ 1987ರಲ್ಲಿ **ಪುಷ್ಪಕ ವಿಮಾನ** ಎಂಬ ಸಂಭಾಷಣೆಯೇ ಇಲ್ಲದ ಚಿತ್ರವೊಂದು ನಿರ್ಮಾಣಗೊಂಡು ಹಳೆಯ ಮೂಕಿಕಾಲದ ಸ್ಮರಣೆ ತಂದಿತು. ಶೃಂಗಾರ್ ನಾಗರಾಜ್ ನಿರ್ಮಿಸಿದ ಈ ಚಿತ್ರವನ್ನು ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶಿಸಿದ್ದಾರೆ. ಕಮಲಹಾಸನ್, ಅಮಲಾ ನಾಯಕ ನಾಯಕಿರಾಗಿದ್ದಾರೆ. ಲೋಕನಾಥ್, ಟೀನು ಆನಂದ್, ಪ್ರತಾಪ್ ಪೋತನ್, ರಮ್ಯ, ಪಿ.ಎಲ್. ನಾರಾಯಣ್ ಇತರ ಪಾತ್ರವರ್ಗದಲ್ಲಿದ್ದಾರೆ.



ವಾಗ್ಝರಿಯನ್ನೇ ಹರಿಸುತ್ತಿರುವ ವಾಕ್ಚಿತ್ರಗಳ ಭರಾಟೆಯಲ್ಲಿ ಮೂಡಿಬಂದ ಮೂಕಚಿತ್ರ 'ಪುಷ್ಪಕ ವಿಮಾನ' ದಲ್ಲಿ ಕಮಲಹಾಸನ್, ಅಮಲಾ

# ಕರ್ನಾಟಕದಲ್ಲಿ ತಯಾರಾದ ಮೂಕಚಿತ್ರಗಳು

*(175 ಚಿತ್ರಗಳು ತಯಾರಾಗಿರುವ ಸಾಧ್ಯತೆಯಿದ್ದು 54 ಚಿತ್ರಗಳ ಹೆಸರು ಮಾತ್ರ ಲಭ್ಯವಿದೆ)*

ನಿರುಪಮಾ (ರತ್ನಾವಳಿ ಥಿಯೇಟ್ರಿಕಲ್ ಕಂಪನಿ) 1921

ಮಹಾತ್ಮ ಕಬೀರ್ (ಗುಬ್ಬಿ ಚನ್ನಬಸವೇಶ್ವರ ನಾಟಕ ಮಂಡಳಿ) 1925

ವಸಂತಸೇನ (ಪಿ.ಎ. ಪಿಕ್ಚರ್ಸ್) 1929

**ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್‌ನ ತಯಾರಿಕೆ**

ಹರಿಮಾಯ 1930

ಹಿಸ್ ಲವ್ ಅಫೇರ್ (ಕಳ್ಳರ ಕೂಟ) 1930

ಸಾಂಗ್ ಆಫ್ ಲೈಫ್ 1931

**ಶಿವರಾಮ ಕಾರಂತರ ತಯಾರಿಕೆ**

ಡೊಮಿಂಗೊ 1930

ಭೂತರಾಜ್ಯ 1931

**ಸೂರ್ಯ ಫಿಲಂ ಕಂಪನಿ ತಯಾರಿಕೆ**

ರಾಜಹೃದಯ (ಹಾರ್ಟ್ ಆಫ್ ದಿ ಕಿಂಗ್) 1929

ಬಾಯ್ಸ್ ಆಫ್ ಎ ಬ್ರೈಡ್ 1929

**1930**

ವೀರಭೂಷಣ್

ಧೈವೀಖಡ್ಗ

ಚಾಬುಕ್‌ಸೆ ಚಮ್ಕಾರೇ

ರಾಧೇಶ್ಯಾಂ

ಕಾಳಿ ಕಾ ನಾಕೋಪ್

ಸೂರ್ಯಪ್ರಭಾ

ಧೂಮಕೇತು

ಸಿತಮ್‌ಗರ್

ಜಲೀಮ್ ಜುಲೇಖ

ರಾಜದೂತ್ (ಬೆಗ್ಗರ್ ಮೀಟ್ಸ್ ಬೆಗ್ಗರ್)

ಚೌಹಾನಿ ತಲ್ವಾರ್

ರಾಜ ಪ್ರಪಂಚ

**1931**

ಇಂತಕಾಮ್

ಡಿಸ್‌ಕಾರ್ಡೆಡ್ ಲವ್

ವಫಾಧಾರಿ

ಜಿಂದಗಿ ಕೆ ಜುವಾ

ಬಾಜ್ ಬಹಾದ್ದೂರ್

ತಾಜ್ ಯಾ ತಲ್ವಾರ್

ಕಿಂಗ್ ಆಫ್ ಹಾರ್ಟ್ಸ್

ಕಿಶೋರಿ

ಫೌಲಾದಿ ಫರ್ಮಾನ್

ಇಷ್ಕ್ ನೊ ಅಂಜಾಮ್

ಖುರ್ಬಾನಿ

ಆಸ್ಪೈರ್ ಹೈರ್ಸ್

ರಣಧೀರ್

ತೀರೇಖಾತಿಲ್

ಕಸೌಟಿ

ವಿಜಯಧ್ವನಿ

ವಿಕರಾಳ್‌ವಾರೂ

ಸ್ವೋರ್ಡ್ ಆಫ್ ಅಲ್ಲಾ (ಸೂರ್ಯಪ್ರಕಾಶ್ ಫಿಲಂ)

ರೂಪಸುಂದರಿ (ಶಾರದಾ ಪಿಕ್ಚರ್ಸ್)

1932

ಚೋಟಾ ಚೋರ್

ಹೃದಯವೀಣಾ

ಇನ್‌ಶೆಕಲ್ಸ್

ಕ್ಯಾಬಾತ್

ರಾಜಾ ಧೀರಜ್

ಶೇರ್‌ದಿಲ್

ಸ್ಟಾರ್ ಆಫ್ ಏಶಿಯಾ

ಸ್ತ್ರೀ ಶಕ್ತಿ

ದಿಲ್-ಏ-ದಿಲಾರಾ (ಸ್ಟಂಟ್ ಕಿಂಗ್)

1933

ಲಾ ಪರ್ವಾ

ಭಾಗ್ಯಚಕ್ರ

ವಿಜಯಡಂಕ (ರಮೇಶ್ ಫಿಲಂ ಕಂಪನಿ, ಬೆಂಗಳೂರು) ಇಸವಿ ತಿಳಿದಿಲ್ಲ

ಖೂನ್ ಕಾ ಬದ್ಲಾ (ಇಸವಿ ತಿಳಿದಿಲ್ಲ)

# ಮೊದಲ ವಾಕ್ಚಿತ್ರ

ಕನ್ನಡದ ಮೊಟ್ಟಮೊದಲ ವಾಕ್ಚಿತ್ರ ಯಾವುದು? ಭಾರತದ ಪ್ರಥಮ ವಾಕ್ಚಿತ್ರ ಹಿಂದಿಭಾಷೆಯ ಆಲಂ ಆರಾ 1931ರಲ್ಲಿ ತೆರೆಕಂಡಿತು. ಮೂರು ವರ್ಷಗಳ ನಂತರ ಕನ್ನಡದಲ್ಲೂ ಆ ಪ್ರಯತ್ನ ನಡೆಯಿತು. 1934ರಲ್ಲಿ ಕನ್ನಡ ವಾಕ್ಚಿತ್ರ ತಯಾರಿಕೆಯ ಪ್ರಕ್ರಿಯೆ ಆರಂಭವಾಯಿತು. ರಂಗಭೂಮಿಯ ಬಳಗಗಳೇ ಪ್ರಥಮ ವಾಕ್ಚಿತ್ರ ತಯಾರಿಕೆಯ ಸಾಹಸಕ್ಕೂ ಇಳಿದವು.

ಎ. ವಿ. ವರದಾಚಾರ್ಯರ ರತ್ನಾವಳೀ ಥಿಯೇಟ್ರಿಕಲ್ ಕಂಪನಿಯ ಮಿತ್ರರು. ವರದಾಚಾರ್ಯ ಮೆಮೋರಿಯಲ್ ಟ್ರಸ್ಟ್ ನಿರ್ಮಿಸಿಕೊಂಡು 1933ರಲ್ಲಿ ವಾಕ್ಚಿತ್ರ ನಿರ್ಮಾಣಕ್ಕೆ ಮನಸ್ಸು ಮಾಡಿ **ಭಕ್ತಧ್ರುವ** ಚಿತ್ರದ ನಿರ್ಮಾಣ ಕಾರ್ಯ ಆರಂಭಿಸಿದರು. ಅದೇ ಕಾಲಕ್ಕೆ ಬೆಂಗಳೂರಿನ ವ್ಯಾಪಾರಿಗಳೊಬ್ಬರು ಎಂ. ವಿ. ಸುಬ್ಬಯ್ಯನಾಯ್ಡು ಹಾಗೂ ಅವರ ನಾಟಕ ತಂಡದಲ್ಲಿದ್ದವರನ್ನು ಅವಲಂಬಿಸಿ **ಸತಿಸುಲೋಚನ** ವಾಕ್ಚಿತ್ರ ತಯಾರಿಕೆ ಆರಂಭಿಸಿದ್ದರು. ಏಕಕಾಲದಲ್ಲಿ ಕನ್ನಡ ಚಿತ್ರರಂಗದಲ್ಲಿ ಎರಡು ಪೌರಾಣಿಕ ಚಲನಚಿತ್ರಗಳು ತಯಾರಾಗಲಾರಂಭಿಸಿ ಕನ್ನಡ ಚಿತ್ರರಂಗದ ಉದಯಕ್ಕೆ ನಾಂದಿ ಹಾಕುತ್ತಿದ್ದವು.

**ಭಕ್ತ ಧ್ರುವ** 1933ರಲ್ಲಿ ತಯಾರಿಕೆ ಆರಂಭಿಸಿ ಮೊದಲು ಸೆನ್ಸಾರ್ ಆಗಿದ್ದರೂ ಬಿಡುಗಡೆಯಾದದ್ದು 1934ರ ಏಪ್ರಿಲ್‌ನಲ್ಲಿ. ಇದಕ್ಕೆ ಮೊದಲೇ ಸೌತ್ ಇಂಡಿಯಾ ಮೂವಿಟೋನ್ ಲಾಂಛನದಲ್ಲಿ ತಯಾರಾದ

ಮೊಟ್ಟ ಮೊದಲ ವಾಕ್ಚಿತ್ರ ಎಂಬ ಕೀರ್ತಿಗೆ ಪಾತ್ರವಾದ 'ಸತಿ ಸುಲೋಚನ' (1934) ಚಿತ್ರ ತಯಾರಿಸಿದ ತಂಡ. ಕುಳಿತಿರುವವರು ಎರಡನೆ ಸಾಲು ಎಡದಿಂದ ಬಲಕ್ಕೆ : ಚಿತ್ರದ ಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು, ರಾವಣನ ಪಾತ್ರ ವಹಿಸಿದ್ದ ಆರ್. ನಾಗೇಂದ್ರರಾವ್, ಸೌತ್ ಇಂಡಿಯಾ ಮೂವೀ ಟೋನ್ ಚಿತ್ರ ಸಂಸ್ಥೆಯ ಮೇಲ್ವಿಚಾರಕ ಸಿ. ಟಿ. ಸೀತಾರಾಂ ಶೆಟ್ಟಿ, ಮಧ್ಯೆ ಪೇಟಧಾರಿ ಮಾಲೆ ಹಾಕಿಕೊಂಡು ಕುಳಿತಿರುವವರು ಚಿತ್ರದ ನಿರ್ಮಾಪಕ ಚಮನ್‌ಲಾಲ್ ಡೊಂಗಾಜಿ, ನಿರ್ದೇಶಕ ವೈ. ವಿ. ರಾವ್ (ಸೂಟುಧಾರಿ). ಕೊನೆಯಲ್ಲಿರುವವರು ಎಂ. ವಿ. ಸುಬ್ಬಯ್ಯನಾಯ್ಡು, ಕುಳಿತಿರುವವರು : ನಾಲ್ಕನೆಯವರು ಚಿತ್ರದಲ್ಲಿ ಮಂಡೋದರಿ ಪಾತ್ರವಹಿಸಿದ ಲಕ್ಷ್ಮೀಬಾಯಿ, ಸುಲೋಚನ ಪಾತ್ರಧಾರಿ ತ್ರಿಪುರಾಂಬ, ರಾಜಂ (ರುಕ್ಮಿಣಿ) (ವೈ. ವಿ. ರಾವ್ ಅವರ ಪತ್ನಿ), ಕೊನೆಯಲ್ಲಿ ಕಮಲಾಬಾಯಿ.







ಮೊದಲ ವಾಕ್ಚಿತ್ರಕ್ಕೆ ಸಾಹಿತ್ಯ ಬರೆದ "ಮೊದಲ ಸಿನಿಮಾ ಸಾಹಿತಿ" ಬೆಳ್ಳಾವೆ ನರಹರಿಶಾಸ್ತ್ರಿ

ಮೊದಲ ಮಾತನಾಡುವ ಕನ್ನಡ ಚಲನಚಿತ್ರ "ಸತಿ ಸುಲೋಚನಾ" ಚಿತ್ರದ ನಿರ್ದೇಶಕ ವೈ. ವಿ. ರಾವ್, ಆ ಚಿತ್ರದ ಪಾತ್ರದಲ್ಲಿ

ಮೊದಲ ವಾಕ್ಚಿತ್ರ "ಸತಿ ಸುಲೋಚನ"ದ ನಾಯಕ ಎಂ. ವಿ. ಸುಬ್ಬಯ್ಯನಾಯ್ಡು, "ಇಂದ್ರಜಿತು"ವಾಗಿ. ಇವರೇ ಕನ್ನಡ ವಾಕ್ಚಿತ್ರ ಇತಿಹಾಸದ ಮೊದಲ ನಾಯಕನಟ.

**ಸತಿಸುಲೋಚನ** 1934ರ ಮಾರ್ಚ್ 3ರಂದು ತೆರೆಕಂಡಿತು. ಆದ್ದರಿಂದಲೇ **ಸತಿಸುಲೋಚನ** ಕನ್ನಡದ ಪ್ರಥಮ ವಾಕ್ಚಿತ್ರ ಎಂಬ ದಾಖಲೆಯನ್ನು ಉಳಿಸಿಕೊಂಡಿತು. ಆದರೆ ಚಲನಚಿತ್ರರಂಗದ ಇತಿಹಾಸದಲ್ಲಿ ಈ ಎರಡೂ ಚಿತ್ರಗಳೂ ಮಹತ್ವ ಪಡೆಯುತ್ತವೆ. ಕನ್ನಡದ ವಾಕ್ಚಿತ್ರಕ್ಕೆ ನಾಂದಿ ಹಾಡಿದ 1934ನೇ ಇಸವಿಯಲ್ಲಿ ಬಿಡುಗಡೆಯಾದ ಈ ಎರಡೂ ಚಿತ್ರಗಳು ಕನ್ನಡ ಚಿತ್ರ ಇತಿಹಾಸಕ್ಕೆ ಹಲವಾರು ವರ್ಣಮಯ ಗರಿಗಳನ್ನು ಸೇರಿಸಿವೆ. **ಸತಿಸುಲೋಚನ**ದ ಬಿಡುಗಡೆಯೊಂದಿಗೆ ಕನ್ನಡ ಚಿತ್ರರಂಗ ಅಸ್ತಿತ್ವಕ್ಕೆ ಬಂದಿತು. ಮನರಂಜನಾ ಮಾಧ್ಯಮ ಕ್ಷೇತ್ರದಲ್ಲಿ ಕನ್ನಡನಾಡು ಹಾಗೂ ಕನ್ನಡಿಗರು ಇತರ ಭಾಷಾ ಚಿತ್ರೋದ್ಯಮದ ಸಾಲಿಗೆ ಸೇರಿದರು.

## ಸತಿ ಸುಲೋಚನ

ಕನ್ನಡದ ಪ್ರಥಮ ವಾಕ್ಚಿತ್ರ **ಸತಿ ಸುಲೋಚನ** ತಯಾರಿಸಲು ಮುಂದಾದವರು ಉತ್ತರ ಭಾರತದ ವ್ಯಾಪಾರಸ್ಥ ಚಮನ್‌ಲಾಲ್ ಡೊಂಗಾಜಿ. ಸೌತ್ ಇಂಡಿಯಾ ಮೂವಿಟೋನ್ ಲಾಂಛನದಲ್ಲಿ ಕನ್ನಡ ವಾಕ್ಚಿತ್ರ ತಯಾರಿಕೆಯ ಸಾಹಸಕ್ಕೆ ಕೈ ಹಾಕಿದ ಚಮನ್‌ಲಾಲ್ ಡೊಂಗಾಜಿ, ಚಿತ್ರ ನಿರ್ದೇಶನದ ಹೊಣೆಯನ್ನು ವೈ. ವಿ. ರಾವ್ ಅವರಿಗೆ ವಹಿಸಿದರು. ಆಂಧ್ರಪ್ರದೇಶದ ಯರಗುಡಿಪತಿ ಊರಿನವರಾದ ವೈ. ವಿ. ರಾವ್, ಇದಕ್ಕೆ ಮುನ್ನವೇ **ಹರಿಮಾಯ** ಸೇರಿದಂತೆ ಹಲವಾರು ಮೂಕಿಚಿತ್ರಗಳನ್ನು ನಿರ್ದೇಶಿಸಿದ್ದರು. ಹಾಗೂ ನಾಯಕ ನಟನಾಗಿಯೂ ಬೆಳೆದಿದ್ದರು. ಆನಂತರದ ದಿನದಲ್ಲಿ ವೈ. ವಿ. ರಾವ್ ನಿರ್ದೇಶಿಸಿದ್ದು ಎರಡು ಕನ್ನಡ ಚಿತ್ರಗಳನ್ನು ಮಾತ್ರ. ಅವು **ಭಾಗ್ಯಚಕ್ರ** (1956) ಹಾಗೂ **ನಾಗಾರ್ಜುನ** (1961).

ಅದುವರೆಗೆ ರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳೇ ಹೆಚ್ಚು ಜನಪ್ರಿಯವಾಗಿದ್ದವು. ಅದೇ ಸೂತ್ರವನ್ನೇ ವಾಕ್ಚಿತ್ರಕ್ಕೂ ಅಳವಡಿಸಲು ನಿರ್ಧರಿಸಿದ ವೈ. ವಿ. ರಾವ್, ಆಗ ಜನಪ್ರಿಯವಾಗಿದ್ದ ಬೆಳ್ಳಾವೆ ನರಹರಿಶಾಸ್ತ್ರಿಗಳ "ಸತಿ ಸುಲೋಚನ" ಅರ್ಥಾತ್ "ಇಂದ್ರಜಿತ್ ವಧೆ" ಪೌರಾಣಿಕ ನಾಟಕವನ್ನೇ ಆಯ್ಕೆ ಮಾಡಿಕೊಂಡರು. ಕತೆ, ಸಂಭಾಷಣೆ, ಹಾಡುಗಳ ಜವಾಬ್ದಾರಿಯನ್ನು ನರಹರಿಶಾಸ್ತ್ರಿಗಳಿಗೇ ವಹಿಸಲಾಯಿತು. ಹೀಗಾಗಿ ಆಸ್ಥಾನ ವಿದ್ವಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ಕನ್ನಡ ಚಿತ್ರರಂಗದ ಮೊದಲ ಕತೆಗಾರ, ಸಂಭಾಷಣೆ ರಚನೆಕಾರ, ಗೀತರಚನಕಾರರಾದರು.


3-3-1934

ತುಮಕೂರು ಜಿಲ್ಲೆಯ ಬೆಳ್ಳಾವೆ ಗ್ರಾಮದಲ್ಲಿ ಜನಿಸಿದ ನರಹರಿಶಾಸ್ತ್ರಿಗಳು ಬಡತನದಲ್ಲಿ ಹುಟ್ಟಿ ಬೆಳೆದರು. ತಂದೆ ನರಸಾವಧಾನಿಗಳೇ ಸಂಸ್ಕೃತ ಕಲಿಸಿ ಮಗನಲ್ಲಿ ಪಾಂಡಿತ್ಯ ತುಂಬಿದರು. ಮೆಟ್ರಿಕ್ಯುಲೇಷನನ್ನು ತುಮಕೂರು ಸರ್ಕಾರಿ ಹೈಸ್ಕೂಲಿನಲ್ಲಿ ಮುಗಿಸಿದ ನಂತರ ಆರ್ಥಿಕ ಮುಗ್ಗಟ್ಟಿನಿಂದ ವಿದ್ಯಾಭ್ಯಾಸ ಅಲ್ಲಿಗೇ ನಿಂತಿತು. 1901ರಲ್ಲಿ ತಿಪಟೂರಿನ ಎ. ವಿ. ಶಾಲೆಯಲ್ಲಿ ತಿಂಗಳಿಗೆ 10 ರೂ. ವೇತನದ ಉಪಾಧ್ಯಾಯ ವೃತ್ತಿ ಹಿಡಿದರು.

ವಿರಾಮದ ವೇಳೆಯನ್ನು ಸಾಹಿತ್ಯಾಭ್ಯಾಸದಲ್ಲಿ ಕಳೆದ ನರಹರಿಶಾಸ್ತ್ರಿಗಳ ಸಾಹಿತ್ಯ ಗುರುಗಳು ವಿದ್ವಾನ್ ಭಾಸ್ಕರ ಶಾಸ್ತ್ರಿಗಳು. 1902ರಲ್ಲಿ ತುರುವೇಕೆರೆ, 1903ರಲ್ಲಿ ಹುಳಿಯಾರುಗಳಲ್ಲಿ ಕಳೆದು, 1904ರಲ್ಲಿ ತುಮಕೂರಿನ ಎಂಪ್ರೆಸ್ ಬಾಲಿಕಾ ಪಾಠಶಾಲೆಯಲ್ಲಿ ಶಿಕ್ಷಕರಾಗಿ ನೇಮಕವಾದರು. ಚಿಕ್ಕಂದಿನಿಂದಲೇ, ಗುಬ್ಬಿ ಚೆನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ ಬೆಳ್ಳಾವೆಯಲ್ಲಿ ಪ್ರದರ್ಶಿಸಿದ್ದ 'ಚೋರಕತೆ' ಮತ್ತು 'ಗುಲೇಬಕಾವಳಿ' ಎಂಬ ನಾಟಕಗಳನ್ನು ಕಂಡು ನಾಟಕಗಳ ಬಗ್ಗೆ ಬಹುವಾಗಿ ಆಕರ್ಷಿತರಾಗಿದ್ದ ನರಹರಿಗಳು ಮುಂದೆ ನಾಟಕ ರಚಿಸಲು ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಲು ಅದೇ ಪ್ರೇರಣೆಯಾಯಿತು. 1921ರಲ್ಲಿ ಗುಬ್ಬಿ ನಾಟಕ ಮಂಡಲಿಯ ವೀರಣ್ಣನವರ ಪರಿಚಯವಾಯಿತು. ಆಗ "ಶ್ರೀ ಕೃಷ್ಣಲೀಲ" ನಾಟಕ ರಚನೆ. ಅಲ್ಲಿಂದ ಮುಂದೆ, ಕಂಸವಧ, ರುಕ್ಮಿಣೀ ಹರಣ, ಮಹಾತ್ಮ ಕಬೀರ್ ದಾಸ್, ಸಾಧು ತುಕಾರಾಂ ನಾಟಕಗಳನ್ನು ರಚಿಸಿದರು. ಸದಾರಮೆ ಗುಬ್ಬಿ ಕಂಪನಿ ಹೆಸರನ್ನೂ ಪ್ರಸಿದ್ಧಿಗೊಳಿಸಿತು. ಅಂದಿನ ಜನತೆಯ ಅಭಿರುಚಿಗನುಗುಣವಾಗಿ ನರಹರಿಶಾಸ್ತ್ರಿಗಳು ರಾಮಾಯಣ, ಮಹಾಭಾರತ, ಭಾಗವತಗಳಿಗೆ ಸಂಬಂಧಿಸಿರುವ ನಾಟಕಗಳನ್ನೇ ಹೆಚ್ಚಾಗಿ ರಚಿಸಿದರು. ಒಟ್ಟು 44 ನಾಟಕಗಳನ್ನು ರಚಿಸಿದ್ದಾರೆ. ಇವರು ಸಾಹಿತಿ ಮಾತ್ರವಲ್ಲ ನಟರೂ ಹೌದು. 1943ರಲ್ಲಿ ತೆರೆಕಂಡ **ಕೃಷ್ಣ ಸುಧಾಮ** ಚಿತ್ರದಲ್ಲಿ ನಾಯಕ. 1961ರ ಜೂನ್ 21ರಂದು ಅವರು ನಿಧನರಾದರು. ಆಗ ಅವರಿಗೆ 79 ವರ್ಷ ವಯಸ್ಸು.

**ಸತಿ ಸುಲೋಚನ** ಸಂಪೂರ್ಣವಾಗಿ ಮಹಾರಾಷ್ಟ್ರದ ಛತ್ರಪತಿ ಸಿನಿಟೋನ್ ಸ್ಟುಡಿಯೋದಲ್ಲಿ ತಯಾರಾಗಿದೆ. ಈ ಚಿತ್ರದಲ್ಲಿ ಯುದ್ಧದ ಸನ್ನಿವೇಶಗಳಿದ್ದುದರಿಂದ ಹಾಗೂ ಈಗಾಗಲೇ ಆ ರೀತಿಯ ಚಲನಚಿತ್ರಗಳಿಗೆ ಆ ಸ್ಟುಡಿಯೋ ಹೆಸರುವಾಸಿಯಾಗಿದ್ದುದರಿಂದ ಸಹಜವಾಗಿಯೇ ನಿರ್ದೇಶಕ ವೈ. ವಿ. ರಾವ್, ಚಿತ್ರೀಕರಣಕ್ಕೆ ಛತ್ರಪತಿ ಸಿನಿಟೋನ್ ಸ್ಟುಡಿಯೋವನ್ನೇ ಆಯ್ಕೆ ಮಾಡಿಕೊಂಡರು. 16 ಸಾವಿರ ಅಡಿ ಉದ್ದದ ಈ ಮೊದಲ ವಾಕ್ಚಿತ್ರ ತಯಾರಿಕೆಗೆ ಮೂರು ತಿಂಗಳು ಹಿಡಿಯಿತು. ಸುಮಾರು ನಲವತ್ತು ಸಾವಿರ ರೂ. ವೆಚ್ಚ ತಗುಲಿತು. ಚಿತ್ರದಲ್ಲಿ ಟ್ರಿಕ್‌ಶಾಟ್‌ಗಳನ್ನು ಅಳವಡಿಸಿದ್ದುದು ಹಾಗೂ ಯುದ್ಧದ ಸನ್ನಿವೇಶಕ್ಕೆ ಎರಡು ಸಾವಿರ ಜನರನ್ನು ಕಲೆ ಹಾಕಿದ್ದುದು ಮೊದಲ ವಾಕ್ಚಿತ್ರದ ಅದ್ದೂರಿತನಕ್ಕೆ ಕಾರಣವಾಗಿದ್ದವು.



'ಸತಿ ಸುಲೋಚನ'ದ ನಾರದ ಶೇಷಾಚಲಂ ಶೆಟ್ಟಿ.

ಆರ್. ನಾಗೇಂದ್ರರಾವ್ "ಸತಿ ಸುಲೋಚನಾ" ದಲ್ಲಿ ರಾವಣನ ಪಾತ್ರ ವಹಿಸಿದ್ದಲ್ಲದೆ ಚಿತ್ರದ ಸಂಗೀತ ನಿರ್ದೇಶಕರೂ ಆಗಿದ್ದರು. ವಾಕ್ಚಿತ್ರಲೋಕದ ಪ್ರಥಮ ಸಂಗೀತ ನಿರ್ದೇಶಕ ಎಂಬ ಖ್ಯಾತಿಯೂ ಇವರದೇ.



ಸತಿ ಸುಲೋಚನದಲ್ಲಿ ಇಂದ್ರಜಿತ್ ಪಾತ್ರ ವಹಿಸಿ ಪ್ರಭಾವಶಾಲಿ ಅಭಿನಯ ನೀಡಿರುವ ಎಂ. ವಿ. ಸುಬ್ಬಯ್ಯನಾಯ್ಡು ಕನ್ನಡ ವಾಕ್ಚಿತ್ರದ ಮೊದಲ ಹೀರೋ. ರಾವಣನ ಪಾತ್ರದಲ್ಲಿ ಆರ್. ನಾಗೇಂದ್ರರಾವ್, ಸುಲೋಚನೆ ಯಾಗಿ ತ್ರಿಪುರಾಂಬ, ಮಂಡೋದರಿಯಾಗಿ ಲಕ್ಷ್ಮೀಬಾಯಿ, ನಾರದನಾಗಿ ಸಿ. ಟಿ. ಶೇಷಾಚಲಂ, ಲಕ್ಷ್ಮಣನಾಗಿ ಸ್ವತಃ ನಿರ್ದೇಶಕ ವೈ. ವಿ. ರಾವ್, ರಾಮನಾಗಿ ಡಿ. ಎನ್. ಮೂರ್ತಿರಾವ್ ತಾರಾಗಣದಲ್ಲಿದ್ದರು.

ಅಭಿನಯಿಸುವುದರ ಜತೆಗೆ ಆರ್. ನಾಗೇಂದ್ರರಾವ್ ಅವರು ಮೊದಲ ವಾಕ್ಚಿತ್ರದ ಸಂಗೀತ ನಿರ್ದೇಶಕರೂ ಆಗಿದ್ದರು. ಮುಂಬೈನಲ್ಲಿ ಹಲವಾರು ಮೂಕಿಚಿತ್ರಗಳಲ್ಲಿ ಕೆಲಸ ಮಾಡಿದ್ದ ಎಚ್. ಆರ್. ಪದ್ಮನಾಭಶಾಸ್ತ್ರಿಗಳು ಸಹಾಯಕ ಸಂಗೀತ ನಿರ್ದೇಶಕರಾಗಿದ್ದರು. ಈ ಚಿತ್ರದಲ್ಲಿ ಹದಿನಾರು ಹಾಡುಗಳಿದ್ದವು. ಹಾಡುಗಳನ್ನು ಪಾತ್ರಧಾರಿಗಳೇ ಹಾಡಿದ್ದಾರೆ. ಮಂಡೋದರಿಯ ಪಾತ್ರ ವಹಿಸಿದ್ದ ಲಕ್ಷ್ಮೀಬಾಯಿ ಹಾಡಿರುವ "ಭಲೇ ಭಲೇ ಪಾರ್ವತಿ ಬಲು ಚದುರೆ...." ಎಂಬ ಹಾಡು ಪ್ರಖ್ಯಾತವಾಗಿತ್ತು. ಇದು ಮೊಟ್ಟ ಮೊದಲ ಜನಪ್ರಿಯ ಚಿತ್ರಗೀತೆ.

ಮೊದಲ ವಾಕ್ಚಿತ್ರ ತಯಾರಿಕೆಯ ಸಂದರ್ಭವನ್ನು ಆರ್. ನಾಗೇಂದ್ರರಾವ್ ಅವರು "ಇದು ನನ್ನ ಕಥೆ" ಪುಸ್ತಕದಲ್ಲಿ ಹೀಗೆ ನೆನಪಿಸಿಕೊಂಡಿದ್ದಾರೆ : "ಸತಿ ಸುಲೋಚನ ಚಿತ್ರದಲ್ಲಿ ನನಗೆ ರಾವಣನ ಪಾತ್ರವೂ ಸುಬ್ಬಯ್ಯನಾಯ್ಡು ಅವರಿಗೆ ಇಂದ್ರಜಿತ್ ಪಾತ್ರವೂ ಗೊತ್ತಾಯಿತು. ನಾಯಕಿ ಸುಲೋಚನಳ ಪಾತ್ರಕ್ಕೆ ತ್ರಿಪುರಾಂಬ ಎಂಬ ತಾರೆಯನ್ನು ಆಯ್ಕೆ ಮಾಡಲಾಗಿತ್ತು. ಚಿತ್ರದ ಇನ್ನೆರಡು ಮುಖ್ಯ ಪಾತ್ರಗಳಿಗೆ ಮೂಕಚಿತ್ರಗಳ ಖ್ಯಾತ ನಟಿಯರಾಗಿದ್ದ ಲಕ್ಷ್ಮೀಬಾಯಿ ಮತ್ತು ಕಮಲಾಬಾಯಿ ಅವರನ್ನು ಗೊತ್ತು ಮಾಡಲಾಗಿತ್ತು. ಇವರಿಬ್ಬರೂ ಬೆಂಗಳೂರಿನಲ್ಲಿ ಹರಿಭಾಯ್ ದೇಸಾಯಿ ಅವರ ಸೂರ್ಯಫಿಲಂ ಕಂಪನಿ ತಯಾರಿಸುತ್ತಿದ್ದ ಚಿತ್ರಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ವಾಕ್ಚಿತ್ರಗಳು ಬರಲಾರಂಭಿಸಿದ ನಂತರ ಹಿಂದೆ ಸರಿದಿದ್ದರು. [ಮೂಕಿಚಿತ್ರಗಳ ತಾರೆ ಕಮಲಾಬಾಯಿ ಅವರೂ ಕೂಡ ಈ ಮೊದಲ ವಾಕ್ಚಿತ್ರದಲ್ಲಿ ಅಭಿನಯಿಸಬೇಕಿತ್ತು. ಆದರೆ ಇಂದು ಕಮಲಾಬಾಯಿ ಅಂದಿನ ದಿನಗಳನ್ನು ನೆನಪಿಸಿಕೊಂಡಿರುವುದು ಹೀಗೆ : "ನಿರ್ದೇಶಕ ವೈ. ವಿ. ರಾವ್ ನನಗೆ ನಿಗದಿ ಮಾಡಿದ್ದ ಪಾತ್ರ ನೀಡದೆ ರಾಕ್ಷಸಿಯ ಪಾತ್ರ ನೀಡಿದರು. ಇದರಿಂದ ನಾನು ಸಿಟ್ಟಿಗೆದ್ದು ಈ ಚಿತ್ರದಲ್ಲಿ ನಟಿಸದೆ ಹಿಂತಿರುಗಿದೆ" ಎಂದು ತಾನು ಆ ಪಾತ್ರವನ್ನು ತಿರಸ್ಕರಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ.]

"ಲಕ್ಷ್ಮೀಬಾಯಿ ಅವರಿಗೆ ಹೊಸ ಚಿತ್ರದಲ್ಲಿ ಮಂಡೋದರಿಯ ಪಾತ್ರ ಗೊತ್ತಾಯಿತು. ಕಮಲಾಬಾಯಿಗೆ ಇನ್ನು ಯಾವ ನಿರ್ದಿಷ್ಟ ಪಾತ್ರವೂ ಇರಲಿಲ್ಲ. ಸಂಗೀತ ನಿರ್ದೇಶನಕ್ಕೆ ಅಂದಿನ ಹೆಸರಾಂತ ಹಾರ್ಮೋನಿಯಂ ವಾದಕರಾದ ಪದ್ಮನಾಭಶಾಸ್ತ್ರಿ ಅವರನ್ನು ಆಯ್ಕೆ ಮಾಡಲಾಗಿತ್ತು. ನಾನು ಮುಂಬೈನಲ್ಲಿ ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾಗ ಚಿತ್ರಗಳಿಗೆ ಸಂಗೀತ ನೀಡುವುದರ ಬಗ್ಗೆ ತಿಳಿವಳಿಕೆ ಬೆಳೆಸಿಕೊಂಡಿದ್ದನಾದ್ದರಿಂದ ಪದ್ಮನಾಭಶಾಸ್ತ್ರಿಯವರಿಗೆ ಆಗಾಗ ಅವರ ಕೆಲಸದಲ್ಲಿ ಸೂಚನೆ ನೀಡುತ್ತಿದ್ದೆ. ಇದನ್ನು ಗಮನಿಸಿದ ನಿರ್ಮಾಪಕರು ನನ್ನನ್ನೇ ಸಂಗೀತ ನಿರ್ದೇಶನಕ್ಕೆ ನೇಮಿಸಿ ಪದ್ಮನಾಭ ಶಾಸ್ತ್ರಿಯವರಿಗೆ ಕೇವಲ ಹಾರ್ಮೋನಿಯಂ ವಾದನದ ಕೆಲಸವನ್ನು ಮಾತ್ರ ವಹಿಸಿದರು.

"ಸುಮಾರು ಒಂದು ತಿಂಗಳು ರಿಹರ್ಸಲ್ ಆಯಿತು. 1933ರ ಡಿಸೆಂಬರ್‌ನಲ್ಲಿ ನಾವೆಲ್ಲಾ ಕೊಲ್ಲಾಪುರಕ್ಕೆ ಪ್ರಯಾಣ ಮಾಡಿದೆವು. ಅಲ್ಲಿ 'ಛತ್ರಪತಿ ಸಿನಿಟೋನ್' ಎಂಬ ಸ್ಟುಡಿಯೋದಲ್ಲಿ ಚಿತ್ರ ನಿರ್ಮಾಣ ಕೆಲಸ ಪ್ರಾರಂಭವಾಯಿತು. ಇಲ್ಲೂ ಸಹ ನಾವು ರಿಫ್ಲೆಕ್ಟರ್‌ಗಳನ್ನು ಉಪಯೋಗಿಸಿ ಇಡೀ ಚಿತ್ರ ತೆಗೆಯಬೇಕಾಗಿತ್ತು. ಚಿತ್ರ ಅರ್ಧದಷ್ಟು ಪೂರ್ತಿಯಾದರೂ ಸಹ ತಯಾರಕರು ನನಗೆ ವಾಗ್ದಾನ ಮಾಡಿದ್ದ ಧನಸಹಾಯ ಕೊಡಲಿಲ್ಲ. ಅವರು ಕೊಡುವುದಿಲ್ಲವೆಂದು ತಿಳಿದ ಬಳಿಕ ನಾವು ನಮ್ಮ ವೇತನ ಹೆಚ್ಚಿಗೆ ಕೊಡಬೇಕೆಂದು ಕೇಳಿದೆವು. ಅವರು ಹಿಂದೇಟು ಹೊಡೆದುದರಿಂದ ನಾನು ಮತ್ತು ಸುಬ್ಬಯ್ಯ ನಾಯ್ಡು ಮುಷ್ಕರ ಹೂಡಬೇಕಾಯಿತು. ಬೇರೆ ಮಾರ್ಗವಿಲ್ಲದೆ ಅವರು ನಮ್ಮ ಬೇಡಿಕೆಗೆ ಒಪ್ಪಿಕೊಂಡರು.

"ಸುಲೋಚನಳ ಪಾತ್ರ ವಹಿಸಿದ ತ್ರಿಪುರಾಂಬ ಅವರಿಗೆ ನಾಟಕರಂಗದಲ್ಲಾಗಲೀ, ಚಿತ್ರರಂಗದಲ್ಲಾಗಲೀ ಹೆಚ್ಚು ಪರಿಶ್ರಮವಿರಲಿಲ್ಲ. ಇಂದ್ರಜಿತ್‌ನ ಮರಣಾನಂತರ ಅಳಬೇಕಾದ ಸಂದರ್ಭ

ಬಂದಾಗ ಚಿತ್ರದ ನಿರ್ದೇಶಕ ವೈ. ವಿ. ರಾವ್ ಎಷ್ಟು ಪ್ರಯತ್ನಪಟ್ಟರೂ ಆಕೆಯ ಕಣ್ಣುಗಳಿಂದ ನೀರು ಬರಲಿಲ್ಲ. ಆಗ ಯಾರದೊ ಸಲಹೆ ಮೇಲೆ ಅಲ್ಲಿಯೇ ಬೆಳೆದಿದ್ದ ಚುರುಕು ಮೆಣಸಿನಕಾಯಿ ಗಿಡದಿಂದ ಒಂದು ಕಾಯಿಯನ್ನು ಕಿತ್ತುಕೊಂಡು ಬಂದು ಆಕೆಯ ಕಣ್ಣುಗಳಿಗೆ ತಾಕಿಸಿದೆವು. ಆಗಲೂ ಅವರ ಕಣ್ಣುಗಳು ಕೆಂಪಗಾದವೇ ವಿನಾ ನೀರು ಬರಲಿಲ್ಲ. ಆಗಿನ ಕಾಲದಲ್ಲಿ ಗ್ಲಿಸರೀನ್ ಸಹ ಬಳಕೆಯಲ್ಲಿರಲಿಲ್ಲ. ಕೊನೆಗೆ ಎರಡು ತೊಟ್ಟು ನೀರನ್ನು ಕೆನ್ನೆಯ ಮೇಲೆ ಬಿಟ್ಟು ಅದನ್ನೇ ಕಣ್ಣೀರು ಎಂದು ತೋರಿಸಬೇಕಾಯಿತು.



"ನಾವು ಚಿತ್ರ ತಯಾರಿಕೆಗೆ ಆರಿಸಿದ ಕತೆ **ಸತಿಸುಲೋಚನ**ಕ್ಕೆ ಯುದ್ಧದ ಸನ್ನಿವೇಶ ಅಗತ್ಯವಾದುದರಿಂದ ನಾವು ಚಿತ್ರವನ್ನು ಕೊಲ್ಹಾಪುರದಲ್ಲಿ ತಯಾರಿಸಲು ನಿರ್ಧರಿಸಿದೆವು. ಯಾಕೆಂದರೆ ಇಂಥ ಚಿತ್ರಗಳ ತಯಾರಿಕೆಗೆ ಅದು ಆಗಲೇ ಪ್ರಸಿದ್ಧವಾಗಿತ್ತು. ಅದೂ ಅಲ್ಲದೆ ಮುಂಬೈ, ಕಲ್ಕತ್ತಗಳ ಸ್ಟುಡಿಯೋಗಳಿಗಿಂತ ಕೊಲ್ಹಾಪುರ ಸ್ಟುಡಿಯೋ ಬಾಡಿಗೆ ಕಡಿಮೆ ಇತ್ತು" ಎಂದು ಆರ್. ನಾಗೇಂದ್ರರಾವ್ ಅವರು ಕನ್ನಡ ವಾಕ್ಚಿತ್ರ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆಯಲ್ಲಿ ಬರೆದಿರುವ ಲೇಖನದಲ್ಲಿ ಸ್ಮರಿಸಿಕೊಂಡಿದ್ದಾರೆ.

"ನಾವು **ಸತಿ ಸುಲೋಚನ**ವನ್ನು ಆರಂಭಿಸುವ ಮೊದಲೇ ಮತ್ತೊಂದು ಸಂಸ್ಥೆಯವರು **ಭಕ್ತ ಧ್ರುವ** ಎಂಬ ಕನ್ನಡ ವಾಕ್ಚಿತ್ರ ತಯಾರಿಕೆಯನ್ನು ಆರಂಭಿಸಿದ್ದರು. ಆದರೆ ಪಾಲುದಾರರ ನಡುವಿನ ಯಾವುದೋ ಜಗಳದಿಂದ ಚಿತ್ರೀಕರಣವು ಹೆಚ್ಚು ಮುಂದುವರಿದಿರಲಿಲ್ಲ. ಹೀಗಾಗಿ 1934ರಲ್ಲಿ ಮೊಟ್ಟ ಮೊದಲ ವಾಕ್ಚಿತ್ರವನ್ನು ಬಿಡುಗಡೆ ಮಾಡಿದ ಶ್ರೇಯಸ್ಸು ನಮ್ಮದಾಯಿತು. **ಸತಿ ಸುಲೋಚನ**ದ ನಂತರ ಸುಬ್ಬಯ್ಯನಾಯ್ಡು ಅವರಿಗಾಗಲೀ ನನಗಾಗಲೀ ಬೇರೆ ಚಿತ್ರಗಳಲ್ಲಿ ಅಭಿನಯಿಸಲು ಕರೆ ಬರಲಿಲ್ಲ. ಹೀಗಾಗಿ ನಾವು ನಮ್ಮ ನಾಟಕ ಪ್ರಯೋಗಗಳನ್ನೇ ಮುಂದುವರೆಸಿದೆವು" ಎಂದು ಆರ್. ನಾಗೇಂದ್ರರಾವ್ ನೆನಪಿಸಿಕೊಂಡಿದ್ದಾರೆ.

"ಮೊದಲ ವಾಕ್ಚಿತ್ರವನ್ನು ವೀಕ್ಷಿಸುತ್ತಿದ್ದ ಜನಸ್ತೋಮ ಚಿತ್ರದ ನಾಯಕಿ ಸುಲೋಚನೆಯ ದುಃಖದಲ್ಲಿ ತಾವೂ ಭಾಗಿಗಳಾದರು. ಎಷ್ಟೋ ಮಂದಿ ಚಿತ್ರದ ಸಹಗಮನದ ದೃಶ್ಯದಲ್ಲಿ ಕಣ್ಣೀರು ಸುರಿಸಿದರು. ಪ್ರದರ್ಶನ ಮುಕ್ತಾಯವಾದ ಮೇಲೆ ಪ್ರೇಕ್ಷಕರು ಸುಲೋಚನೆಯ ಪಾತ್ರ ವಹಿಸಿದ್ದ ತ್ರಿಪುರಾಂಬ ಅವರನ್ನೂ ಮಂಡೋದರಿ ಪಾತ್ರ ವಹಿಸಿದ್ದ ನನ್ನನ್ನೂ ಹಾಡಿ ಹೊಗಳಿದರು" ಎಂದು "ಸತಿ ಸುಲೋಚನ"ದ ಅಭಿನೇತ್ರಿ ಲಕ್ಷ್ಮೀಬಾಯಿ ಮೊದಲ ಚಿತ್ರದ ದಿನಗಳನ್ನು ಸ್ಮರಿಸಿಕೊಂಡಿದ್ದಾರೆ.

ಕನ್ನಡದ ಮೊದಲ ವಾಕ್ಚಿತ್ರ 1934ರ ಮಾರ್ಚ್ 3 ರಂದು ಬೆಂಗಳೂರು ಕೆ. ಆರ್. ಮಾರುಕಟ್ಟೆಯ ಮುಂದೆ ಇರುವ ಪ್ಯಾರಾಮೌಂಟ್ ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು. ಕುಸ್ತಿ, ನಾಟಕ ಹೀಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದ ಈ ದೊಡ್ಡಣ್ಣ ಹಾಲ್‌ಗೆ ಒಂದು ಬಿಳಿ ತೆರೆ ಅಳವಡಿಸಿ ಅದನ್ನು ಚಿತ್ರಮಂದಿರವನ್ನಾಗಿ ಪರಿವರ್ತಿಸಲಾಗಿತ್ತು. ಕಲಾಸಿಪಾಳ್ಯಂನಲ್ಲಿ 1905ರಲ್ಲಿ ಪ್ಯಾರಾಮೌಂಟ್ ಪ್ರಾರಂಭವಾಯಿತು. ಇದಕ್ಕೆ ಈ ಮುಂಚೆ ಗಯಟಿ ಎನ್ನುವ ಹೆಸರಿತ್ತು. ಇದು ಕರ್ನಾಟಕದ ಮೊಟ್ಟ ಮೊದಲ ಚಿತ್ರಮಂದಿರ. ಶ್ರೇಷ್ಠದಾನಿ ದೊಡ್ಡಣ್ಣನವರ ಜಮೀನಿನಲ್ಲಿ ಆರಂಭವಾದ ಈ ಚಿತ್ರಮಂದಿರಕ್ಕೆ ಪ್ಯಾರಾಮೌಂಟ್ ಎಂಬ ಹೆಸರಿದ್ದರೂ ಕನ್ನಡಿಗರು ಅದನ್ನು ದೊಡ್ಡಣ್ಣ ಹಾಲ್ ಎಂದೇ ಕರೆಯುತ್ತಿದ್ದರು. ಈ ಚಿತ್ರಮಂದಿರ ಕಟ್ಟಿಸಿದ ಕೀರ್ತಿ ಶ್ರೀನಿವಾಸುಲು ನಾಯ್ಡು, ರಂಗಸ್ವಾಮಿ ನಾಯ್ಡು ಹಾಗೂ ಸಾಹುಕಾರ ಮಲ್ಲಪ್ಪನವರ ಮಗ ರುದ್ರಪ್ಪ ಅವರಿಗೆ ಸೇರಬೇಕು. ಈ ಚಿತ್ರಮಂದಿರದಲ್ಲಿ ತೆರೆಕಂಡ ಮೊದಲ

'ಸತಿ ಸುಲೋಚನ' ದಲ್ಲಿ ರಾಮನ ಪಾತ್ರ ವಹಿಸಿದ್ದ ಡಿ. ಎಸ್. ಮೂರ್ತಿರಾವ್.



ವಾಕ್ಚಿತ್ರ ಸುಮಾರು ಆರು ವಾರಗಳ ಪ್ರದರ್ಶನ ಕಂಡಿತು ಎನ್ನಲಾಗಿದೆ. ಈ ವಿಸ್ಮಯವನ್ನು ಕಾಣಲು ಸುತ್ತಮುತ್ತಲ ಹಳ್ಳಿಗಳ ಜನ ಎತ್ತಿನಗಾಡಿಗಳಲ್ಲಿ ಆಗಮಿಸುತ್ತಿದ್ದರು ಎಂದು ಹೇಳುತ್ತಾರೆ.

ಕನ್ನಡದ ಮೊದಲ ವಾಕ್ಚಿತ್ರವನ್ನು ಪ್ರದರ್ಶಿಸಿದ ಕರ್ನಾಟಕದ ಪ್ರಥಮ ಚಿತ್ರಮಂದಿರ ಪ್ಯಾರಾಮೌಂಟ್ 70 ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. 1974ರಲ್ಲಿ ಅದನ್ನು ನೆಲಸಮ ಮಾಡಿ ಆದೇ ಜಾಗದಲ್ಲಿ ಪರಿಮಳ ಮತ್ತು ಪ್ರದೀಪ್ (ಮಿನಿ) ಎಂಬ ಎರಡು ಚಿತ್ರ ಮಂದಿರಗಳನ್ನು ನಿರ್ಮಿಸಲಾಯಿತು.

## ಮೊದಲ ನಾಯಕ

ಕನ್ನಡ ವಾಕ್ಚಿತ್ರದ ಮೊದಲ ನಾಯಕ ನಟ. ಎಂ. ವಿ. ಸುಬ್ಬಯ್ಯನಾಯ್ಡು (ಕಾಳಪ್ಪ) ಅವರ ಜೀವನ ಹೂವಿನ ಹಾಸಿಗೆಯಾಗಿರಲಿಲ್ಲ. 1896ರಲ್ಲಿ ಮೈಸೂರು ಜಿಲ್ಲೆಯ ಮಾದಲಾಪುರ ಎಂಬ ಹಳ್ಳಿಯಲ್ಲಿ ಜನಿಸಿದ ಅವರು ಎರಡೂವರೆ ವರ್ಷ ವಯಸ್ಸಿನಲ್ಲಿ ತಂದೆ ವೆಂಕಟಸ್ವಾಮಪ್ಪ ಅವರನ್ನು ಕಳೆದುಕೊಂಡರು. ತಾಯಿ ಶ್ರೀಮತಿ ರಂಗಮ್ಮ ಜೀವನ ನಿರ್ವಹಣೆಯೇ ಕಷ್ಟವಾಗಿ ಹೆಗ್ಗಡದೇವನಕೋಟೆಗೆ ಬಂದು ಸೋದರನ ಮನೆಯಲ್ಲಿ ಉಳಿದರು.

ಓದು ಕೈಗೆಟುಕದಾಗಿತ್ತು, ಎಮ್ಮೆ, ದನಕಾಯುವ ಕೆಲಸವೆ ಬಾಲಕ ಸುಬ್ಬಯ್ಯನಾಯ್ಡು ಪಾಲಿಗೆ ಬಂತು. ಚಿಕ್ಕಂದಿನಿಂದಲೂ ಕಲೆಯ ಗೀಳು ಹಿಡಿದಿದ್ದ ಏಳು ವರ್ಷದ ಬಾಲಕ ಸುಬ್ಬಯ್ಯನಾಯ್ಡು ದಿನವೂ ದನಕಾಯುವಾಗ "ಭಕ್ತ ಪ್ರಹ್ಲಾದ" ದೊಡ್ಡಾಟ ನೋಡುತ್ತಿದ್ದರು. ಅಭ್ಯಾಸ ನೋಡಿ ನೋಡಿ ಅವರಿಗೂ ಪಾತ್ರ ಸಂಭಾಷಣೆ ಕರಗತವಾಗಿತ್ತು. ಒಮ್ಮೆ ಆ ತಂಡದಲ್ಲಿದ್ದ ಪ್ರಹ್ಲಾದ ಪಾತ್ರಧಾರಿ ಅಸ್ವಸ್ಥನಾದಾಗ, ಸುಬ್ಬಯ್ಯನಾಯ್ಡು ಆ ಪಾತ್ರ ಮಾಡಬೇಕಾಯಿತು. ಈ ವಿಷಯ ತಿಳಿದ ಸೋದರಮಾವ ರಂಗಯ್ಯ, ಸುಬ್ಬಯ್ಯನಾಯ್ಡುವನ್ನು ಮನೆಯಿಂದ ಹೊರಗಟ್ಟಿದರು. ಆ ಕಾಲದಲ್ಲಿ ನಾಟಕಗಳಲ್ಲಿ ಪಾತ್ರ ವಹಿಸುವುದು ಗೌರವಕ್ಕೆ ಧಕ್ಕೆ ಎಂಬ ಭಾವನೆ ಇತ್ತು.

ತಾಯಿ, ಮಗ ಮೈಸೂರಿಗೆ ಬಂದರು. ಮೈಸೂರಿನಲ್ಲಿ ಮೂರು ರೂಪಾಯಿ ಸಂಬಳಕ್ಕೆ ಸಂತೇಪೇಟೆಯಲ್ಲಿ ಮಂಡಿ ಕೆಲಸ ಹಿಡಿದರು. ಗರಗಸವೊಂದನ್ನು ಖರೀದಿಸಿ ಮರ ಕೊಯ್ಯುವ ಕೆಲಸವನ್ನೂ ಮಾಡಿದರು. 13ನೇ ವಯಸ್ಸಿನಲ್ಲಿ ಗರಡಿ ಸೇರಿದರು. ದಿನವೂ ಮರ ಕೊಯ್ಯುವ ಸ್ಥಳಕ್ಕೆ ತಾವಿದ್ದ ವಾಲಗದ ಬೀದಿಯಿಂದ ಹೋಗುವಾಗ ಅವರು ಸಂಗೀತ ವಿದ್ವಾಂಸ ಎಂ. ವಿ. ಮಾದಪ್ಪನವರ ಮನೆಯ ಮುಂದೆಯೇ ಹೋಗಬೇಕಿತ್ತು. ಮಾದಪ್ಪನವರನ್ನು ಭೇಟಿ ಮಾಡಿ ಶಾಸ್ತ್ರೀಯ ಸಂಗೀತ ಕಲಿತರು. ನಾಯ್ಡು ಅವರ ಶ್ರದ್ಧೆ ಕಂಡ ಮಾದಪ್ಪನವರು ಅವರನ್ನು ಗಿರಿಧರಲಾಲ್ ಅವರ ಸಂಸ್ಥೆಗೆ ಸೇರಿಸಿದರು ಆಗ ಆ ಕಂಪನಿ ಪ್ರದರ್ಶಿಸುತ್ತಿದ್ದ "ಶ್ರೀ ಕೃಷ್ಣ ತುಲಾಭಾರ" ಜನಪ್ರಿಯ ನಾಟಕವಾಗಿತ್ತು. ಎಂ. ವಿ. ಸುಬ್ಬಯ್ಯ ನಾಯ್ಡು ಅವರಿಗೆ ನಾರದನ ಪಾತ್ರ ದೊರಕಿತು. ಮೈಸೂರಿನ ಶಾಕುಂತಲ ಕಂಪನಿಯ ನಂತರ ತುಮಕೂರಿನ "ಸೀತಾಮನೋಹರ ನಾಟಕ ಮಂಡಲಿ"ಗೆ ಸೇರಿ ಹೆಣ್ಣು ಪಾತ್ರಗಳನ್ನು ವಹಿಸುತ್ತಿದ್ದರು. ಕೆಲವರ್ಷಗಳ ನಂತರ ಚನ್ನಪಟ್ಟಣದ ತ್ರಿಯಂಬಕ ಶಾಸ್ತ್ರಿಗಳ "ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ" (ಗುರಿಕಾರ್ ಕಂಪನಿ) ಪ್ರವೇಶಿಸಿದರು. ಈ ಕಂಪನಿಯಲ್ಲಿ ನಟ ಭಯಂಕರ ಗಂಗಾಧರರಾವ್, ಎಂ. ಸುಬ್ಬರಾವ್, ಮಹಮದ್ ಪೀರ್ ಮೊದಲಾದವರಿದ್ದರು. ಹಲವಾರು ವರ್ಷಗಳ ನಂತರ ಸುಬ್ಬಯ್ಯ ನಾಯ್ಡು, ಗಂಗಾಧರರಾಯರ ಸಂಸ್ಥೆ ಸೇರಿದರು. 1925ರ ವೇಳೆಗೆ ಗುಬ್ಬಿ ಕಂಪನಿ ಪ್ರವೇಶಿಸಿದರು.

"ರಾಜಭಕ್ತಿ"ಯಲ್ಲಿ ವಿಕ್ರಾಂತ, "ಕರ್ನಾಟಕ ಸಾಮ್ರಾಜ್ಯ"ದಲ್ಲಿ ತಿರುಮಲರಾಯ, "ಸ್ವಾಮಿನಿಷ್ಠೆ"ಯಲ್ಲಿ ಶಿವಾಜಿಯಾಗಿ ಗಮನ ಸೆಳೆದ ಎಂ. ವಿ. ಸುಬ್ಬಯ್ಯನಾಯ್ಡು 1932ರಲ್ಲಿ ತಮ್ಮ ಸ್ವಂತ ಸಂಸ್ಥೆ "ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ" ಸ್ಥಾಪಿಸಿದರು. "ಮಹಿಷಾಸುರ ಮರ್ಧಿನಿ" ನಾಟಕ ಆಡುತ್ತಾ ಪ್ರವಾಸದಲ್ಲಿದ್ದಾಗ ಆರ್. ನಾಗೇಂದ್ರರಾವ್ ಈ ನಾಟಕ ಮಂಡಲಿಯನ್ನು ಸೇರಿದರು. ಅವರಿಬ್ಬರ ಪಾಲುದಾರಿಕೆ 12 ವರ್ಷ ಮುಂದುವರೆಯಿತು. 1934 ರಲ್ಲಿ **ಸತಿಸುಲೋಚನ** ವಾಕ್ಚಿತ್ರದಲ್ಲಿ ಇಂದ್ರಜಿತ್ ಪಾತ್ರವಹಿಸುವ ಮೂಲಕ ಸುಬ್ಬಯ್ಯನಾಯ್ಡು ಕನ್ನಡ ಚಿತ್ರರಂಗದ ಮೊದಲ ನಾಯಕ ನಟರೆನಿಸಿದರು.

ಅವರ ನಾಟಕ ಕಂಪನಿ ಕೀಚಕವಧೆ, ಸದಾರಮೆ, ನಿರುಪಮ, ರಾಮಾಯಣ, ಲಂಕಾದಹನ, ದಕ್ಷಯಜ್ಞ, ಭಕ್ತ ಅಂಬರೀಷ, ಎಚ್ಚಮನಾಯಕ, ಆಶಾ-ಪಾಶ (ದೇವದಾಸಿ) ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಿತ್ತು.

**ಸತಿಸುಲೋಚನ** (1934), **ವಸಂತ ಸೇನ** (1941), **ಸತ್ಯಹರಿಶ್ಚಂದ್ರ** (1943), **ಮಹಾತ್ಮ ಕಬೀರ್** (1947), **ಭಕ್ತ ಪ್ರಹ್ಲಾದ** (1958) ಅವರು ಅಭಿನಯಿಸಿದ ಚಿತ್ರಗಳು. ಚಲನಚಿತ್ರಗಳಲ್ಲಿ ಅವಕಾಶಗಳು ಮಸುಕಾದಾಗ ರಂಗ ಭೂಮಿಗೇ ತಮ್ಮೆಲ್ಲ ಸಮಯವನ್ನು ಮೀಸಲಿಟ್ಟ ನಾಯ್ಡು, ರಂಗಭೂಮಿಯಲ್ಲೂ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. 1962ರ ಜುಲೈ 7ರಂದು ಅವರು ನಿಧನರಾದರು. ಅವರ ಪುತ್ರ ಲೋಕೇಶ್ ಕನ್ನಡ ಚಿತ್ರರಂಗದಲ್ಲಿ ನಾಯಕನಟರಾಗಿ, ಪೋಷಕ ನಟರಾಗಿ ಅಭಿನಯ ವೃತ್ತಿಯನ್ನು ಮುಂದುವರೆಸಿದ್ದಾರೆ.



"ಭಕ್ತ ಅಂಬರೀಷ" ನಾಟಕ ಸುಬ್ಬಯ್ಯ ನಾಯ್ಡು ಅವರಿಗೆ ಬಾರೀ ಹೆಸರು ತಂದುಕೊಟ್ಟಿತು. ಆ ನಾಟಕದ ರಾಜ ಗಾಂಭೀರ್ಯ ನೋಟ.

# ಭಕ್ತ ಧ್ರುವ

ಕರ್ನಾಟಕದಲ್ಲಿ ಮೊದಲು ಚಿತ್ರೀಕರಣ ಆರಂಭಿಸಿದ ವಾಕ್ಚಿತ್ರ **ಭಕ್ತ ಧ್ರುವ** (ಧ್ರುವಕುಮಾರ). ಈ ಚಿತ್ರದ ತಯಾರಿಕೆಯ ಹಿನ್ನೆಲೆ ಕೂಡ ಮಹತ್ವದ ದಾಖಲೆಯಾಗಿದೆ.

1933ರ ಕಾಲ. ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು ಕಾಲವಾಗಿ ಏಳು ವರ್ಷ ಕಳೆದಿತ್ತು. ವರದಾಚಾರ್ಯರ ರತ್ನಾವಳೀ ಥಿಯೇಟ್ರಿಕಲ್ ಕಂಪನಿಯ ಮಿತ್ರರು ಹಿತೈಷಿಗಳು ಒಂದೆಡೆ ಕಲೆತು ರಂಗಭೂಮಿಯ ಈ ಮಹಾನ್ ಕಲಾವಿದನ ನೆನಪು ಚಿರಕಾಲ ಉಳಿಯುವಂತೆ ಮಾಡುವ ಯಾವುದಾದರೂ ಕೆಲಸ ಮಾಡಲು ನಿರ್ಧರಿಸಿದರು. ವರದಾಚಾರ್ಯ ಮೆಮೋರಿಯಲ್ ಟ್ರಸ್ಟ್ ನಿರ್ಮಿಸಿದರು. ಈ ಮಿತ್ರರ ಯೋಚನೆಯ ಫಲವೇ ಕನ್ನಡ ಚಿತ್ರರಂಗದ ಮೊದಲ ವಾಕ್ಚಿತ್ರವಾಗಬೇಕಿದ್ದ **ಭಕ್ತ ಧ್ರುವ** ಚಿತ್ರೀಕರಣ ಆರಂಭಕ್ಕೆ ಕಾರಣವಾಯಿತು.

ಚರ್ವಿತಚರ್ವಣ ಕತೆಗಳಿಂದಾಗಿ ಆಗ ನಾಟಕಗಳು ತಮ್ಮ ಜನಪ್ರಿಯತೆಯನ್ನು ಕಳೆದುಕೊಳ್ಳತೊಡಗಿದ್ದವು. ಅದೇ ಪರಿಸ್ಥಿತಿ ಮುಂದುವರೆದರೆ ಊಟಕ್ಕೂ ತೊಂದರೆಯಾಗುವ ಪರಿಸ್ಥಿತಿ. ಹೀಗಾಗಿ ನಾಟಕ ತಂಡದ ಅಳಿವು ಉಳಿವಿನ ಪ್ರಶ್ನೆ. ಚಿತ್ರ ನಿರ್ಮಾಣಕ್ಕೆ ಈ ತಂಡ ಕೈಹಾಕಲು ಇದೂ ಒಂದು ಕಾರಣ ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಮತ್ತೂ ಕೆಲವರು ಹೇಳುವ ಪ್ರಕಾರ ಸಾರ್ವಜನಿಕವಾಗಿ ನಾಟಕದ ಜನಪ್ರಿಯತೆ ಕುಗ್ಗಿತು ಎನ್ನುವುದಕ್ಕಿಂತ ಹೆಚ್ಚಾಗಿ, ವರದಾಚಾರ್ಯರ ನಾಟಕ



ಎರಡನೆಯ ವಾಕ್ಚಿತ್ರ "ಭಕ್ತ ಧ್ರುವ"ದಲ್ಲಿ ಕನಕಲಕ್ಷ್ಮಮ್ಮ, ಮಾಸ್ಟರ್ ಮುತ್ತು.



ಕಂಪನಿ ಅವರ ನಿಧನಾನಂತರ ತೀವ್ರ ಸಂಕಷ್ಟ ಸ್ಥಿತಿಗೆ ಗುರಿಯಾಯಿತು. ಚಿತ್ರ ನಿರ್ಮಾಣಕ್ಕೆ ಕೈ ಹಾಕಲು ಇದೂ ಒಂದು ಕಾರಣವಿರಬಹುದು. ಈ ಹಿನ್ನೆಲೆಗಳು ಏನೇ ಇರಲಿ ಕನ್ನಡ ಚಿತ್ರರಂಗದಲ್ಲಿ ವಾಕ್ಚಿತ್ರಯುಗಕ್ಕೆ ನಾಂದಿ ಹಾಕಿದ ಕೀರ್ತಿ ಇವರ ಪಾಲಿನದಾಗಿದೆ.

ಮದರಾಸಿನ ಜಯವಾಣಿ ಟಾಕೀಸ್ ಲಾಂಛನದಡಿ **ಭಕ್ತ ಧ್ರುವ** (ಧ್ರುವಕುಮಾರ) ಚಿತ್ರವನ್ನು ಡಾ. ಯು. ಎಲ್. ನಾರಾಯಣರಾವ್, ಯು. ಎಲ್. ವ್ಯಾಸರಾವ್ ನಿರ್ಮಿಸಲು ಉದ್ದೇಶಿಸಿದರು. ಇವರಿಬ್ಬರೂ ಉಡುಪಿಯವರಾಗಿದ್ದು, ಮದರಾಸಿನಲ್ಲಿ ನೆಲೆಸಿದ್ದರು. ಮುಂಬೈನ ಭವನಾನಿಯವರ ಅಜಂತಾ ಸ್ಟುಡಿಯೋಸ್‌ನಲ್ಲಿ ಚಿತ್ರದ ತಯಾರಿಕೆ ಆರಂಭವಾಗಿ 7 ತಿಂಗಳ ಕಾಲ ಚಿತ್ರೀಕರಣ ನಡೆಯಿತು.

ಎ. ವಿ. ವರದಾಚಾರ್ಯ ಅವರ ಮೊಮ್ಮಗ ಮಾಸ್ಟರ್ ಮುತ್ತು ಧ್ರುವಕುಮಾರನ ಪಾತ್ರ ವಹಿಸಿದ್ದರು. ವರದಾಚಾರ್ಯರ ಸೋದರ ಸೊಸೆ ಟಿ. ಕನಕಲಕ್ಷ್ಮಮ್ಮ ಸುನೀತಿಯ ಪಾತ್ರ ವಹಿಸಿದ್ದರು. ಕನಕಲಕ್ಷ್ಮಮ್ಮನವರು ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿದ್ದರು. ನಾರದನ ಪಾತ್ರವನ್ನು ಟಿ. ದ್ವಾರಕಾನಾಥ್, ಪ್ರಸಿದ್ಧ ಗಾಯಕ, ನಟರಾಗಿದ್ದ ಜಿ. ನಾಗೇಶರಾವ್ (ಗರುಡನಗಿರಿ ನಾಗೇಶರಾವ್) ಉತ್ಥಾನಪಾದನ ಪಾತ್ರವನ್ನು, ಚಿತ್ರದ ಸಹ ನಿರ್ದೇಶಕರಾಗಿದ್ದ ಎಚ್. ಎಸ್. ಕೃಷ್ಣಸ್ವಾಮಿ ಮಹಾವಿಷ್ಣುವಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಟಿ. ಸುನಂದಮ್ಮ ದೇವುಡು ನರಸಿಂಹಶಾಸ್ತ್ರಿ, ಲಕ್ಷ್ಮಮ್ಮ ಎಂ. ಜಿ. ಮರಿರಾವ್, ಎಚ್. ಕೆ. ಶೇಷಗಿರಿರಾವ್ ಅವರ ಪುತ್ರ ನಾರಾಯಣ, ಎಸ್. ಕೆ. ಪದ್ಮಾದೇವಿ (ಸುರುಚಿಯ ಸಖಿಪಾತ್ರ) ಮೊದಲಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ವೈ ಪಾರ್ಶ್ವನಾಥ ಆಲ್ಟೇಕರ್ **ಭಕ್ತ ಧ್ರುವ**ದ ನಿರ್ದೇಶಕರಾಗಿದ್ದಾರೆ.

**ಭಕ್ತ ಧ್ರುವ**ದ ಮತ್ತೊಂದು ವೈಶಿಷ್ಟವೆಂದರೆ ಪ್ರಕಾಂಡ ಪಂಡಿತರೆನಿಸಿದ್ದ ದೇವುಡು ನರಸಿಂಹಶಾಸ್ತ್ರಿಗಳು ಈ ಚಿತ್ರಕ್ಕೆ ಚಿತ್ರ ಸಾಹಿತ್ಯ ಒದಗಿಸಿರುವುದು. ಮೂಕಿಚಿತ್ರಗಳ ಕಾಲದಿಂದ ಚಲನಚಿತ್ರದ ನಂಟು

ಎ. ವಿ. ವರದಾಚಾರ್ಯರ ನೆನಪನ್ನು ಚಿರಸ್ಥಾಯಿಯಾಗಿ ಉಳಿಸಲು ರಚನೆಯಾದ "ವರದಾಚಾರ್ಯ ಮೆಮೋರಿಯಲ್ ಟ್ರಸ್ಟ್" ಸದಸ್ಯರು. ಈ ತಂಡವೇ ವರದಾಚಾರ್ಯರ ಸ್ಮರಣಾರ್ಥ 'ಭಕ್ತ ಧ್ರುವ' ನಿರ್ಮಿಸಲು ಮುಂದಾಯಿತು.





ಬೆಳೆಸಿಕೊಂಡಿದ್ದ ದೇವುಡು ಅವರ ಸಾಹಿತ್ಯವನ್ನು ಚಲನಚಿತ್ರ ಸಮರ್ಥವಾಗಿ ಬಳಸಿಕೊಂಡಿತು. ದೇವುಡು ಅವರದು ವರ್ಣರಂಜಿತ ವ್ಯಕ್ತಿತ್ವ. ಮೂಕಿಚಿತ್ರ ತಯಾರಿಕೆಯ ಕಾಲದಲ್ಲಿ ಕರ್ನಾಟಕದ ಮೊಟ್ಟಮೊದಲ ಚಲನಚಿತ್ರ ಕಾರ್ಪೊರೇಷನ್ ಆದ ಕರ್ನಾಟಕ ಫಿಲಂ ಕಾರ್ಪೊರೇಷನ್ನಿನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿದ್ದರು. ಇವರದೇ ಕಾದಂಬರಿ "ಕಳ್ಳರ ಕೂಟ" ಆಧರಿಸಿ ಗುಬ್ಬಿ ವೀರಣ್ಣನವರು **ಹಿಸ್ ಲವ್ ಅಫೇರ್** ಮೂಕ ಚಿತ್ರ ತಯಾರಿಸಿದರು.

1896 ಡಿಸೆಂಬರ್ 29ರಂದು ಜನಿಸಿದ ದೇವುಡು ನರಸಿಂಹ ಶಾಸ್ತ್ರಿಗಳು, 1922ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಎಂ. ಎ. ಪದವಿ ಪಡೆದರು. ಡಾ. ಎಸ್. ರಾಧಾಕೃಷ್ಣನ್ ಅವರ ಶಿಷ್ಯ. 1924ರಲ್ಲಿ 'ಮಕ್ಕಳ ಪುಸ್ತಕ' ಮಾಸ ಪತ್ರಿಕೆಯ ಸಂಪಾದಕರಾದರು. ಆರ್ಯ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾಗಿ ಮೂರು ವರ್ಷ ಸೇವೆ ಸಲ್ಲಿಸಿದರು. 1944ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದರು. 1946-47ರಲ್ಲಿ ಬೆಂಗಳೂರು ಪುರಸಭೆಯ ಸದಸ್ಯರಾದರು. ರಂಗಭೂಮಿಗೆ ಸೇರಿ ಹಲವಾರು ನಾಟಕ ಬರೆದು, ಅಭಿನಯಿಸಿದರು. ಅವರ ಬರೆದ "ಮಹಾಕ್ಷತ್ರಿಯ" ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. 11 ಕಾದಂಬರಿ, ಆರು ಕಥಾ ಸಂಕಲನ ರಚಿಸಿದ್ದಾರೆ. **ಚಿರಂಜೀವಿ** (1937) ಚಿತ್ರದ ತಯಾರಿಕೆಯಲ್ಲೂ ಪಾಲ್ಗೊಂಡು, ಮೃಕಂಡು ಮಹರ್ಷಿಯ ಪಾತ್ರವನ್ನು ವಹಿಸಿದರು. 1962ರಲ್ಲಿ ದೇವುಡು ನಿಧನರಾದರು. ಮಹಾಕ್ಷತ್ರಿಯ, ಮಹಾ ಬ್ರಾಹ್ಮಣ ಮತ್ತು ಮಹಾದರ್ಶನ ಕಾದಂಬರಿಗಳು ದೇವುಡು ಅವರ ಸಾರ್ವಕಾಲಿಕ ಶ್ರೇಷ್ಠ ಕೃತಿಗಳು.

ವರದಾಚಾರ್ಯರ ಕಂಪನಿಯಲ್ಲಿ ಸ್ತ್ರೀಪಾತ್ರ ವಹಿಸುತ್ತಿದ್ದ ಎಚ್. ಕೆ. ಶೇಷಗಿರಿರಾವ್ (ಹಂಪಾಪುರ ಕೃಷ್ಣಾಚಾರ್ ಶೇಷಗಿರಿರಾವ್) **ಭಕ್ತ ಧ್ರುವ**ಕ್ಕೆ ಸಂಗೀತ ನಿರ್ದೇಶಕರಾಗಿದ್ದಾರೆ. **ಭಕ್ತ ಧ್ರುವ** ಸಂಗೀತ ನಿರ್ದೇಶನದ ದಿನಗಳನ್ನು ಶೇಷಗಿರಿರಾವ್ ಹೀಗೆ ನೆನಪಿಸಿಕೊಂಡಿದ್ದಾರೆ : "ಅಂದು ವೃಂದ ವಾದ್ಯ, ಡಬ್ಬಿಂಗ್, ಹಿನ್ನೆಲೆ ಹಾಡುಗಾರಿಕೆ, ರೆಕಾರ್ಡಿಂಗ್ ಮೊದಲಾದ ಯಾವ ತಾಂತ್ರಿಕ ಸೌಲಭ್ಯವೂ ಇರಲಿಲ್ಲ. ನಟನೆ, ಹಾಡುಗಾರಿಕೆ ಜತೆಜತೆಯಾಗಿ ನಡೆಯುತ್ತಿತ್ತು. ಛಾಯಾಗ್ರಹಣ, ರೆಕಾರ್ಡಿಂಗ್ ಒಟ್ಟೊಟ್ಟಿಗೆ ಆಗುತ್ತಿತ್ತು. ಚಿತ್ರದ ಸಂಕಲನ ಆಗುವ ತನಕ ಸಂಗೀತ ನಿರ್ದೇಶಕ, ಚಿತ್ರ ದಿಗ್ದರ್ಶಕರ ಜತೆಯಲ್ಲೇ ಇರಬೇಕಾಗಿತ್ತು. ಆರ್ಕೆಸ್ಟ್ರಾ ಇರಲಿಲ್ಲವಾದ್ದರಿಂದ ನಾನೇ ಲೆಗ್ ಹಾರ್ಮೋನಿಯಂ ನುಡಿಸಿದೆ. ನಾಟಕದ ಹಾಡುಗಳನ್ನೇ ಚಿತ್ರಕ್ಕೂ ಅಳವಡಿಸಿದೆ. ಮೈಸೂರಿನ ಕಿಟ್ಟಣ್ಣ ತಬಲ ನುಡಿಸಿದ. ಚಿತ್ರಕ್ಕೆ ಅಳವಡಿಸಲಾಗಿದ್ದ ಎಲ್ಲಾ ಹಾಡುಗಳನ್ನು ನಾಟಕಗಳಲ್ಲಿ ಹಾಡುವಂತೆಯೇ ಚಿತ್ರದ ನಟನಟಿಯರು ಹಾಡಿದರು."

"ಭಕ್ತಧ್ರುವ" ಚಿತ್ರ ಸಾಹಿತ್ಯ ರಚಿಸಿದ ದೇವುಡು ನರಸಿಂಹಶಾಸ್ತ್ರಿ

ಎರಡನೇ ವಾಕ್ಚಿತ್ರ "ಭಕ್ತ ಧ್ರುವ"ಕ್ಕೆ ಸಂಗೀತ ನಿರ್ದೇಶನ ಮಾಡಿದ ಎಚ್. ಕೆ. ಶೇಷಗಿರಿರಾವ್.



ಎಂಟು ವರ್ಷದ ಬಾಲಕನಾಗಿದ್ದಾಗಲೇ ವರದಾಚಾರ್ಯರ ನಾಟಕ ತಂಡ ಸೇರಿದ ಶೇಷಗಿರಿ, ಬಾಲಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ನಾಟಕಗಳಲ್ಲಿ ಸಂಗೀತವೇ ಪ್ರಧಾನವಾಗಿದ್ದ ಕಾಲ ಅದಾಗಿದ್ದುದರಿಂದ ಶೇಷಗಿರಿರಾವ್, ವಾಸುದೇವಾಚಾರ್ಯರಲ್ಲಿ ಕ್ರಮಬದ್ಧವಾದ ಸಂಗೀತಾಧ್ಯಯನ ಮಾಡಿದರು. ಜೊತೆಜೊತೆಗೇ ಅಬ್ದುಲ್ ಕರೀಂ ಖಾನ್ ಅವರಲ್ಲಿ ಉತ್ತರಾಧಿ ಸಂಗೀತದಲ್ಲಿ ತಾಲೀಮು, ಗುಜರಾತಿ ರಂಗಭೂಮಿಯ ಚಮನ್‌ಲಾಲ್ ಅವರಲ್ಲಿ ಹಾರ್ಮೋನಿಯಂ ವಾದನಕ್ಕೆ ಮಾರ್ಗದರ್ಶನ. ಹೀಗಾಗಿ ಶೇಷಗಿರಿರಾವ್, ವರದಾಚಾರ್ ಕಂಪನಿಯ ಪ್ರಮುಖ ವಾದ್ಯಗಾರರಾದರು. ಕನ್ನಡ ರಂಗಭೂಮಿಯ ಮೇಲೆ ಹಾರ್ಮೋನಿಯಂ ವಾದ್ಯವನ್ನು ಚಾಲ್ತಿಗೆ ತಂದ ಕೀರ್ತಿಯೂ ಶೇಷಗಿರಿರಾವ್ ಅವರದು. ಇದರಿಂದಾಗಿಯೇ ಅವರನ್ನು ಎಲ್ಲರೂ ಹಾರ್ಮೋನಿಯಂ ಶೇಷಗಿರಿರಾವ್ ಎಂದೇ ಕರೆಯಲಾರಂಭಿಸಿದರು. ನಂತರ ಶೇಷಗಿರಿರಾಯರು ಚಿರಂಜೀವಿ (1937) ಜೀವನನಾಟಕ (1942) ವಾಣಿ (1943) ಚಿತ್ರಗಳಿಗೂ ಸಂಗೀತ ನಿರ್ದೇಶನ ಮಾಡಿದ್ದಾರೆ. 1990ರಲ್ಲಿ ಅವರು ನಿಧನರಾದರು.

"ಚಿತ್ರದ ಒಂದು ದೃಶ್ಯದಲ್ಲಿ ಧ್ರುವ ತಪಸ್ಸಿಗೆ ಕುಳಿತಾಗ ಅಲ್ಲಿಗೆ ಬಂದ ಸಿಂಹ ಘರ್ಜಿಸುತ್ತದೆ. ಈ ದೃಶ್ಯವನ್ನು ವೀಕ್ಷಿಸಿದ ಪ್ರೇಕ್ಷಕರು ನೈಜ ಸಿಂಹವೇ ಬಂದಿದೆ ಎಂದು ಭಾವಿಸಿ ಭಯಗ್ರಸ್ಥರಾಗಿ ಸಿಂಹ... ಸಿಂಹ ಎಂದು ಚಿತ್ರಮಂದಿರದಿಂದ ಓಡಲಾರಂಭಿಸಿದ್ದರು" ಎಂದು ಈ ಚಿತ್ರದಲ್ಲಿ ಕಪಿಂಜಲನ ಪಾತ್ರ ವಹಿಸಿದ್ದ ಎಂ. ಜಿ. ಮರಿರಾವ್, ಕನ್ನಡ ವಾಕ್ಚಿತ್ರ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆಯಲ್ಲಿ ನೆನಪಿಸಿಕೊಂಡಿದ್ದಾರೆ.

ಎರಡನೆಯ ವಾಕ್ಚಿತ್ರ **ಭಕ್ತ ಧ್ರುವ**ದಲ್ಲಿ ಸಖಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ಎಸ್. ಕೆ. ಪದ್ಮಾದೇವಿ ಅವರು ಇಂದಿಗೂ ಕನ್ನಡ ಚಿತ್ರಜಗತ್ತಿನ ಆರಂಭದ ದಿನಗಳ ನೆನಪನ್ನು ಮಾಡಿಕೊಳ್ಳುತ್ತಾರೆ. ಅವರಿಗೀಗ 75 ವರ್ಷ ವಯಸ್ಸು. **ಭಕ್ತಧ್ರುವ** ಚಿತ್ರದಲ್ಲಿ ಅವರು ಅಭಿನಯಿಸಿದಾಗ ಅವರಿಗೆ 12 ವರ್ಷ ವಯಸ್ಸು.

ಬಾಲ್ಯದ ಅನುಭವ ಸ್ಪಷ್ಟವಾಗಿರುವುದಿಲ್ಲ. ಆದರೆ ಅಸ್ಪಷ್ಟ ನೆನಪಿನಲ್ಲಿ ಸ್ವಾರಸ್ಯವೇ ಇರುತ್ತದೆ. **ಭಕ್ತ ಧ್ರುವ** ಚಿತ್ರೀಕರಣಕ್ಕಾಗಿ ಮುಂಬೈಗೆ ಕರೆದುಕೊಂಡು ಹೋದದ್ದು ಇವರಿಗೆ ಚೆನ್ನಾಗಿಯೇ ನೆನಪಿದೆ. ಅಲ್ಲಿಗೆ ಅಣ್ಣ ಎಸ್. ಕೆ. ರಾಮಪ್ರಸಾದ್ ಜತೆ ಹೋದರು. ಅಲ್ಲಿ ಎಲ್ಲ ಕಲಾವಿದರಿಗೂ ಮನೆಯೊಂದರಲ್ಲಿ ತಂಗಲು ವಾಸ್ತವ್ಯ ಕಲ್ಪಿಸಿ, ಅಡಿಗೆಯವನೊಬ್ಬನನ್ನು ನೇಮಿಸಿದ್ದರಂತೆ. **ಭಕ್ತ ಧ್ರುವ** ಸಖಿಯ ಪಾತ್ರವಾದರೂ ಪದ್ಮಾದೇವಿಯವರು ಚಿತ್ರದಲ್ಲಿ ಹಾಡಿದ್ದಾರೆ. ಅವರ ಪಾತ್ರ ಪ್ರವೇಶವೇ ಹಾಡಿನಿಂದ. ಬೆಂಗಳೂರಿನ ಸೆಲೆಕ್ಟ್ ಚಿತ್ರಮಂದಿರದಲ್ಲಿ ವಾಕ್ಚಿತ್ರ ಬಿಡುಗಡೆಯಾದ ನಂತರ ಕುಟುಂಬ ಸಮೇತ ಹೋಗಿ ಚಿತ್ರ ನೋಡಿದ ಅಸ್ಪಷ್ಟ ನೆನಪೂ ಇದೆ. "ನಾವು ಮೊದಲ ಸಲ ಬೊಂಬಾಯಿಗೆ ಹೋದಾಗ ಅಲ್ಲಿ ಸುರುಚಿಯ ಪಾತ್ರಕ್ಕೆ ಗೊತ್ತಾಗಿದ್ದವರನ್ನು ನೋಡಿ ಆಶ್ಚರ್ಯವಾಯಿತು. ಅವರು ಸ್ಕೂಲಿನಲ್ಲಿ ನಮ್ಮ ಮೇಡಂ ಆಗಿದ್ದ ಲಕ್ಷ್ಮಮ್ಮನವರು! ನಾನು ಭಯಭಕ್ತಿಯಿಂದ 'ನಮಸ್ಕಾರ ಮೇಡಂ'" ಅಂದೆ ಅವರು "ಇಲ್ಲಿ ಹಾಗೆಲ್ಲಾ ಮೇಡಂ, ಗೀಡಂ ಅನ್ನಬಾರದು, ಹೆಸರು ಹಿಡಿದೇ ಕರಿ" ಅಂದರು. ಕನ್ನಡದಲ್ಲಿ 'ಧ್ರುವಕುಮಾರ' ಚಿತ್ರವೇ ಮೊಟ್ಟಮೊದಲ ತಯಾರಾದ ಚಿತ್ರವಾದರೂ ಏನೇನೋ ಕಾರಣಕ್ಕೆ ಮೊದಲು ಬಿಡುಗಡೆಯಾಗಲಿಲ್ಲ. ಹಾಗಾಗಿ ನಂತರ ತಯಾರಾದ **ಸತಿ ಸುಲೋಚನ** ಮೊದಲು ಬಿಡುಗಡೆಯಾದ ಚಿತ್ರ ಅನ್ನಿಸಿಕೊಂಡಿತು ಎಂದು ಪದ್ಮಾದೇವಿ ಹೇಳುತ್ತಾರೆ.

**ಭಕ್ತ ಧ್ರುವ** ಚಿತ್ರದಲ್ಲಿ ಇವರ ಹೆಸರು ಎಸ್. ಕೆ. ಪದ್ಮ ಎಂದೇ ನಮೂದಾಗಿದೆ. ಮುಂದೆ **ಸಂಸಾರನೌಕ, ಕೃಷ್ಣ ಸುಧಾಮ, ವಸಂತ ಸೇನ** ಚಿತ್ರಗಳಲ್ಲಿ ತಮ್ಮ ಹೆಸರನ್ನು ಪದ್ಮ ಅವರು ಮಧುಗಿರಿ ಮೀನಾಕ್ಷಿ ಎಂದೂ ಬದಲಿಸಿಕೊಂಡಿದ್ದರು. ಚಲನಚಿತ್ರರಂಗ, ರಂಗಭೂಮಿಗಳಲ್ಲಿ ಅವರ ಸಾಧನೆಗಾಗಿ ಅವರಿಗೆ 75 ವರ್ಷ ತುಂಬಿದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು.

**ಭಕ್ತ ಧ್ರುವ** ಬೆಂಗಳೂರಿನ ಕೆಂಪೇಗೌಡ ವೃತ್ತದಲ್ಲಿರುವ ಸೆಲೆಕ್ಟ್ ಚಿತ್ರಮಂದಿರದಲ್ಲಿ 1934ರ ಏಪ್ರಿಲ್ 5ರಂದು ತೆರೆಕಂಡಿತು. ಈ ಚಿತ್ರಮಂದಿರದ ಹೆಸರನ್ನು ಅನಂತರ ಗೀತಾ ಎಂದು ಬದಲಾಯಿಸಲಾಗಿತ್ತು. ಈ ಚಿತ್ರಮಂದಿರವನ್ನು ಕೆಡವಿ ಅಲ್ಲಿ ವಾಣಿಜ್ಯ ಸಮುಚ್ಚಯ ನಿರ್ಮಿಸಲಾಗಿದೆ.

"ಭಕ್ತಧ್ರುವ"ದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡ ಎಸ್. ಕೆ. ಪದ್ಮಾದೇವಿ.



ಗುಬ್ಬಿ ಕಂಪೆನಿಯ ಲಾಂಛನ

ಉತ್ತರ ಕರ್ನಾಟಕ ಭಾಗದಿಂದ ತಯಾರಾದ ಮೊದಲ ಕನ್ನಡ ಚಿತ್ರ "ಚಿರಂಜೀವಿ" (1937). ಈ ಚಿತ್ರದ ಪ್ರತಿ ಚಲನಚಿತ್ರ ಭಂಡಾರದಲ್ಲಿದೆ. ಬಸವರಾಜ ಮನ್ಸೂರ್, ದೇವುಡು ನರಸಿಂಹ ಶಾಸ್ತ್ರಿ, ಮಳವಳ್ಳಿ ಸುಂದರಮ್ಮ ಚಿತ್ರದಲ್ಲಿ. ಇದು ಹಾಗೂ ಅನಂತರ ಈ ಭಾಗದ ತಯಾರಿಕೆ "ಚಂದ್ರಹಾಸ" ಚಿತ್ರಗಳು ಉತ್ತರ ಕರ್ನಾಟಕದ ಭಾಷೆಯನ್ನೇ ಹೊಂದಿದ್ದವು ಎಂಬುದು ಗಮನಾರ್ಹ.






# ಆರಂಭದ ಹೆಜ್ಜೆ ಗುರುತುಗಳು

ಮೈಸೂರು ರಾಜ್ಯದಲ್ಲಿ ಕನ್ನಡ ಚಲನಚಿತ್ರಲೋಕ 1934ರಲ್ಲಿ **ಸತಿ ಸುಲೋಚನ** ಹಾಗೂ **ಭಕ್ತ ಧ್ರುವ**ಗಳ ಮೂಲಕ ತೆರೆದುಕೊಂಡಿತ್ತು. ಎರಡೂ ಚಿತ್ರಗಳೂ ಜನರಲ್ಲಿ ಆರಂಭದ ಕುತೂಹಲವನ್ನು ಕೆರಳಿಸಿ ಈ ಮಾಧ್ಯಮದ ಸವಿಯನ್ನು ಉಣಿಸಿದ್ದವು. ಮುಂದೇನು? ಕನ್ನಡ ಚಿತ್ರರಂಗದಲ್ಲಿ ಸಾಧನೆಗೆ ಹಾದಿ ತೆರೆದಿತ್ತು. ಆದರೂ ಧೈರ್ಯ ಕಡಿಮೆ. 1935ರಲ್ಲಿ ಬಿಡುಗಡೆಯಾದದ್ದು "ಸದಾರಮೆ"ಯೊಂದೇ. 1936ರಲ್ಲೂ ಕೂಡ ತಯಾರಾದದ್ದು ಒಂದೇ ಚಿತ್ರ. ಅದು *ಸಂಸಾರನೌಕೆ*. ಹೀಗಾಗಿ ಕನ್ನಡ ಚಿತ್ರರಂಗದ ಆರಂಭದ ದಿನಗಳ ಹೆಜ್ಜೆಗಳು ಮಂದಗತಿಯಲ್ಲಿದ್ದುದು ಸ್ಪಷ್ಟವಾಗಿದೆ. 1935ರಿಂದ 1945ರ ಅವಧಿಯನ್ನು ಕನ್ನಡ ಚಿತ್ರರಂಗದ ಬೆಳವಣಿಗೆಯ ಕಾಲ ಎಂದು ಪರಿಗಣಿಸಿದರೆ, ಚಿತ್ರರಂಗದ ಹೆಜ್ಜೆಗುರುತುಗಳನ್ನು ಕೂಲಂಕಷವಾಗಿ ತಿಳಿಯಬಹುದು.

ಕನ್ನಡ ಚಿತ್ರರಂಗದ ಆರಂಭದ ಈ ಹತ್ತು ವರ್ಷಗಳ ಹಾದಿ ಅಷ್ಟೇನೂ ಸುಗಮವಾಗಿರಲಿಲ್ಲ. ಆದರೆ ಕನ್ನಡ ಕಲಾ ಸೇವೆಗಾಗಿಯೇ ಮುಡುಪಾಗಿದ್ದ ರಂಗಭೂಮಿಯ ನಟರು, ನಿರ್ದೇಶಕರು, ಮಾಲೀಕರು ಚಿತ್ರರಂಗ ಭದ್ರವಾಗಿ ಬೇರೂರಲು ಅಪಾರ ಶ್ರಮಪಟ್ಟಿದ್ದಾರೆ. ನಷ್ಟ ಅನುಭವಿಸಿಯೂ ಸಾಧನೆ ಮೆರೆದಿದ್ದಾರೆ. ಇದನ್ನು ಇತಿಹಾಸ ಮರೆಯುವಂತೆಯೇ ಇಲ್ಲ.

1935ರಿಂದ 1945ರ ಅವಧಿಯಲ್ಲಿ ಒಟ್ಟು 14 ಚಿತ್ರಗಳು ಬಿಡುಗಡೆಯಾಗಿವೆ. ಹತ್ತು ವರ್ಷದ ಅವಧಿಯಲ್ಲಿ ಹದಿನಾಲ್ಕು ಚಿತ್ರ ಎಂದರೆ ಸಂಖ್ಯೆಯ ದೃಷ್ಟಿಯಿಂದ ಕಡಿಮೆ. ಆದರೆ ದಾಖಲೆಯ ದೃಷ್ಟಿಯಿಂದ ಈ ಕಾಲಾವಧಿ ಮಹತ್ವದ್ದು. ಈ ಘಟ್ಟದಲ್ಲಿ ಕನ್ನಡ ಚಿತ್ರರಂಗದಲ್ಲಿ ಮಹತ್ವದ ದಾಖಲೆಗಳು ಸೃಷ್ಟಿಯಾಗಿವೆ. ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕುವಂತೆ ಕವಿಗಳು, ಸಾಹಿತಿಗಳು, ಸಂಗೀತಗಾರರು ಚಿತ್ರರಂಗ ಪ್ರವೇಶಿಸಿದ್ದಾರೆ. ತಯಾರಾದ ಕೆಲವೇ ಚಿತ್ರಗಳೂ ದಕ್ಷಿಣ ಭಾರತದಲ್ಲೇ ದಾಖಲೆ ಸ್ಥಾಪಿಸಿ ಕನ್ನಡ ಚಿತ್ರರಂಗ ಬೆಳೆದು ಬಂದ ದಾರಿಯಲ್ಲಿ ಈಗಲೂ ಮೈಲಿಗಲ್ಲುಗಳಾಗಿವೆ.




1936ರಲ್ಲಿ ತಯಾರಾದ **ಸಂಸಾರನೌಕ** ದಕ್ಷಿಣ ಭಾರತದ ಪ್ರಥಮ ಸಾಮಾಜಿಕ ಚಿತ್ರ ಎಂಬ ಹೆಗ್ಗಳಿಕೆ ಗಳಿಸಿತು.

1937ರಲ್ಲಿ ತಯಾರಾದ **ರಾಜಸೂಯಯಾಗ** ಸಂಪೂರ್ಣವಾಗಿ ಕರ್ನಾಟಕದಲ್ಲೇ ತಯಾರಾದ ಕನ್ನಡ ಚಿತ್ರ ಎಂಬ ಹೆಸರು ಗಳಿಸಿತು.

1941ರ ತಯಾರಿಕೆ **ವಸಂತಸೇನ** ಇಡೀ ಭಾರತದಲ್ಲಿ ಇದುವರೆಗೆ ತಯಾರಾದ ಚಿತ್ರಗಳಲ್ಲಿ ತಾಂತ್ರಿಕವಾಗಿ ಅತ್ಯುತ್ತಮ ಚಿತ್ರ ಎಂಬ ಖ್ಯಾತಿ ಗಳಿಸಿತು.

ಎಂ.ವಿ. ರಾಜಮ್ಮ 1943ರಲ್ಲಿ **ರಾಧಾರಮಣ** ಚಿತ್ರ ನಿರ್ಮಿಸಿ ಕನ್ನಡದ ಪ್ರಥಮ ಮಹಿಳಾ ನಿರ್ಮಾಪಕಿ ಎನಿಸಿದರು.

1943ರಲ್ಲಿಯೇ **ಸತ್ಯ ಹರಿಶ್ಚಂದ್ರ** ಚಿತ್ರ ರಜತೋತ್ಸವ ಆಚರಿಸಿ, ರಜತೋತ್ಸವ ಆಚರಿಸಿದ ಪ್ರಥಮ ಕನ್ನಡ ಚಿತ್ರ ಎಂಬ ದಾಖಲೆ ನಿರ್ಮಿಸಿತು. ಅಲ್ಲದೆ, ತಮಿಳಿಗೆ ಡಬ್ ಆದ ಭಾರತದ ಮೊದಲ ಡಬ್ ಚಿತ್ರ ಎನಿಸಿತು.

ಎರಡು ಸ್ಟುಡಿಯೋಗಳು ಸ್ಥಾಪನೆಯಾದವು.

ಅ.ನ.ಕೃ., ಕಾಳಿಂಗರಾವ್, ಕೆಂಪರಾಜ್, ಹಿರಣ್ಣಯ್ಯ, ಟಿ. ಚೌಡಯ್ಯ, ಮಲ್ಲಿಕಾರ್ಜುನ ಮನ್ಸೂರ್, ಹೊನ್ನಪ್ಪ ಭಾಗವತರ್ ಮೊದಲಾದವರು ಚಿತ್ರರಂಗಕ್ಕೆ ಪರಿಚಿತರಾದರು.


ಈ ಕಾಲಘಟ್ಟದಲ್ಲಿ ನಡೆದ ದ್ವಿತೀಯ ಮಹಾಯುದ್ಧದ ಬಿಸಿ ಕನ್ನಡ ಚಿತ್ರರಂಗಕ್ಕೂ ತಟ್ಟಿತು. ಹೀಗಾಗಿ ಈ ಅವಧಿಯಲ್ಲಿ ಐದು ವರ್ಷಗಳ ಕಾಲ ಕನ್ನಡ ಚಿತ್ರರಂಗ ಸ್ತಬ್ಧವಾಗಿತ್ತು. 1938ರಿಂದ 1940ರವರೆಗೆ ಮೂರು

*ಮತ್ತೊಂದು ಜಾಹಿರಾತು "ಸದಾರಮೆ" ಚಿತ್ರದ ಶೀರ್ಷಿಕೆ ಕೆಳಗೆ ಕ್ಯಾನರೀಸ್ ಎಂಬುದನ್ನು ಗಮನಿಸಿ.*



*ಕೆ. ಅಶ್ವತ್ಥಮ್ಮ - ಗುಬ್ಬಿ ಕಂಪೆನಿಯಲ್ಲಿ ಗಾಯಕಿ-ನಟಿಯಾಗಿದ್ದ ಇವರು "ಸದಾರಮೆ" (1935) ಮೂಲಕ ಚಿತ್ರ ನಟಿಯಾದರು. ಗ್ರಾಮಾಫೋನ್ ಧ್ವನಿ ಮುದ್ರಿಕೆಗಳಲ್ಲಿ ಇವರ ಹಾಡುಗಳು ಅಂದಿನ ಕಾಲದಲ್ಲಿ ಭಾರೀ ಜನಪ್ರಿಯವಾಗಿದ್ದವು. "ಹಾ ಪ್ರಿಯಾ ಪ್ರಶಾಂತ ಹೃದಯಾ ಹಾನಿ ಹೊಂದಿದೆಯಾ..." ಹಾಡು ಅವರಿಗೆ ಜನಪ್ರಿಯತೆ ತಂದುಕೊಟ್ಟಿತು. ತಮ್ಮ ಮೊದಲ ಚಿತ್ರದ ಹಾಡುಗಳಿಗಾಗಿ ಅವರು 'ಕನ್ನಡದ ಕೋಗಿಲೆ' ಬಿರುದು ಪಡೆದರು. ಅವರು ಅಭಿನಯಿಸಿದ ಇತರ ಚಿತ್ರಗಳು : "ಚಿಂತಾಮಣಿ" (1937) (ತಮಿಳು) ಹಾಗೂ "ಸಂತ ಸಕ್ಕೂಬಾಯಿ" (1939).*

ವರ್ಷಗಳ ಕಾಲ ಒಂದೂ ಚಿತ್ರ ತಯಾರಾಗಿಲ್ಲ. 1944 ಮತ್ತು 1946 ಕೂಡ ಕನ್ನಡ ಚಿತ್ರರಂಗ ಸ್ತಬ್ಧವಾಗಿದ್ದ ವರ್ಷಗಳು. 1939ರಿಂದ 1945ರವರೆಗಿನ ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಆಹಾರ, ವಸ್ತ್ರ, ಪೆಟ್ರೋಲ್‌ಗಳಂತೆಯೇ ಕಚ್ಚಾಫಿಲಂ ಕೊರತೆ ಸಹ ಬಹಳಷ್ಟಿತ್ತು. ಸರ್ಕಾರ ಕಚ್ಚಾ ಫಿಲಂ ರೇಷನಿಂಗ್ ಜಾರಿಗೆ ತಂದು ಚಿತ್ರಗಳ ಉದ್ದದ ಮೇಲೆ ಮಿತಿ ಏರಿತು. ಯಾವ ಚಿತ್ರವೂ ಹನ್ನೊಂದು ಸಾವಿರ ಅಡಿಗಿಂತ ಹೆಚ್ಚಾಗಿ ಇರಕೂಡದು ಎಂದು ಆಗ ಬ್ರಿಟಿಷ್ ಸರ್ಕಾರ ಕಾನೂನು ಮಾಡಿತ್ತು ಹಾಗೂ








ಗುಬ್ಬಿ ಫಿಲಂಸ್ ಮತ್ತೆ ಮತ್ತೆ ಜನರು ಮೆಚ್ಚುವ ಚಿತ್ರಗಳ ತಯಾರಿಕೆಗೆ ತೊಡಗಿತ್ತು. 1945ರಲ್ಲಿ ಈ ಸಂಸ್ಥೆ ತಯಾರಿಸಿದ "ಹೇಮರೆಡ್ಡಿ ಮಲ್ಲಮ್ಮ" ಅಪಾರ ಜನಪ್ರಿಯ ಚಿತ್ರ.

1942ರಲ್ಲಿ "ಜೀವನನಾಟಕ" ಚಿತ್ರದ ಮೂಲಕ ಡಿ. ಕೆಂಪರಾಜ್ ಅರಸು ಚಿತ್ರರಂಗ ಪ್ರವೇಶಿಸಿದರು. ಕನ್ನಡತಿಯೇ ಆದರೂ ಹಿಂದೀ ಚಿತ್ರರಂಗದಲ್ಲಿ ಹೆಸರಾಗಿದ್ದ ನಟಿ ಶಾಂತಾ ಹುಬ್ಳೀಕರ್ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರವೂ ಗುಬ್ಬಿ ವೀರಣ್ಣನವರ ಕೊಡುಗೆ.

ಚಲನಚಿತ್ರ ನಿರ್ಮಿಸುವವರು ಆರಂಭದಲ್ಲೇ ದೆಹಲಿಯ ಸೆನ್ಸಾರ್ ಮಂಡಳಿಯಿಂದ ಲೈಸನ್ಸ್ ಪಡೆಯಬೇಕಾಗಿತ್ತು. ಹೀಗಾಗಿ ನಿರ್ದಿಷ್ಟ ಮಿತಿಯಲ್ಲಿ ಚಿತ್ರ ತೆಗೆದರೆ ಜನ ಒಪ್ಪುವುದಿಲ್ಲ ಎಂಬ ಭಯ ನಿರ್ಮಾಪಕರಿಗಿತ್ತು. ಹೀಗಾಗಿ 1938ರಿಂದ 40ರವರೆಗೆ ಹಾಗೂ 1944 ಮತ್ತು 1946ರಲ್ಲಿ ಒಂದು ಚಿತ್ರವೂ ತಯಾರಾಗಲಿಲ್ಲ. 1941-42ನೇ ಇಸವಿಯಲ್ಲಿ ತಲಾ ಎರಡು ಕನ್ನಡ ಚಿತ್ರ, 1943ರಲ್ಲಿ ನಾಲ್ಕು ಚಿತ್ರ ಹಾಗೂ 1945ರಲ್ಲಿ ಒಂದು ಚಿತ್ರ ಮಾತ್ರ ಬಿಡುಗಡೆಯಾಗಿವೆ. ಆರಂಭದ ಘಟ್ಟದಲ್ಲಿ ಕನ್ನಡ ಚಲನಚಿತ್ರ ತಯಾರಿಕೆಯ ಮಂದಗತಿಗೆ ಇದೂ ಒಂದು ಪ್ರಮುಖ ಕಾರಣ.

## ಗುಬ್ಬಿ ಕಂಪನಿ ಕೊಡುಗೆ

ಈ ಘಟ್ಟದಲ್ಲಿ ಗುಬ್ಬಿ ವೀರಣ್ಣನವರು ಸಲ್ಲಿಸಿದ ಸೇವೆ ಸ್ಮರಣೀಯ. ವಾಕ್ಚಿತ್ರ ಆರಂಭ ವರ್ಷದ ಮುಂದಿನ ಏಳು ವರ್ಷಗಳ ಕಾಲಾವಧಿಯಲ್ಲಿ ತಯಾರಾದ 14 ಚಿತ್ರಗಳ ಪೈಕಿ ಗುಬ್ಬಿ ವೀರಣ್ಣನವರು ತಯಾರಿಸಿದ ಚಿತ್ರಗಳೇ ನಾಲ್ಕು. 1934ರಲ್ಲಿ ಕನ್ನಡದ ಮೊದಲ ಎರಡು ವಾಕ್ಚಿತ್ರಗಳು ಬಿಡುಗಡೆಯಾದ ನಂತರ ಮರು ವರ್ಷವೇ ಗುಬ್ಬಿ ವೀರಣ್ಣನವರು ಶಕುಂತಲಾ ಫಿಲಂಸ್ ಲಾಂಛನದಲ್ಲಿ ತಾವು ರಂಗಭೂಮಿಯಲ್ಲಿ ಪ್ರದರ್ಶಿಸುತ್ತಿದ್ದ ಜನಪ್ರಿಯ ಜಾನಪದ ನಾಟಕ **ಸದಾರಮೆ**ಯನ್ನು ವಾಕ್ಚಿತ್ರವನ್ನಾಗಿಸಿ ತಾವೂ ಅಭಿನಯಿಸಿದರು. 1935ರಲ್ಲಿ ತಯಾರಾದದ್ದು ಇದೊಂದೇ ಚಿತ್ರ. 1941ರಲ್ಲಿ "ಸುಭದ್ರ", 1942ರಲ್ಲಿ **ಜೀವನನಾಟಕ**, 1945ರಲ್ಲಿ **ಹೇಮರೆಡ್ಡಿ ಮಲ್ಲಮ್ಮ** ಚಿತ್ರಗಳನ್ನು ಗುಬ್ಬಿ ಫಿಲಂಸ್ ತಯಾರಿಸಿತು. ನೂರು ವರ್ಷಗಳ ಇತಿಹಾಸ ಹೊಂದಿರುವ ಗುಬ್ಬಿ ಕಂಪನಿ, ಸಾಂಸ್ಕೃತಿಕ ಹಾಗೂ ಮನರಂಜನಾ ಕ್ಷೇತ್ರದಲ್ಲಿ ಕನ್ನಡ ಹಾಗೂ ಕರ್ನಾಟಕದ ವೈಭವವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಈ ಕಂಪನಿಯಿಂದ ಹೊರಹೊಮ್ಮಿದ ಕಲಾವಿದರ ಪರಂಪರೆ ಕನ್ನಡ ಚಿತ್ರರಂಗದಲ್ಲಿ ಇನ್ನೂ ಉಳಿದಿದೆ. ಗುಬ್ಬಿ ಕಂಪನಿಯ




*1941ರಲ್ಲಿ ತಯಾರಾದ ಗುಬ್ಬಿ ವೀರಣ್ಣ ಅವರ ತಯಾರಿಕೆ "ಸುಭದ್ರ" ಚಿತ್ರದ ಮೂಲಕ ಹೊನ್ನಪ್ಪ ಭಾಗವತರ್ ಕನ್ನಡದಲ್ಲೂ ಅಭಿನಯಿಸಲು ಆರಂಭಿಸಿದರು. ಅವರೊಂದಿಗೆ ಬಿ. ಜಯಮ್ಮ.*

ಇತಿಹಾಸದೊಡನೆ ಕನ್ನಡ ರಂಗಭೂಮಿಯ ಮತ್ತು ಕನ್ನಡ ಚಲನಚಿತ್ರ ಉದ್ಯಮದ ಹಲವಾರು ಸುವರ್ಣಾಧ್ಯಾಯಗಳು ಬೆಸೆದಿವೆ. ಗುಬ್ಬಿ ಕಂಪನಿಗೆ ಚಲನಚಿತ್ರರಂಗದ ಜತೆಗಿನ ನಂಟು ಮೂಕಿ ಚಿತ್ರಯುಗವಾದ 1930ರಿಂದಲೇ ಆರಂಭವಾಯಿತು. ವಾಕ್ಚಿತ್ರಗಳ ತಯಾರಿಕೆ ಆರಂಭವಾದ ಮರುವರ್ಷವೇ ಅಂದರೆ, 1935ರಲ್ಲಿ ಗುಬ್ಬಿ ವೀರಣ್ಣ ಮತ್ತೆ ರಂಗಭೂಮಿ ಮತ್ತು ಚಲನಚಿತ್ರದ ನಡುವಣ ನಂಟನ್ನು ಕುದುರಿಸಿದರು. ಕೊಯಮತ್ತೂರಿನ ಶಕುಂತಲಾ ಫಿಲಂಸ್‌ನ ಷಣ್ಮುಖಿ ಚೆಟ್ಟಿಯಾರ್‌ರವರ ಜತೆ ಒಪ್ಪಂದ ಮಾಡಿಕೊಂಡು ಕಂಪನಿಯ ಜನಪ್ರಿಯ ಜಾನಪದ ನಾಟಕ **ಸದಾರಮೆ**ಯನ್ನು ಮುಂಬೈನಲ್ಲಿ ಚಿತ್ರೀಕರಿಸಿದರು. ಕೊಯಮತ್ತೂರಿನ ಶಕುಂತಲಾ ಪಿಕ್ಚರ್ಸ್‌ನ ಷಣ್ಮುಖಿ ಚೆಟ್ಟಿಯಾರ್‌ರವರಿಗೂ, ಗುಬ್ಬಿ ವೀರಣ್ಣನವರಿಗೂ **ಸದಾರಮೆ** ಚಿತ್ರ ತೆಗೆಯಲು ಒಪ್ಪಂದವಾಯಿತು. ಈ ಘಟನೆಯನ್ನು ವೀರಣ್ಣನವರು ನೆನಪಿಸಿಕೊಂಡಿರುವುದು ಹೀಗೆ : "40 ಸಾವಿರ ರೂಪಾಯಿಗಳಿಗೆ ಒಪ್ಪಂದವಾಗಿ 10 ಸಾವಿರ ರೂ. ಅಡ್ವಾನ್ಸ್ ತೆಗೆದುಕೊಂಡು ಸದಾರಮೆ ಚಿತ್ರ ತೆಗೆಯಲು ಪ್ರಾರಂಭಿಸಿದೆವು. ದಾದರ್‌ನಲ್ಲಿ ವಾಸಕ್ಕಾಗಿ ದೊಡ್ಡ ಬಂಗಲೆಯೊಂದನ್ನು ತೆಗೆದುಕೊಂಡಿದ್ದೆನು. ಚಿತ್ರದ ವ್ಯವಹಾರ ಅಷ್ಟು ಚೆನ್ನಾಗಿ ಗೊತ್ತಿರಲಿಲ್ಲವಾದ್ದರಿಂದ ತುಂಬಾ ಕಡಿಮೆ ತಿಂಗಳಲ್ಲಿ ಚಿತ್ರವನ್ನು ಪೂರ್ತಿ ಮಾಡಿಕೊಟ್ಟೆವು. ಆಗ ರಿಕಾರ್ಡಿಂಗ್ ಇರಲಿಲ್ಲ. ನಟರುಗಳ ಜೊತೆಯಲ್ಲಿಯೇ ವಾದ್ಯದವರು ಹಿಂದೆ ಹಿಂದೆಯೇ ಹೋಗಿ ಬಾರಿಸುತ್ತಿದ್ದರು. ನಟರುಗಳಾಗಲೀ, ನಟಿಯರುಗಳಾಗಲೀ ಸ್ವಂತ ಹಾಡಿಕೊಂಡೇ ಅಭಿನಯಿಸಬೇಕಾಗುತ್ತಿತ್ತು." ಇದು ಅಂದು ಚಿತ್ರ ತೆಗೆಯುತ್ತಿದ್ದ ರೀತಿ.



ಸುಂದರ ರಾಜಕುಮಾರಿಯರು, ಚತುರ ಕಳ್ಳರುಗಳ ಕತೆಯಾದ **ಸದಾರಮೆ**ಯನ್ನು ಬರೆದ ನಾಟಕಕಾರರಾರೆಂಬುದು ತಿಳಿದಿಲ್ಲ. ಮೂಲ




ಮರಾಠಿಯಿಂದ ಬಂದುದು ಎಂದು ಹೇಳಲಾದ "ಸದಾರಮೆ" ಯನ್ನು ವೀರಪ್ಪಶಾಸ್ತ್ರಿ ಎಂಬುವವರು ಗುಬ್ಬಿ ಕಂಪನಿಗಾಗಿ ಬರೆದು ನಾಟಕಕ್ಕೆ ಅಳವಡಿಸಿದರು ಎನ್ನಲಾಗಿದೆ.

ಅಂದಿನ ರಂಗಭೂಮಿಯ ಪ್ರಮುಖ ನಟ ದೊಡ್ಡಬಳ್ಳಾಪುರದ ಮುರಾರಾಚಾರ್ **ಸದಾರಮೆ**ಯ ನಾಯಕ. ಕೆ. ಅಶ್ವತ್ಥಮ್ಮ ನಾಯಕಿ. ಇತರ ಪಾತ್ರವರ್ಗದಲ್ಲಿ ಗುಬ್ಬಿವೀರಣ್ಣ (ಕಳ್ಳ

ಗುಬ್ಬಿ ವೀರಣ್ಣ ಅವರ ಕಂಪನಿ ಗುಬ್ಬಿ ಫಿಲಂಸ್ ಲಾಂಛನದಲ್ಲಿ ತೆರೆಕಂಡ ಸದಾರಮೆ (1935) ಚಿತ್ರದ ಜಾಹಿರಾತು. ಚಿತ್ರ ಸಮಾಚಾರದಲ್ಲಿ.

"ಸದಾರಮೆ"ಯಲ್ಲಿ ಹಾಸ್ಯನಟ ನರಸಿಂಹರಾಜು



ಹಾಗೂ ಆದಿಮೂರ್ತಿ ಪಾತ್ರದಲ್ಲಿದ್ದರು), ಶಕುಂತಲ, ಬಿ. ಸುಂದರಮ್ಮ ಆಣ್ಣಾಜಮ್ಮ ಬಿ. ಜಯಮ್ಮ, ಸ್ವರ್ಣಮ್ಮ ಅವರುಗಳಿದ್ದಾರೆ. ಅಂದಿನ ತಮಿಳು ಭಾಷೆಯ ಖ್ಯಾತ ನಿರ್ದೇಶಕ ರಾಜಾಚಂದ್ರಶೇಖರ್ **ಸದಾರಮೆ**ಯನ್ನು ನಿರ್ದೇಶಿಸಿದರು. ಚಿತ್ರೀಕೃತ ನಾಟಕವಾದರೂ ಮೂರನೇ ವಾಕ್ಚಿತ್ರಕ್ಕೆ ಜನರಿಂದ ಪ್ರಶಂಸೆ ದೊರೆಯಿತು. ಚಿತ್ರ ಅಪಾರ ಯಶಸ್ಸು ಗಳಿಸಿತು. ಸಿ. ಅಶ್ವತ್ಥಮ್ಮ ಈ ಚಿತ್ರದಲ್ಲಿ ಹಾಡಿದ "ಭಂಗಿ ಆನಂದವೇನೆಂಬೆ ಲೋಕದಿ, ನಾನಿಂದು ಸೇದುವೆ ಮೋದದಿ..." ಹಾಡು ಜನ ಗುಣುಗುಣಿಸುವಂತಿತ್ತು. ಈ ಹಾಡನ್ನು ಹಾಡುವ ಮೂಲಕ ಪ್ರಥಮ ಚಿತ್ರದಲ್ಲೇ ಅಪಾರ ಹೆಸರು ಮಾಡಿದ ನಾಯಕಿ ಸಿ. ಅಶ್ವತ್ಥಮ್ಮ "ಕನ್ನಡದ ಕೋಗಿಲೆ" ಎಂಬ ಬಿರುದು ಪಡೆದರು. ಕೆ. ಅಶ್ವತ್ಥಮ್ಮ ಎಂದರೆ "ಹಾ ಪ್ರಿಯಾ ಪ್ರಶಾಂತ ಹೃದಯಾ ಹಾನಿ ಹೊಂದಿದೆಯಾ" ಎಂಬ ಹಾಡು ನೆನಪಿಗೆ ಬರುವಷ್ಟರ ಮಟ್ಟಿಗೆ ಖ್ಯಾತಿಯಾಗಿದ್ದರು. "ಮನ್ಮಥ ವಿಜಯ" ನಾಟಕದ ಹಾಡು ಇದಾದರೂ ಅಶ್ವತ್ಥಮ್ಮ ಎಲ್ಲೇ ಹೋದರೂ ಈ ಹಾಡನ್ನು ಪ್ರೇಕ್ಷಕರು ಒತ್ತಾಯ ಮಾಡಿ ಹಾಡಿಸುತ್ತಿದ್ದರು. ಅಂದಿನ ಕಾಲದ ಜನಪ್ರಿಯ ನಾಟಕ ಸದಾರಮೆಯಲ್ಲಿ ಸದಾರಮೆ ಪಾತ್ರವನ್ನು ಗಂಡು ಉಡುಪು ಧರಿಸಿ ಅವರು ಅಭಿನಯಿಸುತ್ತಿದ್ದುದು ಹೆಸರುವಾಸಿಯಾಗಿತ್ತು. ತಮಿಳು ಚಿತ್ರರಂಗದಲ್ಲೂ ಭಾರೀ ಜನಪ್ರಿಯ ನಾಯಕನಟಿಯಾಗಿದ್ದ ಅಶ್ವತ್ಥಮ್ಮ ಜನಪ್ರಿಯತೆಯ ಶಿಖರ ತಲುಪಿದ್ದಾಗಲೇ 34ನೇ ವಯಸ್ಸಿನಲ್ಲಿ (1944) ನಿಧನರಾದರು.

ಅದೇ ವರ್ಷ ಗುಬ್ಬಿ ವೀರಣ್ಣನವರು ಬೆಂಗಳೂರಿನಲ್ಲಿ "ಸಾಗರ್" ಚಿತ್ರಮಂದಿರವನ್ನು ನಿರ್ಮಿಸಿ ಪ್ರದರ್ಶನ ಕ್ಷೇತ್ರಕ್ಕೂ ಕಾಲಿರಿಸಿದರು.

ಮೂರನೇ ವಾಕ್ಚಿತ್ರ **ಸದಾರಮೆ** (1935) ಯ ಯಶಸ್ಸಿನಿಂದ ಉತ್ಸಾಹಗೊಂಡಿದ್ದ ಗುಬ್ಬಿ ವೀರಣ್ಣನವರು ಮತ್ತೆ 1956ರಲ್ಲಿ "ಸದಾರಮೆ"ಯನ್ನು ನಿರ್ಮಿಸಿದರು. ಕಲ್ಯಾಣ್‌ಕುಮಾರ್, ಸಾಹುಕಾರ್ ಜಾನಕಿ, ಗುಬ್ಬಿ ವೀರಣ್ಣ, ನರಸಿಂಹರಾಜು, ಬಾಲಕೃಷ್ಣ, ಕೌಶಿಕ್, ಜಿ.ವಿ. ಅಯ್ಯರ್ ಅಭಿನಯಿಸಿದ್ದ "ಸದಾರಮೆ" ಚಿತ್ರವನ್ನು ಕು.ರಾ. ಸೀತಾರಾಮಶಾಸ್ತ್ರಿಗಳು ನಿರ್ದೇಶಿಸಿದ್ದರು.

1935ರಲ್ಲಿ **ಸದಾರಮೆ** ನಿರ್ಮಿಸಿದ ನಂತರ ಗುಬ್ಬಿ ವೀರಣ್ಣನವರು ಐದು ವರ್ಷಗಳ ಕಾಲ ಚಿತ್ರರಂಗವನ್ನು ಮರೆತು, ರಂಗಭೂಮಿಯ ಚಟುವಟಿಕೆಯಲ್ಲಿ ನಿರತರಾದರು. 1941ರಲ್ಲಿ ಮತ್ತೆ ಚಿತ್ರರಂಗಕ್ಕೆ ಬಂದು ವೀರಣ್ಣ ಮತ್ತು ಆಚಾರ್ಯ ಲಾಂಛನದಲ್ಲಿ **ಸುಭದ್ರ** ಎಂಬ ಪೌರಾಣಿಕ ಚಿತ್ರ ನಿರ್ಮಿಸಿದರು.

*'ಸದಾರಮೆ'ಯಲ್ಲಿ ಗುಬ್ಬಿ ವೀರಣ್ಣ - ನರಸಿಂಹ ರಾಜು ಹಾಸ್ಯ ಸನ್ನಿವೇಶ.*

ಹೊನ್ನಪ್ಪ ಭಾಗವತರ್, ಬಿ. ಜಯಮ್ಮ ಗುಬ್ಬಿ ವೀರಣ್ಣ, ಬೇಲೂರು ರಾಘವೇಂದ್ರರಾವ್, ವಾಸುದೇವ ಗಿರಿಮಾಜಿ, ಎಚ್. ರಾಮಚಂದ್ರ ಶಾಸ್ತ್ರಿ ಜಯರಾವ್, ಮೂಗೂರು ನಾಗಮ್ಮ ಗಂಗೂಬಾಯಿ ಗುಳೇದಗುಡ್ಡ ಅಭಿನಯಿಸಿರುವ ಈ ಚಿತ್ರಕ್ಕೆ ಸಿ. ಪುಲ್ಲಯ್ಯ ನಿರ್ದೇಶಕರು. ಬೆಳ್ಳಾವೆ ನರಹರಿಶಾಸ್ತ್ರಿಗಳು ಸಾಹಿತ್ಯ ರಚಿಸಿದ್ದಾರೆ. ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪ ಸಂಗೀತ ನಿರ್ದೇಶನ ಮಾಡಿದ್ದಾರೆ.

ಈ ಆರಂಭದ ದಿನಗಳಲ್ಲಿ 14 ಚಿತ್ರಗಳು ತಯಾರಾಗಿದ್ದರೂ ಸಾಮಾಜಿಕ ಚಿತ್ರಗಳನ್ನು ನಿರ್ಮಿಸುವುದಕ್ಕೆ ಬಹಳಷ್ಟು ನಿರ್ಮಾಪಕರು ಮುಂದಾಗಲಿಲ್ಲ ಎಂಬುದನ್ನು ಗಮನಿಸಬೇಕು. ರಂಗಭೂಮಿಯ ಮೇಲೆ ಜಾನಪದ, ಪೌರಾಣಿಕ ವಸ್ತುಗಳು ಅತಿ ಹೆಚ್ಚು ಜನಪ್ರಿಯವಾಗುತ್ತಿದ್ದುದರಿಂದ ಅದೇ ಮಾನದಂಡವನ್ನು ನಮ್ಮ ನಿರ್ಮಾಪಕರು ವಾಕ್ಚಿತ್ರಕ್ಕೂ ಅಳವಡಿಸಿದಂತೆ ಕಾಣುತ್ತದೆ.

1935ರಲ್ಲಿ ಗುಬ್ಬಿ ವೀರಣ್ಣನವರು **ಸದಾರಮೆ** ನಿರ್ಮಿಸಿದ ಮರುವರ್ಷವೇ 1936ರಲ್ಲಿ ಎಚ್.ಎಲ್.ಎನ್. ಸಿಂಹ ಅವರು **ಸಂಸಾರನೌಕ** ಎಂಬ ಸಾಮಾಜಿಕ ವಸ್ತುವುಳ್ಳ ಚಿತ್ರ ನಿರ್ಮಿಸಿ ಯಶಸ್ಸುಗಳಿಸಿದರು. ಆದರೂ ಮುಂದಿನ ಎರಡು ವರ್ಷಗಳ ಕಾಲ ಪೌರಾಣಿಕವೇ ಚಿತ್ರ ನಿರ್ಮಾಣದ ವಸ್ತುವಾಯಿತು. 1942ರಲ್ಲಿ ಗುಬ್ಬಿ ವೀರಣ್ಣನವರು ಗುಬ್ಬಿ ಫಿಲಂಸ್ ಲಾಂಛನದಲ್ಲಿ **ಜೀವನ ನಾಟಕ** ಎಂಬ ಚಿತ್ರ ನಿರ್ಮಿಸಿ ಸಾಮಾಜಿಕದ ಜಾಡು ಹಿಡಿದರು. ವಾಕ್ಚಿತ್ರ ಸರಣಿಯ ಹತ್ತನೆಯ ಚಿತ್ರ ಇದು. **ಜೀವನ ನಾಟಕ** ಕತೆ ಬರೆಯುವ ಮೂಲಕ ಚಿತ್ರ ಸಾಹಿತಿಯಾಗಿ ಕನ್ನಡ ಕಾದಂಬರಿ ಸಾರ್ವಭೌಮ ಅ.ನ. ಕೃಷ್ಣರಾವ್ ಚಿತ್ರರಂಗ ಪ್ರವೇಶಿಸಿದರು. ಅಲ್ಲದೆ ಇದೇ ಚಿತ್ರಕ್ಕೆ ಕತೆ, ಚಿತ್ರಕಥೆ, ಸಂಭಾಷಣೆಯನ್ನು





ಬರೆಯುವ ಮೂಲಕ ಅ.ನ.ಕೃ. ಈ ಸಾಮಾಜಿಕ ಚಿತ್ರ ನಿರ್ಮಿಸಲು ಪ್ರೇರೇಪಿಸಿದರು ಎಂದು ಗುಬ್ಬಿ ವೀರಣ್ಣನವರೇ ಹೇಳಿದ್ದಾರೆ. ಅಲ್ಲದೆ ಆಗ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಡಿ. ಕೆಂಪರಾಜ ಅರಸು ನಾಯಕರಾಗಿ ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಹುಬ್ಬಳ್ಳಿಯವರಾಗಿದ್ದರೂ ಅಂದಿನ ಕಾಲದಲ್ಲಿ ಮರಾಠಿ ಹಾಗೂ ಹಿಂದಿ ಚಿತ್ರರಂಗದಲ್ಲಿ ಜನಪ್ರಿಯರಾಗಿದ್ದ ಶಾಂತಾ ಹುಬ್ಳೀಕರ್ ಈ ಚಿತ್ರದ ಎರಡನೇ ನಾಯಕಿಯಾಗಿ ಪರಿಚಯಿಸಲ್ಪಟ್ಟರು. ಬಸವರಾಜಪ್ಪ, ಮೋಹನ್‌ಕುಮಾರಿ, ಬಿ. ಜಯಮ್ಮ ಮರಿರಾವ್, ಗುಬ್ಬಿ ವೀರಣ್ಣ ಇತರ ಪಾತ್ರಗಳಲ್ಲಿದ್ದ ಈ ಚಿತ್ರವನ್ನು ಕಲ್ಕತ್ತಾದ ನ್ಯೂ ಥಿಯೇಟರ್ಸ್‌ನಲ್ಲಿ ಸಹಾಯಕರಾಗಿದ್ದ ವಹಾಬ್ ಕಾಶ್ಮೀರಿ ನಿರ್ದೇಶಿಸಿದ್ದಾರೆ. ಕೊಯಮತ್ತೂರಿನ ಸೆಂಟ್ರಲ್ ಸ್ಟುಡಿಯೋದಲ್ಲಿ ಚಿತ್ರೀಕರಣ ಒಂದು ವರ್ಷಗಳ ಕಾಲ ನಡೆಯಿತು. ಹಾರ್ಮೋನಿಯಂ ಶೇಷಗಿರಿರಾವ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಈ ಚಿತ್ರದಲ್ಲಿ ಡಾ. ರಾಜಕುಮಾರ್ ಅವರ ತಂದೆ

ದಕ್ಷಿಣ ಭಾರತದ ಮೊದಲ ಸಾಮಾಜಿಕ ಚಿತ್ರ "ಸಂಸಾರ ನೌಕ" ನಿರ್ದೇಶಿಸಿ, ಅನಂತರವೂ ಚಲನಚಿತ್ರರಂಗದಲ್ಲಿ ಹೊಸ ಚೈತನ್ಯ ತುಂಬಿದ ಎಚ್. ಎಲ್. ಎನ್. ಸಿಂಹ.

ಕನ್ನಡ ಚಿತ್ರರಂಗದ ಆರಂಭಕಾಲದಲ್ಲಿ ಸಾಮಾಜಿಕ ಚಿತ್ರ ನಿರ್ಮಿಸುವಂತೆ ಗುಬ್ಬಿ ವೀರಣ್ಣನವರಿಗೆ ಪ್ರೇರಣೆಯಾದ ಅ. ನ. ಕೃಷ್ಣರಾವ್.

ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರೂ ಪುಟ್ಟ ಪಾತ್ರವೊಂದರಲ್ಲಿ ಅಭಿನಯಿಸಿರುವುದಾಗಿ. ಗುಬ್ಬಿ ವೀರಣ್ಣನವರ ತಾರಾಪತ್ನಿ ಶ್ರೀಮತಿ ಬಿ. ಜಯಮ್ಮ ದಾಖಲಿಸಿದ್ದಾರೆ.

ಅಂದಿನ ದಿನಗಳಲ್ಲಿ ಸಾಮಾಜಿಕ ಚಿತ್ರ ತಯಾರಿಸಿದರೆ ಚಿತ್ರ ನಿರ್ಮಾಣಕ್ಕೆ ತೊಡಗಿಸಿದ ಹಣ ಹಿಂತಿರುಗಿ ಬರುವುದಿಲ್ಲ ಎಂಬ ಪ್ರತೀತಿ ಇತ್ತು. ಆದರೆ "ಜೀವನ ನಾಟಕ" ಬರೆಯುವ ಮೂಲಕ ಕಾದಂಬರಿಕಾರ ಅನಕೃ, ಗುಬ್ಬಿ ವೀರಣ್ಣನವರಂತಹ ನಿರ್ಮಾಪಕರಲ್ಲಿ ಸ್ಫೂರ್ತಿ ತುಂಬಿದರೆಂದು ಹೇಳಬಹುದು.

1945ರಲ್ಲಿ ತೆರೆಕಂಡ ಏಕೈಕ ಚಿತ್ರ **ಹೇಮರೆಡ್ಡಿ ಮಲ್ಲಮ್ಮ** ಕೂಡ ಗುಬ್ಬಿ ಫಿಲಂಸ್ ಸಂಸ್ಥೆಯ ಕಾಣಿಕೆ. ಚಿತ್ರರಂಗದಲ್ಲಿ ಈ ಚಿತ್ರವೂ ದಾಖಲೆ ಸ್ಥಾಪಿಸಿದೆ. ಯಥಾಪ್ರಕಾರ ಇದೂ ರಂಗಭೂಮಿಯ ಮೇಲೆ ಅಪಾರ ಜನಪ್ರಿಯತೆ ಪಡೆದಿದ್ದ ಭಕ್ತಿ ಪ್ರಧಾನ ಚಿತ್ರ. ಈ ಚಿತ್ರದಲ್ಲಿ ಮಲ್ಲಮ್ಮನಾಗಿ ಬಿ. ಜಯಮ್ಮ ಹೇಮರೆಡ್ಡಿಯಾಗಿ ಸಿ.ಬಿ. ಮಲ್ಲಪ್ಪ, ಈಶ್ವರನ ಪಾತ್ರದಲ್ಲಿ ಹೊನ್ನಪ್ಪ ಭಾಗವತರ್, ವೇಮನನಾಗಿ ಗಮಕಿ ಕು.ರಾ. ಸೀತಾರಾಮಶಾಸ್ತ್ರಿ, ಅತ್ತೆ ಪಾತ್ರದಲ್ಲಿ ಲಕ್ಷ್ಮಾಸಾನಿ, ನಂಜನಗೂಡು ಜಯಮ್ಮ ಅಭಿನಯಿಸಿದ್ದಾರೆ. ಕು.ರಾ. ಸೀತಾರಾಮ ಶಾಸ್ತ್ರಿಗಳು ಅಭಿನಯದ ಜತೆಗೆ ಎರಡು ಹಾಡುಗಳನ್ನೂ ಬರೆದಿದ್ದಾರೆ. ಬೆಳ್ಳಾವೆ ನರಹರಿಶಾಸ್ತ್ರಿಗಳು ಚಿತ್ರಕತೆ ಬರೆದಿದ್ದಾರೆ. ಈ ಚಿತ್ರ ಎಲ್ಲೆಡೆ ಶತದಿನೋತ್ಸವ ಆಚರಿಸಿ ಭಾರೀ ಯಶಸ್ಸು ಪಡೆಯಿತು.

ಅನಂತರ 1953ರವರೆಗೆ ಗುಬ್ಬಿ ವೀರಣ್ಣನವರು ಚಲನಚಿತ್ರರಂಗದ ಚಟುವಟಿಕೆಗಳಿಂದ ದೂರವಾಗಿದ್ದರು. 1953ರಲ್ಲಿ ***ಗುಣಸಾಗರಿ***ಯ ಮೂಲಕ ಮತ್ತೆ ಚಿತ್ರ ತಯಾರಿಕಾ ಚಟುವಟಿಕೆಯನ್ನು ಗುಬ್ಬಿ ಕಂಪನಿ ಆರಂಭಿಸಿತು. 1954ರಲ್ಲಿ ಗುಬ್ಬಿ ಕರ್ನಾಟಕ ಫಿಲ್ಮ್ಸ್ ಲಾಂಛನದಲ್ಲಿ ವೀರಣ್ಣನವರು ತಯಾರಿಸಿದ ***ಬೇಡರ ಕಣ್ಣಪ್ಪ*** ಅಪಾರ ಯಶಸ್ಸು ಗಳಿಸಿತಲ್ಲದೆ ರಾಜಕುಮಾರ್ ಅವರನ್ನೂ ನಾಯಕರನ್ನಾಗಿಸಿತು. ಕನ್ನಡ ಚಿತ್ರರಂಗಕ್ಕೆ ಗುಬ್ಬಿ ಕಂಪನಿಯ ಕೊಡುಗೆ ಅಪಾರ.

## ಡಾ. ಜಿ. ಎಚ್. ವೀರಣ್ಣ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ "ಗುಬ್ಬಿ ಬೀಗ"ಗಳೆಂದೇ ಹೆಸರಾಗಿದ್ದ ಬೀಗಗಳನ್ನು ತಯಾರು ಮಾಡುತ್ತಿದ್ದ ಹಂಪಣ್ಣ ಹಾಗೂ ರುದ್ರಾಂಬೆಯರ ಪುತ್ರ ವೀರಣ್ಣ, ಆನೆಪೇಟೆಯಲ್ಲಿ ಜನನ. ಬಾಲ್ಯದಲ್ಲಿ



*ದಕ್ಷಿಣ ಭಾರತದಲ್ಲೇ ಮೊದಲ ಸಾಮಾಜಿಕ ಚಿತ್ರ "ಸಂಸಾರ ನೌಕ" (1936). ಈ ಚಿತ್ರದ ನಾಯಕ ಬಿ. ಆರ್. ಪಂತುಲು, ಎಂ. ವಿ. ರಾಜಮ್ಮ*




*"ಸಂಸಾರ ನೌಕ"ದಲ್ಲಿ ಎಸ್. ಕೆ. ಪದ್ಮ, ಎಂ. ಎಸ್. ಮಾಧವರಾವ್ (ತಮಾಷ್) ಜಿ. ಟಿ. ಬಾಲಕೃಷ್ಣರಾವ್, ಡಿಕ್ಕಿ ಮಾಧವರಾವ್*

ಬಡತನ. ಕೂಲಿಮಠ ಸೇರಬೇಕಾದ ಅನಿವಾರ್ಯತೆ. 1884ರಲ್ಲಿ ನಾಟಕ ಸಂಸ್ಥೆಯೊಂದು ಆರಂಭ. ಹೀಗೆ ಆರಂಭವಾಗಿ ಚಂದಣ್ಣನವರ ಕೈಗೆ ಸಿಕ್ಕಿದ ಶ್ರೀ ಚೆನ್ನಬಸವೇಶ್ವರ ಸ್ವಾಮಿ ನಾಟಕ ಸಂಸ್ಥೆಗೆ ಐದನೇ ವಯಸ್ಸಿನಲ್ಲಿ ವೀರಣ್ಣ ಸೇರಿದರು.

ವೀರಪ್ಪಶಾಸ್ತ್ರಿ ವಿರಚಿತ ನಾಟಕಗಳಾದ "ಚಿತ್ರಶೇಖರ ಸೋಮಶೇಖರ" ನಾಟಕದಲ್ಲಿ ಡೋಲಿ ಎಂಬ ಬಾಲಕನ ಪಾತ್ರ ವೀರಣ್ಣನವರದಾಯಿತು. 5 ರೂ. ಸಂಬಳ ಪಡೆಯುತ್ತಿದ್ದ ವೀರಣ್ಣ ಬಾಲನಟನಾಗಿದ್ದರು. 14 ವರ್ಷದ ನಂತರ ಸಖಿ ಹಾಗೂ ಇತರ ಚಿಕ್ಕಪುಟ್ಟ ಪಾತ್ರ ನಿರ್ವಹಿಸುತ್ತಿದ್ದರು. ಇದೇ ಸಂಸ್ಥೆಯ ಪಿಟೀಲು ವಾದನಕಾರ ದಾನಪ್ಪಯ್ಯ ನನಗೆ ಗುರು ಎಂದು ಗುಬ್ಬಿ ವೀರಣ್ಣನವರೇ ಹೇಳಿಕೊಂಡಿದ್ದಾರೆ. ಚಿಕ್ಕಂದಿನಿಂದಲೂ ವೀರಣ್ಣನವರಿಗೆ ಹಾಸ್ಯ ಪಾತ್ರದಲ್ಲೇ ಆಸಕ್ತಿ. ಆದವಾನಿ ತಾಲೂಕು ಒಳಗುಂದಿಯಲ್ಲಿ "ಸದಾರಮೆ" ನಾಟಕವಾಡುವಾಗ ಹಾಸ್ಯನಟ ಸುಬ್ಬಯ್ಯ ಬರಲಿಲ್ಲ. ವೀರಣ್ಣನವರು ಕಾಡಿ-ಬೇಡಿ ಆ ಪಾತ್ರ ಗಿಟ್ಟಿಸಿದರು. ಜನ ನಿಜಕ್ಕೂ ನಕ್ಕರು. ಮಾಲೀಕರಿಗೂ ಸಂತೋಷವಾಗಿ, ಸದಾರಮೆಯ ಕಳ್ಳನ ಪಾತ್ರ ಖಾಯಂ ಆಯಿತು. ಸಂಬಳವೂ ಏರಿತು. ಮೈಸೂರು ಕ್ಯಾಂಪಿನಲ್ಲಿ ವೀರಣ್ಣ "ಸದಾರಮೆ"ಯ ಆದಿಮೂರ್ತಿ (ವೈಶ್ಯ), ಕಳ್ಳ ಮತ್ತು ಸಾಬಿ (ಜವಾನ) ಈ ಮೂರು ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಪಡೆದರು. ಜತೆಗೆ ಕಂಪನಿ ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ವಹಿಸಿಕೊಂಡರು. ಮೈಸೂರಿನ ಗಣ್ಯರು, ಟೌನ್‌ಹಾಲ್‌ನಲ್ಲಿ ವೀರಣ್ಣನವರನ್ನು ಸನ್ಮಾನಿಸಿ ಮೆಡಲು ನೀಡಿದರು. ಹಾಸ್ಯ ಪಾತ್ರಧಾರಿಯಾಗಿ ವೀರಣ್ಣ ಹೆಸರಾದರು. ಕಾಲಕ್ರಮೇಣ 27ನೇ ವಯಸ್ಸಿನಲ್ಲಿ ನಾಟಕ ಕಂಪನಿಯ ಒಡೆತನ ಪಡೆದು, ಬೆಳ್ಳಾವೆ ನರಹರಿಶಾಸ್ತ್ರಿ, ಬಿ. ಪುಟ್ಟಸ್ವಾಮಯ್ಯ ಮೊದಲಾದ ಸಾಹಿತಿಗಳನ್ನು ಸೇರಿಸಿಕೊಂಡು ನಾಟಕಗಳನ್ನು ಬದಲಿಸಲಾರಂಭಿಸಿದರು. ಮೈಸೂರಿನಲ್ಲಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ನಾಟಕ ನೋಡಿ ಮೆಚ್ಚಿಕೊಂಡು 'ವರ್ಸಟೈಲ್ ಕಮೆಡಿಯನ್' ಬಿರುದು ನೀಡಿದರು.

1924-25ರಲ್ಲಿ ಗುಬ್ಬಿ ಕಂಪನಿ ಬೆಂಗಳೂರಿಗೆ ಬಂದು ಕೃಷ್ಣಲೀಲಾ, ಕಂಸವಧೆ, ಕೃಷ್ಣಗಾರುಡಿ, ಕಬೀರ್, ಸದಾರಮೆ ಮೊದಲಾದ ನಾಟಕಗಳನ್ನು ಆಡಿತು. ಇದಕ್ಕೆ ಸರಿಯಾಗಿ ವೀರಣ್ಣನವರು ರಂಗ ಪರಿಕರಕ್ಕೆ ಶ್ರೀಮಂತಿಕೆ ತುಂಬಿ ಕಂಪನಿಯನ್ನು ಮತ್ತಷ್ಟು ಜನಪ್ರಿಯಗೊಳಿಸಿದರು. ಇದೇ ವೇಳೆಗೆ 8 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗಾಗಿ 'ಬಾಲಕಲಾ ವಿವರ್ಧಿನಿ' ಎಂಬ ಕಿರಿಯರ ಕಂಪನಿ ಆರಂಭಿಸಿದರು. ಆ ಕಾಲದಲ್ಲಿ ಭಾರೀ ವೆಚ್ಚದಲ್ಲಿ, ಅದ್ದೂರಿ ಸೆಟ್‌ಗಳನ್ನು ನಿರ್ಮಿಸಿ 12 ವರ್ಷಕಾಲ "ಕುರುಕ್ಷೇತ್ರ" ನಾಟಕ ಆಡಿದ್ದು ಕಂಪನಿಯ ವಿಶೇಷವಾಗಿತ್ತು. ಅದೂ ವೀರಣ್ಣನವರ ಕಾಣಿಕೆ. "ಸಾಹುಕಾರ" ಗುಬ್ಬಿ ಕಂಪನಿಯ ಜನಪ್ರಿಯ ಸಾಮಾಜಿಕ ನಾಟಕ. ಜಿ. ವಿ. ಅಯ್ಯರ್, ಟಿ. ಆರ್. ನರಸಿಂಹರಾಜು, ಟಿ. ಎನ್. ಬಾಲಕೃಷ್ಣ ಈ ನಾಟಕದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದರು. ಮುಂದೆ ಚಲನಚಿತ್ರರಂಗದಲ್ಲಿ ಹೆಸರಾದರು. ಹೀಗೆ ಚಲನಚಿತ್ರರಂಗಕ್ಕೆ ಬಂದ ಬಹುಪಾಲು ನಟನಟಿಯರು ಗುಬ್ಬಿ ಕಂಪನಿಯಿಂದ ಬಂದವರೇ. ಕೆಂಪರಾಜ್, ರಾಜಕುಮಾರ್, ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ಕೆ. ಹಿರಣ್ಣಯ್ಯ,



ಉತ್ತರ ಕರ್ನಾಟಕ ಭಾಗದಿಂದ ಮತ್ತೊಂದು ಕೊಡುಗೆ 'ಚಂದ್ರಹಾಸ.' ಹಂದಿಗನೂರು ಸಿದ್ಧರಾಮಪ್ಪ, ಅಮೀರ್ ಬಾಯಿ ಕರ್ನಾಟಕಿ ಅವರುಗಳ ಅಭಿನಯವಿದೆ (1947)



(ನರಸಿಂಹಮೂರ್ತಿ) ಎಚ್.ಎಲ್. ಎನ್. ಸಿಂಹ, ಬಿ. ಜಯಮ್ಮ ಸ್ವತಃ ವೀರಣ್ಣ, ಕು. ರಾ. ಸೀ., ವಾಸುದೇವರಾವ್, ರಾಜಮ್ಮ ಹೊನ್ನಪ್ಪ ಭಾಗವತರ್, ಬಿ. ವಿ. ಕಾರಂತ, ಹೀಗೆ ಪಟ್ಟಿ ಬೆಳೆಯುತ್ತದೆ. **ಬೇಡರ ಕಣ್ಣಪ್ಪ** ಗುಬ್ಬಿ ಕಂಪನಿಯ ಜನಪ್ರಿಯ ನಾಟಕವೆನಿಸಿತ್ತು. ಮುಂದೆ ಅದನ್ನು ಗುಬ್ಬಿ ಕಂಪನಿಯವರೇ ಚಲನಚಿತ್ರವಾಗಿ ತೆಗೆದು ಯಶಸ್ವಿಯಾದರು.

ಅಂದಿನ ಕಾಲದಲ್ಲೇ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಗೀತಾ, ಮೂವಿಲ್ಯಾಂಡ್ (ಶಿವಾನಂದ ಥಿಯೇಟರ್) ಮತ್ತು ಸಾಗರ್ ಟಾಕೀಸುಗಳ ಒಡೆತನ ಗುಬ್ಬಿ ವೀರಣ್ಣನವರದಾಗಿತ್ತು. ಈಗ ಗಾಂಧೀನಗರದಲ್ಲಿ ಗುಬ್ಬಿ ವೀರಣ್ಣ ಸ್ಮಾರಕ ರಂಗ ಮಂದಿರವೊಂದನ್ನು ಸರ್ಕಾರ ನಿರ್ಮಿಸಿ ವೀರಣ್ಣನವರಿಗೆ ಗೌರವ ಸಲ್ಲಿಸಿದೆ. ಗುಬ್ಬಿ ಕಂಪನಿಯ ಕಬೀರ್ ನಾಟಕ ಮೂಕ ಚಿತ್ರವಾಗಿ ಯಥಾವತ್ತಾಗಿ ಚಿತ್ರೀಕರಣಗೊಂಡು, ಮೂಕ ಚಿತ್ರಯುಗಕ್ಕೆ ಕಾಣಿಕೆಯಾಗಿತ್ತು. ಆನಂತರ ಗುಬ್ಬಿ ಕಂಪನಿಯ ಮೂಲಕ ಮೂರು ಮೂಕಚಿತ್ರಗಳು

ಚಿತ್ರರಂಗ ಚಟುವಟಿಕೆಯ ಚೇತನ ಶಕ್ತಿ ಗುಬ್ಬಿ ವೀರಣ್ಣ

ತಯಾರಾಗಿದೆ. ವಾಕ್ಚಿತ್ರ ಆರಂಭವಾದ ನಂತರವೂ ವೀರಣ್ಣನವರು ಉತ್ಸಾಹದಿಂದ ಚಿತ್ರ ತಯಾರಿಕೆಗೆ ಇಳಿದು ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಆರಂಭದ ದಶಕಗಳಲ್ಲಿ ಚಲನಚಿತ್ರರಂಗಕ್ಕೆ ಅವರ ಕೊಡುಗೆ ಅಪಾರ. ಕರ್ನಾಟಕದಲ್ಲೇ ಚಿತ್ರ ನಿರ್ಮಾಣಕ್ಕಾಗಿ ಸ್ಟುಡಿಯೋ ಸ್ಥಾಪನೆಗೆ ಮೂಕಚಿತ್ರ ತಯಾರಿಕೆ ಕಾಲದಿಂದಲೂ ಎರಡು ಬಾರಿ ಪ್ರಯತ್ನಿಸಿದ್ದು, ವಿಫಲರಾಗಿದ್ದ ಗುಬ್ಬಿ ವೀರಣ್ಣನವರು 1966ರಲ್ಲಿ ಗೆಳೆಯರೊಂದಿಗೆ ಸೇರಿ ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್ ಸಂಸ್ಥೆ ಆರಂಭಕ್ಕೆ ಶ್ರಮಿಸಿದರು.

ಗುಬ್ಬಿ ಕಂಪನಿಯವರು ನಿರ್ಮಿಸಿದ ಚಲನ ಚಿತ್ರಗಳು : "ಹರಿಮಾಯ" (1930), "ಹಿಸ್ ಲವ್ ಅಫೇರ್" (1930), ಸಾಂಗ್ ಆಫ್ ಲೈಫ್ (1931) ಈ ಮೂರೂ ಮೂಕ ಚಿತ್ರಗಳು. ವಾಕ್ಚಿತ್ರಗಳು : ಸದಾರಮೆ (1935), ಸುಭದ್ರ, (1941), ಜೀವನ ನಾಟಕ (1942), ಹೇಮರೆಡ್ಡಿ ಮಲ್ಲಮ್ಮ (1945), ಗುಣಸಾಗರಿ (1953), ಬೇಡರ ಕಣ್ಣಪ್ಪ (1954), ಸದಾರಮೆ (1956).

ಮೈಸೂರು ಮಹಾರಾಜರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ 1942ರಲ್ಲಿ ವೀರಣ್ಣನವರಿಗೆ "ನಟ ರತ್ನಾಕರ" ಬಿರುದು ನೀಡಿದರು. ಕೇಂದ್ರ ಸರ್ಕಾರ ಇವರಿಗೆ "ಪದ್ಮಶ್ರೀ" ಪ್ರಶಸ್ತಿ




"ವಸಂತಸೇನ" ದ ಶಕಾರ ನಾಗೇಂದ್ರರಾವ್.

ನೀಡಿತು. 1970ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿತು. 1972ರ ಅಕ್ಟೋಬರ್ 18 ರಂದು ಈ ಮಹಾನ್ ಕಲಾವಿದನ ಕಣ್ಮರೆ.

## ಬಿ. ಜಯಮ್ಮ

ಮೂಕಿ ಚಿತ್ರಗಳ ಕಾಲದಿಂದ ಬೆಳ್ಳಿ ಪರದೆಯ ಮೇಲೆ ಮಿಂಚಿ , 40 ರ ದಶಕದಲ್ಲಿ ಕನ್ನಡ, ತಮಿಳು ಭಾಷಾ ಚಿತ್ರರಂಗಗಳಲ್ಲಿ ಮಿನುಗಿದ ತಾರೆ ಬಿ. ಜಯಮ್ಮ **ಹರಿಮಾಯ** ಹಾಗೂ **ಹಿಸ್ ಲವ್ ಅಫೇರ್** (1930) ಮೂಕಚಿತ್ರಗಳ ಮೂಲಕ ಅಭಿನಯ ಆರಂಭಿಸಿದರು. ವಾಕ್ಚಿತ್ರದಲ್ಲಿ ಅಭಿನಯ ಮುಂದುವರೆಸಿದ್ದ, ಬಿ. ಜಯಮ್ಮ 1988ರ ಡಿಸೆಂಬರ್ 20 ರಂದು ನಿಧನರಾದಾಗ ಅವರಿಗೆ 73 ವರ್ಷ ವಯಸ್ಸು. ಟಿ. ಎಸ್. ಮಲ್ಲಪ್ಪ ಹಾಗೂ ರಂಗನಟಿ ಬಿ. ಕಮಲಮ್ಮ ಅವರ ಪುತ್ರಿಯಾದ ಬಿ. ಜಯಮ್ಮ ಎಳೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ತಾಯಿಯ ನೆರಳಲ್ಲೇ ಬೆಳೆದ ಜಯಮ್ಮ ಬಾಲ್ಯದಿಂದಲೇ ಅಭಿನಯದ ಗೀಳು ಹಚ್ಚಿಕೊಂಡರು. ರಸಿಕ ಜನಾನಂದ ನಾಟಕ ಸಭಾದಲ್ಲಿ ನಾಟಕ ಕಲಿಸುವ ಮೇಷ್ಟ್ರರಾದ ಶಾಮಣ್ಣ ಜಯಮ್ಮನಿಗೆ "ಸೀತಾಕಲ್ಯಾಣ" ನಾಟಕದಲ್ಲಿ ಸೀತೆ ಪಾತ್ರ ನೀಡಿ ರಂಗ ಪ್ರವೇಶ ಮಾಡಿಸಿದರು.





ಪಿ. ಕಾಳಿಂಗ ರಾವ್ ವಸಂತಸೇನ ಮೂಲಕ ತೆರೆಗೆ ಬಂದ ಜನಪ್ರಿಯ ಕಂಠ

ವಸಂತಸೇನದಲ್ಲಿ ಎಂ. ವಿ. ಸುಬ್ಬಯ್ಯನಾಯ್ಡು

ಜಯಮ್ಮನವರ ದೊಡ್ಡಮ್ಮ ಬಿ. ಸುಂದರಮ್ಮ ಆ ವೇಳೆಗೆ ಗುಬ್ಬಿ ಚೆನ್ನಬಸವೇಶ್ವರ ನಾಟಕ ಕಂಪನಿಯ ಪ್ರಮುಖ ನಟಿಯಾಗಿದ್ದರು. ದೊಡ್ಡಮ್ಮನ ಜತೆ ಓಡಾಡುತ್ತಿದ್ದುದರಿಂದ "ಕಬೀರ್", "ರಾಮಾಯಣ" ನಾಟಕಗಳಲ್ಲೂ ಪಾತ್ರಗಳು ದೊರೆತವು. ನಂತರದ ದಿನದಲ್ಲಿ ಅಗಳಿ ತಿಮ್ಮಪ್ಪಯ್ಯ ಕಂಪನಿ, ಬಾಳ ಬಸವೇಗೌಡರ ನಾಟಕ ಕಂಪನಿಗಳಲ್ಲಿ ಜಯಮ್ಮ ದುಡಿದರು. "ಗುಲೇಬಕಾವಲಿ"ಯ ಚಿತ್ರ ತಾರೆ, "ಸದಾರಮೆ"ಯಲ್ಲಿ ಚಂಚುಕುಮಾರಿ ಪಾತ್ರ ಜಯಮ್ಮನವರ ಹೆಸರನ್ನು ಎಲ್ಲೆಡೆ ಹರಡಿತು. 1928ರಲ್ಲಿ ಗುಬ್ಬಿ ಕಂಪನಿ ಸೇರಿದ ಜಯಮ್ಮ ಜೀವನದ ಮಹತ್ತರ ಘಟ್ಟವೊಂದನ್ನು ಪ್ರವೇಶಿಸಿದರು.

"ಕುರುಕ್ಷೇತ್ರ" ನಾಟಕದಲ್ಲಿ ದ್ರೌಪದಿಯ ಪಾತ್ರ. "ದಶಾವತಾರ"ದಲ್ಲಿ ಕಯಾದು ಪಾತ್ರ ಜಯಮ್ಮನವರ ಸೌಂದರ್ಯ, ಹಾಡುಗಾರಿಕೆ ಹಾಗೂ ಅಭಿನಯ ಸಾಮರ್ಥ್ಯವನ್ನು ಸಾಬೀತು ಪಡಿಸಿತು. ನಂತರ ಮೂಕಚಿತ್ರಗಳಲ್ಲಿ ಅಭಿನಯ. ವಾಕ್ಚಿತ್ರ ಯುಗ ಆರಂಭವಾದ ನಂತರ ಸದಾರಮೆ, ಸುಭದ್ರ, ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ ಗುಣಸಾಗರಿ, ರಾಜಾ ವಿಕ್ರಮ, ಪ್ರೇಮಮಯಿ, ಮಾವನ ಮಗಳು, ಸಾಕ್ಷಾತ್ಕಾರ, ಅಣ್ಣತಂಗಿ, ಮುಕ್ತಿ ಚಿತ್ರಗಳಲ್ಲಿ ಅಭಿನಯಿಸಿದರು. ತಮಿಳು-ತೆಲುಗು ಚಿತ್ರಗಳಲ್ಲೂ ಅಭಿನಯಿಸಿ ತ್ರಿಭಾಷಾ ತಾರೆ ಎನಿಸಿದರು. ಗುಬ್ಬಿ ವೀರಣ್ಣನವರ ಜತೆ ಗಾಂಧರ್ವ ವಿವಾಹ. ಸರ್ಕಾರ ಈ ಕಲಾವಿದೆಯ ಸೇವೆಯನ್ನು ಗುರುತಿಸಿ, ವಿಧಾನ ಪರಿಷತ್ ಸದಸ್ಯೆಯನ್ನಾಗಿ ನೇಮಿಸಿ ಗೌರವಿಸಿತು. "ಅಶಕ್ತ ಕಲಾವಿದರ ಕಲ್ಯಾಣ ಸಮಿತಿ"ಯ ಅಧ್ಯಕ್ಷರಾಗಿ ಬಿ. ಜಯಮ್ಮ ಜೀವನದ ಕೊನೆಯ ಘಟ್ಟದಲ್ಲಿ ದುಡಿದರು.

**ಮೊದಲ ಸಾಮಾಜಿಕ ಚಿತ್ರ** : 1936ರಲ್ಲಿ ತೆರೆಕಂಡ ದೇವಿ ಫಿಲಂಸ್‌ರವರ ಸಂಸಾರನೌಕ, ಕನ್ನಡ ವಾಕ್ಚಿತ್ರರಂಗದಲ್ಲಿ ಒಂದು ಮೈಲಿಗಲ್ಲು. ಇದು ಕನ್ನಡದ ಮೊದಲ ಸಾಮಾಜಿಕ ಚಿತ್ರ. ವಾಕ್ಚಿತ್ರ ಉದಯವಾದ ಮೂರನೇ ವರ್ಷದಲ್ಲೇ ಸಾಮಾಜಿಕ ಚಿತ್ರ ತೆಗೆಯುವ ಸಾಹಸ ಮಾಡಿದವರು ಎಚ್.ಎಲ್.ಎನ್. ಸಿಂಹ (ಲಕ್ಷ್ಮೀನರಸಿಂಹ). ಚಲನಚಿತ್ರಕ್ಕೆ ಪೌರಾಣಿಕ, ಜಾನಪದ ವಸ್ತುವೇ ಅನಿವಾರ್ಯ ಎಂಬ ಭಾವನೆಯಿದ್ದ ಸಮಯದಲ್ಲಿ ಸಾಮಾಜಿಕ ವಸ್ತು ಕೂಡ ಜನ ಮೆಚ್ಚುವಂತಹ ರೀತಿಯ ವಾಕ್ಚಿತ್ರವಾಗಬಹುದು ಎಂಬುದನ್ನು ಎಚ್.ಎಲ್.ಎನ್. ಸಿಂಹ ನಿರೂಪಿಸಿದರು. 1936ರಲ್ಲಿ ಸಿಂಹ ಅವರ ಸಾಹಿತ್ಯ ರಚನೆಯಲ್ಲಿ ಮೂಡಿಬಂದ ಸಂಸಾರನೌಕದ ತಳಪಾಯವೇ ಇಂದಿನ ಸಾಮಾಜಿಕ ಚಿತ್ರಗಳ ಪ್ರವಾಹದ ಚೌಕಟ್ಟು. ದಕ್ಷಿಣ ಭಾರತದಲ್ಲಿ ಜಾನಪದ, ಪೌರಾಣಿಕ, ಐತಿಹಾಸಿಕಗಳೇ ಚಲನಚಿತ್ರದ ವಸ್ತುವಾಗಿದ್ದ ಸಮಯದಲ್ಲಿ ಕನ್ನಡದ ನಾಲ್ಕನೆಯ ವಾಕ್ಚಿತ್ರವೇ ಸಾಮಾಜಿಕವಾಗಿ, ಭಾರೀ ಯಶಸ್ಸು ಪಡೆದದ್ದು ಇಡೀ ದಕ್ಷಿಣ ಭಾರತದಲ್ಲಿ ಸಾಮಾಜಿಕ ಚಿತ್ರ ತಯಾರಿಕೆಗೆ ಧೈರ್ಯ ನೀಡಿತು. ಎಚ್.ಎಲ್.ಎನ್.






ಮೊದಲ ಸಾಮಾಜಿಕ 'ಸಂಸಾರ ನೌಕ' ಚಿತ್ರದಲ್ಲಿ ಒಂದು ಸನ್ನಿವೇಶ.



ಸಿಂಹ ಅವರದೇ ನಾಟಕವನ್ನಾಧರಿಸಿದ ಈ ಚಿತ್ರ ಕನ್ನಡ ಚಿತ್ರರಂಗಕ್ಕೆ ಬಿ.ಆರ್. ಪಂತುಲು, ಎಂ.ವಿ. ರಾಜಮ್ಮ ಡಿಕ್ಕಿ ಮಾಧವರಾವ್, ಎಂ.ಎಸ್. ಮಾಧವರಾವ್. ಎಸ್.ಕೆ. ಪದ್ಮಾ ಇವರುಗಳನ್ನು ಪರಿಚಯಿಸಿತು. ಇದು ದಕ್ಷಿಣ ಭಾರತದಲ್ಲಿ ತಯಾರಾದ ಎರಡನೆಯ ಸಾಮಾಜಿಕ ಚಿತ್ರ. ಮೊದಲನೆಯದು ತಮಿಳು ಭಾಷೆಯ **ಮೇನಕಾ** (1935).

"ಸಂಸಾರನೌಕ" ನಾಟಕವನ್ನು ಎಚ್.ಎಲ್.ಎನ್. ಸಿಂಹ ಅವರು ರಚಿಸಿದ್ದು ಕೂಡ ಒತ್ತಡದ ಪರಿಸ್ಥಿತಿಯಲ್ಲಿ. ಸಿಂಹ ಅವರು ಮಹಮದ್ ಪೀರ್ ಸಾಹೇಬರ ಚಂದ್ರಕಲಾ ನಾಟಕ ಮಂಡಲಿಯಲ್ಲಿದ್ದಾಗ ಈ ನಾಟಕ ರಚನೆಯ ಅನಿವಾರ್ಯ ಸ್ಥಿತಿ ಬಂದೊದಗಿತು. ಅಪ್ಪ ಹಾಕಿದ ಆಲದ ಮರದಂತಿದ್ದ ನಾಟಕಗಳಿಗೆ ಕೊನೆ ಹಾಡಿ ಸಮಾಜದ ಅನ್ಯಾಯ, ಅತ್ಯಾಚಾರಗಳನ್ನು ಬಯಲಿಗೆಳೆಯುವ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುವ ಬಯಕೆ ಮಹಮದ್ ಪೀರ್ ಅವರಿಗೆ ಬಂದಿತು. ಆ ವೇಳೆಯಲ್ಲಿ ಕಂಪನಿ ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸುತ್ತಿದ್ದುದೂ ಪೀರ್ ಅವರ ಆಲೋಚನೆಗೆ ಕಾರಣವಾಗಿತ್ತು. ಪೀರ್ ತಮ್ಮ ಯೋಚನೆಯನ್ನು ಎಚ್.ಎಲ್.ಎನ್. ಸಿಂಹ ಅವರಿಗೆ ತಿಳಿಸಿದರು. ಸಿಂಹ "ಸಂಸಾರನೌಕ" ರಚಿಸಲು ಇದೇ ಹಿನ್ನೆಲೆ. ನಾಟಕ 1931ರಲ್ಲೇ ರಚನೆಯಾಯಿತು. ಒಂದು ವರ್ಷ ನಾಟಕದ ರಿಹರ್ಸಲ್ ನಡೆಯಿತು. 1933ರಲ್ಲಿ ಮೊದಲ ಬಾರಿಗೆ ಹೊಳೆನರಸೀಪುರದಲ್ಲಿ "ಸಂಸಾರನೌಕ" ಪ್ರದರ್ಶನ ನಡೆಯಿತು. ಜನ ಮೆಚ್ಚಿದರು. ನಾಟಕ ಅಭೂತಪೂರ್ವ ಯಶಸ್ಸುಗಳಿಸಿತು. ಉತ್ತರ ಕರ್ನಾಟಕದ ಕಡೆ ಈ ನಾಟಕ ಮೂರು ತಿಂಗಳ ಕಾಲ ಸತತವಾಗಿ ನಡೆಯಿತು. "ಸಂಸಾರನೌಕ" ರಂಗಭೂಮಿಯ ಕುಸಿತವನ್ನು ತಡೆಗಟ್ಟಿತು.

ಎಲ್ಲೆಡೆ ಜನಪ್ರಿಯವಾಗಿದ್ದ "ಸಂಸಾರನೌಕ" 1935ರಲ್ಲಿ ಮದರಾಸಿನ "ಸೌಂದರ್ಯ ಮಹಲ್" ಭವನದಲ್ಲಿ ನಡೆಯುತ್ತಿದ್ದಾಗ ಆಕಸ್ಮಿಕವಾಗಿ ನಡೆದ ಘಟನೆಯಿಂದಾಗಿ ಅದು ಚಲನಚಿತ್ರವಾಗಲು ಪ್ರೇರೇಪಣೆ

*ಮೂಕಿ ಯುಗದಲ್ಲಿ ತಯಾರಾಗಿದ್ದ "ವಾಸಂತ ಸೇನ" ಮತ್ತೆ 1941 ರಲ್ಲಿ ವಾಕ್ಚಿತ್ರವಾಗಿ ತೆರೆಗೆ ಬಂತು. ಮೊದಲ ವಾಕ್ಚಿತ್ರದಲ್ಲಿ ಅಭಿನಯಿಸಿದ್ದ ಎಂ. ವಿ. ಸುಬ್ಬಯ್ಯನಾಯ್ಡು ಆರ್. ನಾಗೇಂದ್ರರಾವ್, ಲಕ್ಷ್ಮೀಬಾಯಿ, ಪಿ. ಕಾಳಿಂಗರಾವ್, ಪದ್ಮಾದೇವಿ ಅವರುಗಳೂ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಆರ್. ನಾಗೇಂದ್ರರಾವ್ ಅವರ ಶಕಾರನ ಪಾತ್ರ ಎಲ್ಲರ ಗಮನ ಸೆಳೆಯಿತು.*

ಸಿಕ್ಕಿತು. ಸಮಕಾಲೀನ ಸಾಮಾಜಿಕ ಸಮಸ್ಯೆಗಳಿಂದ ಕೂಡಿದ ಈ ನಾಟಕವನ್ನು ನೋಡಿದ ನಾರದರ್ ಶ್ರೀನಿವಾಸರಾವ್ ಎಂಬುವವರು ಈ ನಾಟಕವನ್ನು ಕಡ್ಡಾಯವಾಗಿ ನೋಡುವಂತೆ ನಂಜಪ್ಪ ಚೆಟ್ಟಿ ಮತ್ತು ರಾಜಗೋಪಾಲ್ ಚೆಟ್ಟಿ ಸಹೋದರರಿಗೆ ಸೂಚಿಸಿದರು. ನಾಟಕ ನೋಡಿ ಮೆಚ್ಚಿದ ಇ. ರಾಜಗೋಪಾಲ ಚೆಟ್ಟಿ ಈ ನಾಟಕವನ್ನೇ ಸಿನಿಮಾ ಮಾಡಬಾರದೇಕೆ? ಎಂದುಕೊಂಡರು. ಕನ್ನಡದ ಮೊದಲ ಸಾಮಾಜಿಕ ಚಿತ್ರ ತಯಾರಾದದ್ದು ಹೀಗೆ.

"ಸಂಸಾರ ನೌಕ" ನಾಟಕದಲ್ಲಿ ನಟಿಸುತ್ತಿದ್ದ ಎಲ್ಲ ಕಲಾವಿದರೂ ವಾಕ್ಚಿತ್ರದಲ್ಲಿ ಅಭಿನಯಿಸಿದರು. ನಾಟಕದಲ್ಲಿ ನಾಯಕನಟ ಸುಂದರನ ಪಾತ್ರವನ್ನು ಕನ್ನಡ ರಂಗಭೂಮಿಯಲ್ಲಿ ಹೆಸರು ಮಾಡಿದ್ದ ಮಹಮದ್ ಪೀರ್ ಅಭಿನಯಿಸಿದ್ದರು. ಅದು ಚಲನಚಿತ್ರವಾದಾಗ ಸಿನಿಮಾದಲ್ಲಿ ಅಭಿನಯಿಸಲು ಮಹಮದ್ ಪೀರ್ ಒಪ್ಪಲಿಲ್ಲವಂತೆ. ಹೀಗಾಗಿ ಈ ಪಾತ್ರ ಆಂಧ್ರಗಡಿ ಪ್ರದೇಶದ ಬಂಗಾರಪೇಟೆ ಬಳಿಯ ಕುಪ್ಪಂನಲ್ಲಿನ ಬಂಡಿ ರಾಮಕೃಷ್ಣ ಪಂತುಲು (ಬಿ.ಆರ್. ಪಂತುಲು) ಅವರಿಗೆ ದೊರಕಿತು. ಮುಂದೆ ಚಲನಚಿತ್ರರಂಗದಲ್ಲಿ ದೊಡ್ಡ ಸಾಧನೆ ಮಾಡಿದ ಬಿ.ಆರ್. ಪಂತುಲು ಚಲನಚಿತ್ರರಂಗ ಪ್ರವೇಶಿಸಿದ್ದು ಹೀಗೆ.

ದೇವಿ ಫಿಲಂಸ್ ಲಾಂಛನದಲ್ಲಿ ತಯಾರಾದ ***ಸಂಸಾರನೌಕ***ಕ್ಕಾಗಿ ಮದರಾಸಿನ ತೇನಂಪೇಟೆಯ ಎಲ್ಡಾಮ್ಸ್ ರಸ್ತೆಯಲ್ಲಿರುವ ಪೀತಾಪುರಂ ಮಹಾರಾಜರಿಗೆ ಸೇರಿದ ಜಾಗದಲ್ಲಿದ್ದ ವೇಲ್ ಸ್ಟುಡಿಯೋದಲ್ಲಿ ಸತತ ನಾಲ್ಕು ತಿಂಗಳ ಕಾಲ ಚಿತ್ರೀಕರಣ ನಡೆಸಲಾಯಿತು. ಬಿ.ಆರ್. ಪಂತುಲು, ಎಂ.ಎಸ್. ಮಾಧವರಾವ್,



ಎಂ. ಮಾಧವರಾವ್, ಎಚ್.ಆರ್. ಹನುಮಂತರಾವ್, ಜಿ.ಟಿ. ಬಾಲಕೃಷ್ಣರಾವ್, ವೆಂಕಟರಾಮನ್, ಎಸ್. ರಾಮಚಂದ್ರ ನಾಯ್ಡು, ಎಚ್.ಕೆ. ಕೃಷ್ಣಶಾಸ್ತ್ರಿ, ಎಚ್. ಕೃಷ್ಣಮೂರ್ತಿ, ಎಚ್.ಎನ್. ರಾಮಕೃಷ್ಣಭಟ್, ಎಚ್. ರಾಘವೇಂದ್ರರಾವ್, ಕೆ.ಎನ್. ಮುದ್ಗಲ್, ಮಾಸ್ಟರ್ ಗೋವಿಂದನ್, ಎಂ.ವಿ. ರಾಜಮ್ಮ, ಎಸ್.ಕೆ. ಪದ್ಮಾದೇವಿ (ಮಧುಗಿರಿ ಮೀನಾಕ್ಷಿ), ವಿ. ಸರೋಜಮ್ಮ ಪಾತ್ರವರ್ಗದಲ್ಲಿದ್ದಾರೆ. ಚಿತ್ರದಲ್ಲಿ ಒಟ್ಟು 17 ಹಾಡುಗಳಿದ್ದವು. ಅಂದಿನ ದಿನಗಳಲ್ಲಿ ಪ್ಲೇಬ್ಯಾಕ್ ಪದ್ಧತಿ ಇರಲಿಲ್ಲವಾದ್ದರಿಂದ ಪ್ರತಿನಿತ್ಯ ಹಾಡುತ್ತಾ, ಸಂಭಾಷಣೆ ಹೇಳುತ್ತಾ ಅಭ್ಯಾಸ ನಡೆದು ನಂತರ ಚಿತ್ರೀಕರಣಕ್ಕೆ ಹೋಗುತ್ತಿದ್ದರು. ಆಗ ಮದರಾಸಿನಲ್ಲಿ ಪ್ರಖ್ಯಾತರಾಗಿದ್ದ ಶರ್ಮಾ ಬ್ರದರ್ಸ್ ವಾದ್ಯಗೋಷ್ಠಿ ಚಿತ್ರಕ್ಕೆ ಸಂಗೀತ ನೀಡಿದೆ. ಎಂ. ದಂಡಪಾಣಿ ದೇಶಿಕರ್ ಅವರು ಈ ಚಿತ್ರದಲ್ಲಿ ಕಲ್ಯಾಣಿ ರಾಗದಲ್ಲಿ ಹಾಡಿರುವ ಹಾಡು ಪ್ರಖ್ಯಾತಿಯಾಗಿತ್ತು.

"ವಸಂತಸೇನ" ಚಿತ್ರದಲ್ಲಿ ನಾಯಕಿ ಲಕ್ಷ್ಮೀಬಾಯಿ ಅವರೊಂದಿಗೆ ಎಸ್. ಕೆ. ಪದ್ಮಾದೇವಿ.

ಸುಮಾರು ಹದಿನಾರು ಸಾವಿರ ಅಡಿ ಉದ್ದದ ಚಿತ್ರ ನಿರ್ಮಾಣಕ್ಕೆ ಒಟ್ಟು 36 ಸಾವಿರ ರೂ. ವೆಚ್ಚವಾಗಿದೆ ಎಂದು ನಿರ್ಮಾಪಕ ರಾಜಗೋಪಾಲ ಚೆಟ್ಟಿ ಹೇಳಿದ್ದಾರೆ.

ಕತೆ, ಚಿತ್ರಕಥೆ : ಎಚ್.ಎಲ್.ಎನ್. ಸಿಂಹ ಮತ್ತು ಕೆ. ನಂಜಪ್ಪ ಚೆಟ್ಟಿಯಾರ್, ಛಾಯಾಗ್ರಹಣ ಡಿ.ಟಿ. ತೇಲಾಂಗ್ ಮತ್ತು ಡಿ.ಬಿ. ಚವಾಣ್, ಶಬ್ದ ಗ್ರಹಣ ಸಿ. ಬಿಗ್ಸ್, ರೆಕಾರ್ಡಿಸ್ಟರು ಐ. ಜೀವರತ್ನಂ ಹಾಗು ಹರ್ಬರ್ಟ್ ಕ್ಲಾರ್ಕ್, ಸಂಸ್ಕರಣ ಎಂ.ಬಿ. ಕುಂತಲ್, ಬಿ. ರುದ್ರಪ್ಪ ಸಂಕಲನ : ಆರ್.ಡಿ. ತಿಟ್ಟೆ ಹಾಗೂ ವಿ.ಬಿ. ನಟರಾಜನ್.

ಅಪಾರ ಯಶಸ್ಸುಗಳಿಸಿ ದಕ್ಷಿಣ ಭಾರತ ಚಿತ್ರೋದ್ಯಮದಲ್ಲಿ ಮೈಲಿಗಲ್ಲಾಗಿ ಉಳಿದ **ಸಂಸಾರನೌಕ**ದ ಕರ್ತೃ ಎಚ್.ಎಲ್.ಎನ್. ಸಿಂಹ 1904ರಲ್ಲಿ ಮಳವಳ್ಳಿಯಲ್ಲಿ ಜನಿಸಿದರು. ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತರಾಗಿದ್ದ ಅವರಿಗೆ ಚಿಕ್ಕಂದಿನಿಂದಲೂ ನಾಟಕಗಳಲ್ಲಿ ಆಸಕ್ತಿ. **ಸಂಸಾರನೌಕ**ದ ನಂತರ ಸಿಂಹ, ಬೇಡರ ಕಣ್ಣಪ್ಪ, ಗುಣಸಾಗರಿ, ಅಬ್ಬಾ! ಆ ಹುಡುಗಿ!, ತೇಜಸ್ವಿನಿ, ಅನುಗ್ರಹ ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕನ್ನಡ ಚಿತ್ರರಂಗ ಸ್ಮರಿಸಲೇಬೇಕಾದ ಎಚ್. ಲಕ್ಷ್ಮೀನರಸಿಂಹ 1972ರ ಜುಲೈ 2 ರಂದು ನಿಧನರಾದರು.



***ಸಂಸಾರನೌಕ*** ನಿರ್ಮಿಸಲು ನಿರ್ಧರಿಸಿದ್ದು ಒಂದು ಸಾಹಸವೇ ಸರಿ. ವಾಕ್ಚಿತ್ರ ಆರಂಭವಾಗಿ ಆದಾಗ ತಾನೇ 2 ವರ್ಷವಾಗಿತ್ತು, ಕನ್ನಡ ಭಾಷೆಯಲ್ಲಿ ಸಿದ್ಧವಾಗುತ್ತಿದ್ದ ಚಿತ್ರಗಳೆಲ್ಲಾ ಪೌರಾಣಿಕ ಇಲ್ಲವೇ ಜಾನಪದ ಕತೆಗಳು. ಇಂತಹ ಸನ್ನಿವೇಶದಲ್ಲಿ ರಾಮ, ಸೀತೆ, ಘಟೋದ್ಗಜ, ಪುರಂದರದಾಸರ ಸಂಸಾರದಲ್ಲಿ ಸುಂದರ, ಸುಶೀಲೆಯರ (ಸಂಸಾರನೌಕದ ಪಾತ್ರಧಾರಿಗಳು) ಪ್ರವೇಶಕ್ಕೆ ವ್ಯವಸ್ಥೆ ಮಾಡಿದ್ದು ಒಂದು ಸಾಹಸವೇ ಸರಿ" ಎಂದು ಸಂಸಾರ ನೌಕದ ನಿರ್ಮಾಪಕ ಇ. ರಾಜಗೋಪಾಲ್ ಚೆಟ್ಟಿ ಸ್ಮರಿಸಿಕೊಂಡಿದ್ದಾರೆ.

***ಸಂಸಾರನೌಕ*** ಚಿತ್ರದಲ್ಲಿ ಅಭಿನಯಿಸಿರುವ ಎಸ್.ಕೆ. ಪದ್ಮ ಅವರು ತಾವು ಆ ಚಿತ್ರದಲ್ಲಿ ಅಭಿನಯಿಸಿದ ಪಾತ್ರದ ಬಗ್ಗೆ ಇಂದು ನೆನಪು ಮಾಡಿಕೊಂಡಿರುವುದು ಹೀಗಿದೆ : "ಸಂಸಾರನೌಕ"ದಲ್ಲಿ ನಾನು ದುರಂತ ನಾಯಕಿ ಸುಶೀಲೆಯ ಪಾತ್ರ ವಹಿಸಿದೆ. ಎಂ. ವಿ. ರಾಜಮ್ಮ ಎರಡನೆಯ ನಾಯಕಿ. ಆದರೂ ನನಗಿಂತ ರಾಜಮ್ಮನವರಿಗೇ ಪ್ರಚಾರ ಜಾಸ್ತಿ ಸಿಕ್ಕಿತು. ಎಚ್. ಎಲ್. ಎನ್. ಸಿಂಹ ಅವರು ***ಸಂಸಾರನೌಕ***ವನ್ನು

ಕರ್ನಾಟಕದಲ್ಲೇ ತಯಾರಾದ ಕನ್ನಡದ ಮೊದಲ ವಾಕ್ಚಿತ್ರ "ರಾಜಸೂಯಯಾಗ" ಮಹತ್ವದ ಹೆಜ್ಜೆ ಗುರುತು.

ಚಲನಚಿತ್ರವಾಗಿಸಲು ಮನಸ್ಸು ಮಾಡಿದಾಗ, ನಾನು ಹಿಂದೆ ಗಾಮಿನಿಯ ಪಾತ್ರ ಮಾಡಿದ್ದನ್ನು ನೋಡಿದ್ದ ಪಂತುಲು ಅವರು ನನ್ನನ್ನೇ ನಾಯಕಿಯಾಗಿ ಆರಿಸಿದರು. ಆಗೆಲ್ಲ ಶೂಟಿಂಗ್ ಮದರಾಸಿನಲ್ಲೇ ನಡೆಯುತ್ತಿತ್ತು. ಈ ಚಿತ್ರದಲ್ಲಿ ನಾನು ನಾಲ್ಕು ಹಾಡುಗಳನ್ನು ಹಾಡಿದ್ದೇನೆ. ವೀಣೆ ನುಡಿಸುತ್ತಾ ಸಖಿಯೇ....ಲಾಲಿಸೀಗಲೇ, ಸುಖದಿಂ ಮಲಗಿರೇ ಸಖಿಯೇ ನಡೆಯದಚ್ಚರಿಯಾ...ಎಂದು ಹಾಡಿದ್ದೇನೆ."

ಸೇಲಂಗೆ ವಲಸೆ ಹೋಗಿದ್ದ ಕನ್ನಡ ಕುಟುಂಬಕ್ಕೆ ಸೇರಿದವರಾದ ಇ. ರಾಜಗೋಪಾಲ ಚೆಟ್ಟಿ ಹಾಗೂ ಇಬ್ಬರು ಸಹೋದರರು ಉದ್ಯಮಶೀಲರು. "ಸಂಸಾರನೌಕ" ಯಶಸ್ವಿಯಾದರೂ ಅವರು ಮುಂದೆ ಸಾಮಾಜಿಕ ಚಿತ್ರ ನಿರ್ಮಿಸಲಿಲ್ಲ. ನಂತರ ಅವರು ನಿರ್ಮಿಸಿದ ಚಿತ್ರ "ಪುರಂದರದಾಸ" (1937). ಈ ವೇಳೆಗಾಗಲೇ ರಾಜಗೋಪಾಲ ಚೆಟ್ಟಿಯವರು, ಸಿ.ಬಿ. ಮಲ್ಲಪ್ಪನವರು ಪ್ರದರ್ಶಿಸುತ್ತಿದ್ದ ಭಕ್ತಿಪ್ರಧಾನ ನಾಟಕಗಳಿಂದ ಪ್ರೇರಣೆಗೊಂಡಿದ್ದುದು "ಪುರಂದರದಾಸ" ನಿರ್ಮಾಣಕ್ಕೆ ಕಾರಣವಾಯಿತು. ಶಾಲಾ ಉಪಾಧ್ಯಾಯರಾಗಿದ್ದ ಕೃಷ್ಣಯ್ಯಂಗಾರ್ ಅವರನ್ನು ಪುರಂದರದಾಸರ ಪಾತ್ರಕ್ಕೆ ಆಯ್ಕೆ ಮಾಡಲಾಯಿತು. ಖ್ಯಾತ ಗಾಯಕಿ ತ್ರಿಪುರಾಂಬ ದಾಸರ ಪತ್ನಿಯ ಪಾತ್ರ ವಹಿಸಿದರು. ಬಿ. ಚವಾಣ್ ಈ ಚಿತ್ರ ನಿರ್ದೇಶಿಸಿದರು.

ದೇವಿ ಫಿಲಂಸ್ ಲಾಂಛನದಲ್ಲಿ **ಪುರಂದರದಾಸ** ಚಿತ್ರದ ಇತರ ಪಾತ್ರಗಳಲ್ಲಿ ಜೆ.ಟಿ. ಬಾಲಕೃಷ್ಣರಾವ್, ಎಸ್.ಆರ್. ವಾಸು, ದೇವರಾಜ್ ಮೊದಲಾದವರು ಅಭಿನಯಿಸಿದ್ದಾರೆ. ಈ ಚಿತ್ರದ ಶೇ. 30ರಷ್ಟು ಭಾಗ ತೆಲುಗಿನಲ್ಲಿದ್ದುದು ಕುತೂಹಲಕಾರಿ ವಿಷಯವಾಗಿದೆ.

ನಂತರದ ದಿನಗಳಲ್ಲಿ ವಿತರಕರಾದ ರಾಜಗೋಪಾಲ ಚೆಟ್ಟಿ ಸಹೋದರರು ಬೇರೆ ಬೇರೆ ಉದ್ಯಮವನ್ನಾಶ್ರಯಿಸಿದರು. ಮುಂದೆ ಅವರುಗಳು **ವಿಧಿ ವಿಲಾಸ** (1962), **ಸತಿಶಕ್ತಿ** (1963) ಚಿತ್ರಗಳಲ್ಲಿ ಸಹಕರಿಸಿದ್ದಾಗಿ ತಿಳಿದು ಬರುತ್ತದೆ.

**ಟಾಕಿ ಸ್ಟುಡಿಯೋ :** 1936ರವರೆಗೆ ಕನ್ನಡ ಚಿತ್ರ ತಯಾರಿಕೆ ಮುಂಬೈ, ಕೊಲ್ಹಾಪುರ ಮತ್ತು ಮದರಾಸು ಕೇಂದ್ರಗಳಲ್ಲಿ ನಡೆಯುತ್ತಿತ್ತು. ಇಡೀ ಚಿತ್ರದ ಚಿತ್ರೀಕರಣ ತಂಡ ಮದರಾಸು, ಮತ್ತು ಬೇರೆ ಬೇರೆ ಪ್ರದೇಶಗಳಿಗೆ ತೆರಳುತ್ತಿದ್ದುದರಿಂದ ತಯಾರಿಕಾ ವೆಚ್ಚ ಏರುತ್ತಿತ್ತು. ಇದನ್ನು ಗಮನಿಸಿದ ಮೈಸೂರು ಸಾರಿಗೆ ಸಂಸ್ಥೆಯ ಒಡೆಯ ಪಿ.ಆರ್. ತಿಮ್ಮಯ್ಯ, ಬೆಂಗಳೂರಿನಲ್ಲೇ ಸ್ಟುಡಿಯೋ ಸ್ಥಾಪಿಸಲು ಯತ್ನಿಸಿ ಯಶಸ್ವಿಯಾದದ್ದು ಈ ಕಾಲದ ಸಾಧನೆ. ಮೂಕಿ ಚಿತ್ರಗಳ ತಯಾರಿಕೆಗೆಂದು ಹಿಂದೆ ಗುಬ್ಬಿ ವೀರಣ್ಣನವರು ಮಲ್ಲೇಶ್ವರಂನ ಎಚ್.ವಿ. ನಂಜುಂಡಯ್ಯ ಅವರ ಬಂಗಲೆಯಲ್ಲಿ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋ ಆರಂಭಿಸಿದ್ದರು. ತಿಮ್ಮಯ್ಯನವರ ಟಾಕಿ ಸ್ಟುಡಿಯೋ ಕೂಡ ಅಲ್ಲೇ ಆರಂಭವಾಯಿತು. ಮೈಸೂರು ಸೌಂಡ್ ಸ್ಟುಡಿಯೋಸ್ ಎಂಬ ಹೆಸರಿನ ಈ ಸ್ಟುಡಿಯೋದಲ್ಲಿ ಅದೇ ಲಾಂಛನದಲ್ಲಿ "ರಾಜಸೂಯಯಾಗ" ಎಂಬ ಚಿತ್ರವನ್ನು ತಯಾರಿಸಿ ಬಿಡುಗಡೆ ಮಾಡಿದ್ದು ಸ್ಥಳೀಯರ ಸಾಧನೆಯಾಗಿದೆ.

ಕರ್ನಾಟಕದಲ್ಲೇ ತಯಾರಾದ ಮೊದಲ ಕನ್ನಡ ವಾಕ್ಚಿತ್ರ ಎಂಬ ದಾಖಲೆಯನ್ನು **ರಾಜಸೂಯಯಾಗ** ಮಾಡಿತು. ವಾಕ್ಚಿತ್ರಯುಗದಲ್ಲಿ ಇದು ಮಹತ್ವದ ಹೆಜ್ಜೆ ಗುರುತು.

ಟಿ. ದ್ವಾರಕಾನಾಥ್ ನಿರ್ದೇಶಿಸಿರುವ ಈ ಚಿತ್ರದ ಹೆಸರು **ರಾಜಸೂಯಯಾಗ** ಎಂದೇ ಕೆಲವೆಡೆ ನಮೂದಿತವಾಗಿದೆ. ಆದರೆ ಕೆಲವರ ವಾದದ ಪ್ರಕಾರ ಈ ಚಿತ್ರದ ಹೆಸರು **ರಾಜಸೂಯ**. ಇದರ ಬಗ್ಗೆ ಖಚಿತ ಮಾಹಿತಿ ಸಿಕ್ಕಿಲ್ಲ. ಈ ಚಿತ್ರದಲ್ಲಿ ಕೆ.ಆರ್. ಸೀತಾರಾಂ, ಗುಲಾಬಿ, ಚಂದ್ರಶೇಖರ್, ಕೆ.ವಿ. ಅಚ್ಯುತರಾವ್, ಬಸವರಾಜ್ ಸೋದರರು, ಸರೋಜಾ, ಎಚ್. ಆರ್. ಹನುಮಂತರಾವ್,



ಲಕ್ಷ್ಮೀಬಾಯಿ, ಎಸ್. ಕೆ. ಪದ್ಮಾದೇವಿ ಮತ್ತೊಂದು ದೃಶ್ಯ.

ನಾರಾಯಣಸ್ವಾಮಿ, ಆಸ್ಥಾನ ವಿದ್ವಾನ್ ಎಂ. ಎಸ್. ಚಂದ್ರಶೇಖರಯ್ಯ, ವಿ.ಎನ್. ಸುಬ್ಬಯ್ಯ ಮೊದಲಾದವರು ಅಭಿನಯಿಸಿದ್ದಾರೆ. ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು ಸಾಹಿತ್ಯ ರಚನೆ ಮಾಡಿದ್ದಾರೆ. ಸಂಗೀತ ನಿರ್ದೇಶನ ಎಚ್.ಆರ್. ಪದ್ಮನಾಭ ಶಾಸ್ತ್ರಿ ಅವರದು. ಆರ್.ಎಂ. ವೀರಭದ್ರಯ್ಯ ಕಲಾ ನಿರ್ದೇಶಕರು. 14 ಸಾವಿರ ಅಡಿ ಉದ್ದದ ಈ ಚಿತ್ರವನ್ನು ತಯಾರಿಸಲು 33 ಸಾವಿರ ರೂ. ವೆಚ್ಚವಾಗಿದೆ. ಚಿತ್ರದಲ್ಲಿ 18 ಹಾಡುಗಳಿದ್ದವು.

"ರಾಜಸೂಯ" ಚಿತ್ರದ ನಂತರ ಮತ್ತೆರೆಡು ಚಿತ್ರಗಳನ್ನು ತಯಾರಿಸಿದ ಮೈಸೂರು ಸೌಂಡ್ ಸ್ಟುಡಿಯೋಸ್ ಬಿಕ್ಕಟ್ಟಿನಿಂದ ಮುಚ್ಚಿತು. ಕನ್ನಡ ಚಿತ್ರೋದ್ಯಮ 1937ರಿಂದಲೇ ಕರ್ನಾಟಕದಲ್ಲಿ ಬೇರು ಬಿಡುವ ಅವಕಾಶದಿಂದ ವಂಚಿತವಾಗಲು ಈ ಸ್ಟುಡಿಯೋ ಮುಚ್ಚಿದ್ದೂ ಒಂದು ಕಾರಣ.




"ಭಕ್ತ ಪ್ರಹ್ಲಾದ" ಎಂದೆಂದಿಗೂ ಜನಪ್ರಿಯ ಕಥಾ ವಸ್ತು. 1942ರಲ್ಲಿಯೇ ತಯಾರಾದ ಕನ್ನಡದ "ಭಕ್ತ ಪ್ರಹ್ಲಾದ"ದಲ್ಲಿ ಒಂದು ಜಾಹಿರಾತು. ಈ ಚಿತ್ರದಲ್ಲಿ ಎಂ. ವಿ. ರಾಜಮ್ಮ ಕಯಾದು, ಚಂದ್ರಮ್ಮ ಎಂಬ ಬಾಲನಟಿ ಪ್ರಹ್ಲಾದ, ನಾರದರಾಗಿ ಅಚ್ಯುತರಾವ್, ರಾಜಕುಮಾರ್ ಅವರ ತಂದೆ ಪುಟ್ಟಸ್ವಾಮಯ್ಯನವರು ಹಿರಣ್ಯಕಶಿಪುವಾಗಿ ಅಭಿನಯಿಸಿದ್ದಾರೆ.

ಈ ಕಾಲಾವಧಿಯಲ್ಲೇ 1942ರ ವಿಜಯದಶಮಿ ದಿನದಂದು ಮೈಸೂರಿನಲ್ಲಿ ಈಗ ಪ್ರೀಮಿಯರ್ ಸ್ಟುಡಿಯೋ ಇರುವ ಸ್ಥಳದಲ್ಲಿ ಮೈಸೂರು ಮೂವಿಟೋನ್ ಸ್ಟುಡಿಯೋ ಸ್ಥಾಪನೆಯಾಯಿತು. ಮೈಸೂರಿನಲ್ಲೇ 1944ರಲ್ಲಿ ನವಜ್ಯೋತಿ ಸ್ಟುಡಿಯೋ ಆರಂಭವಾಯಿತು.

1937ರಲ್ಲೇ ಬಿಡುಗಡೆಯಾದ **ಚಿರಂಜೀವಿ** ವಾಕ್ಚಿತ್ರ ಉತ್ತರ ಕರ್ನಾಟಕದ ಭಾಗದಲ್ಲಿ ತಯಾರಾದ ಮೊದಲ ಚಿತ್ರ ಎಂಬ ಕಾರಣಕ್ಕೆ ಮಹತ್ವದ್ದಾಗಿದೆ.

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಹುಯಿಲು ಗೋಳ ನಾರಾಯಣರಾವ್ ಅವರ ಕನ್ನಡ ಗೀತೆಯೊಂದಿಗೆ ಆರಂಭವಾಗುವ ಚಿತ್ರ **ಚಿರಂಜೀವಿ** ಉತ್ತರ ಕರ್ನಾಟಕದ ಮೊದಲ ಕೊಡುಗೆ. 1937ರ ಜೂನ್ ತಿಂಗಳಲ್ಲಿ ಬೆಂಗಳೂರು, ಧಾರವಾಡಗಳಲ್ಲಿ ತೆರೆಕಂಡ ಈ ಚಿತ್ರ ಉತ್ತರ ಕರ್ನಾಟಕದ "ದಿ. ಕರ್ನಾಟಕ ಫಿಲಂಸ್ ಲಿಮಿಟೆಡ್" ಲಾಂಛನದಲ್ಲಿ ತೆರೆಕಂಡಿತು.

**ಚಿರಂಜೀವಿ** ದೇವುಡು ನರಸಿಂಹಶಾಸ್ತ್ರಿ ಅವರನ್ನು ಮತ್ತೆ ಚಿತ್ರರಂಗಕ್ಕೆ ಕರೆತಂದಿತು. ಅಲ್ಲದೆ ಮಳವಳ್ಳಿ ಸುಂದರಮ್ಮನವರು ನಾಯಕಿಯಾಗಿದ್ದ ಪ್ರಥಮ ಹಾಗೂ ಏಕೈಕ ಚಿತ್ರ ಇದು.

ಧಾರವಾಡದ ಪ್ರದರ್ಶನ ವಲಯದಲ್ಲಿ ಹೆಸರು ಮಾಡಿದ್ದ ಮುಧೋಳ್ಕರ್ ಸಹೋದರರು ಮಾರ್ಕಂಡೇಯನ ಕತೆಯನ್ನು ತಮ್ಮ ಮೊದಲ ಸಾಹಸಕ್ಕೆ ಆಯ್ಕೆ ಮಾಡಿಕೊಂಡರು. 1936ರ ಡಿಸೆಂಬರ್‌ನಿಂದ 1937ರ ಮೇ ತಿಂಗಳ ತನಕ ಚಿತ್ರೀಕರಣ ನಡೆಯಿತು. ಚಿತ್ರವನ್ನು ಪೂನಾದ ಸರಸ್ವತಿ ಸಿನಿಟೋನ್ ಸ್ಟುಡಿಯೋದಲ್ಲೇ ಸಂಪೂರ್ಣ ಚಿತ್ರೀಕರಿಸಲಾಯಿತು. **ಚಿರಂಜೀವಿ**ಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳು ಮುಖ್ಯ ಪಾತ್ರವನ್ನೇ ಅಲ್ಲದೆ ಕತೆ, ಹಾಡು ಹಾಗೂ ಸಂಭಾಷಣೆಯನ್ನು ರಚಿಸಿದ್ದಾರೆ. ದೇವುಡು ಅವರಲ್ಲದೆ, ಮಳವಳ್ಳಿ ವಿ. ಸುಂದರಮ್ಮ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ಮನ್ಸೂರ್, ಹಾರ್ಮೋನಿಯಂ ಶೇಷಗಿರಿರಾಯರ ಪುತ್ರ ಕುಮಾರ ನಾರಾಯಣ (ಚಿರಂಜೀವಿ), ಆರ್.ಎಸ್. ಮೂರ್ತಿ, ಪ್ರೇಂಕುಮಾರ್, ನಾಡಿಗೇರ ಕೃಷ್ಣರಾವ್, ಮುದವೀಡು ಕೃಷ್ಣರಾವ್, ಅಮೀರ್‌ಬಾಯಿ, ಕರ್ನಾಟಕಿ, ಹಾನಗಲ್ ಕೆ. ಎಚ್. ಪಾರ್ವತಿಬಾಯಿ, ಕುಮಾರಿ ಶಾರದ, ಮಿಸ್ ಲೀಲಾ, ಮಿಸ್ ಗಂಗು ಪಾತ್ರವರ್ಗದಲ್ಲಿದ್ದಾರೆ. ಅಮೀರ್ ಬಾಯಿ ಕರ್ನಾಟಕಿ ಈ ಚಿತ್ರದಲ್ಲಿ ಮೂರು ಹಾಡುಗಳನ್ನು ಹಾಡಿದ್ದಾರೆ. ಕೆ.ಪಿ. ಭಾವೆ ಚಿತ್ರಕಥೆ ಬರೆದು ನಿರ್ದೇಶಿಸಿದ ಈ ಚಿತ್ರಕ್ಕೆ ಆರ್.ಎಸ್. ಮೂರ್ತಿ ಸಹಾಯಕರಾಗಿದ್ದರು. ಸಂಗೀತ ಹಾರ್ಮೋನಿಯಂ ಶೇಷಗಿರಿರಾವ್ ಅವರದು. ಛಾಯಾಗ್ರಹಣ ಎಂ.ಎಂ. ಪುರೋಹಿತ್ ಅವರದು.

ಮತ್ತೆ ಚಲನಚಿತ್ರರಂಗಕ್ಕೆ ಉತ್ತರ ಕರ್ನಾಟಕದಿಂದ ಕೊಡುಗೆ 1947ರಲ್ಲಿ. ಅಲ್ಲಿ ಆಗ **ಚಂದ್ರಹಾಸ** ನಿರ್ಮಾಣವಾಯಿತು. ಈ ಚಿತ್ರ ಉತ್ತರ ಕರ್ನಾಟಕ ಭಾಗದ ಭಾಷಾ ಶೈಲಿಯಲ್ಲಿಯೇ ಇದ್ದುದು ಇದರ ವಿಶೇಷ.

# ನವಚೈತನ್ಯ

ದ್ವಿತೀಯ ಮಹಾಯುದ್ಧದ ಪರಿಣಾಮ ಭೀಕರವಾಗಿದ್ದರೂ 1941ರ ವೇಳೆಗೆ ಕನ್ನಡ ಚಿತ್ರರಂಗ ಪುನಶ್ಚೇತನಗೊಂಡಿತು. 1941ರಿಂದ 44ರವರೆಗಿನ ಅವಧಿಯಲ್ಲಿ ಹಲವಾರು ಚಿರಸ್ಮರಣೀಯ ಕಲಾಕೃತಿಗಳನ್ನು ತಯಾರಿಸಿ ಇಡೀ ದಕ್ಷಿಣ ಭಾರತದ ಚಿತ್ರರಂಗದ ಗಮನ ಸೆಳೆಯಿತು. ಇದೇ ಅವಧಿಯಲ್ಲಿ ಹಲವು ಹೊಸ ತಾಂತ್ರಿಕ ಪ್ರಯೋಗಗಳು ಕನ್ನಡದಲ್ಲಿ ನಡೆದು ಅವು ನಂತರದ ಅವಧಿಯಲ್ಲಿ ದಕ್ಷಿಣದ ಇತರ ಭಾಷಾ ಉದ್ಯಮಗಳ ಪ್ರಗತಿಗೆ ನೆರವಾದವು. ಈ ಕಾಲದಲ್ಲೇ ಎಂ.ವಿ. ಸುಬ್ಬಯ್ಯನಾಯಿಡು, ಆರ್. ನಾಗೇಂದ್ರರಾವ್ ಮತ್ತು ಲಕ್ಷ್ಮೀಬಾಯಿ ಅವರ ಎಸ್.ಎಸ್.ಎಸ್. ನಾಟಕ ಮಂಡಳಿಯ ತ್ರಿವಳಿಗಳು ಕನ್ನಡ ಚಿತ್ರರಂಗವನ್ನು ಮತ್ತೆ ಪ್ರವೇಶಿಸಿದರು. ಪ್ರಗತಿ ಪಿಕ್ಚರ್ಸ್ ನೆರವಿನೊಡನೆ ಅವರು ತಯಾರಿಸಿದ "ವಸಂತಸೇನ" ಅತ್ಯುತ್ತಮ ಚಿತ್ರ ಎಂಬ ಪ್ರಶಂಸೆಗೆ ಪಾತ್ರವಾಯಿತು. ಚಾರುದತ್ತನ ಪಾತ್ರದಲ್ಲಿ ಎಂ.ವಿ. ಸುಬ್ಬಯ್ಯನಾಯ್ಡು, ವಸಂತಸೇನೆಯಾಗಿ ಲಕ್ಷ್ಮೀಬಾಯಿ, ಶಕಾರನಾಗಿ ಆರ್. ನಾಗೇಂದ್ರರಾವ್ ಉನ್ನತಮಟ್ಟದ ಅಭಿನಯ ಸಾಮರ್ಥ್ಯವನ್ನು ಮೆರೆದಿದ್ದರು.

ಶೂದ್ರಕ ಎಂಬ ಸಂಸ್ಕೃತ ನಾಟಕಕಾರನ "ಮೃಚ್ಛಕಟಿಕ" ನಾಟಕದ (ಕ್ರಿ. ಶ. ಸುಮಾರು 400ರ ಕಾಲ) ಪಾತ್ರಗಳಲ್ಲೊಂದಾದ ***ವಸಂತಸೇನ*** ಕಥೆ 1928ರಲ್ಲೇ ಮೂಕಚಿತ್ರವಾಗಿ ತೆರೆಕಂಡಿತ್ತು. ವಾಕ್ಚಿತ್ರಯುಗವಾದ 1941ರಲ್ಲಿ ಮತ್ತೆ ತಯಾರಾಗಿ ದಕ್ಷಿಣ ಭಾರತ ಚಿತ್ರರಂಗದಲ್ಲಿ ಐತಿಹಾಸಿಕ ದಾಖಲೆಯೊಂದನ್ನು ನಿರ್ಮಿಸಿತು.

ಪ್ರಥಮ ವಾಕ್ಚಿತ್ರ **ಸತಿ ಸುಲೋಚನ** ಚಿತ್ರದ ಅಭಿನಯದ ನಂತರ ಆರ್. ನಾಗೇಂದ್ರರಾವ್ ಅವರು ತೆಲುಗು, ತಮಿಳು ಚಿತ್ರಗಳಲ್ಲಿ ಅಭಿನಯಿಸುತ್ತಿದ್ದರೇ ಹೊರತು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿರಲಿಲ್ಲ.

**ವಸಂತಸೇನ** ತಯಾರಿಕೆಯ ಹಿನ್ನೆಲೆ ಹಾಗೂ ತಾವು ಮತ್ತೆ ಕನ್ನಡ ಚಿತ್ರ ತಯಾರಿಕೆಗೆ ಇಳಿದ ರೀತಿಯನ್ನು ಆರ್. ನಾಗೇಂದ್ರರಾವ್ ಅವರು ತಮ್ಮ "ಇದು ನನ್ನ ಕಥೆ" ಪುಸ್ತಕದಲ್ಲಿ ಹೀಗೆ ವಿವರಿಸುತ್ತಾರೆ: "ನಾನು ಇದುವರೆಗೆ ಕೇವಲ ತಮಿಳು, ತೆಲುಗು ಚಿತ್ರದಲ್ಲಿ ಅಭಿನಯಿಸಿದ್ದೆ. ಆದರೆ ಸ್ವಭಾಷೆಯಾದ ಕನ್ನಡದ ಒಂದು ಚಿತ್ರದಲ್ಲಿಯೂ ಅಭಿನಯಿಸಿರಲಿಲ್ಲ. ಈ ವಿಷಯವನ್ನು ನನ್ನ ಜತೆ ಪಾಲುದಾರರಾಗಿದ್ದ ಎ.ವಿ.ಎಂ. ಚೆಟ್ಟಿಯಾರ್ ಬಳಿ ಪ್ರಸ್ತಾಪಿಸಿದಾಗ, ನೀವು ಅರ್ಧ ಹಣ ಕೊಡುವುದಾದರೆ ನಾವು ಕನ್ನಡದಲ್ಲಿ





*1943ರಲ್ಲಿಯೇ ಪಿಟೀಲು ವಿದ್ವಾಂಸ ಟಿ. ಚೌಡಯ್ಯ ಚಲನಚಿತ್ರವೊಂದರಲ್ಲಿ ಅಭಿನಯಿಸಿದ್ದರು. ಸಂಗೀತ ಪ್ರಧಾನ "ವಾಣಿ" ಚಿತ್ರದಲ್ಲಿ ಅವರ ಒಂದು ನೋಟ. ನನ್ನ ಸಮಕಾಲೀನರೆಲ್ಲ ಚಲನ ಚಿತ್ರದಲ್ಲಿ ಅಭಿನಯಿಸಿದರು. ನಾನೇಕೆ ಅಭಿನಯಿಸಬಾರದು ಎಂದು ಚೌಡಯ್ಯ ಈ ಚಿತ್ರ ನಿರ್ಮಾಣಕ್ಕೆ ಇಳಿದರು.*

"ವಾಣಿ" ಕೆ. ಹಿರಣ್ಣಯ್ಯ



ಚಿತ್ರವೊಂದನ್ನು ತೆಗೆಯಬಹುದು ಎಂದರು....ಯಾವ ಕತೆಯನ್ನು ಚಿತ್ರೀಕರಿಸಬೇಕು ಎಂಬ ಪ್ರಶ್ನೆ ಬಂದಾಗ ನನಗೆ ಚಾಮುಂಡೇಶ್ವರಿ ಕಂಪನಿಯಲ್ಲಿದ್ದಾಗ ಮನಸ್ಸಿಗೆ ಬಹಳವಾಗಿ ಹಿಡಿಸಿದ್ದ **ವಸಂತಸೇನ** ಕತೆ ನೆನಪಿಗೆ ಬಂತು. ಆದರೆ ಕೆಲವರು ಇದನ್ನು ವಿರೋಧಿಸಿದರು. ಮೂಕಚಿತ್ರವಾಗಿ ಭವನಾನಿ ಎಂಬುವವರಿಂದ ತಯಾರಾಗಿದ್ದ "ಮೃಚ್ಛಕಟಿಕಾ" ಗಲ್ಲಾಪೆಟ್ಟಿಗೆಯಲ್ಲಿ ವಿಫಲವಾಗಿದ್ದರಿಂದ ಇದು ಫೆಲ್ಯೂರ್ ಸಬ್ಜೆಕ್ಟ್, ಇದನ್ಯಾಕೆ ಚಿತ್ರ ಮಾಡ್ತೀರಾ, ಬೇರೆ ಕತೆ ತೆಗೆದುಕೊಳ್ಳಿ ಎಂಬ ನಿರಾಶೆ ತರುವ ಮಾತುಗಳನ್ನೇ ಹೇಳಿದರು. ಆದರೆ ನನಗೆ ಮಾತ್ರ ಆ ಕಥೆಯಲ್ಲಿ ಬಹಳ ನಂಬಿಕೆ ಇತ್ತು. ಆ ಕತೆಯನ್ನು ಪ್ರಗತಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ದೇಶನ ಮಾಡಲು ತಮ್ಮ ಕಂಪನಿಯವರೇ ಇರಬೇಕೆಂದು ಹೇಳಿ ಕೊಡಕ್ ಕಂಪನಿಯಲ್ಲಿ ಸೇಲ್ಸ್‌ಮನ್ ಆಗಿದ್ದ ಟಿ.ಜಿ. ರಾಮಯ್ಯರ್ ಮತ್ತು ಇನ್ನೊಬ್ಬರನ್ನು ಚೆಟ್ಟಿಯಾರ್ ನೇಮಕ ಮಾಡಿದರು. ಅವರು ನಿರ್ದೇಶಕರಾಗಿ ಮಾಡಿದ ಕೆಲಸ ಏನೆಂದರೆ, ನಾವು ಎಲ್ಲವನ್ನೂ ಸಿದ್ಧ ಮಾಡಿದ ಬಳಿಕ 'ಸ್ಟಾರ್ಟ್' ಮತ್ತು 'ಕಟ್' ಹೇಳುವುದು. ಅವರಿಗೆ ಕನ್ನಡ ಭಾಷೆಯೇ ಗೊತ್ತಿರಲಿಲ್ಲ. **ವಸಂತಸೇನ**ದ ಚಿತ್ರಕಥೆ, ಸಂಭಾಷಣೆ ಮತ್ತು ಹಾಡುಗಳನ್ನು ನಾನೇ ಬರೆದೆ.


ಕನ್ನಡದ **ವಸಂತಸೇನ** ತಯಾರಿಕೆ ಪ್ರಾರಂಭವಾದ ಕೂಡಲೇ ಹಿಂದಿಯಲ್ಲೂ ಅದೇ ಚಿತ್ರ ತಯಾರಿಸುತ್ತಿದ್ದಾರೆ ಎಂಬ ಸುದ್ದಿ ನಮಗೆ ತಲುಪಿ ಬಹಳ ಯೋಚನೆಗಿಟ್ಟುಕೊಂಡಿತು. ಹಿಂದಿಯೇ ಮೊದಲು ಬಿಡುಗಡೆಯಾದರೆ ನಮ್ಮ ಚಿತ್ರದ ಗತಿ ಏನಾಗಬಹುದು ಎಂಬ ಹೆದರಿಕೆ ಉಂಟಾಗಿ ಚಿತ್ರ ತಯಾರಿಕೆಯನ್ನು ಬಿಡುವುದಕ್ಕೂ ಇಲ್ಲವೇ ಮುಂದುವರೆಸುವುದಕ್ಕೂ ತೋಚದೆ ಕೆಲವು ದಿನಗಳನ್ನು ಕಳೆಯಬೇಕಾಯಿತು.

ಈಗ ನಮಗಿದ್ದುದು ಒಂದೇ ಮಾರ್ಗ. ಹಿಂದಿ ಚಿತ್ರಕ್ಕಿಂತ ಮುಂಚೆಯೇ ಕನ್ನಡ ಚಿತ್ರ ಬಿಡುಗಡೆ ಮಾಡುವುದು. ಆದ್ದರಿಂದ ಹಗಲು ರಾತ್ರಿ ಸತತವಾಗಿ ಕೆಲಸ ಮಾಡಿ ಚಿತ್ರವನ್ನು ತಯಾರಿಸಬೇಕಾಯಿತು.

"ಸತ್ಯ ಹರಿಶ್ಚಂದ್ರ" ಕೂಡಾ ಎಂದಿಗೂ ಜನಪ್ರಿಯ ಕಥಾ ವಸ್ತು. 1943ರಲ್ಲಿ ಆರ್. ನಾಗೇಂದ್ರರಾವ್ ಅವರು ನಿರ್ದೇಶಿಸಿದ "ಸತ್ಯ ಹರಿಶ್ಚಂದ್ರ" ದಲ್ಲಿ ಅವರ ವಹಿಸಿದ್ದ ವಿಶ್ವಾಮಿತ್ರ ಪಾತ್ರ ಹೊಸ ಚಿಂತನೆಯಲ್ಲಿತ್ತು.

ಇಷ್ಟರೊಳಗಾಗಿ ಚೆಟ್ಟಿಯಾರರು ಅದೇ ಸ್ಟುಡಿಯೋದಲ್ಲಿ **ಮೈ ವೈಫ್** ಎಂಬ ತಮಿಳು ಚಿತ್ರದ ನಿರ್ಮಾಣವನ್ನು ಆರಂಭಿಸಿದ್ದರು. ಅದಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟು ಕನ್ನಡ ಚಿತ್ರಕ್ಕೆ ಎರಡನೆಯ ಸ್ಥಾನ ಕೊಡಲು ಪ್ರಾರಂಭಿಸಿದರು. ಇದೇ ಸಮಯದಲ್ಲಿ ಇವರ ಸ್ಟುಡಿಯೋದಲ್ಲಿ ಸೌಂಡ್ ಎಂಜಿನಿಯರ್ ಆಗಿದ್ದ ಸಿ.ಇ. ಬ್ರಿಗ್ಸ್ ಎಂಬ ಆಂಗ್ಲೋ ಇಂಡಿಯನ್ ಎಂಜಿನಿಯರ್‌ಗೆ ಸಂಬಳದ ಮೇಲೆ ಜೆಮಿನಿ ಸ್ಟುಡಿಯೋದಿಂದ ಕರೆ ಬಂದಿತು. ಅವರು ಸ್ಟುಡಿಯೋ ಬಿಡಲು ತೀರ್ಮಾನಿಸಿದರು. ನಾವು ಹಾಕಿದ್ದ ಒಂದು ಸೆಟ್‌ನಲ್ಲಿ ವಸಂತಸೇನಾಗೆ "ಇದೇ ಮಹಾಸುದಿನ..." ಎಂಬ ಹಾಡನ್ನು ರೆಕಾರ್ಡ್ ಮಾಡಬೇಕಾಗಿತ್ತು, ಅವರು ಹೊರಟು ಹೋಗುವುದರೊಳಗಾಗಿ ಆ ರೆಕಾರ್ಡ್ ಮಾಡಿದೆವು. ಆದರದು ಅಷ್ಟು ಸಮರ್ಪಕವಾಗಿ ಬರಲಿಲ್ಲ. ಅದನ್ನು ರೀಟೇಕ್ ಮಾಡಬೇಕೆನ್ನುವುದರೊಳಗೆ ಅವರು ಸ್ಟುಡಿಯೋ ಬಿಟ್ಟು ಹೊರಟುಹೋಗಿದ್ದರು....."

"ಈ ಸಮಯದಲ್ಲಿಯೇ ಸ್ಟುಡಿಯೋ ನಿರ್ವಾಹಕರು ಸೆಟ್‌ಗಳನ್ನು ತೆಗೆದು ಹಾಕುವುದಾಗಿ ಹೆದರಿಸುತ್ತಿದ್ದರು. ಪ್ರಗತಿ ಸ್ಟುಡಿಯೋದಲ್ಲಿ ಧ್ವನಿಗ್ರಾಹಕನಿಲ್ಲದೆ ಪೇಚಿಗಿಟ್ಟುಕೊಂಡಿತು. ಬ್ರಿಗ್ಸ್ ಅವರು ಧ್ವನಿಮುದ್ರಿಸಿದ ಹಾಡನ್ನೇ ಚಿತ್ರೀಕರಿಸಿ ಅನಂತರ ಬೇರೊಂದು ಹಾಡನ್ನು ಅದರೊಂದಿಗೆ ಮತ್ತೆ



ಹೊಂದಿಸಿಕೊಳ್ಳಬಹುದು ಎಂದು ನಾನು ಸಲಹೆ ಮಾಡಿದೆ. ತಾಂತ್ರಿಕವಾಗಿ ಇದು ಅಸಾಧ್ಯ ಎಂದು ನಿರ್ದೇಶಕ ರಾಮಯ್ಯರ್ ವಾದಿಸಿದರು.

ಇದಾದ ಬಳಿಕ ಬ್ರಿಗ್ಸ್ ಬಳಿ ಅಸಿಸ್ಟೆಂಟ್ ಆಗಿದ್ದ ವಿ.ಎಸ್. ರಾಘವನ್ ಎಂಬುವವರು ಆ ಸ್ಟುಡಿಯೋಗೆ ಸೌಂಡ್ ಎಂಜಿನಿಯರ್ ಆಗಿ ಬಂದರು. ನಾನು ಅವರ ಬಳಿ ಈ ಹಾಡನ್ನು ಮತ್ತೆ ರಿಕಾರ್ಡ್ ಮಾಡಲು ಸಾಧ್ಯವಿದೆಯೇ ಎಂದು ಕೇಳಿದೆ. ಅವರು ಮಾಡಬಹುದು ಎಂದು ಧೈರ್ಯ ಕೊಟ್ಟರು. ಇದರಿಂದಾಗಿ ಮೊದಲ ಬಾರಿಗೆ ಚಿತ್ರೀಕರಣವಾದ ಒಂದು ಹಾಡಿಗೆ ಪುನಃ ಧ್ವನಿಗೂಡಿಸಲು ಸಾಧ್ಯ ಎಂದಾಯಿತು. ಇದಕ್ಕೆ ಪೋಸ್ಟ್ ಸಿಂಕ್ರನೈಸೇಷನ್ ಎನ್ನುತ್ತಾರೆ. ಕನ್ನಡ ಚಿತ್ರವೊಂದರ ಮೂಲಕ ಒಂದು ಹೊಸ ತಂತ್ರಜ್ಞಾನ ಹೀಗೆ ಹುಟ್ಟಿಕೊಂಡಿತು."

'ವಸಂತಸೇನ' ಬಿಡುಗಡೆಯಾಗಿ ಅಪಾರ ಯಶಸ್ಸು ಗಳಿಸಿತು. ಕನ್ನಡದ ಚಿತ್ರ ಬಿಡುಗಡೆಯಾದ ಒಂದೆರಡು ವಾರದಲ್ಲೇ ಅತ್ರೆ ಅವರಿಂದ ನಿರ್ಮಿತವಾದ ಹಿಂದಿ ಭಾಷೆಯ **ವಸಂತಸೇನಾವೂ** ಬಿಡುಗಡೆಯಾಯಿತು. ಆದರೆ ಕನ್ನಡ ಚಿತ್ರದ ಯಶಸ್ಸು ಅದಕ್ಕೆ ಬರಲಿಲ್ಲ. ಮೂಕಿ ಹಾಗೂ ಟಾಕಿ ಎರಡೂ **ವಸಂತಸೇನ**ಗಳು ಕರ್ನಾಟಕದ ಹೆಮ್ಮೆಯ ಕೊಡುಗೆಗಳಾದವು."



"ವಸಂತಸೇನ"ದಲ್ಲಿ ತಮಗೇ ಅರಿವಿಲ್ಲದಂತೆ ಹಿನ್ನೆಲೆ ಗಾಯಕಿಯೂ ಆದ ನಟಿ. ಎಸ್. ಕೆ. ಪದ್ಮಾದೇವಿ.

**ವಸಂತಸೇನ**ದಲ್ಲಿ ಪಿ. ಕಾಳಿಂಗರಾವ್ ಅವರು ಬೌದ್ಧ ಭಿಕ್ಷು ಸಂವಾಹಕನ ಪಾತ್ರ ವಹಿಸಿದ್ದೇ ಅಲ್ಲದೆ, ಹಾಡಿದ್ದಾರೆ. ಈ ಚಿತ್ರದ ಮೂಲಕ ಕಾಳಿಂಗರಾವ್ ಹಿನ್ನೆಲೆಗಾಯಕರಾಗಿ ಪರಿಚಿತರಾದರು. ಎಸ್. ರಾಜೇಶ್ವರರಾವ್ ಈ ಚಿತ್ರಕ್ಕೆ ಸಂಗೀತ ನಿರ್ದೇಶಕರಾಗಿದ್ದಾರೆ. ವಸಂತ ಸೇನದಲ್ಲಿ ಚಂದ್ರಮ್ಮ ಎಂಬ ನಟಿಗೆ ಹಾಡಲು ಬರುತ್ತಿರಲಿಲ್ಲವಂತೆ. ಹೀಗಾಗಿ ನಿರ್ದೇಶಕರು "ಪಾಲಿಸೋ ಜಗದಂಬೆ....." ಎಂಬ ಹಾಡನ್ನು ಎಸ್.ಕೆ. ಪದ್ಮ (ಮಧುಗಿರಿ ಮೀನಾಕ್ಷಿ) ಅವರಿಂದ ಹಾಡಿಸಿ, ಚಂದ್ರಮ್ಮನವರ ತುಟಿ ಚಲನೆಗೆ ಹೊಂದಿಸಿದ್ದರಂತೆ. ತಮಗೇ ಗೊತ್ತಿಲ್ಲದೆ ತಾವು ಹಿನ್ನೆಲೆ ಗಾಯಕಿಯೂ ಆದ ಈ ಘಟನೆ ನಡೆಯಿತು ಎಂದು ಪದ್ಮಾದೇವಿ ಅಂದಿನ ದಿನಗಳನ್ನು ಸ್ಮರಿಸಿಕೊಳ್ಳುತ್ತಾರೆ.

ಚಿತ್ರದ ತಾರಾಬಳಗದಲ್ಲಿ ಎಂ.ಪಿ. ಸುಬ್ಬಯ್ಯ ನಾಯ್ಡು, ಆರ್. ನಾಗೇಂದ್ರರಾವ್, ಲಕ್ಷ್ಮೀಬಾಯಿ, ಕಮಲಾದೇವಿ, ಎಸ್.ಕೆ. ಪದ್ಮಾ ಜಿ. ವಿ. ಕೃಷ್ಣಮೂರ್ತಿರಾವ್ (ಮೈತ್ರೇಯ ಪಾತ್ರ), ಬಿ.ಎನ್. ಸುಬ್ಬಯ್ಯ, ಕೃಷ್ಣಸ್ವಾಮಿ, ಚಂದ್ರಮ್ಮ ಸರೋಜಮ್ಮ ಮಾ. ಉಮಾಶಂಕರ್ ಹಾಗೂ ಎಂ.ವಿ. ರಾಜಮ್ಮ ಇದ್ದರು.

1943ರಲ್ಲಿ ತೆರೆಕಂಡ ಎಸ್.ಎಸ್.ಎಸ್. ನಾಟಕ ಮಂಡಳಿ ಪ್ರೊಡಕ್ಷನ್ಸ್ ಹಾಗೂ ಸರಸ್ವತಿ ಸ್ಟೋರ್ಸ್‌ನ ಕೊಡುಗೆ **ಸತ್ಯ ಹರಿಶ್ಚಂದ್ರ** ಕನ್ನಡ ಚಿತ್ರರಂಗದಲ್ಲಿ ಮತ್ತಷ್ಟು ದಾಖಲೆಯ ಹೆಜ್ಜೆ ಗುರುತುಗಳನ್ನು ಮೂಡಿಸಿತು. ಸುಬ್ಬಯ್ಯ ನಾಯಿಡು, ಆರ್. ನಾಗೇಂದ್ರರಾವ್, ಲಕ್ಷ್ಮೀಬಾಯಿ, ಜಿ.ವಿ. ಕೃಷ್ಣಮೂರ್ತಿರಾವ್ ಮೊದಲಾದವರು ತಾರಾಗಣದಲ್ಲಿದ್ದ **ಸತ್ಯ ಹರಿಶ್ಚಂದ್ರ** ಯುದ್ಧಕಾಲದ ಮಿತಿಯನ್ನು ಮೀರದೆ ಕೇವಲ 11 ಸಾವಿರ ಅಡಿಯೊಳಗೆ ಚಿತ್ರೀಕೃತವಾಗಿತ್ತು. ಚಿತ್ರ ಭಾರೀ ಯಶಸ್ಸು ಪಡೆದು ಹುಬ್ಬಳ್ಳಿಯ ಮಲ್ಲಿಕಾರ್ಜುನ ಚಿತ್ರಮಂದಿರದಲ್ಲಿ 30 ವಾರ ಸತತ ಪ್ರದರ್ಶನ ಕಂಡಿತು. ಮೈಸೂರು ಮತ್ತು ಬಾಗಲಕೋಟೆಗಳಲ್ಲಿ ಶತದಿನ ಪ್ರದರ್ಶನ ಕಂಡಿತಲ್ಲದೆ, ರಜತೋತ್ಸವ ಆಚರಿಸಿದ ಪ್ರಥಮ ಕನ್ನಡ ವಾಕ್ಚಿತ್ರವೆನಿಸಿತು. ಧಾರವಾಡದಲ್ಲಿ

ನಡೆದ **ಸತ್ಯ ಹರಿಶ್ಚಂದ್ರದ** ಶತದಿನೋತ್ಸವ ಸಮಾರಂಭಕ್ಕೆ ಆರ್. ನಾಗೇಂದ್ರರಾವ್ ಹೋಗಿದ್ದರು. ಅಲ್ಲಿನ ಚಿತ್ರ ಮಂದಿರದ ಮಾಲೀಕರು "ನೀವೇಕೆ ಈ ಚಿತ್ರವನ್ನು ಹಿಂದಿಯಲ್ಲಿ ಡಬ್ ಮಾಡಬಾರದು?" ಎಂದು ಪ್ರಶ್ನಿಸಿದರು. ಇದನ್ನು ಚಿತ್ರದ ನಿರ್ಮಾಪಕರಾದ ಚೆಟ್ಟಿಯಾರರ ಬಳಿ ಆರ್. ನಾಗೇಂದ್ರರಾವ್ ಪ್ರಸ್ತಾಪಿಸಿದರು. ನಂತರದ ಬೆಳವಣಿಗೆಯನ್ನು ನಾಗೇಂದ್ರರಾವ್ "ಇದು ನನ್ನ ಕಥೆ" ಪುಸ್ತಕದಲ್ಲಿ ಹೀಗೆ ವಿವರಿಸಿದ್ದಾರೆ : "ಡಬ್ ಮಾಡುವ ವಿಷಯ ಚೆಟ್ಟಿಯಾರರ ಬಳಿ ಪ್ರಸ್ತಾಪಿಸಿದಾಗ, ಹಿಂದಿ ಭಾಷೆಯ ಪರಿಚಯ ನಮಗೆ ಅಷ್ಟಿಲ್ಲ. ತಮಿಳಿಗೇ ಡಬ್ ಮಾಡೋಣ ಎಂದರು. ಆದಕ್ಕಾಗಿ ನಮ್ಮ ನಿರ್ದೇಶಕರಾಗಿದ್ದ ಎ.ಟಿ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರೊಡಗೂಡಿ ಲಿಪ್ ಮೂವ್‌ಮೆಂಟಿಗೆ ಸರಿಯಾಗುವಂತೆ ತಮಿಳು ಭಾಷೆಗೆ ಸೀನ್ ಬರೆದೆ. ಅದು ಯಶಸ್ವಿಯಾದರೆ ಮುಂದೆ ಪ್ರಯತ್ನ ಮಾಡೋಣ ಎಂದು ಚೆಟ್ಟಿಯಾರರು ಹೇಳಿದರು. ಅದರಂತೆ ಚಂದ್ರಮತಿ ಪಾತ್ರದ ಲಕ್ಷ್ಮೀಬಾಯಿ ಅವರಿಗೆ ದೃಶ್ಯವೊಂದನ್ನು ಅಭ್ಯಾಸ ಮಾಡಿಸಲಾಯಿತು. ಇದನ್ನು ಡಬ್ ಮಾಡಿ ನೋಡಿದ ಬಳಿಕ ಪೂರ್ತಿ ಚಿತ್ರವನ್ನು ಡಬ್ ಮಾಡಬಹುದು ಎಂಬ ತೀರ್ಮಾನಕ್ಕೆ ಬಂದೆವು. ಇದರಿಂದಾಗಿ ಭಾರತದಲ್ಲೆ ಮೊಟ್ಟಮೊದಲ ಬಾರಿಗೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಚಿತ್ರವನ್ನು ಡಬ್ ಮಾಡಿದ ಯಶಸ್ಸು ನಮ್ಮದಾಯಿತು."



ಕನ್ನಡದ ಪ್ರತಿಭೆ ಆದರೂ ತಮಿಳು ಚಿತ್ರರಂಗದಲ್ಲಿ ಹೆಚ್ಚಿನ ಅವಕಾಶ ಪಡೆದ ಎಂ. ವಿ. ರಾಜಮ್ಮ ಆರಂಭ ಕಾಲದ ಚಿತ್ರಗಳಲ್ಲಿ. ನಂತರದ ದಿನಗಳಲ್ಲಿ ಕನ್ನಡ ಚಿತ್ರಗಳಲ್ಲೇ ಅಭಿನಯಿಸುವ ಆಸೆ. ಹೀಗಾಗಿ ಸ್ವಂತ ನಿರ್ಮಾಣಕ್ಕೆ ಮನಸ್ಸು.

ಈ ರೀತಿ 1943 ರಲ್ಲಿ ಕನ್ನಡ ಚಿತ್ರವೊಂದು ಅನ್ಯಭಾಷೆಗೆ ಡಬ್ ಆಗಿ ಭಾರತ ಚಿತ್ರರಂಗದಲ್ಲೊಂದು ಹೊಸ ಇತಿಹಾಸ ಸೃಷ್ಟಿಸಿತು. ಆರ್. ನಾಗೇಂದ್ರರಾವ್ ಅವರ ಈ ಹೊಳಹಿನಿಂದಾಗಿ ಈಗ ನೂರಾರು ಚಿತ್ರಗಳು ಬೇರೆ ಬೇರೆ ಭಾಷೆಗೆ ಡಬ್ ಆಗುವಂತಾಯಿತು. ಆರ್. ನಾಗೇಂದ್ರರಾವ್ ಅವರ ಜತೆ ಈ ಡಬ್ಬಿಂಗ್ ತಂತ್ರಜ್ಞಾನ ಹುಟ್ಟುಹಾಕಿದವರು ಧ್ವನಿಗ್ರಾಹಕ ಎ.ಟಿ. ಕೃಷ್ಣಸ್ವಾಮಿ, ವಿ.ಎಸ್. ರಾಘವನ್, ಎ.ವಿ. ಮೇಯಪ್ಪನ್.

ಈ ಚಿತ್ರದ ಚಿತ್ರಕಥೆ ಆರ್. ನಾಗೇಂದ್ರರಾವ್ ಅವರದೇ. ವಿಶ್ವಾಮಿತ್ರನನ್ನು ಮಹಾಮಾನವತಾವಾದಿ ಎಂದು ವಿಶ್ಲೇಷಿಸುವ ನಾಗೇಂದ್ರರಾವ್ ಆ ದೃಷ್ಟಿಯಿಂದಲೇ ಆ ಪಾತ್ರವನ್ನು ನಿರೂಪಿಸಿ, ಆ ಪಾತ್ರದಲ್ಲಿ ತಾವೇ ಅಭಿನಯಿಸಿದ್ದಾರೆ. ಎಂ.ವಿ. ಸುಬ್ಬಯ್ಯನಾಯ್ಡು ಹರಿಶ್ಚಂದ್ರನ ಪಾತ್ರ ನಿರ್ವಹಿಸಿದ್ದಾರೆ. ಜಿ.ವಿ. ಕೃಷ್ಣಮೂರ್ತಿರಾವ್ ನಕ್ಷತ್ರಿಕನ ಪಾತ್ರ ವಹಿಸಿದ್ದಾರೆ.

ಕನ್ನಡ ವಾಕ್ಚಿತ್ರದ ಮೊದಲ ದಶಕ ಕಥಾವಸ್ತುವಿನ ದೃಷ್ಟಿಯಿಂದ ವೈವಿಧ್ಯಪೂರ್ಣ. ಸಂಖ್ಯೆ ದೃಷ್ಟಿಯಿಂದ ಬಡಕಲು. ದಶಕದ ಕೊನೆಯಲ್ಲಿ ಬಂದ **ವಾಣಿ** (1943) ಹಲವಾರು ದೃಷ್ಟಿಯಿಂದ ಸ್ಮರಣೀಯ. ಸಂಗೀತದ ಹಿನ್ನೆಲೆ, ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆ ಹೊಂದಿದ್ದ **ವಾಣಿ** ಸಂಗೀತ ರತ್ನಾಕರ ಎಂದೇ ಬಿರುದು ಗಳಿಸಿದ್ದ ಖ್ಯಾತ ಪಿಟೀಲು ವಾದಕ ಟಿ. ಚೌಡಯ್ಯನವರು ತಾವೇ ಅಭಿನಯಿಸಿ, ತಯಾರಿಸಿದ ಚಿತ್ರ ಎಂಬ ಕಾರಣಕ್ಕೆ ಗಮನಾರ್ಹವೆನಿಸಿದೆ.

ತಮ್ಮ ಜತೆಯ ಕಲಾವಿದರುಗಳೆಲ್ಲಾ ಚಿತ್ರರಂಗ ಪ್ರವೇಶಿದ್ದನ್ನು ಕಂಡ ಟಿ. ಚೌಡಯ್ಯನವರಿಗೆ ತಾವೂ ಈ ಕ್ಷೇತ್ರ ಪ್ರವೇಶಿಸಬೇಕೆಂಬ ಬಯಕೆಯಾಯಿತಂತೆ. ಹೀಗಾಗಿ ಅವರೇ ನಿರ್ಮಾಣಕ್ಕೆ ಇಳಿದರು. ಆಗ ಖ್ಯಾತ ರಂಗಭೂಮಿ ನಟರಾಗಿದ್ದ ಕೆ. ಹಿರಣ್ಣಯ್ಯ ಹಾಗೂ ಎಂ.ಎನ್. ಗೋಪಾಲ್ ಅವರುಗಳಿಗೆ ನಿರ್ದೇಶನ ಹೊಣೆ ವಹಿಸಿದ ಟಿ. ಚೌಡಯ್ಯ, ಹಾರ್ಮೋನಿಯಂ ಶೇಷಗಿರಿರಾವ್ ಅವರ ನೆರವಿನಿಂದ "ವಾಣಿ" ಚಿತ್ರದ ಸಂಗೀತ ನಿರ್ದೇಶಕರಾದರು. ಈ ಚಿತ್ರದ ಕಥೆ ಎಂ.ಎನ್. ಗೋಪಾಲ್ ಅವರದು. ಚಿತ್ರದಲ್ಲಿ ಬರುವ ಷಣ್ಮುಖ ಪ್ರಿಯ ರಾಗದ "ನಿಖಿಲಪಾಪ ವಿನಾಶಿನಿ...." ಹಾಡನ್ನು ಸಂಯೋಜಿಸಿದವರೂ ಟಿ. ಚೌಡಯ್ಯನವರೇ.

ಎಚ್.ಆರ್.ಜಿ.ಸಿ. ಶ್ರೀ ಪಿಕ್ಚರ್ಸ್ ಲಾಂಛನದಲ್ಲಿ ತಯಾರಾದ **ವಾಣಿಯ** ತಾರಾಬಳಗ ಹೀಗಿದೆ. ಟಿ. ಚೌಡಯ್ಯ, ಬಳ್ಳಾರಿ ಲಲಿತ, ಬಳ್ಳಾರಿ ರತ್ನಮಾಲ, ಕೆ. ಹಿರಣ್ಣಯ್ಯ (ಖಳನಟ), ಚಂದ್ರಮ್ಮ, ಪಂಢರಿಬಾಯಿ, ಚೆಂಬೈ ವೈದ್ಯನಾಥ ಭಾಗವತರ್, ಮುಸುರಿ ಕೃಷ್ಣಮೂರ್ತಿ, ಕೆ.ವಿ. ಅಚ್ಯುತರಾವ್ ಮೊದಲಾದವರು. ಮುಂದೆ ಕನ್ನಡ ಚಿತ್ರರಂಗದಲ್ಲಿ ಪ್ರಮುಖ ಹಾಸ್ಯನಟ ಹಾಗೂ ಪೋಷಕನಟರಾಗಿ ಕಾಣಿಸಿಕೊಂಡ ಮುಸುರಿ ಕೃಷ್ಣಮೂರ್ತಿ ಹಾಗೂ ಪಂಢರೀಬಾಯಿ ಅವರುಗಳ ಅಭಿನಯದ ಮೊದಲ ಚಿತ್ರವಿದು.

1943ರಲ್ಲಿ ಶ್ರೀ ವಿಜಯಾ ಫಿಲಂ ಲಾಂಛನದಲ್ಲಿ ನಟಿ ಶ್ರೀಮತಿ ಎಂ.ವಿ. ರಾಜಮ್ಮ, ಎಸ್.ಆರ್.ಕುಲಕರ್ಣಿ ಅವರ ಕಥೆ ಆಧರಿಸಿ **ರಾಧಾರಮಣ** ಚಿತ್ರ ತಯಾರಿಸಿದರು. ಬಿ.ಆರ್. ಪಂತುಲು, ಎಂ.ವಿ. ರಾಜಮ್ಮ ಡಿಕ್ಕಿ ಮಾಧವರಾವ್, ಸೋರಟ್ ಅಶ್ವತ್ಥ್, ಮೋಹನ್ ಕುಮಾರಿ, ಸೋಹನ್ ಕುಮಾರಿ, ಜಿ.ವಿ. ಅಯ್ಯರ್, ಬಾಲಕೃಷ್ಣ



"ಒಂದು ಹೆಣ್ಣಿನ ಕಥೆ" ಪಂತುಲು ನಿರ್ದೇಶನದ ಕೊನೆಯ ಚಿತ್ರದಲ್ಲಿ ಎಂ. ವಿ. ರಾಜಮ್ಮ

ಎ.ಕೆ. ಶ್ರೀನಿವಾಸರಾವ್ ಮೊದಲಾದವರು ಅಭಿನಯಿಸಿದ್ದ ಈ ಚಿತ್ರವನ್ನು ಜ್ಯೋತಿಷಸಿನ್ಹ ಅವರು ನಿರ್ದೇಶಿಸಿದ್ದರು. ಈ ಚಿತ್ರ ತಯಾರಿಸುವ ಮೂಲಕ ಎಂ.ವಿ. ರಾಜಮ್ಮನವರು ಕನ್ನಡದ ಪ್ರಥಮ ಮಹಿಳಾ ನಿರ್ಮಾಪಕಿ ಎನಿಸಿಕೊಂಡರು. ಈ ಚಿತ್ರದ ಮೂಲಕ ಹಾಸ್ಯನಟ ಟಿ.ಎನ್. ಬಾಲಕೃಷ್ಣ ಹಾಗೂ ಜಿ.ವಿ. ಅಯ್ಯರ್ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಸಂಗೀತ ಎಚ್. ಆರ್. ಪದ್ಮನಾಭಶಾಸ್ತ್ರಿಗಳದು.

**ಎಂ. ವಿ. ರಾಜಮ್ಮ**

ವೃತ್ತಿ ರಂಗಭೂಮಿಯ ಮಹಮದ್ ಪೀರ್ ಅವರು ಸ್ಥಾಪಿಸಿದ 'ಶ್ರೀ ಚಂದ್ರಕಲಾ ನಾಟಕ ಮಂಡಲಿ'ಯ ಕೊಡುಗೆ ಎಂ. ವಿ. ರಾಜಮ್ಮ ಬೆಂಗಳೂರು ಜಿಲ್ಲೆಯ ಅಂಗೊಂಡ ಹಳ್ಳಿಯಲ್ಲಿ 1921ರಲ್ಲಿ ಜನನ, ನಂಜಪ್ಪ, ಸುಬ್ಬಮ್ಮನವರ ಪುತ್ರಿ. ಕಂಪನಿಯ ಸಂಸಾರ ನೌಕ, ಸದಾರಮೆ, ಶಾಹಜಹಾನ್, ಬುದ್ಧ ಮೊದಲಾದ ನಾಟಕಗಳಲ್ಲಿ ಅಭಿನಯಿಸಿ ಜನಪ್ರಿಯರಾದರು. 1935ರಲ್ಲಿ ಮೊದಲ ಸಾಮಾಜಿಕ ಚಿತ್ರ "ಸಂಸಾರ ನೌಕ"ದಲ್ಲಿ ನಾಯಕಿಯಾಗಿ ಅಭಿನಯ. ಇದೇ ಅವರ ಅಭಿನಯದ ಮೊದಲ ಚಿತ್ರ. ರಾಜಮ್ಮನವರ ಅಭಿನಯ, ಸೌಂದರ್ಯಕ್ಕೆ ಮಾರುಹೋದ ತೆಲುಗು ನಿರ್ಮಾಪಕ-ನಿರ್ದೇಶಕ ಚಿತ್ರಪು. ನರಸಿಂಹಮೂರ್ತಿ **ಕೃಷ್ಣಜರಾಸಂಧ** ತೆಲುಗು ಚಿತ್ರಕ್ಕೆ ರಾಜಮ್ಮನವರನ್ನು ನಾಯಕಿಯನ್ನಾಗಿಸಿದರು.



ಕನ್ನಡ ಚಿತ್ರರಂಗದ ಮೊದಲ ನಿರ್ಮಾಪಕಿ ಎಂ. ವಿ. ರಾಜಮ್ಮ, 1943ರಲ್ಲಿ ಇವರು "ರಾಧಾರಮಣ" ಚಿತ್ರ ನಿರ್ಮಿಸಿದರು.

ಜನಪ್ರಿಯ ನಟ ವೇಮೂರಿ ಗಗ್ಗಯ್ಯನವರ ಜತೆ ಅಭಿನಯ. ನಂತರ ತಮಿಳು-ತೆಲುಗಿನಲ್ಲಿ ಬಿಡುವಿಲ್ಲದ ನಟಿಯಾದರು. ಮದನ ಕಾಮರಾಜನ್ ಚಿತ್ರ ರಾಜಮ್ಮನವರನ್ನು ತಮಿಳು ಚಿತ್ರರಂಗದಲ್ಲಿ ಖ್ಯಾತಿಗೇರಿಸಿತು. ತಮಿಳು ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಆಗ ಕನ್ನಡದಲ್ಲಿ ಪ್ರಹ್ಲಾದ (1942) ನಿರ್ಮಿಸಿದರು. ರಾಜಮ್ಮ ಅದರಲ್ಲಿ ಕಯಾದು. ಅನಂತರವೇ ರಾಜಮ್ಮನವರಿಗೆ ನಾನೂ ಏಕೆ ಕನ್ನಡದಲ್ಲಿ ಚಿತ್ರ ನಿರ್ಮಿಸಬಾರದೆಂಬ ಬಯಕೆ. ರಾಧಾರಮಣ ನಿರ್ಮಾಣವಾದದ್ದು ಹೀಗೆ. ಈ ಚಿತ್ರ ನಿರ್ಮಾಣದ ನಂತರ ತೆಲುಗು-ತಮಿಳು ಚಿತ್ರರಂಗದಲ್ಲಿ ಮತ್ತೆ ಜನಪ್ರಿಯತೆಯ ತುದಿ ತಲುಪಿದ ರಾಜಮ್ಮ ಮತ್ತೆ ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಆರಂಭಿಸಿದ್ದು 1955ರಲ್ಲಿ ತಯಾರಾದ ಪದ್ಮಿನಿ ಪಿಕ್ಚರ್ಸ್‌ನ "ಮೊದಲ ತೇದಿ" ಮೂಲಕವೇ. ನಂತರ ನಂಬೆಕ್ಕ, ರತ್ನಗಿರಿ ರಹಸ್ಯ, (1957), ಸ್ಕೂಲ್ ಮಾಸ್ಟರ್ (1958), ಕಿತ್ತೂರು ಚೆನ್ನಮ್ಮ ಅಬ್ಬಾ! ಆ ಹುಡುಗಿ!, ನಂತರ ಸ್ವಂತ ನಿರ್ಮಾಣ ಮಕ್ಕಳ ರಾಜ್ಯ (1960), ಗಾಳಿಗೋಪುರ, ತಾಯಿಕರುಳು, ಸತಿಶಕ್ತಿ, ದುಡ್ಡೇ ದೊಡ್ಡಪ್ಪ, ಅಮ್ಮ, ಎಮ್ಮೆತಮ್ಮಣ್ಣ, ಒಂದು ಹೆಣ್ಣಿನ ಕಥೆ, ಮಾಲತೀಮಾಧವ, ಶ್ರೀ ಕೃಷ್ಣದೇವರಾಯ, ಬಂಗಾರದ ಪಂಜರ, ತಾಯಿದೇವರು, ಸಂಪತ್ತಿಗೆ ಸವಾಲ್, ಜಗಮೆಚ್ಚಿದ ಮಗ, ದಾರಿ ತಪ್ಪಿದ ಮಗ, ತ್ರಿಮೂರ್ತಿ, ಬೆಸುಗೆ, ಅದೇ ಹೃದಯ ಅದೇ ಮಮತೆ, ವಿಜಯವಾಣಿ ಅವರ ಅಭಿನಯದ ಕನ್ನಡ ಚಿತ್ರಗಳು. ಚರ್ತುಭಾಷಾತಾರೆಯಾದ ರಾಜಮ್ಮ ಒಟ್ಟು 175 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.




1943ರಲ್ಲೇ ಕಲ್ಯಾಣಿ ಫಿಲಂಸ್ ಲಾಂಛನದಲ್ಲಿ ಕೆ. ಸುಬ್ರಹ್ಮಣ್ಯಂ ನಿರ್ದೇಶನದಲ್ಲಿ ಕೃಷ್ಣ ಸುಧಾಮ ಎಂಬ ಚಿತ್ರ ಬಿಡುಗಡೆಯಾಯಿತು. ಬೆಳ್ಳಾವೆ ನರಹರಿಶಾಸ್ತ್ರಿ, ಮಧುಗಿರಿ ಮೀನಾಕ್ಷಿ, ಕುಮಾರಿ ಚಂದ್ರಮ್ಮ, ಜಿ. ಎಸ್. ಸುಬ್ಬಲಕ್ಷ್ಮಿ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. "ಭಕ್ತ ಸುಧಾಮ" ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿರುವ ಎಸ್.ಕೆ. ಪದ್ಮಾದೇವಿ (ಮಧುಗಿರಿ ಮೀನಾಕ್ಷಿ) ಅವರು ಅಂದಿನ ದಿನಗಳನ್ನು ಸ್ಮರಿಸಿಕೊಂಡಿರುವುದು ಹೀಗೆ : "ಕೃಷ್ಣ ಸುಧಾಮದಲ್ಲಿ ನಾನು ನಾಯಕಿ. ಆದರೆ ಅದು 24 ಮಕ್ಕಳ ತಾಯಿಯ ಪಾತ್ರ. ಆಗ ನನಗೆ ಇನ್ನೂ 24 ವಯಸ್ಸೇ ಆಗಿರಲಿಲ್ಲ. 24 ಮಕ್ಕಳನ್ನು ಸುತ್ತ ಇಟ್ಟುಕೊಂಡು ಅಭಿನಯಿಸಿದೆ. ನಾಯಕ ಪ್ರಧಾನ ಚಿತ್ರವಾದ್ದರಿಂದ ನನ್ನ ಪಾತ್ರಕ್ಕೆ ಪ್ರಾಧಾನ್ಯವಿರಲಿಲ್ಲ. ಈ ಚಿತ್ರದ ಹಾಡುಗಳು ರೆಕಾರ್ಡ್ ಆಗಿ ರೇಡಿಯೋದಲ್ಲಿ ಪ್ರಸಾರವಾಗುತ್ತಿತ್ತು. 'ಯದುಕುಲಾನಂದನೆ ಪಾಲಿಸೋ ಮಧುರಗಾನ ಲೀಲಾಮಯನೇ ಶೃತಿಸುತ, ಶುಭಚರಿತ ಮುಕುಂದ, ಅತಿಶಯ ದಯಾಮಯನುತಪಾಲ ಶ್ರೀ ಗೋಪಾಲ' ಎಂಬ ಹಾಡು ತುಂಬಾ ಜನಪ್ರಿಯವಾಯಿತು. ಈ ಚಿತ್ರದಲ್ಲಿ ನನ್ನ ಹೆಸರನ್ನು ಮೀನಾಕ್ಷಿ ಮಧುಗಿರಿ ಎಂದು ಬದಲಾಯಿಸಿಕೊಂಡೆ. ಪದ್ಮಾದೇವಿ ಎನ್ನುವ ಹೆಸರಿನಿಂದ ಬಂದ ಅದೃಷ್ಟ ಈ ಹೆಸರಿನಿಂದ ತೆರೆಯಬಹುದು ಎಂಬ ಆಸೆಯಿತ್ತು."

ಹೀಗೆ ಚಿತ್ರರಂಗದ ಆರಂಭದ ಹೆಜ್ಜೆ ಗುರುತುಗಳು, ಸಾಹಸ, ಹೊಸ ಆವಿಷ್ಕಾರದ ವಿಸ್ಮಯ ದಾಖಲೆಗಳಿಂದ ಕೂಡಿ ಮುಂದುವರೆಯಿತು.

ಕೃಷ್ಣಸುಧಾಮದಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿ, ಪದ್ಮಾದೇವಿ

# ಸ್ವಾತಂತ್ರ್ಯ....

ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಫಿಲಂಗಳ ರೇಷನಿಂಗ್‌ನಿಂದಾಗಿ ಕನ್ನಡ ಚಲನಚಿತ್ರ ಬೆಳವಣಿಗೆ ಕುಂಠಿತವಾಗಿತ್ತು. ಸ್ವಾತಂತ್ರ್ಯ ದೊರಕಿದ ಕೂಡಲೇ ಲೈಸನ್ಸ್ ಪಡೆಯಲೇ ಬೇಕಾದ ಕಾನೂನು ರದ್ದಾಯಿತು. ಅನಂತರದ ದಿನಗಳಲ್ಲಿ ಕನ್ನಡ ಚಲನಚಿತ್ರರಂಗಕ್ಕೆ ದೊರೆತ ಸ್ವಾತಂತ್ರ್ಯದ ಬಗ್ಗೆ ಸಮೀಕ್ಷೆ ಅಗತ್ಯ. 1934ರಲ್ಲಿ ಆರಂಭವಾದ ವಾಕ್ಚಿತ್ರಯುಗ ಮಂದಗತಿಯಲ್ಲಿ ಸಾಗುತ್ತಿದ್ದುದು ಅಲ್ಲಿಯವರೆಗಿನ ಬೆಳವಣಿಗೆ, ಸ್ವಾತಂತ್ರ್ಯ ಹೋರಾಟ ಕನ್ನಡ ಚಿತ್ರರಂಗದ ಪಾಲಿಗೆ ವಸ್ತುವಾಗಲೇ ಇಲ್ಲ. ಇದು ನಿಜಕ್ಕೂ ವಿಶ್ಲೇಷಣೆಗೆ ಒಳಪಡಬೇಕಾದ ವಿಚಾರ. ವಾಕ್ಚಿತ್ರ ಆರಂಭವಾದ 1934ರಿಂದ 1947ರವರೆಗೆ ಹದಿನಾರು ಚಿತ್ರಗಳು ಬಿಡುಗಡೆಯಾಗಿದ್ದರೂ, ಯಾವೊಂದು ಚಿತ್ರವೂ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ, ಬ್ರಿಟಿಷರ ದಬ್ಬಾಳಿಕೆ, ಆಂಗ್ಲರ ಶೋಷಣೆಯನ್ನು ಕುರಿತದ್ದಾಗಿರಲಿಲ್ಲ. 1947ರಲ್ಲಿ ಬಿಡುಗಡೆಯಾದ **ಮಹಾತ್ಮ ಕಬೀರ್** ಮಾತ್ರ ಹಿಂದೂ ಮುಸ್ಲಿಂ ಏಕತೆ ಪ್ರತಿಪಾದಿಸುವ ಸಮಕಾಲೀನ ಸಮಸ್ಯೆಯತ್ತ ದೃಷ್ಟಿಬೀರಿದ ವಸ್ತುವನ್ನುಳ್ಳ ಚಿತ್ರವಾಗಿತ್ತು.

1936ರಲ್ಲಿ ಎಚ್. ಎಲ್. ಎನ್. ಸಿಂಹ ಅವರು ಬರೆದು ನಿರ್ದೇಶಿಸಿದ ***ಸಂಸಾರನೌಕ***ದಲ್ಲಿ ಸಾಮಾಜಿಕ ಸಮಸ್ಯೆ, ವರದಕ್ಷಿಣೆ ಕಿರುಕುಳ, ನಿರುದ್ಯೋಗ ಸಮಸ್ಯೆಗಳಿದ್ದವು ಎನ್ನುವುದನ್ನು ಬಿಟ್ಟರೆ ಸ್ವಾತಂತ್ರ್ಯ ಸಂಗ್ರಾಮ ನಮ್ಮನ್ನೇಕೆ ತಟ್ಟಲಿಲ್ಲ ಎಂಬುದು ಗೂಢವಾಗಿದೆ. ಈ ಅವಧಿಯಲ್ಲಿ ಬಿಡುಗಡೆಯಾದ ***ಸಂಸಾರನೌಕ***, **ಜೀವನನಾಟಕ** ಮತ್ತು **ವಾಣಿ** ಚಿತ್ರಗಳನ್ನು ಬಿಟ್ಟರೆ ಉಳಿದವೆಲ್ಲಾ ಪೌರಾಣಿಕ ಮತ್ತು ಜಾನಪದ ಚಿತ್ರಗಳು. ಅದುವರೆಗೆ ಬಹಳ ಜನಪ್ರಿಯ ಕಲಾಮಾಧ್ಯಮವಾಗಿದ್ದ ರಂಗಭೂಮಿಯ ನೆರಳೇ ವಾಕ್ಚಿತ್ರದಲ್ಲೂ ಮುಂದುವರೆದಿರುವುದನ್ನು ಇದು ಸ್ಪಷ್ಟವಾಗಿ ಹೇಳುತ್ತದೆ. ಅಂದು ವೃತ್ತಿ ನಾಟಕ ಕಂಪನಿಗಳ ವಸ್ತು ಆಯ್ಕೆ ಇದೇ ಆಗಿರುತ್ತಿತ್ತು.

"ನಮ್ಮಲ್ಲಿ ಹೊರಬಂದ ಸಾಮಾಜಿಕ ಚಿತ್ರಗಳ ಆರಂಭಕಾಲದ ವಿಫಲತೆಗೆ ಅನೇಕ ತಾಂತ್ರಿಕ ಲೋಪದೋಷಗಳಿದ್ದರೂ ಮುಖ್ಯವಾಗಿ ನಮ್ಮ ರಂಗಭೂಮಿಯೂ ಇದಕ್ಕೆ ಕೊಂಚಮಟ್ಟಿಗೆ ಜವಾಬ್ದಾರಿಯಾಗಿದೆ ಎಂದರೆ ತಪ್ಪಲ್ಲ. ವೃತ್ತಿನಾಟಕ ಕಂಪನಿಗಳು ಪರಿಸ್ಥಿತಿಯ ಹೊಡೆತಕ್ಕೆ ಸಿಕ್ಕಿ ಅನೇಕ ದಶಕಗಳಿಂದ ಸಂಪೂರ್ಣ ರಾಮಾಯಣ, ಕೃಷ್ಣಗಾರುಡಿ, ಕೃಷ್ಣಲೀಲ, ಸದಾರಮೆ,



ಸ್ವಾತಂತ್ರ್ಯ ದೊರಕಿದ ದಿನ ಜನಿಸಿದ ಮಹಾತ್ಮ ಪಿಕ್ಚರ್ಸ್‌ಗೆ ಮಹಾತ್ಮ ಗಾಂಧೀಜಿ ಅವರೇ ಲಾಂಛನ.

ಗುಲೇಬಕಾವಲಿ, ಭಕ್ತ ಪ್ರಹ್ಲಾದ.. ಮೊದಲಾದ ನಾಟಕಗಳನ್ನೇ ಆಡಿ ಆಡಿ ಚಿತ್ರರಂಗದಿಂದಲೂ ಜನ ಅಂತಹುದನ್ನೇ ನಿರೀಕ್ಷಿಸುವ ಹಾಗೆ ಮಾಡಿದ್ದರು" ಎಂದು ಶ್ರೀ ಎಂ. ಆರ್. ರಾಮಸ್ವಾಮಿ ಅಭಿಪ್ರಾಯ ಪಡುತ್ತಾರೆ.

1934ರಿಂದಲೇ ಕನ್ನಡ ಚಿತ್ರರಂಗ ಕಷ್ಟನಷ್ಟಗಳನ್ನು ಎದುರಿಸಿಯೇ ಮುಂದುವರೆಯಿತು. 1936ರ "ಸಂಸಾರನೌಕ" ತೆಲುಗು, ತಮಿಳು, ಮರಾಠಿ ಭಾಷೆಗಳಿಗೆ ಡಬ್ ಆಯಿತು ಎಂಬ ವಿಷಯ ಕನ್ನಡದಲ್ಲಿ ಸತ್ವಶಾಲಿ ಕತೆಗಳು ಬರುತ್ತವೆ ಎಂಬುದಕ್ಕೆ ಉದಾಹರಣೆ. *ಸಂಸಾರನೌಕ*ದ ಯಶಸ್ಸಿನ ನಂತರ ಕನ್ನಡದಲ್ಲಿ ಅದೇ ಜಾಡು ಬೆಳೆಯಲಿಲ್ಲ. ನಮ್ಮವರು ಪೌರಾಣಿಕ, ಜಾನಪದಗಳ ಬೇರನ್ನು ಭದ್ರವಾಗಿಯೇ ಹಿಡಿದುಕೊಂಡಿದ್ದರು. ಸಾಮಾಜಿಕ ಚಿತ್ರ ತೆಗೆಯುವ ಯತ್ನ ಎರಡುಬಾರಿ ನಡೆಯಿತಾದರೂ, ಪರಿಪೂರ್ಣವಾಗಿ ಮತ್ತೆ ಸಾಮಾಜಿಕದ ಒಲವು ಕಂಡು ಬರುವುದು 1948ರಲ್ಲಿ ಬಿಡುಗಡೆಯಾದ **ಭಾರತಿ** ಚಿತ್ರದಿಂದ.

ಮಹಾತ್ಮ ಪಿಕ್ಚರ್ಸ್

1947ರ ವೈಶಿಷ್ಟ್ಯವೆಂದರೆ ಆ ವರ್ಷ ಮೈಸೂರಿನಲ್ಲಿ "ಮಹಾತ್ಮ ಪಿಕ್ಚರ್ಸ್" ಉದಯವಾದದ್ದು ಹಾಗೂ ಆರ್. ನಾಗೇಂದ್ರರಾವ್ ಅವರು ಆರ್.ಎನ್. ಆರ್. ಪಿಕ್ಚರ್ಸ್ ಸ್ಥಾಪನೆ ಮಾಡಿದ್ದು. ಮಹಾತ್ಮ ಗಾಂಧೀಜಿಯವರ ಹೋರಾಟ, ನೇತೃತ್ವ, ವ್ಯಕ್ತಿತ್ವದಿಂದ ಪ್ರೇರಿತರಾಗಿ, ಅವರ ಆಕರ್ಷಣೆಗೊಳಗಾಗಿದ್ದ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಡಿ. ಶಂಕರ್‌ಸಿಂಗ್, ಮಹಾತ್ಮ ಪಿಕ್ಚರ್ಸ್ ಸ್ಥಾಪಿಸಿದರು. ತಮ್ಮ ಚಿತ್ರ ತಯಾರಿಕಾ ಸಂಸ್ಥೆಗೆ ಮಹಾತ್ಮನ ಹೆಸರಿಟ್ಟ ಶಂಕರ್‌ಸಿಂಗ್ ತಯಾರಿಸಿದ ಬಹುತೇಕ ಚಿತ್ರಗಳು ಪೌರಾಣಿಕವಾಗಿದ್ದವು.

ಅರಸೀಕೆರೆಯಲ್ಲಿ ಮಹಾತ್ಮ ಟೂರಿಂಗ್ ಟಾಕೀಸ್ ಹಾಗೂ ಜವಾಹರ್ ಟೂರಿಂಗ್ ಟಾಕೀಸ್‌ಗಳನ್ನು ನಡೆಸುತ್ತಿದ್ದ ಡಿ. ಶಂಕರ್ ಸಿಂಗ್ ಹಾಗೂ ಅವರ ಪಾಲುದಾರರಾಗಿದ್ದ ಬಿ. ವಿಠಲಾಚಾರ್ಯ ಮತ್ತು ವಿಶ್ವನಾಥಶೆಟ್ಟಿ ಮೂವರೂ ಸೇರಿ 1947ರ ಆಗಸ್ಟ್ 15 ರಂದು ಮಹಾತ್ಮ ಪಿಕ್ಚರ್ಸ್ ಚಿತ್ರನಿರ್ಮಾಣ ಸಂಸ್ಥೆಯನ್ನು ಆರಂಭಿಸಿದರು. ಈ ಸಂಸ್ಥೆಯ ಮೂಲಕ ಡಿ. ಶಂಕರ್ ಸಿಂಗ್ ಮೊದಲು ತಯಾರಿಸಿದ ಚಿತ್ರ **ಕೃಷ್ಣಲೀಲಾ** ಪೌರಾಣಿಕ. ಸಿ. ವಿ. ರಾಜು ನಿರ್ದೇಶನದ ಈ ಚಿತ್ರದಲ್ಲಿ ಕೆಂಪರಾಜು (ಡಿ. ಕೆಂಪರಾಜ ಅರಸು) ನಾಯಕರಾಗಿದ್ದರು. ಬಳ್ಳಾರಿ ಲಲಿತ, ರತ್ನಮಾಲಾ, ಪ್ರತಿಮಾ, ಕಾಂತ, ರಾಜಕುಮಾರಿ, ನಂಜನಗೂಡು ನಾಗರತ್ನ, ರಾಘವೇಂದ್ರರಾವ್, ಸೀತಾರಾಮಶಾಸ್ತ್ರಿ, ಅರಕೆರೆ ನಾರಾಯಣರಾವ್, ಪರಮಶಿವ, ಮರಿರಾವ್, ಕುಮಾರಿ ಉಷಾ (ಗೆಸ್ಟ್ ಆರ್ಟಿಸ್ಟ್) ಇತರ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಾದ ಈ ಚಿತ್ರ 1947ರ ಫೆಬ್ರವರಿ 14 ರಂದು ಬೆಂಗಳೂರಿನ ಶಾರದಾ, ಸ್ವಸ್ತಿಕ್ ಹಾಗೂ ಮೈಸೂರಿನ ರಾಜಕಮಲ್ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಯಿತು. ಪಿ. ಕಾಳಿಂಗರಾವ್ ಸಂಗೀತ ನಿರ್ದೇಶಕರಾಗಿದ್ದರು. ಕಥೆ, ಸಂಭಾಷಣೆ ರಚಿಸುವ ಮೂಲಕ ಹುಣಸೂರು ಕೃಷ್ಣಮೂರ್ತಿ ಅವರು ಈ ಚಿತ್ರದ ಮೂಲಕ ಚಿತ್ರರಂಗಕ್ಕೆ ಪದಾರ್ಪಣ ಮಾಡಿದರು. ಟಿ. ಜಾನಕಿರಾಂ ಛಾಯಾಗ್ರಾಹಕರಾಗಿದ್ದರು. ಎಂ. ಎ. ಎನ್. ಅಯ್ಯಂಗಾರ್ ಧ್ವನಿ ಮುದ್ರಣ ಮಾಡಿದ್ದರು. ನಿರ್ದೇಶಕರಾಗಿದ್ದ ಸಿ.ವಿ. ರಾಜು ಅವರೇ ಸಂಕಲನಕಾರರೂ ಆಗಿದ್ದರು.

**ಕೃಷ್ಣಲೀಲಾ** ಬಿಡುಗಡೆಯಾದಾಗ ಕನ್ನಡ ಚಿತ್ರಗಳನ್ನು ನೋಡುವವರೇ ಇರಲಿಲ್ಲ. ಆಗ



*"ಭಾರತಿ" (1949) ಟಿ. ಸೂರ್ಯ ಕುಮಾರಿ*





ಶಂಕರಸಿಂಗ್ ಅವರು ಜಟಕಾ ಗಾಡಿಯೊಂದನ್ನು ಬಾಡಿಗೆಗೆ ಪಡೆದು ರಸ್ತೆ ರಸ್ತೆಗಳಲ್ಲಿ ಸಂಚರಿಸುತ್ತಾ, ಕೇವಲ 8 ಆಣೆ ಕೊಟ್ಟು ಕನ್ನಡ ಚಿತ್ರ ನೋಡಿ.. ಎಂದು ಪ್ರಚಾರ ನಡೆಸುತ್ತಿದ್ದರಂತೆ.

"ಆ ದಿನಗಳಲ್ಲಿ ಲ್ಯಾಬ್ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಇದರಿಂದಾಗಿ ಚಿತ್ರವನ್ನು ಒಂದೇ ಸಾರಿ ಪೂರ್ತಿಯಾಗಿ ಬಿಡುಗಡೆ ಮಾಡಲು ಸಾಧ್ಯವಾಗದೆ ಮೊದಲನೆಯ ದಿನ 11 ರೀಲುಗಳನ್ನು ಮಾತ್ರ ಪ್ರದರ್ಶಿಸಲಾಯಿತು. "ಕಾಳಿಂಗ ಮರ್ಧನ" ದ ಇನ್ನೊಂದು ರೀಲನ್ನು ಸೇರಿಸಲಾಗುವುದು ಎಂದು ಬೋರ್ಡ್‌ಹಾಕಿ ಆನಂತರ ಅದನ್ನು ಸೇರಿಸಿಕೊಳ್ಳಲಾಯಿತು. ಎರಡು ದಿನಗಳ ನಂತರ ಲ್ಯಾಬ್ ಪರಿಸ್ಥಿತಿ ಉತ್ತಮಗೊಂಡ ನಂತರ ಚಿತ್ರಕ್ಕೆ ಇನ್ನೂ ಒಂದು ಹಾಡು ಸೇರಿಸಲಾಯಿತು" ಎಂದು ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಮೊದಲ ಚಿತ್ರದ ಅನುಭವವನ್ನು ಶಂಕರಸಿಂಗ್ ಅವರ ಪುತ್ರ, ನಿರ್ದೇಶಕ ಎಸ್. ವಿ. ರಾಜೇಂದ್ರಸಿಂಗ್ ಬಾಬು ನೆನಪಿಸಿಕೊಳ್ಳುತ್ತಾರೆ.

ಒಟ್ಟು 49 ಚಿತ್ರಗಳನ್ನು ತಯಾರಿಸಿರುವ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಮೂಲಕ 1948ರಲ್ಲಿ ಡಿ. ಕೆಂಪರಾಜ್ ನಿರ್ದೇಶನದಲ್ಲಿ **ಭಕ್ತ ರಾಮದಾಸ್** ಚಿತ್ರ ತಯಾರಿಸಲಾಯಿತು. ಕೆಂಪರಾಜ್, ವಿಮಲಾನಂದದಾಸ್, ಸುಮತಿ ಮೊದಲಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರ,

ಮಹಾತ್ಮ ಪಿಕ್ಚರ್ಸ್ ಸ್ಥಾಪನೆಯ ಮೂಲಕ ಹಲವಾರು ಮಹತ್ವದ ಧೀರ ನಡೆಯ ಚಲನಚಿತ್ರಗಳನ್ನು ನಿರ್ಮಿಸಿದ "ಮೈಸೂರಿಗ" ಡಿ. ಶಂಕರ್‌ಸಿಂಗ್. ಮೈಸೂರಿನಲ್ಲೇ ಚಿತ್ರ ನಿರ್ಮಿಸುವ ಛಲಹಿಡಿದು ಸಾಧಿಸಿದ ಸಾಧನೆ.

ಮಹಾತ್ಮ ಪಿಕ್ಚರ್ಸ್‌ನ ಎಲ್ಲ ಚಿತ್ರಗಳಲ್ಲಿ ಬಹುಮುಖ್ಯ ಪಾತ್ರಗಳಲ್ಲಿ ಕಂಡ ಪ್ರತಿಮಾದೇವಿ.

ನಿರ್ಮಾಪಕರಿಗೆ ನಷ್ಟ ಉಂಟು ಮಾಡಿತು. ಮಹಾತ್ಮ ಪಿಕ್ಚರ್ಸ್‌ನ ಅಂದಿನ ದಿನಗಳ ಬಹುತೇಕ ಚಿತ್ರಗಳಿಗೆ ಪಿ. ಶಾಮಣ್ಣ ಸಂಗೀತ ನಿರ್ದೇಶಕರಾಗಿದ್ದಾರೆ.

**ಭಕ್ತ ರಾಮದಾಸ್** ನ ಸೋಲಿನಿಂದ ಅಳುಕದ ಡಿ. ಶಂಕರ್‌ಸಿಂಗ್ ಮತ್ತು ಬಿ. ವಿಠಲಾಚಾರ್ಯರು 1949ರಲ್ಲಿ **ನಾಗಕನ್ನಿಕಾ** ಜಾನಪದ ಚಿತ್ರ ತಯಾರಿಸಿದರು. ಒಬ್ಬ ಮಾಂತ್ರಿಕ ಹಾಗೂ ಆತನ ಅಲೌಕಿಕ ಶಕ್ತಿಗಳ ಸುತ್ತ ಹೆಣೆದ ಕತೆ. ಸುಂದರ ತರುಣಿಯರು ಸರ್ಪಗಳಾಗುವುದು, ಋಷಿಗಳು ಕಲ್ಲಾಗುವುದು




"ಶ್ರೀಕೃಷ್ಣ ಲೀಲಾ" "ಚಿತ್ರ ಸಮಾಚಾರ್" ನಲ್ಲಿ ಬಂದ ಜಾಹಿರಾತು.

ಮುಂತಾದ ಚಮತ್ಕಾರಗಳಿದ್ದ **ನಾಗಕನ್ನಿಕಾ** ಚಿತ್ರದ ಕತೆ ಸೇಲಂನ ಮಾಡರ್ನ್ ಥಿಯೇಟರ್ಸ್‌ನಲ್ಲಿದ್ದ ಸಂಕಲನಕಾರ ಜಿ. ವಿಶ್ವನಾಥನ್ ಅವರದು. ನಿರ್ದೇಶಕರೂ ಅವರೇ. ಪಲವನ್‌ಕುಡಿ ಸಾಮಅಯ್ಯರ್ ನಾಗಕನ್ನಿಕಾಗೆ ಸಂಗೀತ ನೀಡಿದ್ದಾರೆ. ಪಲವನ್‌ಕುಡಿ ಸಾಮಅಯ್ಯರ್, ಪಿ. ಲೀಲಾ ಹಿನ್ನೆಲೆ ಗಾಯಕ ಗಾಯಕಿಯರಾಗಿದ್ದಾರೆ. ಶತದಿನೋತ್ಸವ ಆಚರಿಸಿ ಮಹಾತ್ಮ ಪಿಕ್ಚರ್ಸ್‌ನ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಿದ "ನಾಗಕನ್ನಿಕಾ" 1950 ರಲ್ಲಿ ತಮಿಳು ಭಾಷೆಗೂ ಡಬ್ ಆಗಿದೆ.



ಈ ಚಿತ್ರದ ತಾರಾಗಣದಲ್ಲಿ ಜಯಶ್ರೀ, ಬಿ. ರಾಘವೇಂದ್ರರಾವ್, ಬಳ್ಳಾರಿ ರತ್ನಮಾಲಾ, ಜಿ. ಆರ್. ಸ್ಯಾಂಡೋ, ಎಸ್. ಎಂ. ವೀರಭದ್ರಪ್ಪ, ಯು. ಮಹಾಬಲರಾವ್, ಪ್ರತಿಮಾದೇವಿ ಮೊದಲಾದವರು ಅಭಿನಯಿಸಿದ್ದಾರೆ. ಈ ಚಿತ್ರದ ಪ್ರತಿ ಈಗ ಲಭ್ಯವಿಲ್ಲ. ಚಿತ್ರ ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಾಗಿದೆ.

ಚಿತ್ರದ ನಾಯಕಿ ಜಯಶ್ರೀ ಹೇರಳವಾಗಿ ಮೈಮಾಟ ಪ್ರದರ್ಶನ ಮಾಡಿದ್ದು ಅಂದಿನ ದಿನಗಳಲ್ಲಿ ಮನೆಮಾತಾಗಿತ್ತು. ಚಿತ್ರಕ್ಕೆ ಈ ಮೂಲಕ ಹೊಸ ಆಯಾಮವೇ ಬಂದು ಕನ್ನಡ ಚಿತ್ರಗಳೂ ಕುತೂಹಲಕಾರಿ ಕೋಲಾಹಲ ಉಂಟು ಮಾಡಲಾರಂಭಿಸಿದವು. ಕನ್ನಡದಲ್ಲಿ ಅಂಗಾಂಗ ಪ್ರದರ್ಶನಕ್ಕೆ ಮುಂದಾದ ಮೊದಲ ನಟಿ ಜಯಶ್ರೀ ಎನ್ನಬಹುದು.

"1949ರ ಕೊನೆ ಮತ್ತು 1950ರಿಂದಾಚೆಗೆ ಕೆಲವು ವರ್ಷ ಕನ್ನಡ ಚಿತ್ರರಂಗದ ಮೇಲೆ ಮಹಾತ್ಮ ಪಿಕ್ಚರ್ಸ್‌ನ ಶಂಕರ್‌ಸಿಂಗ್ ಮತ್ತು ಬಿ. ವಿಠಲಾಚಾರ್ಯ ಬೀರಿದ ಪರಿಣಾಮ ಅಪಾರ. **ನಾಗಕನ್ನಿಕಾ** ಬಿಡುಗಡೆಯಾದಾಗ ಎಲ್ಲರೂ ಬೆಚ್ಚಿಬಿದ್ದರು. ಶೀಲತೆ ಅಶ್ಲೀಲತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಧರ್ಮ ಬೀರುಗಳನ್ನು ಅಣಕಿಸುವಂತಹ ರೀತಿಯಲ್ಲಿ ಸಂಪ್ರದಾಯಗಳನ್ನು ಮುರಿದ ಸಾಧನೆ ಅವರದ್ದು. ನಾಗಕನ್ನಿಕಾ ಭಿತ್ತಿಪತ್ರ, ಜಾಹೀರಾತುಗಳಲ್ಲಿ ಅವರು ಪ್ರಧಾನವಾಗಿ ಬಳಸಿದ್ದು ಆದಾಗ ತಾನೇ ಚಿತ್ರರಂಗ ಪ್ರವೇಶಿಸಿದ್ದ ಜಯಶ್ರೀ ತಮ್ಮ ವಕ್ಷಸ್ಥಳದ ಒಂದು ಪ್ರಮುಖ ಭಾಗವನ್ನು ನಿರ್ಲಜ್ಜೆಯಿಂದ ಪ್ರದರ್ಶಿಸಿದ್ದ ದೃಶ್ಯವನ್ನು. 1951ರಲ್ಲಿ ಬಿಡುಗಡೆಯಾದ **ಜಗನ್ಮೋಹಿನಿ**ಯ ಪ್ರಚಾರ ಸಾಧನವೂ ಅಪ್ಸರೆ ಹರಿಣಿಯ ಮೈ ಮಾಟದ ಸಂಪೂರ್ಣ ಉಪಯೋಗ ಪಡೆದಿತ್ತು." ಎಂದು ವಿ. ಎನ್. ಸುಬ್ಬರಾವ್ ಹೇಳುತ್ತಾರೆ.



*'ಜಗನ್ಮೋಹಿನಿ'ಯಲ್ಲಿ ಹರಿಣಿ ಶ್ರೀನಿವಾಸರಾವ್, 1951ರಲ್ಲೇ ದಾಖಲೆ*

*1949ರಲ್ಲಿ 'ನಾಗಕನ್ನಿಕಾ' ಬಿಡುಗಡೆಗೆ ಮುನ್ನ ಜಯಶ್ರೀ ಹಿನ್ನೆಲೆಗಾಯಕಿಯಾಗಿ 'ಹರಿದಾಸ' ಎಂಬ ತಮಿಳು ಚಿತ್ರದಲ್ಲಿ ಹಾಡಿ ಸಣ್ಣ ಪಾತ್ರದಲ್ಲೂ ಕಾಣಿಸಿಕೊಂಡಿದ್ದರು. ನಂತರ 'ಬಿಲ್ಹಣ' ಎಂಬ ತಮಿಳು ಚಿತ್ರದಲ್ಲಿ ಅಭಿನಯ. ಮೈಸೂರಿನ ನಿವಾಸಿಯಾದ ಜಯಶ್ರೀ, ಚಿತ್ರರಂಗದಲ್ಲಿ ಅವಕಾಶ ಅರಸಿ ಆರಂಭದ ಕೆಲ ದಿನ ಕೊಯಮತ್ತೂರಿನಲ್ಲಿದ್ದರು. "ನಾಗಕನ್ನಿಕಾ" ಯಶಸ್ಸಿನನಂತರ ಬೆಂಗಳೂರಿಗೆ ಮರಳಿದ ಅವರು 50ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ತಾಯಿ ಪಾತ್ರ ವಹಿಸಿದ್ದಾರೆ.*

1951 ರಲ್ಲಿ ಮಹಾತ್ಮ ಪಿಕ್ಚರ್ಸ್ **ಜಗನ್ಮೋಹಿನಿ** ಎಂಬ ಚಿತ್ರ ತಯಾರಿಸಿ ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ದಾಖಲೆ ನಿರ್ಮಿಸಿತು. ನಟಿ ಹರಿಣಿಯನ್ನು ತೆರೆಗೆ ತಂದ ಈ ಚಿತ್ರ 36 ವಾರಗಳ ಕಾಲ ಸತತ ಪ್ರದರ್ಶನ ಕಂಡು ಆ ಕಾಲದಲ್ಲೇ ದಾಖಲೆಯೊಂದನ್ನು ನಿರ್ಮಿಸಿತು. ಹರಿಣಿ, ಪ್ರತಿಮಾದೇವಿ, ಶ್ರೀನಿವಾಸರಾವ್, ಈಶ್ವರಪ್ಪ ಅಭಿನಯಿಸಿರುವ ಈ ಚಿತ್ರದಲ್ಲಿ ನವನಟಿ ಹರಿಣಿಯ ಮಾದಕ ಅಭಿನಯ, ಅಂಗಾಂಗ ಪ್ರದರ್ಶನ ಜನರನ್ನು ಬೆಚ್ಚಿ ಬೀಳಿಸಿ ಚಿತ್ರದ ಯಶಸ್ಸಿಗೆ ಕಾರಣವಾಯಿತು.

**ಹರಿಣಿ**

ಹರಿಣಿ ಹುಟ್ಟಿದ್ದು ಉಡುಪಿಯಲ್ಲಿ. ತಂದೆ ಪಣಿಯಾಡಿ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉದ್ಯಮಿ, ಕಾಂಗ್ರೆಸ್ ಕಾರ್ಯಕರ್ತ. ಉದ್ಯಮದಲ್ಲಿ ನಷ್ಟ ಅನುಭವಿಸಿ ಉಡುಪಿ ಬಿಟ್ಟು ಮಧುರೆಗೆ ಹೋಗಿ ನೆಲಸಿದಾಗ ಹರಿಣಿ ಐದು ವರ್ಷದ ಬಾಲೆ. ಮಧುರೆಯಲ್ಲಿ ರಾಯಲ್ ಟಾಕೀಸ್ ಸಂಸ್ಥೆಯ ಮಾಲೀಕರು **ಹರಿದಾಸ್** ಚಿತ್ರ ತೆಗೆಯುತ್ತಿದ್ದಾಗ , ನಿರ್ದೇಶಕ ಸುಂದರರಾವ್ ನಾಡಕರ್ಣಿ ಹರಿಣಿಗೆ ಆ ಚಿತ್ರದಲ್ಲಿ ಬಾಲಕನ ಪಾತ್ರ ನೀಡಿದರು. ಹೀಗೆ ಚಿತ್ರರಂಗಕ್ಕೆ ಕಾಲಿಟ್ಟ ಹರಿಣಿ, 1946-49ರ ಅವಧಿಯಲ್ಲಿ ಮೂರು ತಮಿಳು ಚಿತ್ರಗಳಲ್ಲಿ ಅಭಿನಯಿಸಿದರು.

1949ರಲ್ಲಿ ಮಧುರೆಯಿಂದ ಮದ್ರಾಸಿಗೆ ನಿವಾಸ ವರ್ಗಾವಣೆ ಆಯಿತು. ಆ ಸಮಯದಲ್ಲೇ ಶಂಕರ್‌ಸಿಂಗ್ **ಜಗನ್ಮೋಹಿನಿ** ಚಿತ್ರಕ್ಕಾಗಿ ನವತಾರೆಯೊಬ್ಬಳ ಶೋಧದಲ್ಲಿದ್ದರು. ಹರಿಣಿ ಮದ್ರಾಸಿನಲ್ಲೇ ಕಂಡರು. ಆಯ್ಕೆ ಆಯಿತು. ಜಗನ್ಮೋಹಿನಿಯ ಭಾರೀ ಯಶಸ್ಸು, ಹರಿಣಿಯನ್ನು ಅಂದಿನ ಜನಪ್ರಿಯ ನಟಿಯನ್ನಾಗಿಸಿತು. ಜಗನ್ಮೋಹಿನಿಯ ಹಿಂದೆಯೇ **ಶ್ರೀನಿವಾಸ ಕಲ್ಯಾಣ**, **ದಲ್ಲಾಳಿ**, **ಸೌಭಾಗ್ಯ ಲಕ್ಷ್ಮಿ**ಗಳಲ್ಲಿ ದುಷ್ಟ ಹೆಣ್ಣಿನ ಪಾತ್ರ ದೊರೆಯಿತು. **ಕನ್ಯಾದಾನ**ದಲ್ಲಿಯೂ ಬಿನ್ನಾಣಗಿತ್ತಿಯ ಪಾತ್ರ. ಮುಂದೆ ರತ್ನಮಂಜರಿ,



**ಕರುಣೆಯೇ ಕುಟುಂಬದ ಕಣ್ಣು** ಚಿತ್ರಗಳಲ್ಲಿ ಅಭಿನಯ ಪಕ್ವತೆಯ ಕಡೆಗೆ. **ನಂದಾದೀಪ**, **ನಾಂದಿ**ಗಳಲ್ಲಿ ಮುಗ್ಧೆ, ಹಿಂದಿ ಚಿತ್ರ **ರತ್ನದೀಪ್** ನಲ್ಲೂ ಹಾಸ್ಯ ಪಾತ್ರದಲ್ಲಿ ಹರಿಣಿ ಅಭಿನಯಿಸಿದ್ದಾರೆ. 1968ರಲ್ಲೇ ಅಭಿನಯ ವೃತ್ತಿಗೆ ಹರಿಣಿ ವಿದಾಯ ಹೇಳಿದರು.

1947ರಲ್ಲೇ ಆರ್. ನಾಗೇಂದ್ರರಾವ್ ಅವರು **ಮಹಾತ್ಮ ಕಬೀರ್** ಚಿತ್ರ ನಿರ್ಮಿಸಿದರು. ಎಂ. ವಿ. ಸುಬ್ಬಯ್ಯನಾಯ್ಡು, ಆರ್. ನಾಗೇಂದ್ರರಾವ್, ಲಕ್ಷ್ಮೀಬಾಯಿ, ಕಮಲಾಬಾಯಿ, ಎಂ. ಜಿ. ಮರಿರಾವ್, ಪಿ. ವಿ. ಯೋಗೀಶ್ವರ, ಎನ್. ಜಯಮ್ಮ, ಪಾರ್ವತಿಬಾಯಿ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಎಸ್.

'ಜಗನ್ಮೋಹಿನಿ'ಯದೇ ಮತ್ತೊಂದು ದೃಶ್ಯದಲ್ಲಿ ಹರಿಣಿ.



ಸುಬ್ಬರಾಮಯ್ಯ ಸಂಗೀತ ನಿರ್ದೇಶಕರು, ಶ್ರೀ ಗಣೇಶ್ ಪಿಕ್ಚರ್ಸ್ ಸರ್ಕ್ಯೂಟ್ ಮತ್ತು ಎಸ್. ಎಸ್. ಎಸ್. ನಾಟಕ ಮಂಡಳಿಯ ಸಂಯುಕ್ತ ತಯಾರಿಕೆ ಈ ಚಿತ್ರ.

ಸ್ವಾತಂತ್ರ್ಯ ಸಮಯದಲ್ಲಿ ಐಕ್ಯತೆ ಸಾಧನೆ ಸಂದೇಶವುಳ್ಳ **ಮಹಾತ್ಮ ಕಬೀರ್** ಸಾಮಾಜಿಕ ಕಾಳಜಿಯ ಹಿನ್ನೆಲೆಯಲ್ಲಿ ತಯಾರಾಗಿದೆ ಎಂಬುದೇ ಮೆಚ್ಚತಕ್ಕ ಅಂಶ. "ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ಹಿಂದು ಮುಸ್ಲಿಂ ಹತ್ಯಾಕಾಂಡ ನಡೆಯುತ್ತಿದ್ದಾದ್ದರಿಂದ ಹಿಂದೂ-ಮುಸ್ಲಿಂ ಏಕತೆಗೆ ಸಾಧಕವಾಗುವ ಚಿತ್ರ ತೆಗೆಯಬೇಕೆಂದು ಯೋಚಿಸಿ "ಮಹಾತ್ಮ ಕಬೀರ್" ಕತೆಯನ್ನು ಚಿತ್ರಿಸುವ ತೀರ್ಮಾನಕ್ಕೆ ಬಂದುದಾಗಿ ಆ ಚಿತ್ರದ ನಿರ್ದೇಶಕ ಆರ್. ನಾಗೇಂದ್ರರಾವ್" ಇದು ನನ್ನ ಕಥೆ" ಯಲ್ಲಿ ಹೇಳಿದ್ದಾರೆ. ಕನ್ನಡ ಚಿತ್ರವೊಂದು ರಾಷ್ಟ್ರೀಯ ಮನೋಭಾವಕ್ಕೆ ಸ್ಪಂದಿಸಿದೆ ಎನ್ನುವುದಕ್ಕೆ ಸ್ಪಷ್ಟ ಉದಾಹರಣೆ "ಕಬೀರ್".

ಚಿತ್ರ ತಯಾರಾಗುವಾಗಲೇ ಇದು ಸೆನ್ಸಾರ್ ಆಗುವುದು ಕಷ್ಟ ಎಂದು ನಾಗೇಂದ್ರರಾವ್ ಅವರನ್ನು ಬಹಳ ಜನ ಹೆದರಿಸಿದರಂತೆ. ಆದರೆ ಸೆನ್ಸಾರ್ ಮಂಡಳಿ ಈ ಚಿತ್ರವನ್ನು ಶುದ್ಧ ಚಿತ್ರ ಎಂದು ಹೇಳಿ ಶಿಫಾರಸು ಮಾಡಿತು. ಮೈಸೂರಿನಲ್ಲಿ ಈ ಚಿತ್ರ ಶತದಿನೋತ್ಸವ ಆಚರಿಸಿತು. ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯುತ್ತಿದ್ದರೂ ಹಿಂದೂ-ಮುಸ್ಲೀಂ ಗಲಾಟೆ ಆರಂಭವಾಗಿ ಕರ್ಫ್ಯೂ ಜಾರಿಗೆ ಬಂದುದರಿಂದ ಚಿತ್ರ ಪ್ರದರ್ಶನ ರದ್ದಾಯಿತು.

ಹೀಗೆ ಈ ರೀತಿಯ ಪ್ರಯೋಗವೊಂದನ್ನು ಬಿಟ್ಟರೆ ಉಳಿದವೆಲ್ಲಾ ಸಾಮಾನ್ಯ ಪ್ರಯೋಗಗಳೇ. 1952ರಲ್ಲಿ ಮಹಾತ್ಮ ಪಿಕ್ಚರ್ಸ್ ಅವರ **ಶ್ರೀ ಶ್ರೀನಿವಾಸ ಕಲ್ಯಾಣ**ದಲ್ಲಿ ರಾಜಕುಮಾರ್ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ವಿಮಲಾನಂದ ದಾಸ್, ಪ್ರತಿಮಾದೇವಿ ಈ ಚಿತ್ರದ ಪ್ರಮುಖ ತಾರಾಗಣದಲ್ಲಿದ್ದರು. 1947ರಿಂದ 1953ರವರೆಗೆ ಏಳು ವರ್ಷಗಳ ಅವಧಿಯಲ್ಲಿ 22 ಕನ್ನಡ ಚಿತ್ರಗಳು ಬಿಡುಗಡೆಯಾದವು.

"ಮಹಾತ್ಮ ಕಬೀರ್" ಚಿತ್ರದ ಒಂದು ಭಾವನಾತ್ಮಕ ಸನ್ನಿವೇಶ ಎಂ. ಜಿ. ಮರಿರಾವ್ - ಎಂ. ವಿ. ಸುಬ್ಬಯ್ಯನಾಯ್ಡು.

ಆದರಲ್ಲಿ ಏಳು ಚಿತ್ರಗಳು ಮಹಾತ್ಮ ಪಿಕ್ಚರ್ಸ್‌ನ ತಯಾರಿಕೆ. 1937ರಲ್ಲಿ ತಯಾರಾಗಿದ್ದ **ರಾಜಸೂಯಯಾಗ** ಮತ್ತೆ ಬಿಡುಗಡೆಗೊಂಡಿತು. 1947ರಲ್ಲಿ ತೆರೆಕಂಡಿದ್ದ **ಕೃಷ್ಣ ಲೀಲಾ** ಮತ್ತೆ 1953ರಲ್ಲಿ **ಶ್ರೀಕೃಷ್ಣ** ಎನ್ನುವ ಹೆಸರಿನಲ್ಲಿ ಬಿಡುಗಡೆಯಾಯಿತು. ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ರವರು "ಗುಣಸಾಗರಿ" ನಿರ್ಮಿಸಿದರು. ಎಚ್. ಎಲ್. ಎನ್. ಸಿಂಹ ಅವರ ನಿರ್ದೇಶನದ ಈ ಜಾನಪದ ಚಿತ್ರದಲ್ಲಿ ಹೊನ್ನಪ್ಪ ಭಾಗವತರ್, ಪಂಢರಿಬಾಯಿ,ಗುಬ್ಬಿ ವೀರಣ್ಣ, ಟಿ. ಎಸ್. ಬಾಲಯ್ಯ, ಬಿ. ಜಯಮ್ಮ, ಕೃಷ್ಣ ಕುಮಾರಿ, ಬಳ್ಳಾರಿ ಲಕ್ಷ್ಮೀಕಾಂತಂ ಅಭಿನಯಿಸಿದ್ದಾರೆ.

**ಪಂಪಾ ಪಿಕ್ಚರ್ಸ್**

1947ರಲ್ಲಿ ತೆರೆಕಂಡ **ಚಂದ್ರಹಾಸ** ಕನ್ನಡದ 17ನೇ ವಾಕ್ಚಿತ್ರ. ಲಕ್ಷ್ಮೀಶಕವಿಯ ಜೈಮಿನಿಭಾರತದಲ್ಲಿ ಬರುವ "ಚಂದ್ರಹಾಸ"ನ ಕತೆಯನ್ನು ಬೆಳ್ಳಿತೆರೆಗೆ ಉನ್ನತ ಮಟ್ಟದಲ್ಲಿ ತಂದುದು ಈ ಚಿತ್ರದ ಹೆಗ್ಗಳಿಕೆ. ಉತ್ತರ ಕರ್ನಾಟಕ ಭಾಗದಲ್ಲಿ ತಯಾರಾಗಿ ಬಿಡುಗಡೆಯಾದ 2ನೇ ಚಿತ್ರ.

ಮುಂಬೈನ ಪಂಪಾ ಪಿಕ್ಚರ್ಸ್ ಅವರು ತಯಾರಿಸಿದ ಏಕಮೇವ ಚಿತ್ರ **ಚಂದ್ರಹಾಸ**. 1947ರಲ್ಲಿ ಸ್ವಾತಂತ್ರ್ಯೋದಯದೊಂದಿಗೆ ಬಿಡುಗಡೆಯಾದ **ಚಂದ್ರಹಾಸ**. ಮುಂಬಯಿ, ಬೆಳಗಾವಿ, ಹುಬ್ಬಳ್ಳಿಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಯಿತು. ಶಾಂತೇಶ ಪಾಟೀಲ ಅವರು ನಿರ್ದೇಶಿಸಿದ ಈ ಚಿತ್ರಕ್ಕೆ ಎನ್. ಕೆ. ಕುಲಕರ್ಣಿ ಕತೆ, ಸಂಭಾಷಣೆ ರಚಿಸಿದ್ದಾರೆ. ಮಲ್ಲಿಕಾರ್ಜುನ ಮನ್ಸೂರ ಸಂಗೀತ ನೀಡಿದ್ದಾರೆ. ಮಿಸ್ ತಿಲೋತ್ತಮಾ, ಅಮೀರಬಾಯಿ ಕರ್ನಾಟಕಿ, ವಿಕಾಸ್ ಶಹಾ (ರಾಜಕಮಲ್ ಸ್ಟುಡಿಯೋ ಖ್ಯಾತಿಯ ಗುಜರಾತಿ ನಟಿ) ಹಂದಿಗನೂರು ಸಿದ್ದರಾಮಪ್ಪ, ಕುಂದಾಪುರ ಬಿ. ಶಾರದಾ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

1946ರಲ್ಲಿ ಮುಂಬೈನ ದಾದರ್‌ನಲ್ಲಿ ಶ್ರೀ ಸೌಂಡ್ ಸ್ಟುಡಿಯೋದಲ್ಲಿ ಸೌಂಡ್ ಎಂಜಿನಿಯರ್ ಆಗಿದ್ದ ಶಾಂತೇಶ ಪಾಟೀಲರು ಆ ಕೆಲಸ ಬಿಟ್ಟು, ಪಂಪಾ ಪಿಕ್ಚರ್ಸ್ ಎಂಬ ಕನ್ನಡ ಚಲನಚಿತ್ರ ಸಂಸ್ಥೆ ಆರಂಭಿಸಿದರು. ಲಕ್ಷ್ಮೀಶನ ಚಂದ್ರಹಾಸ ಸಿದ್ಧವಾಯಿತು. ಮುಂಬೈಯಲ್ಲಿ ಕನ್ನಡ ಕಲಾವಿದರನ್ನು ಹುಡುಕುವುದೇ ಕಷ್ಟದ ವಿಷಯ. ವಿಕಾಸ್ ಶಹಾ ಎಂಬ ಗುಜರಾತಿ ನಟ ಚಂದ್ರಹಾಸನ ಪಾತ್ರ ವಹಿಸಬೇಕಾಯಿತು. ನಟಿ ಮಂಗಳೂರಿನ ಹೆಣ್ಣು. ದಾದರ್‌ನ ಶ್ರೀ ಸೌಂಡ್ ಸ್ಟುಡಿಯೋದಲ್ಲಿ ಚಿತ್ರದ ಮುಹೂರ್ತ ನಡೆಯಿತು. ಚಿತ್ರದ ಶೂಟಿಂಗ್ ಕೊಲ್ಲಾಪುರದಲ್ಲಿ ನಡೆಯಿತು.




ಸ್ವತಂತ್ರ ಭಾರತದಲ್ಲಿ ಏಕತೆಯ ಸಂದೇಶ ಸಾರುವ ಮೊದಲ ಕನ್ನಡ ಚಿತ್ರ "ಮಹಾತ್ಮ ಕಬೀರ"

ಈ ಚಿತ್ರಕ್ಕೆ ಗೀತೆಗಳನ್ನು ನಲವಡಿ ಶ್ರೀಕಂಠಶಾಸ್ತ್ರಿ ಮತ್ತು ಗಂಗಪ್ಪವಾಲಿ ರಚಿಸಿದ್ದಾರೆ. **ಚಂದ್ರಹಾಸ** ಚಿತ್ರಕ್ಕೆ ಹಿನ್ನೆಲೆಗಾಯಕರು ಸೀತಾಮುಲ್ಕಿ, ವಿಜಯಾ ದೇಸಾಯಿ,ಇವರು ಹಾಡಿದ ಗೀತೆಗಳು ಜನಮನ ಸೆಳೆದಿದೆ. "ತ್ರಿಪುರ ದೈತ್ಯನು ದಮನ ನಿಪುಣ ಶ್ರೀ ಶಿವನ ಧರ್ಮಜಾಯೆ" ಎಂಬ ಗಂಗಪ್ಪವಾಲಿ ವಿರಚಿತ ಗೀತೆ ಸೀತಾಮುಲ್ಕಿ ಅವರ ಧನಿಯಲ್ಲಿ ಮನ್ಸೂರ್ ಅವರ ನಿರ್ದೇಶದಲ್ಲಿ ಆಕರ್ಷಕವಾಯಿತು. ಅದೇ ರೀತಿ ನಲವಡಿ ಶ್ರೀಕಂಠಶಾಸ್ತ್ರಿಗಳ "ಮನದಲಿ ಮೂಡಿದ ರೂಪ" ಎಂಬ ಹಾಡು ವಿಜಯಾ ದೇಸಾಯಿ ಅವರ ಹಾಡುಗಾರಿಕೆಯಿಂದ, "ಆರಗಿಳಿ ಮರಗಿಳಿ ಭರದಲಿ ಬಾರ ಬಾ" ಎಂಬ ಶ್ರೀಕಂಠಶಾಸ್ತ್ರಿಗಳ ಹಾಡು ಅಮೀರಬಾಯಿ ಕರ್ನಾಟಕಿ ಅವರ ಧ್ವನಿಯಲ್ಲಿ ಮೂಡಿಬಂದಿದೆ.

# ಆರ್. ಎನ್. ಆರ್. ಪಿಕ್ಚರ್ಸ್

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮತ್ತೊಂದು ಸ್ಮರಣೀಯ ಹೆಸರು ಆರ್. ನಾಗೇಂದ್ರರಾವ್ ಮತ್ತು ಅವರು ಸ್ಥಾಪಿಸಿದ ಆರ್. ಎನ್. ಆರ್. ಪಿಕ್ಚರ್ಸ್ ಸಂಸ್ಥೆಯದು. 1953ರಲ್ಲಿ ಆರ್. ನಾಗೇಂದ್ರರಾವ್ ಈ ಸಂಸ್ಥೆ ಸ್ಥಾಪಿಸುವ ಮೂಲಕ ಚಿತ್ರರಂಗಕ್ಕೆ ಮಹತ್ವದ ಬೆಳವಣಿಗೆ ತಂದು ಕೊಟ್ಟರು. ಅದುವರೆಗೆ ಮದ್ರಾಸಿನ ಜೆಮಿನಿ ಸ್ಟುಡಿಯೋ ವಾಸನ್ ಬಳಿ ಇದ್ದ ಅವರು ಆದುವರೆಗೆ ಬೇರೆಯವರ ಪಾಲುದಾರಿಕೆಯಲ್ಲಿ ಚಿತ್ರ ನಿರ್ಮಿಸುತ್ತಿದ್ದರು. ತಾವೇ ಸ್ವತಃ ಚಿತ್ರ ತಯಾರಿಸಬೇಕು, ಕನ್ನಡ ಚಿತ್ರಗಳನ್ನು ನಿರ್ಮಿಸಬೇಕೆಂಬ ಹಂಬಲದಿಂದ ಆರ್. ನಾಗೇಂದ್ರರಾವ್, ಜೆಮಿನಿ ಕಥಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಟಿ. ಎಂ. ಉತ್ತರಾಪತಿ ಎಂಬ ತಮಿಳು ಬರಹಗಾರ ಬರೆದ ಕಥೆಯೊಂದನ್ನು ಆಯ್ಕೆ ಮಾಡಿಕೊಂಡು ಸಿದ್ಧರಾದರು.

**ಜಾತಕಫಲ** ಚಿತ್ರ ತಯಾರಾದದ್ದು ಹೀಗೆ. ಆಗ ತಮಿಳು ಬಾಲಕರ ಕಂಪನಿಯಲ್ಲಿ ಪಾತ್ರ ವಹಿಸುತ್ತಿದ ಟಿ. ಕೆ. ಬಾಲಚಂದ್ರನ್ ಎಂಬುವವರನ್ನು ನಾಯಕನ ಪಾತ್ರಕ್ಕೂ, ಸೂರ್ಯಕಲಾ ಎಂಬ ನಟಿಯನ್ನು ನಾಯಕಿ ಪಾತ್ರಕ್ಕೂ ಆಯ್ಕೆ ಮಾಡಲಾಯಿತು. ನಾಗೇಂದ್ರರಾವ್, ಸಾರಂಗಪಾಣಿ ಇತರ ಪಾತ್ರವರ್ಗದಲ್ಲಿದ್ದರು. ಕಲ್ಕತ್ತಾದ ನ್ಯೂಥಿಯೇಟರ್ಸ್‌ನಲ್ಲಿದ್ದ ಯೂಸುಫ್ ಮಲ್ಲಿ ಕ್ಯಾಮರಾಮನ್ ಆಗಿದ್ದರು. ಆರ್. ಗೋವರ್ಧನ್ ಸಂಗೀತ ನಿರ್ದೇಶಕರಾಗಿದ್ದರು. ಖ್ಯಾತ ಹಿನ್ನೆಲೆಗಾಯಕ ಪಿ. ಬಿ. ಶ್ರೀನಿವಾಸ್ (ಶ್ರೀನಿವಾಸಾಚಾರ್ಯ) ಈ ಚಿತ್ರದಲ್ಲಿ ಹಾಡುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ಈ ಚಿತ್ರದಲ್ಲಿ ಅವರು ಹಾಡಿದ "ಚಿಂತಿಸದಿರು ರಮಣಿ", "ಮೂಢತನವಿದೇಕೆ ಈ ಮೂಢತನವಿದೇಕೆ" ಹಾಡುಗಳು ಅವರನ್ನು ಜನಪ್ರಿಯಗೊಳಿಸಿದವು. ಜಿ.ಕೆ. ವೆಂಕಟೇಶ್ ಕೂಡ ಈ ಚಿತ್ರದಲ್ಲಿ ಹಾಡೊಂದನ್ನು ಹಾಡಿದ್ದಾರೆ.

1957ರಲ್ಲಿ ಈ ಸಂಸ್ಥೆಯ ಮೂಲಕ ತಯಾರಾದ "ಪ್ರೇಮದ ಪುತ್ರಿ" ಆ ಸಾಲಿನ ಶ್ರೇಷ್ಠ ಪ್ರಾದೇಶಿಕ ಚಿತ್ರವಾಗಿ ರಾಷ್ಟ್ರ ಪ್ರಶಸ್ತಿಯಾದ ರಜತ ಪದಕ ಗಳಿಸಿತು. ಈ ಪ್ರಶಸ್ತಿ ಪಡೆದ ಮೊದಲ ಕನ್ನಡ ಚಿತ್ರವಿದು. ಆರ್. ನಾಗೇಂದ್ರರಾವ್ ಮೂರು ಭಾಷೆಗಳಲ್ಲಿ ಈ ಚಿತ್ರ ನಿರ್ಮಿಸಿದರು. **ಪ್ರೇಮದ ಪುತ್ರಿ** ತಯಾರಿಕೆಯ ಹಿನ್ನೆಲೆಯನ್ನು ನಾಗೇಂದ್ರರಾವ್ "ಇದು ನನ್ನ ಕಥೆ"ಯಲ್ಲಿ ಹೀಗೆ ವಿವರಿಸುತ್ತಾರೆ :

"ಜಾತಕಫಲ"ದ ನಂತರ ಯಾವ ಪಾಲುದಾರಿಕೆಯೂ ಇಲ್ಲದೆ, ನನ್ನ ಸ್ವಂತ ಚಿತ್ರ ತೆಗೆಯಬೇಕೆಂಬ ಅಪೇಕ್ಷೆ ಉಂಟಾಗಿ ಕಥೆ ಆಯ್ಕೆ ಮಾಡತೊಡಗಿದೆ. ಬಹಳ ವರ್ಷಗಳ ಹಿಂದೆ ನಾನು ನೋಡಿದ್ದ ಇಂಗ್ಲಿಷ್ ಚಿತ್ರ "ಸ್ಟ್ರೇಂಜ್ ಕೇಸ್ ಆಫ್ ಕ್ಯಾರಾಬೋ" ಕಥೆ ನನಗೆ ಬಹಳ ಹಿಡಿಸಿತ್ತಾದ್ದರಿಂದ **ಪ್ರೇಮದ ಪುತ್ರಿ** ಉದ್ದೇಶಿತ ಚಿತ್ರದ ಕಥೆಯನ್ನು ಅದರ ಆಧಾರದ ಮೇಲೆ ಬರೆದೆ

ಈ ವೇಳೆಗಾಗಲೇ ನನ್ನ ದ್ವಿತೀಯ ಪುತ್ರ ಆರ್. ಎನ್. ಕೃಷ್ಣಪ್ರಸಾದ್ ಮತ್ತು ತೃತೀಯ ಪುತ್ರ ಆರ್. ಎನ್. ಜಯಗೋಪಾಲ್ ಅವರು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಕ್ರಮವಾಗಿ ಸಿನಿಮಾ ಫೋಟೋಗ್ರಫಿ ಹಾಗೂ ಸೌಂಡ್ ಎಂಜಿನಿಯರಿಂಗ್ ಪದವಿಗಳನ್ನು ಪಡೆದು ಎ.ವಿ.ಎಂ. ಸ್ಟುಡಿಯೋದಲ್ಲಿ ಕೆಲಸ ಮಾಡುತ್ತಿದ್ದ ಮುತ್ತು ಎಂಬ ಹೆಸರಾಂತ ಕ್ಯಾಮರಾಮನ್ ಬಳಿ ಸಹಾಯಕರಾಗಿ ತರಬೇತಿ ಪಡೆದಿದ್ದರು. ಕೃಷ್ಣಪ್ರಸಾದ್‌ನನ್ನೇ **ಪ್ರೇಮದ ಪುತ್ರಿ**ಗೆ ಛಾಯಾಗ್ರಾಹಕರನ್ನಾಗಿ ಆರಿಸಿದೆ. ಆರ್. ಎನ್. ಜಯಗೋಪಾಲ್‌ಗೆ ಕಾಲೇಜು ದಿನದಿಂದಲೂ ಕವಿತೆ ಬರೆಯುವ ಹವ್ಯಾಸ ಇದ್ದುದರಿಂದ ಆತನನ್ನೇ ನನ್ನ ಚಿತ್ರದ ಹಾಡು ಮತ್ತು ಸಂಭಾಷಣೆ ಬರೆಯಲು ನೇಮಿಸಿದೆ. ಇವರಿಬ್ಬರಿಗೂ ಸ್ವತಂತ್ರವಾಗಿ ಕೆಲಸ



'ಜಾತಕಫಲ' ಚಿತ್ರದಲ್ಲಿ ಹಾಡುವ ಮೂಲಕ ಹಿನ್ನೆಲೆ ಗಾಯಕರಾಗಿ ಚಿತ್ರರಂಗ ಪ್ರವೇಶಿಸಿದ ಪಿ. ಬಿ. ಶ್ರೀನಿವಾಸ್ ಅವರ ಸುಶ್ರಾವ್ಯ ಕಂಠಸಿರಿ ಚಿತ್ರರಂಗದ ಉದ್ದಕ್ಕೂ ಪಸರಿಸಿದೆ. ಈ ಚಿತ್ರ ಮೂರು ಭಾಷೆಗಳಲ್ಲಿ ತಯಾರಾಯಿತು. ಹೀಗಾಗಿ ಪಿ. ಬಿ. ಶ್ರೀನಿವಾಸ್ ಅವರಿಗೆ ಕನ್ನಡ, ತೆಲುಗು ಮತ್ತು ತಮಿಳು ಮೂರೂ ಭಾಷೆಗಳಲ್ಲಿ ಹಾಡುವ ಅವಕಾಶದೊರೆಯಿತು.

ಮಾಡುವ ಅವಕಾಶ ಪ್ರಥಮ ಬಾರಿಗೆ ದೊರೆತುದು **ಪ್ರೇಮದ ಪುತ್ರಿ**ಯಿಂದಲೇ.


ಕೇಂದ್ರ ಸರ್ಕಾರ ಪ್ರಾಂತೀಯ ಭಾಷೆಗಳಲ್ಲಿನ ಅತ್ಯುತ್ತಮ ಚಿತ್ರಗಳಿಗೆ ಪ್ರಶಸ್ತಿ ನೀಡುವ ಪರಿಪಾಠ ಆರಂಭಿಸಿದ್ದರಿಂದ ನನ್ನ ಚಿತ್ರವೂ ಉತ್ತಮ ಮಟ್ಟದಲ್ಲಿರಬೇಕೆಂಬ ಸಂಕಲ್ಪ ಮಾಡಿದ್ದೆ. ಎ. ವಿ. ಮೇಯಪ್ಪ ಚೆಟ್ಟಿಯಾರರು ಏಕಕಾಲದಲ್ಲಿ ಮೂರು ಚಿತ್ರಗಳನ್ನು ತೆಗೆಯಬೇಕಾದರೆ ಮೂರು ವರ್ಷಬೇಕಾಗುತ್ತದೆ ಎನ್ನುತ್ತಿದ್ದರು. ಆ ಮೂರು ಚಿತ್ರಗಳನ್ನು ನಾನು ಕೇವಲ ಆರು ತಿಂಗಳ ಅವಧಿಯಲ್ಲಿ ಪೂರ್ಣ ಮಾಡಿದುದಲ್ಲದೆ ಆಯಾ ಭಾಷೆಯ ಚಿತ್ರಗಳಿಗೆ ಆಯಾ ಭಾಷೆಯ ನಟರನ್ನೇ ಆರಿಸಿದ್ದೆ. ಆದರೆ ನಾನು, ಜಯಲಲಿತ ಅವರ ತಾಯಿ ಸಂಧ್ಯಾ ಹಾಗೂ ಕಮಲಾಬಾಯಿ ಮೂರೂ ಭಾಷೆಗಳ ಚಿತ್ರಗಳಲ್ಲಿಯೂ ಅಭಿನಯಿಸಿದ್ದೆವು.

ನನ್ನ ಬಯಕೆಯಂತೆಯೇ **ಪ್ರೇಮದ ಪುತ್ರಿ** ಚಿತ್ರವನ್ನು ಆ ವರ್ಷದ ಪ್ರಾದೇಶಿಕ ಪ್ರಶಸ್ತಿಗೆ ಆರಿಸಲಾದುದು ನನಗೆ ಬಹಳ ಸಂತೋಷ ತಂದಿತು" ಆರ್. ನಾಗೇಂದ್ರರಾವ್ ಅವರಿಗೆ ಪ್ರಶಸ್ತಿ ಸಂತೋಷ ತಂದಿತಾದರೂ ಚಿತ್ರ ಯಶಸ್ಸಾಗಿಯೂ ಹಣ ಕೈ ಸೇರದ ದುಃಖವಿತ್ತು.

ನಾಗೇಂದ್ರರಾವ್, ಕಲ್ಯಾಣ್‌ಕುಮಾರ್, ಉದಯಕುಮಾರ್, ಸಂಧ್ಯಾ, ಸೂರ್ಯಕಲಾ (ನವನಟಿ), ಜೂನಿಯರ್ ಶ್ರೀರಂಜನಿ, ಗಣಪತಿಭಟ್, ಕಮೆಡಿಯನ್ ಗುಗ್ಗು, ಅನ್ನಪೂರ್ಣಮ್ಮ ಮೊದಲಾದವರು ಅಭಿನಯಿಸಿರುವ "ಪ್ರೇಮದ ಪುತ್ರಿ"ಗೆ ಎಚ್. ಆರ್. ಪದ್ಮನಾಭ ಶಾಸ್ತ್ರಿ ಮತ್ತು ವಿಜಯಭಾಸ್ಕರ್ ಸಂಯುಕ್ತವಾಗಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಆರ್. ಎನ್. ಕೃಷ್ಣಪ್ರಸಾದ್ (ಛಾಯಾಗ್ರಾಹಕ) ಹಾಗೂ ಆರ್. ಎನ್. ಜಯಗೋಪಾಲ್ (ಚಿತ್ರಸಾಹಿತಿ) ಅವರಂತಹ ಪ್ರತಿಭಾನ್ವಿತರನ್ನು ಈ ಚಿತ್ರ ಚಿತ್ರರಂಗಕ್ಕೆ ನೀಡಿತು.

**ಆರ್. ನಾಗೇಂದ್ರರಾವ್**

ಆರ್. ನಾಗೇಂದ್ರರಾವ್ ಅವರ ಹೆಸರು ಕನ್ನಡ ಚಿತ್ರರಂಗದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹ ಹೆಸರು. ಅವರದು ಬಹುಮುಖ ಪ್ರತಿಭೆ. ನಿರಂತರ ಹೋರಾಟ. ಕಲೆಗಾಗಿಯೇ ಸಂಪೂರ್ಣ ಜೀವನ ಮುಡಿಪು. ನಟ, ರಂಗಭೂಮಿಯೇ ಅಲ್ಲದೆ ಚಲನಚಿತ್ರಗಳ ಗೀತ ರಚನಕಾರ, ಸಾಹಿತಿ, ಗಾಯಕ, ಸಂಗೀತ ನಿರ್ದೇಶಕ, ನಿರ್ಮಾಪಕ, ನಿರ್ದೇಶಕ ಹೀಗೆ ಎಲ್ಲಾ ರಂಗಗಳಲ್ಲೂ ಸೇವೆ. ಮೊದಲ



ಆರ್. ನಾಗೇಂದ್ರರಾವ್ ಹಾಗೂ ಅವರು ಹುಟ್ಟುಹಾಕಿದ ಆರ್. ಎನ್. ಆರ್. ಸಂಸ್ಥೆ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರ.



ವಾಕ್ಚಿತ್ರದ ಸಂಗೀತ ನಿರ್ದೇಶಕ ಎಂಬ ಖ್ಯಾತಿಯೂ ಇವರದೇ. ಆ ದಿನಗಳಲ್ಲೇ ತಮಿಳು, ತೆಲುಗು ಚಿತ್ರರಂಗದಲ್ಲಿ ಅಭಿನಯ ಸಾಮರ್ಥ್ಯ ಮೆರೆದ ಅಸಾಧಾರಣ ಪ್ರತಿಭಾವಂತ. ಎಂಟು ವರ್ಷದ ಬಾಲಕನಾಗಿದ್ದಾಗಲೇ "ಇಂದಿರಾನಂದ," "ಚಂದ್ರಹಾಸ" ಎಂಬ ನಾಟಕಗಳಲ್ಲಿ ಬಾಲಕಿಯ ಪಾತ್ರ. ರಟ್ಟೀಹಳ್ಳಿ ನಾಗೇಂದ್ರರಾವ್ ಬಣ್ಣದ ಲೋಕ ಪ್ರವೇಶಿಸಿದ್ದು ಹೀಗೆ. ತಮ್ಮ ಸ್ಫುಟ ಸಂಭಾಷಣೆ ಹೇಳುವ ರೀತಿ, ಹಾಡುಗಾರಿಕೆಯ ಮೋಡಿಯಿಂದ ಹಲವಾರು ನಾಟಕಗಳಲ್ಲಿ ಅಭಿನಯಿಸಲು ಆಯ್ಕೆಯಾದ ಆರ್. ನಾಗೇಂದ್ರರಾವ್ ಅವರಿಗೆ ದೊರೆತದ್ದು ಮಹಿಳಾ ಪಾತ್ರಗಳೇ, ಶಿರಹಟ್ಟಿ ವೆಂಕೋಬರಾಯರ ಕಂಪನಿ, ಎ. ವಿ. ವರದಾಚಾರ್ ಅವರ ನಾಟಕ ಸಂಸ್ಥೆಗಳ ಪ್ರವೇಶ ಪಡೆದು "ಪ್ರಹ್ಲಾದಚರಿತ್ರೆ"ಯಲ್ಲಿ ಭೂದೇವಿ ಪಾತ್ರವಹಿಸಿ 'ಭೂದೇವಿ ನಾಗೇಂದ್ರರಾವ್' ಎಂದು ಜನ ಕರೆಯುವಂತಾಯಿತು. ಆ ಕಂಪನಿಯ ಎಲ್ಲ ನಾಟಕಗಳಲ್ಲೂ ಸ್ತ್ರೀಪಾತ್ರ, ಗಟ್ಟಿಯಾಯಿತು. ರತ್ನಾವಳಿ, ಸುಗ್ರೀವ ಸಖ್ಯ, ಲಂಕಾದಹನ, ಸಂಪೂರ್ಣರಾಮಾಯಣ, ವಿಷ್ಣುಲೀಲಾ, ಹರಿಶ್ಚಂದ್ರ ಮೊದಲಾದ ನಾಟಕಗಳು ದಕ್ಷಿಣಭಾರತದ ಎಲ್ಲೆಡೆ ಮನೆಮಾತಾಯಿತು. ಕೆಲಕಾಲದ ನಂತರ ಆರ್. ನಾಗೇಂದ್ರರಾವ್ ಚಾಮುಂಡೇಶ್ವರಿ ನಾಟಕ ಸಭಾ ಸೇರಿದರು.




"ಜಾತಕ ಫಲ" ಆರ್. ನಾಗೇಂದ್ರರಾವ್ ಅವರ ಸ್ವಂತ ನಿರ್ಮಾಣ ಸಂಸ್ಥೆ ಆರ್.ಎನ್. ಆರ್. ಪಿಕ್ಚರ್ಸ್‌ನ ಮೊದಲ ಕಾಣಿಕೆ.

ಕೆಲಕಾಲದ ನಂತರ ನಾಟಕ ಕಂಪನಿ ಬಿಟ್ಟರು. ಸಿನಿಮಾ ಸೇರುವ ಉದ್ದೇಶದಿಂದ ಮುಂಬೈಗೆ ತೆರಳಿದರು. 1931ರಲ್ಲಿ ಮೊದಲ ಹಿಂದಿ "ವಾಕ್ಚಿತ್ರ" ಆಲಂಆರಾ ತಯಾರಿಸಿದ ಆರ್ದೇಶಿರ್ ಇರಾನಿ ಅವರು ಆಗ ಮುಂಬೈನಲ್ಲಿ ನಿರ್ಮಿಸುತ್ತಿದ್ದ "ಪಾರಿಜಾತ ಪುಷ್ಪಾಹರಣಂ" ಎಂಬ ತಮಿಳು ಚಿತ್ರದಲ್ಲಿ ನಾರದನ ಪಾತ್ರ ವಹಿಸುವ ಮೂಲಕ ಸಿನಿಮಾ ಪ್ರಪಂಚ ಪ್ರವೇಶಿಸಿದರು. ಮುಂದೆ ಇರಾನಿಯವರು ನಿರ್ಮಿಸಿದ "ಭಕ್ತ ರಾಮದಾಸ" ತೆಲುಗು ಚಿತ್ರದಲ್ಲಿ ನಾಯಕನ ಪಾತ್ರಕ್ಕೆ

ಆಯ್ಕೆಯಾದರು. ಇದೇ ಸಮಯದಲ್ಲಿ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ಸಂಸ್ಥಾಪಕ ಹಾಗೂ ಖ್ಯಾತ ನಟ ಎಂ. ವಿ. ಸುಬ್ಬಯ್ಯನಾಯ್ಡು ಅವರ ಸ್ನೇಹ, ಪಾಲುದಾರ. ನಂತರ ಪ್ರಗತಿ ಪಿಕ್ಚರ್ಸ್ ಸಂಸ್ಥೆಯ ಮಿತ್ರರೊಡನೆ ಪಾಲುದಾರರಾಗಿ **ವಸಂತ ಸೇನ** (1941) ಚಿತ್ರ ನಿರ್ಮಿಸುವ ಮೂಲಕ ಆರ್. ನಾಗೇಂದ್ರರಾವ್ ಚಿತ್ರರಂಗದಲ್ಲಿ ನಿರ್ಮಾಣ ಚಟುವಟಿಕೆ ಆರಂಭಿಸಿದರು. ಎಸ್. ಎಸ್. ಎಸ್. ನಾಟಕ ಮಂಡಳಿ ಹಾಗೂ ಸರಸ್ವತಿ ಸ್ಟೋರ್ಸ್‌ನವರು ಸೇರಿ **ಸತ್ಯ ಹರಿಶ್ಚಂದ್ರ** (1943) ತಯಾರಿಸಿದರು. ನಾಗೇಂದ್ರರಾವ್ ಅವರದೇ ನಿರ್ದೇಶನ. 1947ರಲ್ಲಿ **ಮಹಾತ್ಮ ಕಬೀರ್** ನಿರ್ದೇಶಿಸಿದರು. 1952ರಲ್ಲಿ ತಮ್ಮದೇ ಆದ ಆರ್. ಎನ್. ಆರ್. ಪಿಕ್ಚರ್ಸ್ ಚಿತ್ರನಿರ್ಮಾಣ ಸಂಸ್ಥೆಯನ್ನು ಆರಂಭಿಸಿದರು. ಹಾಸ್ಯ ಪ್ರಧಾನ "ಜಾತಕಫಲ" ಆರ್. ಎನ್. ಆರ್. ಪಿಕ್ಚರ್ಸ್ ಮೂಲಕವೇ 1953ರಲ್ಲಿ ತೆರೆಕಂಡಿತು. 1957ರಲ್ಲಿ ಸಂಸ್ಥೆಯ ಎರಡನೆಯ ಚಿತ್ರ **ಪ್ರೇಮದ ಪುತ್ರಿ** ಕೇಂದ್ರ ಸರ್ಕಾರದ ರಜತ ಪದಕ ಪಡೆಯಿತು.

1961ರಲ್ಲಿ ಆರ್. ಎನ್. ಆರ್. ಪಿಕ್ಚರ್ಸ್ ಲಾಂಛನದಲ್ಲಿ ತೆರೆಕಂಡ **ವಿಜಯನಗರದ ವೀರಪುತ್ರ** ಈ ಸಂಸ್ಥೆಯ ಅದ್ದೂರಿ ಚಿತ್ರ. ಆರ್. ನಾಗೇಂದ್ರರಾವ್ ಅವರ ಪುತ್ರ ಸುದರ್ಶನ್ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗದ ಮತ್ತೊಬ್ಬ ನಾಯಕನಟರಾಗಿ ಪರಿಚಿತರಾದರು. ಆರ್. ಎನ್. ಸುದರ್ಶನ್, ಆರ್. ನಾಗೇಂದ್ರರಾವ್, ಕಲ್ಯಾಣ್ ಕುಮಾರ್, ಉದಯಕುಮಾರ್, ಬಿ. ಸರೋಜಾದೇವಿ, ಸಂಧ್ಯ, ಲಕ್ಷ್ಮೀದೇವಿ,ರಮಾದೇವಿ ಹನುಮಂತರಾವ್, ಬಾಲಕೃಷ್ಣ, ಗಣಪತಿಭಟ್, ನರಸಿಂಹರಾಜು, ಎಚ್. ಆರ್. ಶಾಸ್ತ್ರಿ, ಶ್ಯಾಮಸುಂದರ್, ಚಿ. ಉದಯಶಂಕರ್, ಎಂ. ಜಿ. ಮರಿರಾವ್,ಜಿ.ಎಂ. ನಂಜಪ್ಪ, ದೇಶರಾಜ್, ಶಂಕರನಾರಾಯಣ, ಸ್ಯಾಂಡೋಪ್ರಕಾಶ್, ಗುಗ್ಗು ಮೊದಲಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಐತಿಹಾಸಿಕ ಅದ್ದೂರಿ ಚಿತ್ರ **ವಿಜಯನಗರದ ವೀರಪುತ್ರ**ದ ಕಥೆ, ಸಂಭಾಷಣೆ, ಗೀತೆಗಳು ಆರ್.ಎನ್. ಜಯಗೋಪಾಲ್ ಅವರದು, ಛಾಯಾಗ್ರಾಹಕರು ಆರ್. ಎನ್. ಕೆ. ಪ್ರಸಾದ್, ಸಂಗೀತ : ಎಂ.ಎಸ್. ವಿಶ್ವನಾಥನ್, ಟಿ. ಕೆ. ರಾಮಮೂರ್ತಿ ಅವರದು. ಶ್ಯಾಮಸುಂದರ್ ಅವರ ಸಾಹಸ, ವರ್ತೂರ್‌ಕರ್ ಅವರ ಕಲಾನಿರ್ದೇಶನದಲ್ಲಿ ಆರ್. ನಾಗೇಂದ್ರರಾವ್ ನಿರ್ದೇಶಿಸಿದ್ದಾರೆ. ಎನ್. ಲಕ್ಷ್ಮೀನಾರಾಯಣ್ ಈ ಚಿತ್ರದ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಈ ಚಿತ್ರಕ್ಕೆ ಕೇಂದ್ರ ಸರ್ಕಾರದ ಫಿಲಂ ಫೈನಾನ್ಸ್ ಕಾರ್ಪೋರೇಷನ್ನಿನ ಹಣಕಾಸು ನೆರವು ದೊರಕಿತು.

ಅನಂತರ 1963ರಲ್ಲಿ ಆರ್. ಎನ್. ಆರ್. ಲಾಂಛನದಲ್ಲಿ **ಆನಂದಬಾಷ್ಪ** ತಯಾರಾಗಿ ಬಿಡುಗಡೆಯಾಯಿತು. ಆರ್. ಎನ್. ಸುದರ್ಶನ್, ಕೆ. ಎಸ್. ಅಶ್ವತ್ಥ್, ಬಾಲಕೃಷ್ಣ, ಆರ್. ನಾಗೇಂದ್ರರಾವ್, ಅರುಣ್ ಕುಮಾರ್, ಮಾಸ್ಟರ್ ಯೋಗೀಂದ್ರ ಕುಮಾರ್, ಗಣಪತಿಭಟ್, ಎ. ಶಿವರಾಂ ಶಿವಾಜಿರಾವ್, ಹರಿಣಿ, ಲಕ್ಷ್ಮೀಬಾಯಿ, ರಜನಿ ಅಭಿನಯಿಸಿದ್ದಾರೆ. ಹರಿಕಥೆಗಳಲ್ಲಿ ಪ್ರಸಿದ್ಧರಾಗಿದ್ದ ಆರ್. ಗುರುರಾಜಲು ನಾಯಿಡು(ಅರುಣ್ ಕುಮಾರ್) ಅವರ ಖಳನಾಯಕರಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಮೊದಲ ಚಿತ್ರ, ಇದು. ಜಿ. ಕೆ. ವೆಂಕಟೇಶ್ ಸಂಗೀತ ನಿರ್ದೇಶಕರು. ಕತೆ, ಸಂಭಾಷಣೆ, ಗೀತೆಗಳು ಆರ್. ಎನ್. ಜಯಗೋಪಾಲ್, ಎಚ್. ರೇಣುಕಾ ಶರ್ಮ ಈ ಚಿತ್ರದ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

1964ರಲ್ಲಿ ಆರ್. ಎನ್. ಆರ್. ಲಾಂಛನದ **ಪತಿಯೇ ದೈವ** ತೆರೆಕಂಡಿತು. ಈ ಚಿತ್ರಕ್ಕೂ ಆರ್. ಎನ್. ಸುದರ್ಶನ್ ನಾಯಕ. ತಾರಾಗಣದಲ್ಲಿ ಸುದರ್ಶನ್, ಜಯಂತಿ, ಆರ್. ನಾಗೇಂದ್ರರಾವ್, ಎಂ. ಪಂಢರಿಬಾಯಿ, ಕೆ. ಎಸ್. ಅಶ್ವತ್ಥ್, ಟಿ. ಎನ್. ಬಾಲಕೃಷ್ಣ, ಚಿ. ಉದಯಶಂಕರ್, ಮಾಸ್ಟರ್ ಸಿರಿಪ್ರಸಾದ್, ಬಿ. ರಮಾದೇವಿ, ಮೈನಾವತಿ, ಕಲ್ಪನಾ, ಜಯಶ್ರೀ, ತಾಳಿಕೋಟೆ ಲಕ್ಷ್ಮೀದೇವಿ ಮೊದಲಾದವರು ಇದ್ದಾರೆ. ಸಂಗೀತ ನಿರ್ದೇಶಕರು ವಿಜಯ ಭಾಸ್ಕರ್. ಈ ಚಿತ್ರವೇ ಆರ್. ಎನ್. ಆರ್. ಸಂಸ್ಥೆ ತಯಾರಿಸಿದ ಕಡೆಯ ಚಿತ್ರವಾಯಿತು.

**ಪತಿಯೇ ದೈವ** ಚಿತ್ರದ ಸೋಲು, ಸಾಲದ ಹೊರೆ ತಾವು ಚಿತ್ರ ನಿರ್ಮಾಣ ನಿಲ್ಲಿಸಲು ಕಾರಣ ಎಂದು ಆರ್. ನಾಗೇಂದ್ರರಾವ್ ಹೇಳಿಕೊಂಡಿದ್ದಾರೆ. ಈ ಬಗ್ಗೆ "ಇದು ನನ್ನ ಆತ್ಮಕಥೆ"ಯಲ್ಲಿ ಅವರು



ಹೇಳಿಕೊಂಡಿರುವುದು ಹೀಗಿದೆ : "ಸುಮಾರು ನೂರು ನಾಟಕಗಳಲ್ಲಿ ಅಭಿನಯಿಸಿದ ಬಳಿಕ ನಾನು ಮದರಾಸಿಗೆ ಹಿಂತಿರುಗಿದೆ. 'ವಿಜಯನಗರದ ವೀರಪುತ್ರ' ಚಿತ್ರವನ್ನು ತಮಿಳು ಮತ್ತು ತೆಲುಗಿನಲ್ಲಿ ಡಬ್ ಮಾಡಿ ಹಂಚಿಕೆಗೆ ತೆಗೆದುಕೊಂಡಿದ್ದ ಈಸ್ಟ್ ಇಂಡಿಯಾ ಕಂಪನಿಯ ಮಾಲೀಕರಾದ ಸುಂದರಲಾಲ್ ನಹಾತ ಅವರು ನನ್ನನ್ನು ಸಂಧಿಸಿದಾಗ ನಮ್ಮ ನಾಟಕದ ಯಶಸ್ಸಿನ ವಿಚಾರವನ್ನು ಅವರಿಗೆಲ್ಲಾ ಹೇಳಿದೆ. ಅವರು ಒಡನೆಯೇ ಅದನ್ನು ಕನ್ನಡದಲ್ಲಿ ತೆಗೆಯಬೇಕೆಂದು ಒತ್ತಾಯಪಡಿಸಿ ಅದಕ್ಕೆ ಬೇಕಾದ ಹಣವನ್ನು ಸಹ ಒದಗಿಸಿದರು. ಸರಿಯೆಂದು ನಾನೂ ಒಪ್ಪಿಕೊಂಡು ಚಿತ್ರಕಥೆ ಬರೆಯಲು ಪ್ರಾರಂಭ ಮಾಡಿದೆ. ಒಂದು ಜಾಹಿರಾತನ್ನು ಸಹ ಕೊಟ್ಟೆವು. ಆದರೆ "ಶಾಂತಿ ನಿವಾಸಂ" ಎಂಬುದು ಆ ವೇಳೆಗಾಗಲೆ ತಮಿಳು, ತೆಲುಗು ಹಾಗೂ ಹಿಂದಿಯಲ್ಲೂ ಬಹಳ ಹಳೆಯ ಹೆಸರಾಗಿತ್ತಾದ ಕಾರಣ ಕನ್ನಡದಲ್ಲಿ ನಾನು ತೆಗೆಯಲು ಪ್ರಾರಂಭಿಸಿದ ಚಿತ್ರದ ಬಗ್ಗೆ ಬೆಂಗಳೂರಿನ ವೃತ್ತಪತ್ರಿಕೆಗಳವರು ಅಸಮಾಧಾನ ವ್ಯಕ್ತಪಡಿಸಿದರು. ಯಾವಾಗಲೂ ಹೊಸ ಹೊಸ ಕಥೆಗಳನ್ನೇ ಆರಿಸುತ್ತಿದ್ದ "ಆರೆನ್ನಾರ್" ಈಗ ಹಳೆಯ ಕಥೆಯನ್ನು ಆರಿಸಿರುವುದರ ಬಗ್ಗೆ ನಮಗೆ ನಿರಾಸೆಯಾಗಿದೆ ಎಂದು ಬರೆದರು. ನಾನು ಚಿತ್ರದ ಹೆಸರನ್ನು "ಪತಿಯೇ ದೈವ" ಎಂಬುದಾಗಿ ಬದಲಾಯಿಸಿದೆ. ಆದರೂ ಕೂಡ ಪ್ರಾರಂಭದಲ್ಲೇ ನಿರುತ್ಸಾಹಕರ ಪ್ರತಿಕ್ರಿಯೆ ವ್ಯಕ್ತವಾದ ಕಾರಣದಿಂದಲೋ ಏನೋ ಚಿತ್ರ ಬಿಡುಗಡೆಯಾದಾಗ ಅದಕ್ಕೆ ನಗರಗಳಲ್ಲಿ ಪ್ರೋತ್ಸಾಹ



"ಪ್ರೇಮದ ಪುತ್ರಿ" ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಗಳಿಸಿದ ಆರ್. ನಾಗೇಂದ್ರರಾವ್ ಅಂದಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿದ್ದಾರೆ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ "ಸಾಕ್ಷಾತ್ಕಾರ" ಚಿತ್ರದಲ್ಲಿ ನಾಗೇಂದ್ರರಾವ್.

ದೊರಕಲಿಲ್ಲ. ಆದರೆ 'ಬಿ' ಮತ್ತು 'ಸಿ' ಸೆಂಟರ್‌ಗಳಲ್ಲಿ 'ವಿಜಯನಗರದ ವೀರಪುತ್ರ'ಕ್ಕಿಂತ ಹೆಚ್ಚು ಪ್ರೋತ್ಸಾಹ ದೊರಕಿತು. ಅದೇ ಪ್ರೋತ್ಸಾಹ ನಗರಗಳಲ್ಲೂ ದೊರೆತ್ತಿದ್ದರೆ ನಾನು ಈಗಲೂ ಚಿತ್ರ ನಿರ್ಮಾಪಕನಾಗಿಯೇ ಉಳಿಯುತ್ತಿದ್ದೆನೋ ಏನೋ!

1964ರ ನವಂಬರ್‌ನಲ್ಲಿ ಆ ಚಿತ್ರ ಬಿಡುಗಡೆಯಾದಾಗ ಅದರ ಬಗ್ಗೆ ಅಭಿಪ್ರಾಯವನ್ನು ಬೇರೆಬೇರೆ ಪ್ರದೇಶಗಳಲ್ಲಿ ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯಿಂದ ನಾನು ಮೈಸೂರಿಗೆ ಹೋಗಿದ್ದೆ. ಅದೇ ದಿನ ಮ್ಯಾಟನಿ ಮತ್ತು ಮೊದಲನೆಯ ಷೋ ಜನರ ಪ್ರತಿಕ್ರಿಯೆ ತಿಳಿದು ಚನ್ನಪಟ್ಟಣಕ್ಕೆ ಹೊರಟು ಬರುತ್ತಿದ್ದಾಗ ಕಾರು ಅಪಘಾತಕ್ಕೆ ಈಡಾಗಿ ನಮ್ಮಲ್ಲಿ ಕೆಲವರಿಗೆ ಗಾಯಗಳಾದವು. ಆದರೆ ಆ ಅಪಘಾತದಿಂದ ನಾವು ಉಳಿದುಕೊಂಡುದೇ ಆಶ್ಚರ್ಯಕರವೆನಿಸಿತು. ಬಹುಶಃ ಇನ್ನೂ ಕೆಲವು ಕಾಲ ನನ್ನಿಂದ ಕಲಾ ಸೇವೆ ನಡೆಯಬೇಕೆಂಬುದೇ ಈಶ್ವರ ಸಂಕಲ್ಪವೆಂದು ನಾನು ಭಾವಿಸಿದೆ.

ಅನಂತರ ಹಲವಾರು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದೆನಾದರೂ ನನ್ನ ಮನಸ್ಸಿಗೆ ಒಪ್ಪಿಗೆಯಾಗುವಂತಹ ಪಾತ್ರ ಯಾವುದರಲ್ಲೂ ದೊರಕಲಿಲ್ಲ. ಇತ್ತೀಚಿಗೆ ನನಗೆ ಅಭಿನಯಿಸುವ ಅವಕಾಶ ಸಹ ಹೆಚ್ಚಾಗಿ ದೊರಕುತ್ತಿಲ್ಲ. ನನಗೆ ಪಾತ್ರ ಮಾಡುವ ಶಕ್ತಿಯಿದ್ದರೂ ಚಿತ್ರ ನಿರ್ಮಾಪಕರು ನನಗೆ ವಯಸ್ಸಾಯಿತೆಂಬ ಕಾರಣದಿಂದ ಬಲತ್ಕಾರ ನಿವೃತ್ತಿ ಮಾಡಿರುವಂತೆ ತೋರುತ್ತಿದೆ!


ಈಗ ನಾನು 77 ವರ್ಷ ತುಂಬಿ 78ನೆಯದರಲ್ಲಿ ಕಾಲಿಟ್ಟಿರುವೆನಾದ ಕಾರಣ ಇನ್ನು ಹೆಚ್ಚು ಕಾಲ ಕಲಾಸೇವೆ ಮಾಡುವ ಯೋಗ ನನಗಿದೆಯೋ ಇಲ್ಲವೋ ತಿಳಿಯದು. (ಅವರು 82 ವರ್ಷ ಬದುಕಿದ್ದರು) ಆದರೂ ಕೊನೆಯ ಉಸಿರಿರುವ ತನಕ ದುಡಿಯುತ್ತಿರಬೇಕೆಂಬ ಹಂಬಲ ನನ್ನಲ್ಲಿದೆ. ಅದು ನೆರವೇರುವುದು ಬಿಡುವುದು, ಭಗವಂತನ ಇಚ್ಛೆ." ಆದರೂ ಆರ್. ನಾಗೇಂದ್ರರಾಯರು ಅಭಿನಯ ನಿಲ್ಲಿಸಲಿಲ್ಲ. **ಹಣ್ಣೆಲೆ ಚಿಗುರಿದಾಗ** (1968). **ನಮ್ಮ ಮಕ್ಕಳು** (1969) ಚಿತ್ರಗಳಲ್ಲಿ ಅಭಿನಯಿಸಿದರು. "ಹಣ್ಣೆಲೆ ಚಿಗುರಿದಾಗ" ಚಿತ್ರದ ಅಭಿನಯಕ್ಕಾಗಿ ಆ ಸಾಲಿನ ರಾಜ್ಯ ಸರ್ಕಾರದ ಶ್ರೇಷ್ಠ ನಟ ಪ್ರಶಸ್ತಿ ಪಡೆದರು. "ನಮ್ಮ ಮಕ್ಕಳು" ಚಿತ್ರದ ನಿರ್ದೇಶಕರಾಗಿ ರಜತ ಪದಕ ಪ್ರಶಸ್ತಿ ಪಡೆದರು. 1976ರಲ್ಲಿ ಅವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ಕನ್ನಡ ವಾಕ್ಚಿತ್ರರಂಗದ ವರ್ಣಮಯ ಪುಟಗಳನ್ನು ತುಂಬಿದ ಆರ್. ನಾಗೇಂದ್ರರಾವ್ ಅವರು 1977ರ ಫೆಬ್ರವರಿ 9 ರಂದು ನಿಧನರಾಗುವುದರೊಂದಿಗೆ ಕನ್ನಡ ಚಿತ್ರರಂಗದ ಇತಿಹಾಸದ ಒಂದು ಅಧ್ಯಾಯದ ಅಂತ್ಯವಾಯಿತು.

# ಸ್ಟುಡಿಯೋಗಳ ಪಾತ್ರ

ಚಿತ್ರರಂಗ ಇಂದು ಬೃಹತ್ ಉದ್ಯಮವಾಗಿ ಬೆಳೆಯಲು ಹಲವಾರು ಕಾರಣಗಳಿವೆ. ವಾಕ್ಚಿತ್ರ ಆರಂಭದ ಕಾಲದಲ್ಲಿ ಪ್ರತಿಯೊಂದು ವಿಷಯಕ್ಕೂ ನೆರೆ ರಾಜ್ಯಗಳಲ್ಲಿನ ಸೌಲಭ್ಯವನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಕರ್ನಾಟಕದಲ್ಲಿತ್ತು. ಅದಕ್ಕಿಂತ ಮುಂಚೆ ಮೂಕಚಿತ್ರ ತಯಾರಿಕೆ ಕಾಲದಲ್ಲೂ ಅದೇ ಪರಿಸ್ಥಿತಿ. ಆರ್ಥಿಕ ಹಿಂಜರಿತದ ಪರಿಸ್ಥಿತಿಯಲ್ಲೂ ಹೀಗೆ ಕೊಲ್ಲಾಪುರ, ಮದರಾಸು, ಮುಂಬೈಗಳಿಗೆ ತೆರಳಿ ಚಿತ್ರ ತಯಾರಿಸುವುದು ಕನ್ನಡ ಚಿತ್ರ ನಿರ್ಮಾಪಕರ ಪಾಲಿಗೆ ಸಂಕಟದ ವಿಷಯವೇ ಆಗಿತ್ತು. ಈ ಪರಿಸ್ಥಿತಿಯಲ್ಲಿ ನಮ್ಮಲ್ಲೇ ಸ್ಟುಡಿಯೋ ಸ್ಥಾಪಿಸುವ ಸಾಧ್ಯತೆಯನ್ನು ಉದ್ಯಮಿಗಳು ಹಿಂದಿನಿಂದಲೂ ಚಿಂತಿಸಿದ್ದಾರೆ. ಮೂಕ ಚಿತ್ರಗಳ ತಯಾರಿಕೆ ಕಾಲದಿಂದಲೂ ಈ ಯತ್ನ ನಡೆದಿದೆ. ಆರಂಭವಾಗಿಯೂ ಇದೆ. ನಷ್ಟ ಅನುಭವಿಸಿ ಮುಚ್ಚಿದ್ದೂ ಇದೆ.

ಕರ್ನಾಟಕದಲ್ಲಿ ಚಲನಚಿತ್ರ ತಯಾರಿಕೆಯ ಮೊದಲ ಸ್ಟುಡಿಯೋ ಅಸ್ತಿತ್ವಕ್ಕೆ ಬಂದದ್ದು 1928ರಲ್ಲಿ. ಅದು ಮೂಕಚಿತ್ರ ತಯಾರಿಕೆಯ ಯುಗ. ಆಗ ಇಂತಹ ಚಿತ್ರಗಳ ತಯಾರಿಕೆಗೆ ಮುಂಬೈ ನಗರವೇ ಕೇಂದ್ರ ಸ್ಥಾನ. ಅಲ್ಲಿ ಮೂಕಚಿತ್ರಗಳ ನಿರ್ಮಾಣದಲ್ಲಿ ಅಗ್ರಸ್ಥಾನದಲ್ಲಿದ್ದ ಶಾರದಾ ಫಿಲಂ ಕಂಪನಿಯ ಪಾಲುದಾರರಾದ ಭೋಗಿಲಾಲ್ ಸಿ.ದವೆ ಮತ್ತು ಹರಿಭಾಯಿ ಆರ್. ದೇಸಾಯಿ ಅವರ ಅತ್ಯುತ್ಸಾಹದ ಫಲ ಕರ್ನಾಟಕವೂ ಚಿತ್ರ ಚಟುವಟಿಕೆಗಳ ಕೇಂದ್ರವಾಗಲು ಸಾಧ್ಯವಾಯಿತು.

ದಕ್ಷಿಣ ಭಾರತದ ಪ್ರೇಕ್ಷಣೀಯ ಸ್ಥಳಗಳನ್ನು ಚಿತ್ರಿಸಿ ಮೂಕಚಿತ್ರಗಳ ತಯಾರಿಕೆಗೆಂದು ಬಂದ ಹರಿಭಾಯಿ ಆರ್.ದೇಸಾಯಿ ಬೆಂಗಳೂರಿಗೂ ಬಂದರು. ನಗರದ ವಾತಾವರಣ ಜನರ ಉತ್ಸಾಹ, ಪ್ರೀತಿ, ನಡವಳಿಕೆ ಅವರಿಗೆ ಬಹಳ ಹಿಡಿಸಿತು. ಬೆಂಗಳೂರಿನಲ್ಲೇ ಸ್ಟುಡಿಯೋ ಏಕೆ ಮಾಡಬಾರದು



ಮೈಸೂರಿನಲ್ಲಿ ಚಿತ್ರ ತಯಾರಿಕೆಗೆ ಸ್ಫೂರ್ತಿಯ ನೆಲೆಯಾದ ನವಜ್ಯೋತಿ ಸ್ಟುಡಿಯೋ.

ಎಂಬ ನಿರ್ಧಾರ ಮನದಲ್ಲಿ ಮೊಳೆತದ್ದು ಹೀಗೆ. ಅವರು ಬೆಂಗಳೂರಿನಲ್ಲೇ ನೆಲೆ ನಿಂತರು. 1928ರಲ್ಲಿ ಗೆಳೆಯ ಪುರುಷೋತ್ತಮದಾಸ್ ಅವರ ಜತೆಗೂಡಿ ಹರಿಭಾಯ್ ಆರ್. ದೇಸಾಯಿ ಅವರು ಬೆಂಗಳೂರಿನಲ್ಲಿ ಸೂರ್ಯ ಫಿಲಂ ಕಂಪನಿ ಸ್ಥಾಪಿಸಿದರು. ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿ ಮೈಸೂರಿನ ದಿವಾನರಾಗಿದ್ದ ಮಿರ್ಜಾ ಅವರಿಗೆ ಸೇರಿದ್ದ ದೊಡ್ಡ ಬಂಗಲೆಯೊಂದನ್ನು ಬಾಡಿಗೆಗೆ ಪಡೆದರು. ಅದಕ್ಕೆ ಸೂರ್ಯ ಫಿಲಂ ಕಂಪನಿ ಸ್ಟುಡಿಯೋಸ್ (ಸನ್‌ಲೈಟ್) ಎಂದು ಹೆಸರಿಡಲಾಯಿತು. ಇದೇ ಕರ್ನಾಟಕದ ಮೊದಲ ಸ್ಟುಡಿಯೋ.

ಸೂರ್ಯ ಫಿಲಂ ಸ್ಟುಡಿಯೋ ತನ್ನದೇ ಆದ ಕೈನಿಂದ ತಿರುಗಿಸಿ ಫಿಲಂ ಚಾಲನೆ ಮಾಡುತ್ತಿದ್ದ ಕ್ಯಾಮರಾಗಳನ್ನು ಹೊಂದಿತ್ತು. ಸ್ವಂತ ಪ್ರೋಸೆಸಿಂಗ್ ಸೌಲಭ್ಯವೂ ಇತ್ತು. ಆದರೆ ಚಲನಚಿತ್ರ ತೆಗೆಯಲು ಸೂರ್ಯನ ಬೆಳಕೇ ಆಧಾರವಾಗಿತ್ತು. ಛಾವಣಿ ಇಲ್ಲದ, ದೊಡ್ಡ ಜೋಪಡಿಗಳಂಥ ಫ್ಲೋರ್‌ಗಳಲ್ಲಿ ಶೂಟಿಂಗ್. ಇಲ್ಲದಿದ್ದರೆ ಹೊರಾಂಗಣ ಚಿತ್ರೀಕರಣ. ಆ ಕಾಲದಲ್ಲೇ ಸೂರ್ಯ ಫಿಲಂ ಕಂಪನಿ ಪ್ರಚಾರದಿಂದ ಹಿಡಿದು ಟ್ರಿಕ್ ಫೋಟೋಗ್ರಫಿಯವರೆಗೆ ವಿವಿಧ ವಿಭಾಗಗಳನ್ನು ಹೊಂದಿತ್ತು. ಪುಟ್ಟ ಮೃಗಾಲಯವೊಂದನ್ನು ಸ್ಟುಡಿಯೋ ಹೊಂದಿತ್ತು. ಹೊಸ ಸ್ಟುಡಿಯೋ ಸ್ಥಾಪನೆ ವಿಷಯ ಅಂದಿನ ಕಾಲದಲ್ಲಿ ಎಲ್ಲರಿಗೂ ಭಯಮಿಶ್ರಿತ ಕುತೂಹಲದ ವಿಚಾರವಾಗಿತ್ತು. ಹರಿಭಾಯ್ ಆರ್.ದೇಸಾಯಿ ಅವರು ಎದುರಿಸಿದ ಸಮಸ್ಯೆಗಳು ಒಂದೆರಡಲ್ಲ. ಸ್ಥಳೀಯರಲ್ಲಿ ಈ ಸ್ಟುಡಿಯೋ ಸ್ಥಾಪನೆ ಹಲವಾರು ಶಂಕೆಗಳಿಗೆ ಕಾರಣವಾಯಿತು. ಕಾಫಿ ತೋಟಗಳಿಗೆ ಬಲಿಗೊಡಲು ಎಳೆ ವಯಸ್ಸಿನ ಜನರನ್ನು ಸಂಸ್ಥೆ ನೇಮಕ ಮಾಡಿಕೊಳ್ಳುತ್ತಿದೆ ಎಂಬ ವದಂತಿ ಹರಡಿ ಮೊದಲ ಸ್ಟುಡಿಯೋ ಸ್ಥಾಪನೆಯ ಪರಿಸ್ಥಿತಿಯನ್ನು ಜಟಿಲಗೊಳಿಸಿತು. ಕಾಲಾನಂತರ ಹರಿಭಾಯ್, ಸ್ಥಳೀಯರ ಮನವೊಲಿಸಿಕೊಂಡರು. ಸಂಸ್ಥೆಯನ್ನು ಬೆಳೆಸಿದರು.



ಸೂರ್ಯ ಫಿಲಂ ಕಂಪನಿ ಹಾಗೂ ಸ್ಟುಡಿಯೋ ಪಡೆದ ಯಶಸ್ಸು ಹಾಗೂ ಜನಪ್ರಿಯತೆ ಸ್ಥಳೀಯರನ್ನೂ ಸ್ಟುಡಿಯೋ ನಿರ್ಮಿಸುವಂತೆ ಪ್ರಚೋದಿಸಿತು. ಸಾಹಿತ್ಯ, ನಾಟ್ಯ, ನಾಟಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಹೆಸರಾಗಿದ್ದವರೆಲ್ಲಾ ಸ್ಟುಡಿಯೋ ಸ್ಥಾಪನೆಗೆ ಮುಂದಾದರು.

ಸಂಸ್ಕೃತ ವಿದ್ವಾಂಸ, ಕನ್ನಡ ಸಾಹಿತಿ ದಿ. ದೇವುಡು ನರಸಿಂಹಶಾಸ್ತ್ರಿ, ಓರಿಯಂಟಲ್ ಬ್ಯಾಂಕ್‌ನ ಶ್ರೀನಿವಾಸಮೂರ್ತಿ ಹಾಗೂ ಗುಬ್ಬಿ ವೀರಣ್ಣನವರು ಸೇರಿ ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋ ಆರಂಭಿಸಿದರು. ಕನ್ನಡ ನೆಲದಲ್ಲಿ ಸಿನಿಮಾ ಉಸಿರಾಡಲು ಆರಂಭಿಸಿದ ಆರಂಭಕಾಲದಲ್ಲೇ ಮೂಕಿ ಚಿತ್ರ ತಯಾರಿಕೆಯ ಎರಡನೆಯ ಸ್ಟುಡಿಯೋ ಸ್ಥಾಪನೆಯಾದದ್ದು ಹೀಗೆ.

ಮದರಾಸಿನ ವೇಲ್ ಸ್ಟುಡಿಯೋ ಹಾಗೂ ಮುಂಬೈನ ಸ್ಟುಡಿಯೋ ಒಂದರಿಂದ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋಗೆ ಅಗತ್ಯವಾದ ಉಪಕರಣ, ಕಾಸ್ಟ್ಯೂಮ್‌ಗಳು, ಕ್ಯಾಮರಾ, ಎಡಿಟಿಂಗ್ ಟೇಬಲ್ ತರಲಾಯಿತು. ಈ ಸ್ಟುಡಿಯೋ ಒಂದು ಲ್ಯಾಬನ್ನು ಕೂಡಾ ಹೊಂದಿತ್ತು. ಆರಂಭವಾದ ಮೂರೇ ವರ್ಷಗಳಲ್ಲಿ ಅಪಾರ ನಷ್ಟ ಅನುಭವಿಸಿದ ಈ ಸ್ಟುಡಿಯೋವನ್ನು ಮುಚ್ಚಬೇಕಾದ ಪರಿಸ್ಥಿತಿ ಬಂತು. ಅದುವರೆಗೆ ಈ ಸ್ಟುಡಿಯೋದಲ್ಲಿ ತಯಾರಾಗಿ ಹೊರಬಂದ ಚಿತ್ರಗಳು ಮೂರು ಮಾತ್ರ.

ಕನ್ನಡ ನೆಲದಲ್ಲಿಯೇ ಚಲನಚಿತ್ರ ಚಟುವಟಿಕೆ ಬೇರೂರಬೇಕೆಂಬ ಮೊದಲ ಯತ್ನವೇ ಹತಾಶೆಯದಾಯಿತು. 1934ರಲ್ಲಿ ವಾಕ್ಚಿತ್ರ ಆರಂಭವಾದ ನಂತರದ ದಿನಗಳಲ್ಲಿಯೇ 1936ರಲ್ಲಿ ಬೆಂಗಳೂರಿನಲ್ಲಿ ಮತ್ತೊಂದು ಸ್ಟುಡಿಯೋ ಆರಂಭವಾಗಿ ದಾಖಲೆ ಸ್ಥಾಪಿಸಿತು. 1936ರಲ್ಲಿ ಸ್ಥಾಪನೆಯಾದ

*ನವಜ್ಯೋತಿ ಸ್ಥಾಪಿಸಿ ಆರಂಭದ ದಶಕಗಳಲ್ಲಿ ಚಲನ ಚಿತ್ರ ಚಟುವಟಿಕೆಗೆ ಪ್ರೋತ್ಸಾಹಿಸಿದ ಬಿ. ಆರ್. ರಾಮಯ್ಯ.*

ವಾಕ್ಚಿತ್ರ ತಯಾರಿಕೆಯ ಪ್ರಥಮ ಸ್ಟುಡಿಯೋ "ಮೈಸೂರು ಸೌಂಡ್ ಸ್ಟುಡಿಯೋಸ್" ಸ್ಥಾಪನೆಯಾದದ್ದು ಹಾಗೂ ಮುಚ್ಚಿ ಹೋದದ್ದು ಎರಡೂ ದುರಂತ ಕತೆಗಳೇ.

ಇತರ ರಾಜ್ಯಗಳಲ್ಲಿ ತಯಾರಿಕೆ ಕಷ್ಟಕರ. ಆದ್ದರಿಂದ ಕರ್ನಾಟಕದಲ್ಲಿ ನಮ್ಮದೇ ಆದ ಸ್ಟುಡಿಯೋ ಒಂದು ಬೇಕು ಎಂಬ ಹಲವರ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಿದವರು ವಿ.ಆರ್. ತಿಮ್ಮಯ್ಯ. ಪ್ರದರ್ಶಕರೂ ಆಗಿದ್ದ ಅವರು ಮೈಸೂರಿನಲ್ಲಿ ಸಾರಿಗೆ ಬಸ್ಸುಗಳ ಒಡೆಯರಾಗಿದ್ದರು. ಮೈಸೂರಿನ ಕೃಷ್ಣ ಹಾಗೂ ಆಪೇರಾ ಚಿತ್ರಮಂದಿರಗಳ ಮಾಲೀಕರೂ ಆಗಿದ್ದರು.

ಬೆಂಗಳೂರಿನಲ್ಲಿ ಸ್ಟುಡಿಯೋ ನಿರ್ಮಿಸಲು ವಿ.ಆರ್. ತಿಮ್ಮಯ್ಯನವರಿಗೆ ಸ್ಫೂರ್ತಿಯಾದದ್ದು ಒಂದು ತೆಲುಗು ಚಿತ್ರ. ಭಾರೀ ಹೆಸರು ಮಾಡಿದ ತೆಲುಗು ಚಿತ್ರವೊಂದನ್ನು ತಮ್ಮ ಚಿತ್ರಮಂದಿರದಲ್ಲಿ ವೀಕ್ಷಿಸುತ್ತಿದ್ದ ತಿಮ್ಮಯ್ಯನವರಿಗೆ ರಾಜ್ಯದ ಪ್ರತಿಭೆಗಳನ್ನು ಬಳಸಿಕೊಂಡು ತಾವೇ ಏಕೆ ಕನ್ನಡದಲ್ಲಿ ಈ ರೀತಿಯ ಸಾಹಸ ಮಾಡಬಾರದು ಎಂಬ ಆಲೋಚನೆ ಮೂಡಿತಂತೆ. ತಮ್ಮ ಮಿತ್ರರಿಗೆ ಮನದಿಂಗಿತ ತಿಳಿಸಿದರು. ಈ ಯೋಜನೆಗೆ. ಆಗ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದ ಕನಕಲಕ್ಷ್ಮಮ್ಮ ಅವರ ಸೋದರ ಟಿ. ದ್ವಾರಕಾನಾಥ್ ಜತೆಗೂಡಿದರು. ಕನಕಲಕ್ಷಮ್ಮನವರು ಎರಡನೆಯ ವಾಕ್ಚಿತ್ರ ಭಕ್ತ ಧ್ರುವದಲ್ಲಿ ಅಭಿನಯಿಸಿದ ಕಲಾವಿದೆ. ದ್ವಾರಕಾನಾಥ್ ಅವರೂ ಈ ಚಿತ್ರದ ತಯಾರಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರು. ಅವರು ಮದರಾಸಿನಲ್ಲಿ ಸ್ವತಃ ವಿಜಯಾ ಸಿನಿ ಲ್ಯಾಬೊರೇಟರೀಸ್ ಎನ್ನುವ ಸಂಸ್ಥೆಯನ್ನು ನಡೆಸುತ್ತಿದ್ದರು. ಅವರ ಸಹಕಾರ ಈ ಯೋಜನೆಗೆ ದೊರಕಿತು.

ಮೈಸೂರಿನಲ್ಲಿ ಇತಿಹಾಸ ಸೃಷ್ಟಿಸಿದ ಪ್ರೀಮಿಯರ್ ಸ್ಟುಡಿಯೋ



ಇವರೆಲ್ಲರ ನೆರವಿನೊಂದಿಗೆ ಜಂಟಿ ಸ್ಟಾಕ್ ಕಂಪನಿಯೊಂದನ್ನು ಸ್ಥಾಪಿಸಲಾಯಿತು. ಕರ್ನಾಟಕದ ನೆಲದಲ್ಲಿ ಮೂಕಚಿತ್ರಗಳ ಸಾಹಸ ನಡೆದ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋ ಇದ್ದ ಜಾಗದಲ್ಲೇ ಹೊಸ "ಮೈಸೂರು ಸೌಂಡ್ ಸ್ಟುಡಿಯೋಸ್" ಸ್ಥಾಪಿಸುವುದೆಂದು ನಿರ್ಧಾರವಾದದ್ದೇ ಕಾಕತಾಳೀಯ. ಸುಮಾರು 75000 ರೂ. ವೆಚ್ಚದಲ್ಲಿ ಇದರ ನಿರ್ಮಾಣವಾಯಿತು. ಈ ಸಮಯದಲ್ಲಿ ಸ್ಟುಡಿಯೋದಲ್ಲಿ ಒಂದು ಬೆಲ್ ಅಂಡ್ ಹೊವೆಲ್ ಕ್ಯಾಮರಾ, ಆಡಿಯೋ ಕಾಮೆಕ್ಸ್, ಜರ್ಮನ್ ರೆಕಾರ್ಡಿಂಗ್ ಉಪಕರಣ, ಪ್ರಿಂಟಿಂಗ್ ಮಿಷನ್, ಲ್ಯಾಬೋರೇಟರಿ, ಒಂದು ಫ್ಲೋರ್ ಸೌಲಭ್ಯ ಇತ್ತು. ಹಾಗೂ ಛಾವಣಿಯನ್ನು ಬದಲಾಯಿಸಿ ಬೆಳಿಗ್ಗೆ ಮತ್ತು ರಾತ್ರಿ ಚಿತ್ರೀಕರಿಸಲು ಉಪಯೋಗವಾಗುವ ನೆಲ ಸಿದ್ಧಗೊಳಿಸಲಾಗಿತ್ತು.

ಟಿ. ದ್ವಾರಕಾನಾಥ್ ಈ ಸ್ಟುಡಿಯೋದ ಮೇಲ್ವಿಚಾರಕರಾಗಿದ್ದರು. ಕ್ಯಾಮರಾಮನ್‌ಗಳಾಗಿ ಈಗಾಗಲೇ ಹೆಸರು ಮಾಡಿದ್ದ ಬೊಮ್ಮನ್ ಡಿ.ಇರಾನಿ, ಗಜಾನನ ಕಂಬಳೆ, ಎಂ.ವಿ. ರಾಮನ್, ರೆಕಾರ್ಡಿಸ್ಟ್ ಯಶವಂತರಾವ್ ಸ್ಟುಡಿಯೋದಲ್ಲಿ ಉದ್ಯೋಗಿಗಳಾಗಿದ್ದರು.

ಹೀಗೆ 'ಮೈಸೂರು ಸೌಂಡ್ ಸ್ಟುಡಿಯೋಸ್' 1936ರಲ್ಲಿ ಆರಂಭವಾಯಿತು. **ರಾಜಸೂಯಯಾಗ** ಎಂಬ ಕನ್ನಡ ಚಿತ್ರ ಸಂಪೂರ್ಣವಾಗಿ ಈ ಸ್ಟುಡಿಯೋದಲ್ಲೇ ಚಿತ್ರೀಕರಣಗೊಂಡು, ತಯಾರಾಗಿ ಬಿಡುಗಡೆಯಾಗಿ, ಸ್ಥಳೀಯವಾಗಿ ತಯಾರಾದ ಪ್ರಥಮ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.


ಇದಾದ ನಂತರ ಇದೇ ಸ್ಟುಡಿಯೋ ತಮಿಳು ಚಿತ್ರವೊಂದರ ತಯಾರಿಕೆಗೆ ಕೈ ಹಾಕಿತು. **ನವೀನ ನಿರುಪಮ** ಎಂಬ ತಮಿಳು ಚಿತ್ರವನ್ನು ಸ್ಟುಡಿಯೋ ಮಾಲಿಕ ವಿ.ಆರ್. ತಿಮ್ಮಯ್ಯನವರೇ ನಿರ್ದೇಶಿಸಿದರು. ಅಲ್ಲದೆ ಚೌಧುರಿ ಎಂಬ ನಾಮಧೇಯದಿಂದ ನಾಯಕನ ಪಾತ್ರವನ್ನೂ ವಹಿಸಿದ್ದರು. ನಾಯಕ ನಟನಾಗುವ ಅವರ ಆಸೆಯೇ ಸ್ಟುಡಿಯೋ ಬೆಳವಣಿಗೆ ಕುಂಠಿತವಾಗಲು ಕಾರಣವಾಗಿ, ಈ ಸ್ಟುಡಿಯೋ ಮೂರನೆಯ ಚಿತ್ರದ ನಿರ್ಮಾಣ ಯತ್ನದಲ್ಲಿದ್ದಾಗಲೇ ಮುಚ್ಚಿತು.

ನಂತರ 1945ರಲ್ಲಿ ಮೈಸೂರಿನಲ್ಲಿ ಮತ್ತೊಂದು ಸ್ಟುಡಿಯೋ ನಿರ್ಮಾಣದ ಯತ್ನ ನಡೆಯಿತು. ಈಗ ಮೈಸೂರಿನಲ್ಲಿರುವ ಪ್ರೀಮಿಯರ್ ಸ್ಟುಡಿಯೋ ಸ್ಥಳದಲ್ಲಿಯೇ ಬೆಂಗಳೂರಿನ ನೂಲಿನ ವ್ಯಾಪಾರಿ ವಿ. ನಾರಾಯಣ್ ಎಂಬುವವರು "ಮೈಸೂರು ಮೂವಿಟೋನ್ ಸ್ಟುಡಿಯೋ" ಸ್ಥಾಪಿಸಿದರು. ಆದರೆ ದುರದೃಷ್ಟವಶಾತ್ ಇಲ್ಲಿ ಯಾವುದೇ ಚಿತ್ರ ನಿರ್ಮಾಣ ಚಟುವಟಿಕೆ ಆರಂಭವಾಗಲಿಲ್ಲ. ಚಿತ್ರ ನಿರ್ಮಾಣ ಚಟುವಟಿಕೆ ಆರಂಭಿಸುವ ಮುನ್ನವೇ ಈ ಸ್ಟುಡಿಯೋ ಮುಂಬೈ ಉದ್ಯಮಿ ಒಬ್ಬರಿಗೆ ಹಸ್ತಾಂತರವಾಯಿತು.



ಪ್ರೀಮಿಯರ್ ಮಾಲೀಕ ಬಸವರಾಜಯ್ಯ

ಬೆಂಗಳೂರಿನ ನೂಲಿನ ವ್ಯಾಪಾರಿ ಹಾಗೂ ಜಯಶಂಕರ್ ಫಿಲಂಸ್ ಕಾರ್ಪೋರೇಶನ್ ಹಂಚಿಕಾ ಸಂಸ್ಥೆ ನಡೆಸುತ್ತಿದ್ದ ವಿ. ನಾರಾಯಣ್ ಜತೆಗೆ ಆ ವೇಳೆಗಾಗಲೇ ತೆಲುಗು, ತಮಿಳು ಚಿತ್ರರಂಗದಲ್ಲಿ ಹೆಸರು ಮಾಡಿ, ದಕ್ಷಿಣ ಭಾರತ ಚಿತ್ರರಂಗದಲ್ಲಿ ಹೆಸರಾಗಿದ್ದ ಎಚ್.ಎಂ. ರೆಡ್ಡಿ ಅವರೂ ಸೇರಿದ್ದರು. ಅವರ ನೇತೃತ್ವದಲ್ಲೇ ಮೈಸೂರು ಮೂವಿಟೋನ್ ಸ್ಟುಡಿಯೋ ಸ್ಥಾಪನೆಯಾಯಿತು. 1945ರ ಅಕ್ಟೋಬರ್ 21ರ ವಿಜಯ ದಶಮಿಯಂದು ಆಗ ಮೈಸೂರಿನ ದಿವಾನರಾಗಿದ್ದ ನ್ಯಾಪತಿ ಮಾಧವರಾವ್ ಮೈಸೂರು ಮೂವಿಟೋನ್ ಸ್ಟುಡಿಯೋವನ್ನು ಉದ್ಘಾಟಿಸಿದರು. ಆದರೆ ಸ್ಥಳೀಯ ಉದ್ಯಮದ ಮಂದಗತಿಯ ನಡಿಗೆಯಿಂದಾಗಿ ಈ ಸ್ಟುಡಿಯೋ ತೊಂದರೆ ಅನುಭವಿಸಿತು. 'ಮೈಸೂರು



ಮೂವಿಟೋನ್ ಸ್ಟುಡಿಯೋದ ವ್ಯವಸ್ಥಾಪಕ ಮಂಡಳಿಯಲ್ಲಿ ವೈಮನಸ್ಯ ಬಂದಾಗ, ಮೈಸೂರು ಮೂವಿಟೋನ್‌ನ ಅಧಿಕಾರ ಸೂತ್ರ ಎಚ್.ಎಂ. ರೆಡ್ಡಿ ಅವರ ಅಧಿಕಾರದಿಂದ, ಬೆಂಗಳೂರಿನ 'ದಿ. ಜಯಶಂಕರ್ ಫಿಲಂಸ್ ಕಾರ್ಪೋರೇಷನ್‌ನ ಸ್ಥಾಪಕ ಅಧ್ಯಕ್ಷ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ವಿ. ನಾರಾಯಣ್ ಅವರಿಗೆ ಹಸ್ತಾಂತರವಾಯಿತು. ಆದರೆ ವಿ. ನಾರಾಯಣ್ ಮೂವಿಟೋನ್ ಸ್ಟುಡಿಯೋವನ್ನು ಪೂನಾದ ಶಾಲಿಮಾರ್ ಸಂಸ್ಥೆಗೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದರು. 3 ವರ್ಷ ಸ್ಟುಡಿಯೋ ಹೆಸರನ್ನು ಬದಲಿಸಬಾರದೆಂಬ ಒಪ್ಪಂದ ಆಗಿ 70 ಸಾವಿರ ರೂಪಾಯಿಗಳಿಗೆ ನೀಡಲಾಗಿತ್ತು ಎಂದು 'ಚಿತ್ರ ಸಮಾಚಾರ್' ಬರೆದಿದೆ. "ಹೆಚ್.ಎಂ. ರೆಡ್ಡಿಯವರು ಮೈಸೂರಿನಲ್ಲಿ ಸ್ಟುಡಿಯೋ ಒಂದನ್ನು ಸ್ಥಾಪಿಸಬೇಕೆಂಬ ವಿಷಯವನ್ನು ನನ್ನೊಡನೆ ಪ್ರಸ್ತಾಪಿಸಿದರು. ಶ್ರೀಮತಿ ರಾಜಕುಮಾರಿ ಲೀಲಾವತಿಯವರಿಗೆ ಸೇರಿದ್ದ ಚಿತ್ತರಂಜನ್ ಮಹಲ್ ಎಂಬ ಒಂದು ಪುಟ್ಟ ಅರಮನೆಯನ್ನು ಬಾಡಿಗೆಗೆ ಕೊಡಿಸಿದೆ. ರೆಡ್ಡಿಯವರು ಯಾವ ಚಿತ್ರವನ್ನೂ ಮಾಡಲಿಲ್ಲ. ಮದರಾಸಿಗೆ ಹೊರಟು ಹೋದರು. ಮೈಸೂರು ಮೂವಿಟೋನ್ ಎಂದು ಸ್ಥಾಪಿತವಾಗಿ ಪ್ರೀಮಿಯರ್ ಸ್ಟುಡಿಯೋಸ್ ಎಂದು ಮುಂದುವರೆಯುತ್ತಿರುವ ಸಂಸ್ಥೆ ಈಗ ಇರುವುದು ಅದೇ ಸ್ಥಳದಲ್ಲಿ" ಎಂದು ಕೆಂಪರಾಜ ಅರಸು ಒಂದೆಡೆ ನೆನಪಿಸಿದ್ದಾರೆ.




1946ರಲ್ಲಿ ಇಡೀ ವರ್ಷ ಒಂದೂ ಕನ್ನಡ ಚಿತ್ರ ತೆರೆಕಾಣಲಿಲ್ಲ. ಆದರೂ 1946 ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ಆರಂಭಿಸಿದ ವರ್ಷ. ಈ ದೃಷ್ಟಿಯಿಂದ ಇದು ಸ್ಮರಣೀಯ. ಈ ವರ್ಷದಲ್ಲೇ ಕನ್ನಡ ಚಿತ್ರರಂಗದ ಚಟುವಟಿಕೆ ಮತ್ತೆ ಮೈಸೂರಿಗೆ ವಾಪಸ್ಸಾದದ್ದು


ನಗೆನಟ ಬಾಲಕೃಷ್ಣರ ನನಸಾಗದ ಕನಸು
ಅಭಿಮಾನ್ ಸ್ಟುಡಿಯೋ

ಅಲ್ಲಿಯವರೆಗೆ ರಾಜಸೂಯಯಾಗ ಎಂಬ ಚಿತ್ರವೊಂದನ್ನು ಹೊರತು ಪಡಿಸಿದರೆ, ಉಳಿದ ಎಲ್ಲ 15 ಕನ್ನಡ ಚಿತ್ರಗಳೂ ಕೊಲ್ಹಾಪುರ, ಮುಂಬೈ, ಮದರಾಸಿನ ಸ್ಟುಡಿಯೋಗಳಲ್ಲಿಯೇ ಚಿತ್ರೀಕರಣಗೊಂಡಿದ್ದವು. ಕನ್ನಡ ಚಿತ್ರ ನಿರ್ಮಾಪಕರು. ಇದರಿಂದ ಅಪಾರ ಆರ್ಥಿಕ ತೊಂದರೆಗೆ ಒಳಗಾಗಿದ್ದರು. ನಷ್ಟ ಅನುಭವಿಸಿದ್ದರು. ಇದರಿಂದಾಗಿ ಕನ್ನಡ ಚಿತ್ರೋದ್ಯಮವೇ ಸ್ಥಗಿತವಾಗುವ ಸ್ಥಿತಿ ಬಂದಿತ್ತು, ಇಂತಹ ಸಮಯದಲ್ಲಿ 1946ರಲ್ಲಿ ಮೈಸೂರು ನಗರದಲ್ಲಿ "ನವಜ್ಯೋತಿ ಸ್ಟುಡಿಯೋ" ಆರಂಭವಾಗಿ ಕನ್ನಡ ಚಿತ್ರರಂಗ ಚೇತರಿಸಿಕೊಂಡಿತು. ಬೇಸತ್ತಿದ್ದ ನಿರ್ಮಾಪಕರಿಗೆ ಉಸಿರು ಬಂತು. ಈ ಸ್ಟುಡಿಯೋದಲ್ಲಿ 30ಕ್ಕೂ ಹೆಚ್ಚು ಕನ್ನಡ ಚಿತ್ರಗಳು ತಯಾರಾಗಿ, ಕನ್ನಡ ಚಿತ್ರರಂಗದ ಪತನವನ್ನು ತಡೆಗಟ್ಟಲು ಈ ಸ್ಟುಡಿಯೋ ಸ್ಥಾಪನೆ ನೆರವಾಯಿತು.

ನವಜ್ಯೋತಿ ಸ್ಟುಡಿಯೋ ಆರಂಭವಾದ ನಂತರ ಮದರಾಸನ್ನೇ ನಂಬಿ ಅಲ್ಲೇ ನೆಲೆ ಊರಿದ್ದ ಕನ್ನಡ ಚಿತ್ರರಂಗದ ಚಟುವಟಿಕೆಗಳು ಮೈಸೂರಿಗೆ ವಾಪಸ್ಸಾದವು. ಮೈಸೂರಿನ ಖಾಸಗಿ ಬಸ್‌ಗಳ ಮಾಲಿಕ ಜಿ.ಆರ್. ರಾಮಯ್ಯ ಮತ್ತು ಇತರ ಎಂಟು ಮಂದಿ ಸೇರಿ ಆರಂಭಿಸಿದ ನವಜ್ಯೋತಿ ಸ್ಟುಡಿಯೋ ಕನ್ನಡ ಚಿತ್ರರಂಗದ ನಿರ್ಮಾಣ ಚಟುವಟಿಕೆಗಳಿಗೆ ಸ್ಫೂರ್ತಿ ತುಂಬಿತು. ಮೈಸೂರು ಕನ್ನಡ ಚಿತ್ರಗಳ ನಿರ್ಮಾಣದ ದೊಡ್ಡ ಕೇಂದ್ರವಾಗಿ ಮಾರ್ಪಾಡಾಯಿತು. ಮಹಾತ್ಮ ಪಿಕ್ಚರ್ಸ್ ಈ ಸ್ಟುಡಿಯೋ ಮೂಲಕವೇ ಅಸ್ತಿತ್ವಕ್ಕೆ ಬಂದ ಚಿತ್ರಸಂಸ್ಥೆ. ಡಿ. ಶಂಕರ್‌ಸಿಂಗ್, ಬಿ. ವಿಠಲಾಚಾರ್ಯ, ಜಿ.ಎಸ್. ವಿಶ್ವನಾಥಶೆಟ್ಟಿ, ಡಿ. ರಾಮಸ್ವಾಮಿ ಮತ್ತು ಇತರ ಅರಸೀಕೆರೆಯ ಗೆಳೆಯರು ಸೇರಿ ಆರಂಭಿಸಿದ 'ಮಹಾತ್ಮ ಪಿಕ್ಚರ್ಸ್' ಸತತವಾಗಿ ಈ ಸ್ಟುಡಿಯೋದಲ್ಲಿ ಚಿತ್ರಗಳನ್ನು ತಯಾರಿಸುತ್ತಾ ಕನ್ನಡ ಪ್ರೇಕ್ಷಕರ ಸಿನಿಮಾ ಅಭಿರುಚಿಯನ್ನು ಬೆಳೆಸಿ ಉಳಿಸಿತು.

ಕನ್ನಡ ಚಿತ್ರರಂಗ ನಡೆದು ಬಂದ ದಾರಿಯಲ್ಲಿ ಸ್ಟುಡಿಯೋಗಳ ಪಾತ್ರ ಕೂಡ ಗಮನಾರ್ಹ. ನವಜ್ಯೋತಿಯ ಸಾಧನೆ, ಕಾಣಿಕೆ ಮತ್ತು ಅದು ಕ್ಲಿಷ್ಟಕಾಲದಲ್ಲಿ ನಿರ್ವಹಿಸಿದ ಪಾತ್ರ ಗಣನೀಯ.

ಮೈಸೂರಿನ ವ್ಯಾಪಾರಿ ಟಿ.ಎಸ್. ಶಿವಬಸವಯ್ಯನವರು 1943ರಲ್ಲಿ ತಮ್ಮ ಮಿತ್ರರೊಂದಿಗೆ ಸೇರಿ **ವಾಣಿ** ಎಂಬ ಸಂಗೀತ ಪ್ರಧಾನ ಚಿತ್ರವೊಂದನ್ನು ತಯಾರಿಸುವ ಯೋಜನೆ ಹಾಕಿದರು. ಮೈಸೂರಿನಲ್ಲಿ ಪ್ರಥಮ ಸ್ಟುಡಿಯೋ ಒಂದರ ಉದಯಕ್ಕೆ ಬೀಜಾಂಕುರವಾದದ್ದು ಈ ಸಂದರ್ಭದಲ್ಲಿಯೇ. ಶಿವಬಸವಯ್ಯನವರು ಈ ಚಿತ್ರದ ಪಾಲುದಾರರನ್ನಾಗಿ ಹಾಸ್ಯನಟ, ರಂಗಭೂಮಿ ಕಲಾವಿದ ಕೆ. ಹಿರಣ್ಣಯ್ಯ, ಮೈಸೂರಿನ ಖಾಸಗಿ ಬಸ್ಸುಗಳ ಮಾಲೀಕ ಜಿ.ಆರ್. ರಾಮಯ್ಯ, ಸ್ಥಿರ ಚಿತ್ರಗ್ರಾಹಕ ಗೋಪಾಲ್.



*ಈಗ ಸ್ಥಗಿತ ಸ್ಥಿತಿಯಲ್ಲಿರುವ ಚಾಮುಂಡೇಶ್ವರಿ ಸ್ಟುಡಿಯೋ 1987ರ ನವೆಂಬರ್ 9ರಂದು "ಶಿವಮೆಚ್ಚಿದ ಕಣ್ಣಪ್ಪ" ಚಿತ್ರದ ಚಿತ್ರೀಕರಣ ನಡೆಯುತ್ತಿದ್ದಾಗ 'ಎ' ಫ್ಲೋರ್‌ನ ಗೋಡೆ ಕುಸಿದು ಅನಾಹುತ ಸಂಭವಿಸಿತು. ಮತ್ತೆ 1988ರ ಜನವರಿ 1ರಂದು 'ಬಿ' ಫ್ಲೋರ್‌ಗೆ ಬೆಂಕಿ ತಗುಲಿ ಸಂಪೂರ್ಣ ಸುಟ್ಟುಹೋಯಿತು. ಈಗ ಕುಸಿದ ಸ್ಟುಡಿಯೋ ಹಿಂದೆ ಇರುವ ಡಬ್ಬಿಂಗ್ ಥಿಯೇಟರ್ ಮಾತ್ರ ಕಾರ್ಯ ನಿರ್ವಹಿಸುತ್ತಿದೆ.*

ಸಂಗೀತ ವಿದ್ವಾನ್ ಪಿಟೀಲು ಟಿ. ಚೌಡಯ್ಯ ಅವರುಗಳನ್ನು ಸೇರಿಸಿಕೊಂಡಿದ್ದರು. ಈ ಐವರ ಹೆಸರಿನ ಮೊದಲ ಅಕ್ಷರಗಳನ್ನು ತೆಗೆದು ಚಿತ್ರದ ಲಾಂಛನಕ್ಕೆ 'ಎಚ್.ಆರ್.ಜಿ.ಸಿ. ಶ್ರೀ ಪಿಕ್ಚರ್ಸ್' ಎಂದು ಹೆಸರಿಡಲಾಗಿತ್ತು. ಕೊಯಮತ್ತೂರಿನ ಪಕ್ಷಿರಾಜಾ ಸ್ಟುಡಿಯೋದಲ್ಲಿ ಚಿತ್ರೀಕರಣ ನಡೆಯಿತು.

**ವಾಣಿ** ಚಿತ್ರದ ಚಿತ್ರೀಕರಣಕ್ಕಾಗಿ ಸ್ಟುಡಿಯೋ ವ್ಯವಸ್ಥೆ ನೋಡಲು ಕೊಯಮತ್ತೂರಿಗೆ ಹೋಗಿದ್ದ ಜಿ.ಆರ್. ರಾಮಯ್ಯ ಹಾಗೂ ಅವರ ಮಿತ್ರರಿಗೆ ನಾವೂ ಮೈಸೂರಿನಲ್ಲಿ ಸ್ಟುಡಿಯೋ ಒಂದನ್ನು ಏಕೆ ಸ್ಥಾಪಿಸಬಾರದು ಎನ್ನುವ ಆಲೋಚನೆ ಬಂತು. ಆ ಸಮಯದಲ್ಲೇ ಮದರಾಸಿನ ಪ್ರಾಗ್ಜ್ಯೋತಿ ಸ್ಟುಡಿಯೋ ಮುಚ್ಚಿತ್ತು. ಅಲ್ಲಿನ ಕೆಲವು ಉಪಕರಣಗಳನ್ನು ಹರಾಜಿನಲ್ಲಿ ತಾವು ಪಡೆದುಕೊಂಡರೆ ಮೈಸೂರಿನಲ್ಲಿ ಸ್ಟುಡಿಯೋ ಸ್ಥಾಪಿಸಬಹುದು. ಅಲ್ಲದೆ, ತಮ್ಮ ಮುಂದಿನ ಚಿತ್ರಗಳನ್ನು ಅಲ್ಲೇ ತಯಾರಿಸಬಹುದು ಎಂಬ ಆಲೋಚನೆಯೂ ಜಿ.ಆರ್. ರಾಮಯ್ಯನವರ ತಲೆಯಲ್ಲಿ ಮೂಡಿತು. ನಿರ್ದೇಶಕ ಸಿ.ವಿ. ರಾಜು, ರಾಮಯ್ಯನವರ ಆಲೋಚನೆಗೆ ಹೂಂ ಗುಟ್ಟಿದರಲ್ಲದೆ, ಉಪಕರಣಗಳನ್ನು ಕೊಳ್ಳಲು ಪ್ರೇರೇಪಿಸಿದರು. ಹೀಗಾಗಿ ರಾಮಯ್ಯ ಮತ್ತು ಗೆಳೆಯರು, ಹರಾಜಿನಲ್ಲಿ ಸ್ಟುಡಿಯೋ ಪರಿಕರಗಳನ್ನು ಕೊಂಡು ತಂದರು. ಮೈಸೂರಿನ ಸರಸ್ವತಿಪುರಂನಲ್ಲಿರುವ ದಳವಾಯಿ ತೋಟದಲ್ಲಿ, ಸುಮಾರು ಎಂಟು ಎಕರೆ ಪ್ರದೇಶದಲ್ಲಿ ಕಟ್ಟಡವೊಂದನ್ನು ನಿರ್ಮಿಸಲಾಯಿತು. ಉಪಕರಣಗಳನ್ನು ಅಲ್ಲಿಟ್ಟು, ಅದಕ್ಕೆ ನವಜ್ಯೋತಿ ಸ್ಟುಡಿಯೋ ಎಂದು ನಾಮಕರಣ ಮಾಡಲಾಯಿತು. ಒಂಬತ್ತು ಮಂದಿ ಸ್ನೇಹಿತರು ಸೇರಿ ಈ ಸಾಹಸ ಕಾರ್ಯ ಮಾಡಿದ್ದರಿಂದ ಸ್ಟುಡಿಯೋಗೆ ನವಜ್ಯೋತಿ ಎಂದು ಹೆಸರಿಡಲಾಗಿತ್ತು. ಆರಂಭದಲ್ಲಿ ಮೂರು ಫ್ಲೋರ್‌ಗಳನ್ನು ಹೊಂದಿದ್ದ ನವಜ್ಯೋತಿ, ಕಾಲಾನುಕ್ರಮದಲ್ಲಿ ದಕ್ಷಿಣ ಭಾರತದ ಸುಸಜ್ಜಿತ ಸ್ಟುಡಿಯೋ ಎಂದು ಹೆಸರಾಯಿತು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಕಚ್ಚಾ ಫಿಲಂಗಳು ದೊರೆಯದೆ ರೇಷನಿಂಗ್ ಪದ್ಧತಿ ಜಾರಿಗೆ ಬಂದಿತು. ಆಗ ಎಚ್. ಆರ್.ಜಿ.ಸಿ. ಶ್ರೀ ಪಿಕ್ಚರ್ಸ್‌ನಲ್ಲಿ **ವಾಣಿ** ಚಿತ್ರದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಜಿ.ಆರ್. ರಾಮಯ್ಯನವರು ಚಿತ್ರ ತಯಾರಿಸಲು ಕಚ್ಚಾ ಫಿಲಂ ಕೋರಿ ಅರ್ಜಿ ಸಲ್ಲಿಸಿದ್ದರು. ಅವರಿಗೆ ಆಗ ಚಿತ್ರ ನಿರ್ಮಿಸಲು ಫಿಲಂ ಕೋಟಾ ದೊರಕಿತು. ನವಜ್ಯೋತಿಯ ನಿರ್ಮಾಣ ಸಾರ್ಥಕವಾಯಿತು. ಮಹಾತ್ಮ ಪಿಕ್ಚರ್ಸ್ ಲಾಂಛನದಲ್ಲಿ ಎಲ್ಲ ಗೆಳೆಯರು ಸೇರಿ **ಕೃಷ್ಣಲೀಲಾ** (1947) ಚಿತ್ರವನ್ನು ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಿಸಿದರು. ಈ ಸ್ಟುಡಿಯೋದಲ್ಲಿ ತಯಾರಾದ ಮೊದಲ ಕನ್ನಡ ಚಿತ್ರ ಇದು ಎನ್ನಲಾಗಿದೆ. ಆದರೆ ಈ ಸ್ಟುಡಿಯೋದಲ್ಲಿ ಮೊದಲು ತಯಾರಾದ ಚಿತ್ರ ತೆಲುಗಿನ **ಶ್ರೀರಾಮ ಪಟ್ಟಾಭಿಷೇಕ** ಎಂದೂ ಕೆಲವರು ಹೇಳುತ್ತಾರೆ.



ಕಂಠೀರವ ಸ್ಟುಡಿಯೋ

ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಾದ ಮೊದಲ ಕನ್ನಡ ಚಿತ್ರ **ಕೃಷ್ಣಲೀಲಾ** ಕನ್ನಡ ಚಿತ್ರರಂಗಕ್ಕೆ ಸ್ವದೇಶಿ ಕಳೆ ತಂದಿತು. ಸಿ.ವಿ. ರಾಜು ನಿರ್ದೇಶನದ ಈ ಚಿತ್ರ ಬೆಂಗಳೂರಿನ ಶಾರದಾ ಚಿತ್ರಮಂದಿರದಲ್ಲಿ ಶತದಿನೋತ್ಸವ ಆಚರಿಸಿತು. **ನಾಗಕನ್ನಿಕೆ, ಜಗನ್ಮೋಹಿನಿ, ಭಕ್ತ ರಾಮದಾಸ್, ದಲ್ಲಾಳಿ, ಭಾರತಿ, ಕಲಾವಿದ** ಹಾಗೂ ಮುಂಬೈನ ರಾಮ್‌ಜಿ ಆರ್ಯ ತಯಾರಿಸಿದ ಎರಡು ಹಿಂದಿ ಚಿತ್ರಗಳು ಇಲ್ಲಿ ತಯಾರಾದವು. ಎಂ.ಜಿ. ರಾಮಚಂದ್ರನ್, ವಿ.ಎನ್. ಜಾನಕಿ ಅಭಿನಯಿಸಿದ "ವರದ್ದು ನಾಟ್ಟು ಇಳವರಸಿ" ಇಲ್ಲಿ ತಯಾರಾದ ಮುಖ್ಯ ಚಿತ್ರ. 1953 ನವಜ್ಯೋತಿಗೆ ಅತಿ ಉಚ್ಛ್ರಾಯದ ಕಾಲ. ಈ ಸಮಯದಲ್ಲಿ ಸ್ಟುಡಿಯೋ ಚಟುವಟಿಕೆಗಳು ಅತಿ ಬಿರುಸಾಗಿತ್ತು. ಈ ಸಮಯದಲ್ಲೇ ಅಮೇರಿಕದ ನಿರ್ದೇಶಕದ ಮೆಕಲ್‌ಡೇ ಎನ್ನುವವರು ನವಜ್ಯೋತಿಯ ಉಪಕರಣಗಳನ್ನು ಬಳಸಿಕೊಂಡು ಆಂಗ್ಲ ಬಣ್ಣದ ಚಿತ್ರವೊಂದನ್ನು ತಯಾರಿಸಿದರು. ಈ ಸ್ಟುಡಿಯೋದಲ್ಲಿ ಒಟ್ಟು 30 ಚಿತ್ರಗಳು ತಯಾರಾಗಿವೆ.

ಕನ್ನಡ ಚಿತ್ರರಂಗದ ಕುಸಿತವನ್ನು ಒಂದು ಕಾಲದಲ್ಲಿ ತಡೆದು, ತಯಾರಿಕೆಗೆ ಭದ್ರ ಬುನಾದಿ ಹಾಕಿದ್ದ ನವಜ್ಯೋತಿ ಸ್ಟುಡಿಯೋಗೆ ಆರ್ಥಿಕ ಬಿಕ್ಕಟ್ಟು ತಲೆದೋರಿತು. ಸಾಲ ಹೆಚ್ಚಾದವು. ಆರ್ಥಿಕ ಮುಗ್ಗಟ್ಟಿನಿಂದಾಗಿ 1963ರಲ್ಲಿ ನವಜ್ಯೋತಿ ಸ್ಟುಡಿಯೋವನ್ನು ಹರಾಜು ಹಾಕಲಾಯಿತು. ಹರಾಜಿನಲ್ಲಿ ಕೃಷ್ಣಾಜಿರಾವ್ ಎಂಬುವವರು ಸ್ಟುಡಿಯೋವನ್ನು ಕೊಂಡು, ನಂತರ ಇನ್ನಾರಿಗೋ ಮಾರಿದ್ದನ್ನು ಜಿ.ಆರ್. ರಾಮಯ್ಯನವರು ನನ್ನೊಡನೆ ಮಾತನಾಡುವಾಗ ನೆನಪಿಸಿಕೊಂಡಿದ್ದರು. ಈಗ ಈ ಕಟ್ಟಡದಲ್ಲಿ ಶ್ರೀ ಶಿವರಾತ್ರೀಶ್ವರ ಬೇಸಿಕ್ ಟ್ರೈನಿಂಗ್ ಕಾಲೇಜು ನಡೆಯುತ್ತಿದೆ.

ನವಜ್ಯೋತಿ ಸ್ಟುಡಿಯೋ ಮುಚ್ಚಿದ ನಂತರ ಇತರ ಸ್ಟುಡಿಯೋಗಳು ಆರಂಭವಾಗುವವರೆಗೆ ಚಿತ್ರರಂಗದ ಚಟುವಟಿಕೆ ಮತ್ತೆ ಮದರಾಸಿಗೆ ವರ್ಗಾವಣೆಗೊಂಡಿತ್ತು.

### ಪ್ರೀಮಿಯರ್ ಸ್ಟುಡಿಯೋ

ಈ ಘಟ್ಟ ಮುಗಿದ ನಂತರ 1954ರಲ್ಲಿ ಮೈಸೂರಿನಲ್ಲಿ ಮತ್ತೊಂದು ಸ್ಟುಡಿಯೋ ಸ್ಥಾಪನೆಯ ಕತೆ ಆರಂಭವಾಗುತ್ತದೆ. ಆಗ ಪ್ರೀಮಿಯರ್ ಇನ್‌ಶ್ಯೂರೆನ್ಸ್ ಕಂಪನಿಯಲ್ಲಿ ನೌಕರರಾಗಿದ್ದ ಎಂ.ಎನ್. ಬಸವರಾಜಯ್ಯ, ಪ್ರೀಮಿಯರ್ ಸ್ಟುಡಿಯೋ ಸ್ಥಾಪನೆಗೆ ಮುಂದಾದರು. ಬೆಂಗಳೂರಿನಲ್ಲಿ ಸ್ಟುಡಿಯೋ ಸ್ಥಾಪಿಸಲು ಹಿಂದೆಯೆ ಯತ್ನಿಸಿ ವಿಫಲರಾಗಿದ್ದ ದಿ. ಬಿ.ಎಂ. ಶ್ರೀನಿವಾಸಯ್ಯ ಅವರಿಂದ ಉಪಕರಣಗಳನ್ನು ಕೊಂಡು ತಂದ ಬಸವರಾಜಯ್ಯ, ಪ್ರೀಮಿಯರ್ ಸ್ಟುಡಿಯೋ ಸ್ಥಾಪಿಸಿದರು. ಮೈಸೂರು ಅರಮನೆಗೆ



ಈಗ ಸ್ಟುಡಿಯೋ ಚಿತ್ರೀಕರಣ ಕಡಿಮೆ. ಹೊರಾಂಗಣವೆ ಈಗ ಎಲ್ಲ. ಬೆಂಗಳೂರಿನ ಅರಮನೆ ಈಗ ಚಿತ್ರೀಕರಣದ ಎಡೆಬಿಡದ ತಾಣ.

ಸೇರಿದ ಚಿತ್ರರಂಜನ್ ಮಹಲ್‌ನಲ್ಲಿ ಪ್ರೀಮಿಯರ್ ಸ್ಟುಡಿಯೋ 1954ರ ಆಗಸ್ಟ್ 6 ರಂದು ಕಾರ್ಯಾರಂಭ ಮಾಡಿತು.

ಕನ್ನಡ ಚಿತ್ರರಂಗ ಕನ್ನಡ ನೆಲದಲ್ಲಿಯೇ ಉಳಿದು ಬೆಳೆಯಲು ಪ್ರೀಮಿಯರ್ ಸ್ಟುಡಿಯೋ ನೀಡಿದ ಕಾಣಿಕೆಯನ್ನು ಕಡೆಗಣಿಸುವಂತಿಲ್ಲ. ರಾಜ್ಯ ಸರ್ಕಾರ ಕರ್ನಾಟಕದಲ್ಲಿಯೇ ತಯಾರಾದ ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುವ ಯೋಜನೆ ಪ್ರಕಟಿಸಿದ ನಂತರವಂತೂ ಪ್ರೀಮಿಯರ್ ಸ್ಟುಡಿಯೋ ಚಟುವಟಿಕೆ ಹೆಚ್ಚಾಯಿತು. ಆರಂಭದಲ್ಲಿ ಒಂದೇ ಫ್ಲೋರ್ ಹೊಂದಿದ್ದ ಈ ಸ್ಟುಡಿಯೋ ಹತ್ತು ವರ್ಷಗಳಲ್ಲಿ ಐದು ಫ್ಲೋರ್‌ಗಳ ಸ್ಟುಡಿಯೋವಾಗಿ ಪರಿವರ್ತನೆಗೊಂಡಿತು. ಹೊರಾಂಗಣ ಚಿತ್ರೀಕರಣ ಘಟಕ, ಒಂದೇ ಬಾರಿಗೆ ಏಳು ಚಿತ್ರಗಳ ಚಿತ್ರೀಕರಣಕ್ಕೆ ಬೇಕಾಗುವ ಸೌಲಭ್ಯ, ಡೆವಲಪಿಂಗ್, ಪ್ರಿಂಟಿಂಗ್, ಸಂಕಲನ, ಪ್ರದರ್ಶನ ಮಂದಿರ, ಆಧುನಿಕ ಮೂರು ಮಿಚ್ಚಲ್ ಹಾಗು ಎರಡು ಏರಿಫ್ಲೆಕ್ಸ್ ಕ್ಯಾಮರ ಹೀಗೆ ಎಲ್ಲ ಸೌಲಭ್ಯ ಹೊಂದಿದ್ದ ಪ್ರೀಮಿಯರ್ ಸ್ಟುಡಿಯೋದಲ್ಲಿ ತಯಾರಾಗಿ ಹೊರಬಂದ ಮೊದಲ ಚಿತ್ರ **ಸ್ತ್ರೀ ರತ್ನ** (1955).

ಹಲವಾರು ವಿದೇಶಿ ನಿರ್ಮಾಪಕರೂ ಈ ಸ್ಟುಡಿಯೋ ಉಪಕರಣಗಳನ್ನು ಬಳಸಿಕೊಂಡು ಮೈಸೂರಿನ ಸುತ್ತ ಮುತ್ತ ಶೂಟಿಂಗ್ ನಡೆಸಿದ್ದಾರೆ. ಅಲ್ಲದೆ ಹಿಂದಿ, ತೆಲುಗು, ತಮಿಳು, ಮಲಯಾಳಂ ಸೇರಿದಂತೆ ಹಲವಾರು ಭಾಷೆಗಳ ಸುಮಾರು 350ಕ್ಕೂ ಹೆಚ್ಚು ಚಿತ್ರಗಳು ಈ ಸ್ಟುಡಿಯೋದಲ್ಲಿ ತಯಾರಾಗಿ ಹೊರಬಂದಿದೆ. ಕಾಲಾನಂತರ ಹೊರಾಂಗಣ ಚಿತ್ರೀಕರಣ ಹೆಚ್ಚಾಗಿ ಈ ಸ್ಟುಡಿಯೋ ನಷ್ಟ ಅನುಭವಿಸಬೇಕಾಗಿ ಬಂದಿದೆ.

ರಾಜ್ಯ ಸರ್ಕಾರ ಕನ್ನಡ ಚಿತ್ರೋದ್ಯಮಕ್ಕೆ ನೆರವು, ಪ್ರೋತ್ಸಾಹಧನ ಪ್ರಕಟಿಸಿದ ವರ್ಷದಲ್ಲಿ ಚಿತ್ರದುರ್ಗದ ವೈದ್ಯ ಡಾ. ರಾಮದಾಸ್ ಎಂಬುವವರು ಬೆಂಗಳೂರಿನ ಸರ್ಜಾಪುರದಲ್ಲಿ ಓಂಕಾರ್ ಸ್ಟುಡಿಯೋ ಆರಂಭಿಸಿದರು. **ಮಣ್ಣಿನ ಮಗ, ಜಾಣರ ಜಾಣ** ಚಿತ್ರಗಳ ಕೆಲವು ಭಾಗಗಳು ಈ ಸ್ಟುಡಿಯೋದಲ್ಲಿ ಚಿತ್ರೀಕರಣವಾಗಿದ್ದವು. ಆದರೆ ವ್ಯವಸ್ಥಿತ ಯೋಜನೆ ಇಲ್ಲದೆ ಓಂಕಾರ್ ಸ್ಟುಡಿಯೋ ಬಂದ್ ಆಯಿತು. ಈಗ ಆ ಸ್ಥಳದಲ್ಲಿ ಶಾಲೆ ಇದೆ.

ಕರ್ನಾಟಕ ಏಕೀಕರಣವಾದ ಸಮಯದಲ್ಲಿ ಕನ್ನಡ ಚಿತ್ರೋದ್ಯಮಕ್ಕೆ ರಾಜ್ಯ ಸರ್ಕಾರ ಹಲವಾರು ನೆರವು ಪ್ರಕಟಿಸಿತು. ಬೆಂಗಳೂರಿನಲ್ಲಿ ಸ್ಟುಡಿಯೋ ಸ್ಥಾಪಿಸುವ ಕಾರ್ಯಸಾಧ್ಯವಾದ ಯೋಜನೆಯೊಡನೆ ಮುಂದೆ ಬರುವ ಉದ್ಯಮಿಗಳಿಗೆ ಎಲ್ಲ ನೆರವನ್ನು ನೀಡುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿತು. ಈ ಸಂದರ್ಭದಲ್ಲೇ ಹುಟ್ಟಿಕೊಂಡಿದ್ದು ಬೆಂಗಳೂರಿನ ಕಂಠೀರವ ಸ್ಟುಡಿಯೋ.

ಗುಬ್ಬಿ ವೀರಣ್ಣ ಅವರ ಸಹವರ್ತಿಗಳಾಗಿದ್ದು ಯಶಸ್ವಿ ಚಿತ್ರ ನಿರ್ಮಾಪಕರೂ ಆಗಿದ್ದ ಟಿ.ಎಸ್. ಕರಿಬಸವಯ್ಯ ಅವರು ಈ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸ್ಟುಡಿಯೋ ನಿರ್ಮಿಸಲು ಷೇರು ಸಂಗ್ರಹಿಸಲಾರಂಭಿಸಿದರು. ಸ್ಟುಡಿಯೋ ನಿರ್ಮಾಣಕ್ಕಾಗಿ ಕೆ.ವಿ. ಶಂಕರೇಗೌಡ ಅವರು ಸ್ಥಾಪಕ ಅಧ್ಯಕ್ಷರಾಗಿದ್ದ ಸಮಿತಿಯೊಂದನ್ನು ರಚಿಸಲಾಯಿತು. 115 ಮಂದಿ ಷೇರುದಾರರಿಂದ ಏಳೂವರೆ ಲಕ್ಷ ರೂ. ಷೇರು ಬಂಡವಾಳ ಸಂಗ್ರಹಿಸಲಾಯಿತು. ರಾಜ್ಯ ಸರ್ಕಾರ ತನ್ನ ಘೋಷಿತ ನೀತಿಯಂತೆ ಐದು ಲಕ್ಷ ರೂ. ಷೇರು ಬಂಡವಾಳ ಒದಗಿಸಿತು. ಬೆಂಗಳೂರು-ತುಮಕೂರು ರಸ್ತೆಯಲ್ಲಿ, ನಗರಕ್ಕೆ ಐದು ಮೈಲಿ ದೂರದಲ್ಲಿ 1966ರ ಮಾರ್ಚ್ 18ರಂದು ಶ್ರೀ ಕಂಠೀರವ ಸ್ಟುಡಿಯೋಸ್ ಸ್ಥಾಪನೆಯಾಯಿತು. 1970ನೇ ಜನವರಿ 16ರಿಂದ ಕಾರ್ಯಾರಂಭ ಮಾಡಿತು.

17 ಎಕರೆ ನಿವೇಶನದಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಫ್ಲೋರ್‌ಗಳಲ್ಲೊಂದು ಎಂದು ಹೇಳಲಾದ 140 x 120 ಅಡಿಯ "ಕಾವೇರಿ" ಫ್ಲೋರ್ ಕಂಠೀರವದ ವಿಶೇಷ. ಲ್ಯಾಬೋರೇಟರಿಯ ಸೌಲಭ್ಯವಿದೆ. ತನ್ನದೇ ಆದ ಸ್ವಂತ ಸಂಚಾರಿ ಚಿತ್ರೀಕರಣ ಘಟಕವಿದೆ. ಕರ್ನಾಟಕದ ಪ್ರಥಮ ವರ್ಣ ಚಿತ್ರ ಸಂಸ್ಕರಣಾಲಯ ಹೊಂದಿರುವ ಖ್ಯಾತಿಯೂ ಕಂಠೀರವ ಸ್ಟುಡಿಯೋದ್ದಾಗಿದೆ. ಕಂಠೀರವ ಸ್ಟುಡಿಯೋಗೆ ಹೆಚ್ಚಿನ ಬೆಂಬಲ, ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸರ್ಕಾರ ಅದರಲ್ಲಿ ತನ್ನ ಷೇರು ಬಂಡವಾಳವನ್ನು ಶೇ. 51ಕ್ಕೆ ಹೆಚ್ಚಿಸಿದೆ. ಇದರ ಆವರಣದಲ್ಲಿ ರೆಕಾರ್ಡಿಂಗ್ ಸ್ಟುಡಿಯೋ ಕೂಡ ಇದೆ. "

ಕನ್ನಡ ಚಿತ್ರರಂಗದ ಹಾಸ್ಯನಟ ಟಿ.ಎನ್. ಬಾಲಕೃಷ್ಣ ಅವರು ಬೆಂಗಳೂರಿನಲ್ಲಿ ಸ್ಟುಡಿಯೋ ಸ್ಥಾಪಿಸುವ ಸಾಹಸ ಮಾಡಿದ್ದು ಒಂದು ದುರಂತ ಕಥೆ. ಮದರಾಸಿನ ಸ್ಟುಡಿಯೋಗಳಲ್ಲಿ ಕನ್ನಡಿಗರಿಗೆ ಅವಮಾನವಾಗುತ್ತಿದೆ ಎಂಬ ಹಿನ್ನೆಲೆ ಹಾಗೂ ತಾವು ಅನುಭವಿಸಿದ ಕಷ್ಟಗಳ ಹಿನ್ನೆಲೆಯಲ್ಲಿ ಟಿ.ಎನ್. ಬಾಲಕೃಷ್ಣ ಬೆಂಗಳೂರಿನ ಕೆಂಗೇರಿಯಲ್ಲಿ ಅಭಿಮಾನ್ ಸ್ಟುಡಿಯೋವನ್ನು 1968ರಲ್ಲಿ ಸ್ಥಾಪಿಸಿದರು.

ಕನ್ನಡದ 525 ಚಿತ್ರಗಳಲ್ಲಿ ಅಭಿನಯಿಸಿರುವ ಬಾಲಕೃಷ್ಣ ತಮ್ಮದೇ ಆದ ಸಂಭಾಷಣೆ ಹೇಳುವ ವೈಖರಿಯಿಂದ ಖ್ಯಾತರಾದವರು. 1944ರಲ್ಲಿ **ರಾಧಾರಮಣ** ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಬಾಲಕೃಷ್ಣ, ಹಾಸ್ಯನಟ, ಖಳನಟ ಹಾಗೂ ಪೋಷಕ ನಟರಾಗಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದಾರೆ. **ಕನ್ಯಾದಾನ**ದಲ್ಲಿ ಮದುವೆ ದಳ್ಳಾಳಿ ಶತಮಾನೋತ್ಸವ ಸೀತಾರಾಮಯ್ಯನಾಗಿ ಅವರ ಅಭಿನಯ ಚಿರಕಾಲ ನಿಲ್ಲುವಂತದ್ದು. **ಕಲಿತರೂ ಹೆಣ್ಣೇ** ಎಂಬ ಚಿತ್ರ ನಿರ್ಮಿಸುವ ಮೂಲಕ ಬಾಲಕೃಷ್ಣ ನಿರ್ಮಾಪಕರೂ ಆಗಿದ್ದರು. ಅವರ ಜೀವನ ಕತೆಯನ್ನೇ ಆಧರಿಸಿ **ಅಭಿಮಾನಿ** ಎಂಬ ಚಿತ್ರವನ್ನು ತಯಾರಿಸಲಾಗಿದೆ. 1995ರಲ್ಲಿ ಈ ಹಿರಿಯ ನಟನ ಅಂತ್ಯವಾಯಿತು.

ಟಿ.ಎನ್. ಬಾಲಕೃಷ್ಣ ಅವರು ಅಭಿಮಾನ್ ಸ್ಟುಡಿಯೋ ಸ್ಥಾಪಿಸುವ ಸಲುವಾಗಿ ಜನರಿಂದ ಹಣ ಪಡೆದರು. 'ಜನರಿಂದ ತಲಾ ಒಂದು ನೂರು ರೂಪಾಯಿಯಂತೆ ಸಾಲ ಪಡೆದು ನಿರ್ಮಾಣಕ್ಕೆ ತೊಡಗಿದ್ದಾಗಿ ಬಾಲಕೃಷ್ಣ ಅವರೇ ಹೇಳಿಕೊಂಡಿದ್ದಾರೆ. ಬಹಳ ಸಂಕಷ್ಟದಲ್ಲೇ 1968ರಲ್ಲಿ ಆರಂಭವಾದ ಅಭಿಮಾನ್ ಸ್ಟುಡಿಯೋದಲ್ಲಿ ಮೊದಲಿಗೆ **ಮಾರ್ಗದರ್ಶಿ** ಎಂಬ ಚಿತ್ರದ ಚಿತ್ರೀಕರಣ ನಡೆಯಿತು. ನಂತರ **ಚದುರಂಗ, ಪುನರ್ಜನ್ಮ** ಚಿತ್ರಗಳ ಚಿತ್ರೀಕರಣ ನಡೆಯಿತು. ನಂತರ ಕೆಲವೇ ದಿನಗಳಲ್ಲಿ ಬೆಂಗಳೂರಿನಲ್ಲಿ ಕಂಠೀರವ ಮತ್ತು ಚಾಮುಂಡೇಶ್ವರಿ ಎಂಬ ಎರಡು ಸುಸಜ್ಜಿತ ಸ್ಟುಡಿಯೋಗಳು ಆರಂಭವಾದ ನಂತರ, ಅಭಿಮಾನ್ ದೂರ ಎಂಬ ಕಾರಣದಿಂದ ಚಿತ್ರರಂಗದ ಜನ ಅದರಿಂದ ದೂರ ಉಳಿದರು. ಹಾಸ್ಯನಟ ಬಾಲಕೃಷ್ಣ ಅವರ ಪರಿಸ್ಥಿತಿ ದುರಂತದತ್ತ ಸಾಗಲಾರಂಭಿಸಿದ್ದು ಹೀಗೆ. ಬಾಲಕೃಷ್ಣ ಅವರ ನಿಧನಾನಂತರ ಅನಾಥವಾಗಿರುವ ಸ್ಟುಡಿಯೋವನ್ನು ಸರ್ಕಾರ ವಹಿಸಿಕೊಳ್ಳುವುದಾಗಿ ಭರವಸೆ ನೀಡಿದೆ.


1971ರಲ್ಲಿ ಬೆಂಗಳೂರಿನ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿ ಶ್ರೀ ಚಾಮುಂಡೇಶ್ವರಿ ಸ್ಟುಡಿಯೋ ನಿರ್ಮಾಣವಾಯಿತು. ಮೂರು ಫ್ಲೋರ್, ಮೂರು ಚಿತ್ರಗಳನ್ನು ಏಕಕಾಲದಲ್ಲಿ ಚಿತ್ರೀಕರಿಸುವ ಎಲ್ಲ ವ್ಯವಸ್ಥೆಯೂ ಇಲ್ಲಿದೆ. ಹಾಡುಗಳ ಧ್ವನಿಮುದ್ರಣಕ್ಕೂ ವ್ಯವಸ್ಥೆ ಇದೆ. ಕೊಯಮತ್ತೂರಿನಲ್ಲಿದ್ದ ಪಕ್ಷಿರಾಜ ಸಂಸ್ಥೆಯವರಿಗೆ ಸೇರಿದ್ದು ಈ ಚಾಮುಂಡೇಶ್ವರಿ ಸ್ಟುಡಿಯೋ. ತಮಿಳು ನಿರ್ಮಾಪಕ, ನಿರ್ದೇಶಕ ಎಸ್.ಎಂ.



ನಿರ್ಮಾಪಕ ಅಬ್ಬಯ್ಯನಾಯ್ಡು ನಿರ್ಮಿಸಿರುವ ಮಧು ಸ್ಟುಡಿಯೋ.

ಶ್ರೀರಾಮುಲು ನಾಯ್ಡು ಅವರೇ ಇದರ ಮುಖ್ಯಸ್ಥ. ಇವರು 1957ರಲ್ಲಿ ಬೆಟ್ಟದ ಕಳ್ಳ ಎಂಬ ಚಿತ್ರವನ್ನೂ ನಿರ್ದೇಶಿಸಿದ್ದಾರೆ.

ಈ ನಡುವೆ ಹಿರಿಯ ನಿರ್ಮಾಪಕ, ನಿರ್ದೇಶಕ ಬಿ.ಎಸ್. ರಂಗ ಅವರು 1950ರಲ್ಲಿ ಬೆಂಗಳೂರಿನಲ್ಲಿ 'ವಿಕ್ರಂ ಸ್ಟುಡಿಯೋಸ್ ಅಂಡ್ ಲ್ಯಾಬ್' ಸ್ಥಾಪಿಸಿದರು. ಬೆಂಗಳೂರು ಸಮೀಪದ ನಾಯಂಡಹಳ್ಳಿಯಲ್ಲಿ ರಂಗಾ ಅವರು ದಕ್ಷಿಣ ಭಾರತದ ಪ್ರಥಮ ಆಟೋಮ್ಯಾಟಿಕ್ ಪ್ರೋಸೆಸಿಂಗ್ ಲ್ಯಾಬೊಂದನ್ನು ಆರಂಭಿಸಿದರು. "ನಾನು ಸ್ಟುಡಿಯೋ ಸ್ಥಾಪಿಸುವವರೆಗೆ ರೀಲುಗಳನ್ನು ಕೈಯಿಂದ ಅದ್ದಿ ತೊಳೆಯಲಾಗುತ್ತಿತ್ತು. ಆದರೆ ನಾನು ಸ್ಥಾಪಿಸಿದ ಲ್ಯಾಬ್ ಆಟೋಮ್ಯಾಟಿಕ್ ಪ್ರೋಸೆಸಿಂಗ್ ತಂತ್ರಜ್ಞಾನ ಅಳವಡಿಸಿಕೊಂಡ ಲ್ಯಾಬ್ ಆಗಿತ್ತು. ದಕ್ಷಿಣ ಭಾರತಕ್ಕೆ ಆಟೋಮ್ಯಾಟಿಕ್ ಪ್ರೋಸೆಸಿಂಗ್ ತಂತ್ರಜ್ಞಾನ ತಂದ ಮೊದಲಿಗ ನಾನೆಂಬ ಹೆಮ್ಮೆ ನನಗಿದೆ" ಎಂದು ಬಿ. ಎಸ್. ರಂಗಾ ಅವರೇ ಹೇಳಿಕೊಂಡಿದ್ದಾರೆ. ಅಂದಿನ ದಿನಗಳಲ್ಲಿ ಬಹಳಷ್ಟು ಚಿತ್ರಗಳು ಮದರಾಸಿನಲ್ಲೇ ತಯಾರಾಗುತ್ತಿದ್ದವು. ಪ್ರತಿ ಬಾರಿಯೂ ಫಿಲಂನ್ನು ಮದರಾಸಿನಿಂದ ಬೆಂಗಳೂರಿಗೆ ತರುವುದು, ಮತ್ತೆ ವಾಪಸ್ ಕೊಂಡೊಯ್ಯುವುದು ನಿರ್ಮಾಪಕರಿಗೆ ಕಷ್ಟವೆನಿಸಿತು. ಇದರಿಂದ ಲ್ಯಾಬನ್ನು ಆರೇ ತಿಂಗಳಲ್ಲಿ ಮದರಾಸಿಗೆ ಸ್ಥಳಾಂತರಿಸಲಾಯಿತು.



ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಜನಿಸಿದ ಬಾಲಕೃಷ್ಣ ಅವರ ಜೀವನ ಕಥೆಯೇ ಚಲನಚಿತ್ರ ಕಥೆಯಂತಿದೆ. ಬಾಲ್ಯದಿಂದಲೇ ಬಂಧುಗಳ ಪೋಷಣೆಯಲ್ಲೇ ಬೆಳೆದ ಬಾಲಕೃಷ್ಣ ಬೋರ್ಡ್ ಬರೆಯುವ ಕೆಲಸದಿಂದ ಜೀವನ ನಡೆಸುತ್ತಿದ್ದರು. ಗಂಗೌಡರ ನಾಟಕ ಕಂಪನಿ, ಗೌರಿಶಂಕರ ನಾಟಕ ಕಂಪನಿಗಳಲ್ಲಿ ಬೋರ್ಡ್ ಬರೆಯುವ ಮತ್ತು ಗೇಟ್ ಕೀಪರ್ ಕೆಲಸ ಮಾಡುತ್ತಿದ್ದರು. ನಂತರದ ದಿನದಲ್ಲಿ ನೀಲಕಂಠಪ್ಪ ಅವರ ನಾಟಕ ಮಂಡಳಿಯಲ್ಲಿ ಪಾತ್ರ ವಹಿಸಿ, ಹೆಸರು ಗಳಿಸಿ ಗುಬ್ಬಿ ಕಂಪನಿ ಸೇರಿದರು. ಎಡತೊರೆ ಕಂಪನಿ ಎಂದೇ ಪ್ರಸಿದ್ಧವಾಗಿದ್ದ ಕರ್ನಾಟಕ ನಾಟಕ ಸಭಾದಲ್ಲಿ "ಭಾರತ ಲಕ್ಷ್ಮಿ", "ಬೇಡರ ಕಣ್ಣಪ್ಪ", "ರಾಮ ರಾವಣ", "ಕಾಲ ಚಕ್ರ" ನಾಟಕಗಳನ್ನು ಬಾಲಕೃಷ್ಣ ರಚಿಸಿದ್ದಾರೆ.

ಬಿ.ಎಸ್. ರಂಗಾ ಅವರ ಪುತ್ರ ಬಿ.ಆರ್. ವಸಂತ್ ಬೆಂಗಳೂರಿನಲ್ಲಿ ವಸಂತ್ ಕಲರ್ ಲ್ಯಾಬೋರೇಟರೀಸ್ ಹೆಸರಿನಲ್ಲಿ ವರ್ಣ ಲ್ಯಾಬೊಂದನ್ನು ಆರಂಭಿಸಿದ್ದಾರೆ. ಇದೇ ರೀತಿ ಪ್ರಸಾದ್ ಕಲರ್ ಲ್ಯಾಬ್ ಇದೆ. ಶಂಕರನಾಗ್ ಸ್ಥಾಪಿಸಿದ ಸಂಕೇತ್ ಧ್ವನಿಗ್ರಹಣ ಕೇಂದ್ರವಿದೆ. ನಿರ್ಮಾಪಕ ಎ. ಎಲ್. ಅಬ್ಬಯ್ಯ ನಾಯ್ಡು ಉತ್ತರಹಳ್ಳಿ ಹೋಬಳಿ ಚಿಕ್ಕಕಲ್ಲಸಂದ್ರದ ಏಳು ಎಕರೆ ಪ್ರದೇಶದಲ್ಲಿ ತಮ್ಮದೇ ಆದ ಮಧು ಸ್ಟುಡಿಯೋ ನಿರ್ಮಿಸಿದ್ದಾರೆ.




# ಪರಿವರ್ತನಾ ಯುಗ

ಆರಂಭದ ಇಪ್ಪತ್ತು ವರ್ಷಗಳ ಹಾದಿಯಲ್ಲಿ ಕನ್ನಡ ಚಲನಚಿತ್ರರಂಗದಲ್ಲಿ ತಯಾರಾಗಿರುವುದು ಕೇವಲ 39 ಚಲನಚಿತ್ರಗಳು ಎಂಬುದನ್ನು ಗಮನಿಸಿದಾಗ, ಈ ಹೆಜ್ಜೆ ಗುರುತುಗಳು ಮಂದಗತಿಯಲ್ಲಿದ್ದವು ಎಂಬುದು ಅರಿವಾಗುತ್ತದೆ. ವಾಕ್ಚಿತ್ರ ಆರಂಭಕಾಲದ ಪ್ರಭಾವವೇ ಈ ಇಪ್ಪತ್ತು ವರ್ಷಗಳ ಕಾಲವೂ ಅನುರಣನಗೊಳ್ಳುತ್ತಿದ್ದುದರಿಂದ ಚಿತ್ರಕಥೆ ಆಯ್ಕೆಯೂ ಕೂಡ ಅದೇ ಪೌರಾಣಿಕ, ಜಾನಪದಗಳ ಸುತ್ತ ಗಸ್ತು ಹೊಡೆಯುತ್ತಾ, ಅಲ್ಲೊಂದು ಇಲ್ಲೊಂದು ಸಾಮಾಜಿಕ ಕಥಾನಕಗಳು ಮಿಂಚುತ್ತಾ ಇದ್ದವು. ಇಂತಹ ಪರಿಸ್ಥಿತಿ 1954ರ ನಂತರದ ದಿನಗಳಲ್ಲಿ ಕ್ರಮೇಣವಾಗಿ ಬದಲಾಗುತ್ತಾ ಬಂದದ್ದು ಹಾಗೂ ಕ್ಷಿಪ್ರಗತಿಯ ಕೆಲವು ಘಟನೆಗಳು




"ಬೇಡರ ಕಣ್ಣಪ್ಪ" ಕನ್ನಡ ಚಲನ ಚಿತ್ರರಂಗಕ್ಕೆ ರಾಜ್‌ಕುಮಾರ್ ಅವರ ಪ್ರವೇಶಕ್ಕೆ ನಾಂದಿಯಾಡಿದ ಚಿತ್ರ *(1954)*. ಗುಬ್ಬಿ ಕಂಪನಿಯ ಈ ಚಲನ ಚಿತ್ರ ನಾಯಕ ಪ್ರಧಾನ ಚಿತ್ರಗಳಿಗೂ ನಾಂದಿ ಹಾಕಿತು.

ಚಿತ್ರರಂಗದ ದಿಕ್ಕನ್ನೇ ಬದಲಿಸಿದ್ದು ಇತಿಹಾಸ ಗಮನಿಸಬೇಕಾದ ಕುತೂಹಲದ ಸಂಗತಿ. 1954ರಿಂದ 1964ರ ದಶಕವನ್ನೇ ಪ್ರತ್ಯೇಕವಾಗಿ ಗಮನಿಸಿದರೆ ಈ ಅಂಶ ಗೋಚರವಾಗುತ್ತದೆ. ಇಡೀ ಚಲನಚಿತ್ರ ರಂಗದಲ್ಲಿ ವೇಗ ಕಾಣಿಸಿಕೊಂಡದ್ದೇ ಈ ಅವಧಿಯಲ್ಲಿ. ಹಿಂದಿನ ಆರಂಭದ ಇಪ್ಪತ್ತು ವರ್ಷಗಳಲ್ಲಿ ಕೇವಲ 39 ಚಲನಚಿತ್ರಗಳನ್ನಷ್ಟೇ ತಯಾರಿಸಲು ಸಾಧ್ಯವಾದರೆ ಮುಂದಿನ ಹತ್ತೇ ವರ್ಷಗಳಲ್ಲಿ 125 ಚಿತ್ರಗಳು ತಯಾರಾಗಿವೆ. ಈ ವೇಗದ ಜತೆಗೆ ತಾಂತ್ರಿಕ ಪರಿಷ್ಕರಣೆ, ಗುಣಮಟ್ಟ ಸುಧಾರಣೆ, ಬಣ್ಣದ ಪ್ರಯೋಗ, ಹೊಸ ನಟನಟಿಯರ ಉದಯ ಎಲ್ಲವೂ ಸಮ್ಮಿಳನಗೊಂಡಿದೆ. ಅಲ್ಲದೆ, ಕನ್ನಡ ಪ್ರೇಕ್ಷಕರ ನಿಜವಾದ ಒಲವು ಚಿತ್ರರಂಗಕ್ಕೆ ದೊರಕಿದೆ. ಅಂತಹ ವಾತಾವರಣ ಸೃಷ್ಟಿಯಾದದ್ದು, ಪ್ರವಾಹ ಪರಿಹಾರ ನಿಧಿಗಾಗಿ ಕಲಾವಿದರು ಜನರ ಮಧ್ಯೆ ಹೋದದ್ದು, ಅದಕ್ಕೆ ಜನರಿಂದ ದೊರೆತ ಪ್ರೋತ್ಸಾಹ, ಕಲಾವಿದರ ಬಗ್ಗೆ ತೋರಿದ ಆತ್ಮಾದರ ಇವೆಲ್ಲಾ ಚಿತ್ರರಂಗದವರನ್ನು ಮತ್ತಷ್ಟು ಕ್ರಿಯಾಶೀಲರನ್ನಾಗಿ ಮಾಡಲು ಸಹಕಾರಿಯಾದವು. ನಿರ್ಮಾಪಕರು, ಕಲಾವಿದರಿಗೆ ಈ ಘಟನೆ ಮಾನಸಿಕ ಸ್ಥೈರ್ಯ ನೀಡಿತು ಎಂದರೂ ತಪ್ಪಿಲ್ಲ. ಕನ್ನಡ ಚಿತ್ರಗಳ ಹೆಸರು ರಾಷ್ಟ್ರ ಪ್ರಶಸ್ತಿಗಳ ಸಾಲಿನಲ್ಲಿ ಕಾಣಿಸಿಕೊಂಡದ್ದು, ಹೊಸ ಅಲೆಯ



"ಬೇಡರ ಕಣ್ಣಪ್ಪ" ದಲ್ಲಿ ರಾಜಕುಮಾರ್

ದಿಕ್ಕಿನಲ್ಲಿ ನಡೆದ **ನಾಂದಿ** ಚಿತ್ರದ ತಯಾರಿಕೆ ಇವೆಲ್ಲಾ ಕನ್ನಡ ಚಿತ್ರರಂಗದಲ್ಲಿ ಪರಿವರ್ತನೆಯ ಪರ್ವವನ್ನು ಆರಂಭಿಸಿದವು. ಆದ್ದರಿಂದಲೇ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ 1954ರಿಂದ 1964ರ ಅವಧಿ ಬಹಳ ಮಹತ್ವದ ಘಟ್ಟವಾಗಿದೆ. ಈ ಘಟ್ಟವನ್ನು ಕನ್ನಡ ಚಿತ್ರರಂಗದ ಪರಿವರ್ತನಾ ಯುಗ ಎಂದು ಕರೆಯಬಹುದು.

ನಾಯಕನಟರ ಪೀಳಿಗೆಯೇ ಹಂತಹಂತವಾಗಿ ಬದಲಾದ ಪರಿವರ್ತನೆ ಈ ಕಾಲಾವಧಿಯಲ್ಲಿ ನಡೆಯಿತು. ವಾಕ್ಚಿತ್ರ ಆರಂಭದ ದಿನಗಳಿಂದ ರಜತಪರದೆಯ ನಾಯಕರಾಗಿದ್ದ ಎಂ.ವಿ. ಸುಬ್ಬಯ್ಯನಾಯ್ಡು, ಆರ್. ನಾಗೇಂದ್ರರಾವ್, ಡಿ. ಕೆಂಪರಾಜ ಅರಸು, ಬಿ.ಆರ್. ಪಂತುಲು, ಹೊನ್ನಪ್ಪ ಭಾಗವತರ್, ಇಂದುಶೇಖರ್, ವಿಮಲಾನಂದದಾಸ್ ಮೊದಲಾದವರು ಕ್ರಮಕ್ರಮೇಣ ತೆರೆಯ ಮರೆಗೆ ಹೋಗಿ, ರಾಜ್‌ಕುಮಾರ್, ಕಲ್ಯಾಣ್‌ಕುಮಾರ್, ಉದಯ್‌ಕುಮಾರ್ ಈ ದಶಕದಲ್ಲಿ ಬೆಳ್ಳಿ ತೆರೆಯ ನಾಯಕನಟರಾಗಿ ಮಿನುಗಲಾರಂಭಿಸಿದರು. ಹೊಸ ಕಲಾವಿದರ ಉದಯದೊಂದಿಗೆ ವಾಕ್ಚಿತ್ರ ಪ್ರೇಕ್ಷಕರ ಹೊಸ ಜನಾಂಗವೇ ಉದಯಿಸಿತು. 1954ರ ಕೊಡುಗೆ ಎಂದರೆ ಇಂದಿಗೂ ಜನಪ್ರಿಯ ನಟರಾಗಿರುವ ರಾಜ್‌ಕುಮಾರ್



ಅವರ ಅಭಿನಯದ ಮೊದಲ ಚಿತ್ರ ಬಿಡುಗಡೆ. ಅದರ ಭರ್ಜರಿ ಯಶಸ್ಸಿನ ಮೂಲಕ ರಾಜ್‌ಕುಮಾರ್ ತಮ್ಮ ಸ್ಥಾನವನ್ನು ಭದ್ರ ಪಡಿಸಿಕೊಂಡದ್ದು.

1954ರಿಂದ 1964ರ ಕಾಲಾವಧಿಯಲ್ಲಿ 125 ಚಿತ್ರಗಳು ತಯಾರಾಗಿ ಬಿಡುಗಡೆಗೊಂಡಿವೆ. ಇದರಲ್ಲಿ ರಾಜ್‌ಕುಮಾರ್ ಅವರೇ 53 ಚಿತ್ರಗಳ ನಾಯಕರಾಗಿದ್ದರು ಎಂಬುದನ್ನು ಕಂಡಾಗ, ರಾಜ್‌ಕುಮಾರ್ ಗಳಿಸಿದ ಶೀಘ್ರ ಯಶಸ್ಸು ವೇದ್ಯವಾಗುತ್ತದೆ. 1954ರಲ್ಲಿ ಗುಬ್ಬಿ ಕರ್ನಾಟಕ ಫಿಲಂಸ್‌ರವರ ತಯಾರಿಕೆ **ಬೇಡರ ಕಣ್ಣಪ್ಪದ** ಮೂಲಕ ನಾಯಕ ನಟರಾಗಿ ಪರಿಚಯಗೊಂಡ ರಾಜ್‌ಕುಮಾರ್, ನಾಯಕನ ವರ್ಚಸ್ಸಿನ ಮೇಲೆ ಚಿತ್ರಗಳ ಯಶಸ್ಸು ನಿಲ್ಲುವಂತಹ ತಾರಾಮೌಲ್ಯವನ್ನು ಕನ್ನಡ ಚಿತ್ರರಂಗಕ್ಕೆ ತಂದರು. 1954ರಲ್ಲೇ **ನಟಶೇಖರ** ಚಿತ್ರದ ಮೂಲಕ ಕಲ್ಯಾಣ್‌ಕುಮಾರ್, 1956ರಲ್ಲಿ **ಭಾಗ್ಯೋದಯ** ಚಿತ್ರದ ಮೂಲಕ ಉದಯಕುಮಾರ್ ನಾಯಕನಟರಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಪೌರಾಣಿಕ, ಭಕ್ತಿ ಪ್ರಧಾನ ಪಾತ್ರಗಳಲ್ಲಿ ರಾಜ್‌ಕುಮಾರ್ ಜನಪ್ರಿಯರಾದರೆ, ಹಾಸ್ಯ ಮತ್ತು ಸಾಮಾಜಿಕ ಚಿತ್ರಗಳಲ್ಲಿ ಕಲ್ಯಾಣ್‌ಕುಮಾರ್ ಹೆಸರಾದರು. 1957ರ **ರಾಯರ ಸೊಸೆಯ** ಮೂಲಕ ರಾಜ್‌ಕುಮಾರ್ ಸಾಮಾಜಿಕ ಚಿತ್ರದಲ್ಲಿ ಕಾಲಿಟ್ಟರು. 1958ರಲ್ಲಿ **ಭೂ ಕೈಲಾಸ** ಮೂಲಕ ಕಲ್ಯಾಣ್‌ಕುಮಾರ್ ಪೌರಾಣಿಕಕ್ಕೂ

ರಾಜಕುಮಾರ್ ಅವರು ಅಭಿನಯಿಸಿದ ಮೊದಲ ಸಾಮಾಜಿಕ ಚಿತ್ರ 'ರಾಯರಸೊಸೆ'. ಬೇಡರ ಕಣ್ಣಪ್ಪನ ನಂತರ ಮೊದಲ ಮೂರು ವರ್ಷಗಳ ಕಾಲ ರಾಜ್‌ಕುಮಾರ್ ಅವರು ಭಕ್ತಿ ಪ್ರಧಾನ ಚಿತ್ರಗಳಲ್ಲೇ ಅಭಿನಯಿಸಿದರು.

ಪ್ರವೇಶಿಸಿದರು. ಸಾಮಾಜಿಕ ಚಿತ್ರದಿಂದಲೇ ಚಿತ್ರರಂಗ ಪ್ರವೇಶಿಸಿದ ಉದಯಕುಮಾರ್ ಎಲ್ಲ ಬಗೆಯ ಪಾತ್ರಗಳಲ್ಲೂ ಅಭಿನಯಿಸಲಾರಂಭಿಸಿದರು. ನಾಯಕನಟರ ಪ್ರಾಬಲ್ಯ, ಅದುವರೆಗೆ ಪ್ರತಿಷ್ಠಿತವೆನಿಸಿದ್ದ ಸಂಸ್ಥೆಗಳ ಹೆಸರನ್ನೂ ಹಿಂದೆ ಸರಿಸಲಾರಂಭಿಸಿದ್ದು ಈ ಪರಿವರ್ತನಾಯುಗದ ಮೊದಲ ಪರಿವರ್ತನೆಯೇ ಆಗಿದೆ. ಹೊಸ ಪೀಳಿಗೆಯ ನಾಯಕನಟರು, ಹೊಸ ಪ್ರೇಕ್ಷಕರ ವೃಂದವನ್ನೇ ಸೃಷ್ಟಿಸಿ ತಮ್ಮ ಪ್ರಭಾವ ವಲಯ ವಿಸ್ತರಿಸಿಕೊಂಡ ಕೂಡಲೇ ತಾರಾಪದ್ಧತಿ ಕನ್ನಡ ಚಿತ್ರರಂಗಕ್ಕೆ ಮೆಲ್ಲನೆ ಅಡಿ ಇಟ್ಟಂತೆಯೇ ಆಯಿತು. ವಾಕ್ಚಿತ್ರ ಆರಂಭದ ಕಾಲದಿಂದಲೂ ಚಿತ್ರ ತಯಾರಿಕಾ ಸಂಸ್ಥೆಯ ಹೆಸರಿನಿಂದ ಚಿತ್ರದ ಗುಣಮಟ್ಟವನ್ನು ಅಳೆಯುವ ಪದ್ಧತಿ ಬೆಳೆದು ಬಂದಿತ್ತು. ಎಸ್.ಎಸ್.ಎಸ್. ಪ್ರೊಡಕ್ಷನ್ಸ್, ಗುಬ್ಬಿ ಕರ್ನಾಟಕ ಫಿಲಂ ಕಾರ್ಪೋರೇಷನ್, ಎ.ವಿ.ಎಂ., ಪದ್ಮಿನಿ ಪಿಕ್ಚರ್ಸ್, ಮಹಾತ್ಮ ಪಿಕ್ಚರ್ಸ್, ವಿಕ್ರಂ ಪ್ರೊಡಕ್ಷನ್ಸ್, ವಿಶ್ವಕಲಾಚಿತ್ರ, ಆರ್.ಎನ್.ಆರ್. ಪ್ರೊಡಕ್ಷನ್ಸ್‌ಗಳ ಹೆಸರು ಚಿತ್ರರಂಗದಲ್ಲಿ ಪ್ರತಿಷ್ಠಿತ ಸ್ಥಾನವನ್ನೇ ಪಡೆದಿವೆ. ಆದರೆ ತಾರಾಪದ್ಧತಿ ಬೆಳೆದಂತೆ ಸಂಸ್ಥೆಗಳ ಹೆಸರು ಒಂದಡಿ ಹಿಂದೆ ಸರಿದು, ನಾಯಕರುಗಳ ಹೆಸರು ಪ್ರಧಾನವಾಗ ಲಾರಂಭಿಸಿತು. ರಾಜ್‌ಕುಮಾರ್, ಕಲ್ಯಾಣ್ ಕುಮಾರ್, ಉದಯಕುಮಾರ್ ಕುಮಾರತ್ರಯರು ಕನ್ನಡ ಚಿತ್ರರಂಗದ ಹೊಸ ನಕ್ಷತ್ರಗಳಾಗಿ ಮಿನುಗಲಾರಂಭಿಸಿದರು.



"ನಟಶೇಖರ" (1954) ಚಿತ್ರದ ಮೂಲಕ ಮತ್ತೊಬ್ಬ ನಾಯಕ ನಟ ಕಲ್ಯಾಣ್ ಕುಮಾರ್ ಪ್ರವೇಶ


1954ರಲ್ಲಿ ಗುಬ್ಬಿ ಫಿಲಂಸ್ ತಯಾರಿಕೆ **ಬೇಡರ ಕಣ್ಣಪ್ಪ** ಚಿತ್ರರಂಗದ ಇತಿಹಾಸದಲ್ಲಿ ಮರೆಯಲಾಗದ ಹೆಸರು. ಕನ್ನಡ ಚಿತ್ರರಂಗಕ್ಕೆ ರಾಜ್‌ಕುಮಾರ್ ಎಂಬ ಉಜ್ವಲ ನಕ್ಷತ್ರವನ್ನು ನೀಡಿದ ಚಿತ್ರ ಇದು. ಈ ಚಿತ್ರದ ಮೂಲಕ ಬೆಳಕಿಗೆ ಬಂದ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಮುತ್ತುರಾಜ್ ಕನ್ನಡ ಚಿತ್ರಗಳ ಪ್ರೇಕ್ಷಕರಿಗೆ ರಾಜ್‌ಕುಮಾರ್ ಎಂದೇ ಪ್ರಿಯರಾದವರು. ಎಚ್.ಎಲ್.ಎನ್. ಸಿಂಹ ನಿರ್ದೇಶನದ ಈ ಚಿತ್ರದಲ್ಲಿ ಪಂಢರಿಬಾಯಿ ನಾಯಕಿ. ರಾಜ ಸುಲೋಚನಾ, ಜಿ.ವಿ. ಅಯ್ಯರ್, ನರಸಿಂಹರಾಜು, ಎಚ್. ರಾಮಚಂದ್ರ ಶಾಸ್ತ್ರಿ ಮೊದಲಾದವರು ಅಭಿನಯಿಸಿದ್ದಾರೆ. ಆರ್. ಸುದರ್ಶನಂ ಸಂಗೀತ ನೀಡಿದ್ದಾರೆ. ನಂಜುಕವಿ ಬರೆದ "ಶಿವಪ್ಪ ಕಾಯೋ ತಂದೆ, ಮೂರು ಲೋಕ ಸ್ವಾಮಿ ದೇವ" ಈ ಚಿತ್ರದ ಜನಪ್ರಿಯ ಚಿತ್ರಗೀತೆ ಎನಿಸಿದೆ. 1955ರಲ್ಲಿ ರಾಜ್‌ಕುಮಾರ್ ಅಭಿನಯದ **ಸೋದರಿ** ಜಾನಪದ ಕಥೆಯಾಗಿ ತೆರೆ ಕಂಡಿತು. ವಿಶ್ವಕಲಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ತೆರೆಕಂಡ ಈ ಚಿತ್ರವನ್ನು ಟಿ.ವಿ. ಸಿಂಗ್ ಠಾಕೂರ್ ನಿರ್ದೇಶಿಸಿದರು.



1956ರ ತಯಾರಿಕೆ ಭಾಗ್ಯೋದಯ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಉದಯಕುಮಾರ್ ಅವರ ಪ್ರವೇಶ. "ವರದಕ್ಷಿಣೆ" 1957 ಚಿತ್ರದಲ್ಲಿ ಸೂರ್ಯಕಲಾ ಜತೆ.



ರಾಜ್‌ಕುಮಾರ್, ಕಲ್ಯಾಣ್ ಕುಮಾರ್ ಭೂಕೈಲಾಸದಲ್ಲಿ (1955).



1956ರಲ್ಲಿ ಆರೂರು ಪಟ್ಟಾಭಿ ನಿರ್ದೇಶನದ **ಭಕ್ತ ವಿಜಯ**, ಟಿ.ಪಿ. ಸಿಂಗ್ ಠಾಕೂರ್ ನಿರ್ದೇಶನದ **ಹರಿಭಕ್ತ**, **ಓಹಿಲೇಶ್ವರ**, ಭಕ್ತಿ ಪ್ರಧಾನ ಚಿತ್ರಗಳಲ್ಲಿ ರಾಜ್‌ಕುಮಾರ್ ಅಭಿನಯ, 1957ರಲ್ಲಿ ಆರ್. ರಾಮಮೂರ್ತಿ ನಿರ್ದೇಶನದಲ್ಲಿ ತೆರೆಕಂಡ ರಾಜ್‌ಕುಮಾರ್ ಅಭಿನಯದ ಮೊದಲ ಸಾಮಾಜಿಕ **ರಾಯರ ಸೊಸೆ** ಉಲ್ಲೇಖಾರ್ಹ ಚಿತ್ರ. **ಭೂ ಕೈಲಾಸ** ಚಿತ್ರದಲ್ಲಿ ರಾಜ್‌ಕುಮಾರ್, ಕಲ್ಯಾಣ್‌ಕುಮಾರ್ ಇಬ್ಬರೂ ಅಭಿನಯಿಸಿದರು. **ಜಗಜ್ಯೋತಿ ಬಸವೇಶ್ವರ** (1959) ಚಿತ್ರದಲ್ಲಿ ಬಿಜ್ಜಳ, 1959ರ **ಮಹಿಷಾಸುರ ಮರ್ಧಿನಿ**ಯಲ್ಲಿ ದಾನವನ ಪಾತ್ರ, ಅವಿಸ್ಮರಣೀಯ ಅನುಭವ. ಈ ಚಿತ್ರದಲ್ಲಿ ಉದಯಕುಮಾರ್ ಕೂಡ ಅಭಿನಯಿಸಿದ್ದರು. 1962ರ ತಯಾರಿಕೆ **ಭೂದಾನ**ದಲ್ಲಿ ರಾಜ್‌ಕುಮಾರ್, ಕಲ್ಯಾಣ್‌ಕುಮಾರ್, ಉದಯಕುಮಾರ್ ಮೂವರೂ ಒಟ್ಟಿಗೇ ಅಭಿನಯಿಸಿದ್ದಾರೆ. ಕಾದಂಬರಿ ಆಧರಿಸಿದ ಮೊದಲ ಚಿತ್ರ **ಕರುಣೆಯೇ ಕುಟುಂಬದ ಕಣ್ಣು** (1962). ಹೊಸ ಮಾದರಿಯ ಕತೆ ಉಳ್ಳ **ನಾಂದಿ** (1964)ಗಳಲ್ಲೂ ರಾಜ್‌ಕುಮಾರ್ ನಾಯಕ.

1954ರಲ್ಲಿಯೇ ಬಿಡುಗಡೆಯಾದ **ನಟಶೇಖರ** ಮತ್ತೊಂದು ಮಹತ್ವದ ಚಿತ್ರ. ಖ್ಯಾತ ಸಂಕಲನಕಾರರೆಂದು ಹೆಸರು ಮಾಡಿದ್ದ ಸಿ.ವಿ. ರಾಜು ನಿರ್ದೇಶಿಸಿದ ಈ ಚಿತ್ರ ಕಲ್ಯಾಣ್‌ಕುಮಾರ್ (ಮೂಲ ಹೆಸರು ವೆಂಕಟರಂಗನ್) ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿತು. ಈ ಚಿತ್ರದಲ್ಲಿ ಕಲ್ಯಾಣ್ ಕುಮಾರ್ ಜತೆಗೆ ಸಂಧ್ಯಾ, ವಿದ್ಯಾ (ನವನಟಿ), ಶಾಸ್ತ್ರಿ, ಜಯಶ್ರೀ, ಗುಗ್ಗು, ನಾಡಿಗೇರ ಕೃಷ್ಣರಾವ್ ಅವರುಗಳು ಅಭಿನಯಿಸಿದ್ದಾರೆ. ಪಿ. ಕಾಳಿಂಗರಾವ್ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಮೊದಲ ಚಿತ್ರವೇ ಯಶಸ್ವಿಯಾದರೂ ಮರು ವರ್ಷವೇ ಎಂದರೆ 1955ರಲ್ಲಿ ಕಲ್ಯಾಣ್ ಕುಮಾರ್ ಅಭಿನಯದ ಯಾವೊಂದು ಚಿತ್ರವೂ ತಯಾರಾಗದಿರುವುದು ವಿಸ್ಮಯದ ವಿಷಯವಾಗಿದೆ. 1956ರಲ್ಲಿ **ಭಾಗ್ಯಚಕ್ರ**ದಿಂದ ಆರಂಭಿಸಿ 1964ರ ಕಾಲಾವಧಿಯೊಳಗೆ ಅವರು ಒಟ್ಟು ಇಪ್ಪತ್ತು ಚಿತ್ರಗಳಲ್ಲಿ ಅಭಿನಯಿಸಿದರು. 1962ರಲ್ಲಿ **ದೈವಲೀಲೆ** ಚಿತ್ರದಲ್ಲಿ ಕಲ್ಯಾಣ್ ಕುಮಾರ್ ದ್ವಿಪಾತ್ರದಲ್ಲಿ ಅಭಿನಯಿಸಿದರು. 1964ರಲ್ಲಿ ತೆರೆಕಂಡ ಕನ್ನಡದ ಮೊದಲ ವರ್ಣಚಿತ್ರ **ಅಮರಶಿಲ್ಪಿ ಜಕಣಾಚಾರಿ** ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ ಹೆಗ್ಗಳಿಕೆ ಇವರದು. ಕನ್ನಡದ ಜತೆ ಕಲ್ಯಾಣ್‌ಕುಮಾರ್ ತಮಿಳು ಭಾಷಾ ಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಅಲ್ಲೂ ಜನಪ್ರಿಯರಾಗಿ 25ಕ್ಕೂ ಹೆಚ್ಚು ತಮಿಳು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಹಾಸ್ಯ ಪ್ರಧಾನ "ಭಾಗ್ಯಚಕ್ರ" ಕಲ್ಯಾಣ್ ಕುಮಾರ್ ಅವರು ಅಭಿನಯಿಸಿದ ಎರಡನೆಯ ಚಿತ್ರ.

1956ರಲ್ಲಿ **ಭಾಗ್ಯೋದಯ** ಚಿತ್ರದ ಮೂಲಕ ಗುಬ್ಬಿ ಕಂಪನಿಯಲ್ಲಿ ಕಲಾವಿದರಾಗಿದ್ದ ಉದಯಕುಮಾರ್ (ಸೂರ್ಯನಾರಾಯಣ ಶಾಸ್ತ್ರಿ) ಚಿತ್ರರಂಗ ಪ್ರವೇಶಿಸಿದರು. ಮಾಣಿಕ್ಯಂ ನಿರ್ದೇಶನದಲ್ಲಿ ತಯಾರಾದ **ಭಾಗ್ಯೋದಯ** ಚಿತ್ರಕ್ಕೆ ಸಾಹಿತ್ಯ ರಚಿಸುವ ಮೂಲಕ ಕಣಗಾಲ್ ಪ್ರಭಾಕರ ಶಾಸ್ತ್ರಿ ರಂಗಭೂಮಿಯಿಂದ ಚಿತ್ರರಂಗ ಪ್ರವೇಶಿಸಿದರು. ಈ ಚಿತ್ರದಲ್ಲಿ ಉದಯಕುಮಾರ್ ಜತೆ ಸಾಹುಕಾರ್ ಜಾನಕಿ, ಕೌಶಿಕ್, ನರಸಿಂಹರಾಜು ಪಾತ್ರ ವಹಿಸಿದ್ದಾರೆ. 1956ರಲ್ಲೇ **ದೈವ ಸಂಕಲ್ಪ** ಚಿತ್ರದಲ್ಲೂ ನಾಯಕರಾದರು. 1957ರಲ್ಲಿ **ರತ್ನಗಿರಿ ರಹಸ್ಯ** ಚಿತ್ರದ ನಂತರ ಉದಯಕುಮಾರ್ ಜನಪ್ರಿಯರಾದರು. **ಶ್ರೀ ರಾಮಾಂಜನೇಯ ಯುದ್ಧ** (1961) ಚಿತ್ರದಲ್ಲಿ ಆಂಜನೇಯ, **ಚಂದವಳ್ಳಿಯ ತೋಟ** (1964)ದಲ್ಲಿ ಶಿವನಂಜೇಗೌಡನಾಗಿ ದುರಂತ ಪಾತ್ರದಲ್ಲಿ ಅವರ ಅಭಿನಯ ಅವರ ಚಿತ್ರ ಜೀವನದ ಮೈಲಿಗಲ್ಲಾಗಿದೆ. **ಸೇಡಿಗೆ ಸೇಡು** (1970) ಚಿತ್ರದ ಮೂಲಕ ಶತಚಿತ್ರಗಳ ನಟನಾಗಿ ಮೆರೆದ. ಉದಯಕುಮಾರ್ ಕನ್ನಡ ಚಿತ್ರರಂಗ ಕಂಡ ಒಬ್ಬ ಪ್ರತಿಭಾವಂತ ನಟ. ತಮ್ಮ ಕಡೆಯ ದಿನಗಳಲ್ಲಿ ಅವರು ಉದಯಕಲಾ ನಿಕೇತನ ಸಂಸ್ಥೆ ಆರಂಭಿಸಿ ಆಸಕ್ತರಿಗೆ ಅಭಿನಯದಲ್ಲಿ ತರಬೇತಿ ನೀಡುತ್ತಿದ್ದರು. 1985ರಲ್ಲಿ ಅವರ ನಿಧನದೊಂದಿಗೆ ಚಿತ್ರರಂಗದಲ್ಲಿ ವಿಭಿನ್ನ ಪಾತ್ರಗಳಲ್ಲಿ ಮೆರೆದ ವರ್ಣಮಯ ಅಧ್ಯಾಯ ಕೊನೆಗೊಂಡಿತು.

ಒಂದೆಡೆ ನಾಯಕನಟರ ಪ್ರಾಬಲ್ಯ ಬೆಳೆಯುತ್ತಾ ಕನ್ನಡ ಚಿತ್ರರಂಗ ಹೊಸ ಆಯಾಮದತ್ತ ನಡೆಯಿತು. ಇನ್ನೊಂದೆಡೆ ಪ್ರಾದೇಶಿಕ ಚಿತ್ರೋದ್ಯಮಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ ರಾಷ್ಟ್ರಮಟ್ಟದಲ್ಲಿ ಪ್ರಾದೇಶಿಕ ಚಿತ್ರಗಳಿಗೆ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಆರಂಭಿಸಿತು. ಇದೂ ಕೂಡ ಕನ್ನಡ ಚಿತ್ರಗಳ ಗುಣಮಟ್ಟ ಸುಧಾರಣೆಗೆ ಪ್ರಮುಖ ಅಂಶವಾಯಿತು. ಪ್ರಶಸ್ತಿಯನ್ನು ಆರಂಭಿಸಿದ 1954ರ ವರ್ಷದಲ್ಲೇ **ಬೇಡರ ಕಣ್ಣಪ್ಪ** ಈ ಪ್ರಶಸ್ತಿಯನ್ನು ಪಡೆದ ಮೊದಲ ಚಿತ್ರವಾಯಿತು. ಹೀಗಾಗಿ ರಾಜ್‌ಕುಮಾರ್ ಅವರನ್ನು ತೆರೆಗೆ ತಂದ ಮೊದಲ ಚಿತ್ರ ಎಂಬ ದಾಖಲೆಯ ಜತೆಗೆ, ಕೇಂದ್ರ ಪ್ರಶಸ್ತಿ ಪಡೆದ ಮೊದಲಚಿತ್ರ ಎಂಬ ದಾಖಲೆಯೂ ಈ ಚಿತ್ರದ್ದಾಯಿತು. ಕನ್ನಡಕ್ಕೆ ಪ್ರತಿಷ್ಠಿತ "ದಾದಾ ಸಾಹೇಬ್ ಫಾಲ್ಕೆ" ಪ್ರಶಸ್ತಿ ತಂದ ಮೊದಲಿಗರೂ ರಾಜ್‌ಕುಮಾರ್ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಆರ್. ನಾಗೇಂದ್ರರಾವ್ ನಿರ್ದೇಶಿಸಿದ **ಪ್ರೇಮದ ಪುತ್ರಿ** (1957) ಕೇಂದ್ರ ಸರ್ಕಾರದ ಪ್ರಶಸ್ತಿಗಳಿಸಿ, ರಾಷ್ಟ್ರಪತಿಗಳಿಂದ ಬೆಳ್ಳಿ ಪದಕ ಪಡೆದ ಮೊದಲ ಕನ್ನಡ ಚಿತ್ರವೆನಿಸಿತು. 1956ರಲ್ಲಿ ಆರೂರು ಪಟ್ಟಾಭಿ ನಿರ್ದೇಶಿಸಿದ ಪ್ರಥಮ ಚಿತ್ರ **ಭಕ್ತ ವಿಜಯ** ಕೇಂದ್ರ ಸರ್ಕಾರದ ಅರ್ಹತಾ ಪತ್ರ ಪಡೆಯಿತು. 1958ರಲ್ಲಿ **ಸ್ಕೂಲ್ ಮಾಸ್ಟರ್** ಅಖಿಲ ಭಾರತದ ಮಟ್ಟದ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯಿತು. ಈ ರೀತಿಯ ಗೌರವ ಪಡೆದ ದಕ್ಷಿಣ ಭಾರತದ ಪ್ರಥಮ ಚಿತ್ರವೂ ಇದಾಯಿತು. ಪದ್ಮಿನಿ ಪಿಕ್ಚರ್ಸ್ ಲಾಂಛನದ



*1961ರಲ್ಲಿ ರಾಜ್ಯದಲ್ಲಿ ಭೀಕರ ಪ್ರವಾಹ, ಭಾರೀ ಅನಾಹುತ. ಸಂತ್ರಸ್ತರಿಗೆ ನಿಧಿ ಸಂಗ್ರಹದ ಯಾತ್ರೆಯನ್ನು ಕನ್ನಡ ಚಲನ ಚಿತ್ರ ಕಲಾವಿದರು ರಾಜ್ಯಾದ್ಯಂತ ನಡೆಸಿದರು. ಇದು ಕುಸಿಯುತ್ತಿದ್ದ ಚಿತ್ರರಂಗ ಪ್ರಾಣವಾಯು ತುಂಬಿಕೊಳ್ಳಲೂ ನೆರವಾಯಿತು.*

ಈ ಚಿತ್ರದ ನಿರ್ದೇಶಕರು ಬಿ. ಆರ್. ಪಂತುಲು. ಸುಂದರರಾವ್ ನಾಡಕರ್ಣಿ ನಿರ್ದೇಶಿಸಿದ ಮೊದಲ ಕನ್ನಡ ಚಿತ್ರ *ಸಂತ ತುಕಾರಾಂ* (1963) ರಜತ ಪದಕ ಪಡೆಯಿತು. ಅನಂತರ ಪ್ರತಿ ವರ್ಷ ಕನ್ನಡ ಚಿತ್ರಗಳು ರಾಷ್ಟ್ರೀಯ ಪ್ರಶಸ್ತಿ ನಿರೀಕ್ಷಿಸುವಂತಾಯಿತು. **ನಾಂದಿ** (1964) ಚಿತ್ರದ ನಂತರವಂತೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಿಳಿಯುವ ಹಂತಕ್ಕೆ ಏರುವ ಸಾಧ್ಯತೆಯನ್ನು ತೋರಿತು. ಇದು ಕನ್ನಡ ಚಿತ್ರರಂಗದಲ್ಲಿ ಸ್ಫೂರ್ತಿಯ ವಿಷಯವಾಯಿತು. 1960ರಲ್ಲಿ ಚಿತ್ರ ನಿರ್ಮಾಣಕ್ಕೆ ಸಾಲ ನೀಡಿ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಥಾಪನೆಯಾದ ಕರ್ನಾಟಕ ಫಿಲಂ ಫೈನಾನ್ಸ್ ಕಾರ್ಪೊರೇಷನ್ ಕೂಡ ಚಲನಚಿತ್ರ ಉದ್ಯಮದ ಬೆಳವಣಿಗೆಗೆ ಪೂರಕವಾಯಿತು.


1961 ರಲ್ಲಿ ನಡೆದ ಒಂದು ಘಟನೆ ಕನ್ನಡ ಕಲಾವಿದರು ಹಾಗೂ ಜನರನ್ನು ಮತ್ತಷ್ಟು ಬೆಸೆಯಿತು. ಕರ್ನಾಟಕವೇ ತತ್ತರಿಸುವಂತೆ ಮಳೆ ಸುರಿದು ಎಲ್ಲೆಡೆ ಭೀಕರ ಪ್ರವಾಹ. ಮನೆಮಠ, ಜನಜಾನುವಾರು ಕಳೆದುಕೊಂಡು ನಿಂತ ಜನರ ಆರ್ತನಾದ ಎಲ್ಲೆಡೆ ಕೇಳಲಾರಂಭಿಸಿತು. ಅಂತಹ ಸಮಯದಲ್ಲಿ ನೊಂದ ಜನತೆಗೆ ನೆರವಾಗಲು ಚಲನಚಿತ್ರ ಕಲಾವಿದರು ಕಂಕಣಬದ್ಧರಾದರು. ನಾಡಿನಾದ್ಯಂತ ಸಂಚರಿಸಿ ನಿಧಿ ಸಂಗ್ರಹಿಸುವುದು ಹಾಗೂ ರಸಮಂಜರಿ ಕಾರ್ಯಕ್ರಮ ಏರ್ಪಡಿಸಿ ಹಣ ಸಂಗ್ರಹಿಸುವ ಯೋಜನೆ ರೂಪಿತವಾಯಿತು. 1961ರ ಆಗಸ್ಟ್ 19 ಮತ್ತು 20, ರಂದು ಕಲಾವಿದರು ತಂಡ ತಂಡವಾಗಿ ನಾಡಿನಾದ್ಯಂತ ಸಂಚರಿಸಿ ಜನರಿಂದ ಹಣ ಬೇಡಿದರು. ಚಲನಚಿತ್ರ ರಂಗದ ಕಲಾವಿದರನ್ನು ನೋಡಲು, ಅವರನ್ನು ಉತ್ತೇಜಿಸಲು ಎಲ್ಲೆಡೆ ಜನ ತಂಡೋಪತಂಡವಾಗಿ ಆಗಮಿಸಿ ಬೆಂಬಲ-ನೆರವು ನೀಡಿದರು. ರಾಜ್‌ಕುಮಾರ್, ಉದಯಕುಮಾರ್, ಜಿ.ಎಚ್. ವೀರಣ್ಣ, ನಾಗೇಂದ್ರರಾವ್, ಕೆಂಪರಾಜ್, ಕಲ್ಯಾಣ್ ಕುಮಾರ್, ನರಸಿಂಹರಾಜು, ಹೊನ್ನಪ್ಪ ಭಾಗವತರ್, ಸುಬ್ಬಯ್ಯ ನಾಯ್ಡು, ಪಂತುಲು, ರಂಗ, ಬಿ. ಸರೋಜಾದೇವಿ, ಲೀಲಾವತಿ, ಹರಿಣಿ, ಪಂಢರಿಬಾಯಿ ಮೊದಲಾದ ಕಲಾವಿದರುಗಳ ತಂಡ ನಾಡಿನಾದ್ಯಂತ ಸಂಚರಿಸಿ 35 ಸಾವಿರ ರೂ. ಸಂಗ್ರಹಿಸಿ ಅಂದಿನ ಮುಖ್ಯಮಂತ್ರಿ ಬಿ. ಡಿ. ಜತ್ತಿ ಅವರಿಗೆ ಸಮರ್ಪಿಸಿದರು. ಜನತೆಯ ನೋವಿಗೆ ಕಲಾವಿದರು ಸ್ಪಂದಿಸಿದರು. ಕಲಾವಿದರ ಬಗ್ಗೆ ಇರುವ ಅಭಿಮಾನದ ಮಹಾಪೂರ, ಕಲಾವಿದರು, ನಿರ್ಮಾಪಕರು, ನಿರ್ದೇಶಕರು ಚಿತ್ರರಂಗದಲ್ಲಿ ಮತ್ತಷ್ಟು ತೊಡಗಿಸಿಕೊಳ್ಳಲು ಉತ್ತೇಜನ ನೀಡಿದ್ದೇ ಅಲ್ಲದೆ ಅವರ ಜವಾಬ್ದಾರಿಯನ್ನು ನೆನಪಿಸಿತು.

ಇದೇ ಅವಧಿಯಲ್ಲಿ ಚಿತ್ರರಂಗದಲ್ಲಿ ಡಬ್ಬಿಂಗ್ ಚಿತ್ರಗಳು ಹೆಚ್ಚು ಹೆಚ್ಚಾಗಿ ಬರಲಾರಂಭಿಸಿದವು. ಇದರಿಂದಾಗಿ ಸೀಮಿತ ವಲಯದ ಮಾರುಕಟ್ಟೆ ಹೊಂದಿರುವ ಕನ್ನಡ ಚಿತ್ರರಂಗಕ್ಕೆ ತೀವ್ರ ಧಕ್ಕೆ ಬಂದೊದಗಿತು.



ಆ ಸಮಯದಲ್ಲಿ ಸಾಹಿತಿ ಅ. ನ. ಕೃ., ಮ. ರಾಮಮೂರ್ತಿ, ಪಾಟೀಲ್ ನಾಗರಾಜ್ ಮೊದಲಾದವರು ಡಬ್ಬಿಂಗ್ ಸಂಸ್ಕೃತಿಯ ವಿರುದ್ಧ ಹೋರಾಟ ಸಂಘಟಿಸಿದರು. ಈ ಕನ್ನಡ ಚಳವಳಿ ಕನ್ನಡ ಚಿತ್ರರಂಗದ ಉಳಿವಿಗೆ ಸಹಕಾರಿ ಆಯಿತು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರವೇ ದಕ್ಕದಿದ್ದ ಕಾಲದಲ್ಲಿ ಈ ಚಳವಳಿಯಿಂದಾಗಿ ಕನ್ನಡ ಚಿತ್ರಗಳಿಗೆ ಉತ್ತಮ ಚಿತ್ರಮಂದಿರ ಲಭ್ಯವಾಗಲಾರಂಭಿಸಿತು. ಈ ಚಳವಳಿಯ ಸ್ಫೂರ್ತಿಯಿಂದಾಗಿ ಬೆಂಗಳೂರಿನ ಭಾರತ್ ಚಿತ್ರಮಂದಿರ (ಈಗ ಈ ಚಿತ್ರ ಮಂದಿರ ವಾಣಿಜ್ಯ ಸಮುಚ್ಚಯವಾಗಿ ಪರಿವರ್ತನೆಗೊಂಡಿದೆ) ಕನ್ನಡ ಚಿತ್ರಗಳನ್ನು ಮಾತ್ರ ಪ್ರದರ್ಶಿಸುವ ಪ್ರತಿಜ್ಞೆ ಮಾಡಿ ಅದರಂತೆಯೇ ನಡೆದುಕೊಂಡಿತು. ಕನ್ನಡ ಚಳವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ತಲುಪಿದ್ದರಿಂದ ಕನ್ನಡ ಚಿತ್ರಗಳ ಸರಾಸರಿ ಸಂಪಾದನೆಯ ಪ್ರಮಾಣವೂ ಹೆಚ್ಚಿತು. ಇದರಿಂದಾಗಿ ಕನ್ನಡ ಕಾದಂಬರಿಗಳನ್ನಾಧರಿಸಿದ ಚಿತ್ರಗಳು ಹೆಚ್ಚು ಹೆಚ್ಚಾಗಿ ಬರಲಾರಂಭಿಸಿ ಕನ್ನಡ ಚಿತ್ರರಂಗದ ಮೇಲೆ ಪರಿವರ್ತನೆಯ ಗಾಳಿ ಬೀಸಲಾರಂಭಿಸಿತು.

1960ರಲ್ಲಿ ನಡೆದ ಮತ್ತೊಂದು ಐತಿಹಾಸಿಕ ಘಟನೆಯನ್ನು ಈ ಎಲ್ಲ ಬೆಳವಣಿಗೆಗೆ ಪೂರಕವಾಗಿ ನೋಡಿದಾಗ ಕನ್ನಡ ಚಳವಳಿ ಮತ್ತು ಚಿತ್ರರಂಗ ಪರಿವರ್ತನೆಯತ್ತ ಹೊರಳಲು ಆ ಸಂಘಟನೆಯೂ ಕಾರಣ ಎನಿಸುತ್ತದೆ. 1960ರಲ್ಲಿ ಕನ್ನಡ ಚಿತ್ರಗಳ ತಯಾರಿಕೆ ಇಳಿಮುಖವಾಗಲಾರಂಭಿಸಿತು. 1958ರಲ್ಲಿ ಏಳು ಚಿತ್ರಗಳು ತಯಾರಾದರೆ 1959 ರಲ್ಲಿ ಆರು ಚಿತ್ರಗಳು ಮಾತ್ರ ತಯಾರಾದವು. ಇದು ಕಲಾವಿದರು ನಿರುದ್ಯೋಗಿಗಳಾಗುವಂತಹ ಸನ್ನಿವೇಶ ಸೃಷ್ಟಿಸಿತು. ತಾನು ನಡೆದು ಬಂದ ಹಾದಿಯಲ್ಲಿ ಇಪ್ಪತ್ತೈದು ವರ್ಷಗಳನ್ನು ತಲುಪಿದ್ದ ಚಿತ್ರರಂಗ ಒಂದು ಉದ್ಯಮದ ಸ್ವರೂಪ ಪಡೆದುಕೊಳ್ಳುವ ಹಂತ ತಲುಪಿದ ಸಮಯದಲ್ಲೇ ಇದ್ದಕ್ಕಿದ್ದಂತೆ ಕಚ್ಚಾ ಫಿಲಂ ಮುಗ್ಗಟ್ಟು ತಲೆದೋರಿ ಚಿತ್ರ ತಯಾರಿಕೆ ಕುಸಿಯಿತು. ಚಿತ್ರೋದ್ಯಮವನ್ನೇ ನಂಬಿ ಕುಳಿತಿದ್ದ ಕಲಾವಿದರಂತೂ ಇದರಿಂದ ಕಂಗಾಲಾದರು. ಕಲಾವಿದರೆಲ್ಲ ಸಂಘಟಿತರಾಗಿ ಸಹಕಾರ ಸಂಸ್ಥೆಯೊಂದನ್ನು ಸ್ಥಾಪಿಸಿ, ಊರಿಂದೂರಿಗೆ ತೆರಳಿ ನಾಟಕಗಳನ್ನಾಡಲಾರಂಭಿಸಿದರು. ಚಲನಚಿತ್ರದಲ್ಲಿ ಈಗಾಗಲೇ ಬೇರೂರಿದ್ದ ಕಲಾವಿದರು 'ಕನ್ನಡ ಕಲಾವಿದರು' ಎಂಬ ವೇದಿಕೆಯನ್ನು ರಚಿಸಿಕೊಂಡರು. ಅದೇ ಲಾಂಛನದಲ್ಲಿ **ರಣಧೀರ ಕಂಠೀರವ** ಎಂಬ ಚಿತ್ರ ನಿರ್ಮಿಸಿದರು. ಈ ಚಿತ್ರದ ನಿರ್ಮಾಪಕರು ರಾಜ್‌ಕುಮಾರ್, ಜಿ. ವಿ.ಅಯ್ಯರ್, ನರಸಿಂಹರಾಜು ಹಾಗೂ ಟಿ. ಎನ್. ಬಾಲಕೃಷ್ಣ.



ಕನ್ನಡ ಚಿತ್ರಗಳನ್ನೇ ಪ್ರದರ್ಶಿಸುವ ಪಣತೊಟ್ಟು ಅದರಂತೆಯೇ ನಡೆದುಕೊಂಡು ಇತಿಹಾಸ ಸೇರಿದ 'ಭಾರತ್' ಚಿತ್ರಮಂದಿರ.




1960ರಲ್ಲಿ ತೆರೆಕಂಡ ಕನ್ನಡ ಚಲನ ಚಿತ್ರ ಕಲಾವಿದರ ಸಂಘದ ಕಾಣಿಕೆ "ರಣಧೀರ ಕಂಠೀರವ" ಚಿತ್ರ ಒಂದು ದಾಖಲೆ. ಈ ಚಿತ್ರ ತಯಾರಿಕೆಯ ಹಿನ್ನೆಲೆಯೇ ಬಂದಾಯ. ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿ ಕನ್ನಡ ಚಿತ್ರಗಳಿಗೆ ಅವಕಾಶ ಆರಂಭವಾದುದೇ ಈ ಚಿತ್ರದ ಮೂಲಕ. ಕನ್ನಡದ ನೂರನೇ ವಾಕ್ಚಿತ್ರ.

ಕನ್ನಡಿಗರನ್ನು ಸಂಘಟಿಸುವುದು ಹಾಗೂ ಚಲನಚಿತ್ರದ ಬಗ್ಗೆ ಕುಗ್ಗುತ್ತಿದ್ದ ಆಸಕ್ತಿಯನ್ನು ತಡೆ ಹಿಡಿಯುವುದು 'ಕನ್ನಡ ಕಲಾವಿದರ' ಉದ್ದೇಶವಾಗಿತ್ತು. ಕನ್ನಡದ 100ನೇ ವಾಕ್ಚಿತ್ರವಾಗಿರುವ ಈ ಚಿತ್ರ ಕನ್ನಡದ ಮೊದಲ ಐತಿಹಾಸಿಕ ಚಿತ್ರ. ಚಿತ್ರದಲ್ಲಿ ರಾಜ್‌ಕುಮಾರ್, ಆರ್. ನಾಗೇಂದ್ರರಾವ್, ಉದಯಕುಮಾರ್, ಕೆ. ಎಸ್. ಅಶ್ವತ್ಥ್, ಟಿ. ಎನ್. ನರಸಿಂಹರಾಜು, ಟಿ.ಎನ್. ಬಾಲಕೃಷ್ಣ, ಜಿ. ವಿ. ಅಯ್ಯರ್, ವೀರಭದ್ರಪ್ಪ, ಈಶ್ವರಪ್ಪ, ಕಾಂತಾರಾವ್, ರಾಮಚಂದ್ರಶಾಸ್ತ್ರಿ, ಕೃಷ್ಣಶಾಸ್ತ್ರಿ, ಶ್ಯಾಂಸುಂದರ್, ಸಂಧ್ಯಾ, ಲೀಲಾವತಿ, ರಮಾದೇವಿ,ಶಾಂತಮ್ಮ, ನಾಗರತ್ನಮ್ಮ, ಸೋರಟ್ ಅಶ್ವತ್ಥ್, ಹನುಮಂತರಾವ್, ಅನಿಲ್ ಕುಮಾರ್, ಉದಯಶಂಕರ್, ಸುಬ್ಬಣ್ಣ ಅಭಿನಯಿಸಿದ್ದಾರೆ.ಸಾಹಿತ್ಯ ಜಿ. ವಿ.ಅಯ್ಯರ್ ಅವರದು. ಎನ್. ಸಿ. ರಾಜನ್ ನಿರ್ದೇಶಿಸಿರುವ ಈ ಚಿತ್ರದ ಛಾಯಾಗ್ರಾಹಕರು ಬಿ. ದೊರೈರಾಜ್. ಸಂಗೀತ ಜಿ. ಕೆ. ವೆಂಕಟೇಶ್. ಕನ್ನಡ ಚಿತ್ರರಂಗದ ಇತಿಹಾಸದಲ್ಲಿ **ರಣಧೀರ ಕಂಠೀರವ** ಒಂದು ಮೈಲಿಗಲ್ಲು.

ಕನ್ನಡ ಚಿತ್ರಗಳಿಗೆ ಚಿತ್ರಮಂದಿರದ ಸಮಸ್ಯೆ ಆ ದಿನಗಳಲ್ಲಿ ಎಷ್ಟು ತೀವ್ರವಾಗಿತ್ತೆಂದರೆ **ರಣಧೀರ ಕಂಠೀರವ** ಚಿತ್ರಕ್ಕೆ ಬೆಂಗಳೂರಿನಲ್ಲಿ ಉತ್ತಮ ಚಿತ್ರಮಂದಿರ ಸಿಗದೆ ಹಿಮಾಲಯ ಚಿತ್ರ ಮಂದಿರದಲ್ಲಿ ಬಿಡುಗಡೆ ಮಾಡಲಾಯಿತು ಎಂದು ಆ ಚಿತ್ರದ ನಿರ್ಮಾಪಕರಲ್ಲೊಬ್ಬರಾದ ಜಿ. ವಿ. ಅಯ್ಯರ್ ಹೇಳುತ್ತಾರೆ.





ಈ ಹಿನ್ನೆಲೆ ಹಾಗೂ 1961ರಲ್ಲಿ ಕನ್ನಡ ಚಿತ್ರರಂಗದ ಉಳಿವಿಗಾಗಿ ಸಾಹಿತಿಗಳ ನೈತೃತ್ವದಲ್ಲಿ ನಡೆದ ಹೋರಾಟ, ಚಳವಳಿಗೆ ಪ್ರೇರಣೆಯಾಗಿದೆ.

ಈ ಹೋರಾಟದ ಪರಿಣಾಮವೇ 1962ರಲ್ಲಿ ಕನ್ನಡದ ಕಾದಂಬರಿಯೊಂದನ್ನು ಆಧರಿಸಿದ ಮೊದಲ ವಾಕ್ಚಿತ್ರ ತೆರೆಕಾಣುವಂತಾಯಿತು. ಸದಭಿರುಚಿಯ ಚಿತ್ರ ತಯಾರಿಕೆಗೆ ಹೆಸರಾಗಿದ್ದ ಸಂಸ್ಥೆ ಶೈಲಶ್ರೀ ಪ್ರೊಡಕ್ಷನ್ಸ್‌ ರವರು ಕೃಷ್ಣಮೂರ್ತಿ ಪುರಾಣಿಕ ಅವರ "ಧರ್ಮದೇವತೆ" ಕಾದಂಬರಿ ಆಧರಿಸಿ **ಕರುಣೆಯೇ ಕುಟುಂಬದ ಕಣ್ಣು** ಚಿತ್ರ ನಿರ್ಮಿಸಿದರು. ಇಲ್ಲಿಂದ ಸಾಹಿತ್ಯ ಹಾಗೂ ಸಿನಿಮಾ ಕ್ಷೇತ್ರಗಳ ನಡುವೆ ನಂಟು ಮತ್ತಷ್ಟು ಬಲವಾಯಿತು. ಎ. ಸಿ. ನರಸಿಂಹ ಮೂರ್ತಿ ಮತ್ತು ಮಿತ್ರರು ನಿರ್ಮಿಸಿದ ಈ ಚಿತ್ರಕ್ಕೆ ಚಿ. ಸದಾಶಿವಯ್ಯ ಸಂಭಾಷಣೆ, ಕಣಗಾಲ್ ಪ್ರಭಾಕರಶಾಸ್ತ್ರಿ ಗೀತರಚನೆ ಮಾಡಿದ್ದು, ಜಿ. ಕೆ. ವೆಂಕಟೇಶ್ ಸಂಗೀತ ನೀಡಿದ್ದಾರೆ. ಟಿ. ವಿ. ಸಿಂಗ್‌ಠಾಕೂರ್ ನಿರ್ದೇಶನದ ಈ ಚಿತ್ರದಲ್ಲಿ ರಾಜ್‌ಕುಮಾರ್, ಲೀಲಾವತಿ, ಉದಯಕುಮಾರ್, ಆದವಾನಿ ಲಕ್ಷ್ಮೀದೇವಿ, ರಾಜಶ್ರೀ, ಬಾಲಕೃಷ್ಣ, ನರಸಿಂಹರಾಜು, ಅಶ್ವತ್ಥ್, ರಾಜಾಶಂಕರ್, ಮಾಸ್ಟರ್ ಉದಯಶಂಕರ್, ಗಣಪತಿಭಟ್ ಮೊದಲಾದವರಿದ್ದಾರೆ. ಈ ಹೋರಾಟದ ಫಲವೇ 1963ರಲ್ಲಿ ಕನ್ನಡ ಚಿತ್ರಗಳ ನಿರ್ಮಾಣ ಸಂಖ್ಯೆ ದಿಢೀರನೆ ಹೆಚ್ಚಲು ಕಾರಣವಾಯಿತು. ಈ ವರ್ಷದಲ್ಲಿ 21 ಕನ್ನಡ ಚಿತ್ರಗಳು ಬಿಡುಗಡೆಯಾಗಿವೆ. ಎಂ.ಆರ್. ವಿಠಲ್ ನಿರ್ದೇಶನದ ಮೊದಲ ಚಿತ್ರ **ನಂದಾದೀಪ** ನಿರೂಪಣೆಯ ಹೊಸತನದಿಂದ ಗಮನ ಸೆಳೆಯಿತು. ರಾಜ್‌ಕುಮಾರ್ - ಹರಿಣಿ ಜೋಡಿ ಈ ಚಿತ್ರದ ಮೂಲಕ ಜನಪ್ರಿಯವಾಯಿತು. ಅದೇ ವರ್ಷ ಸುಂದರರಾವ್ ನಾಡಕರ್ಣಿ ನಿರ್ದೇಶನದ **ಸಂತ ತುಕಾರಾಂ** ತೆರೆಕಂಡಿತು. ಚಿ. ಉದಯಶಂಕರ್ ಸಂಭಾಷಣೆ ಬರೆದ ಮೊದಲ ಚಿತ್ರವಿದು."ನಂದಾದೀಪ" ಚಿತ್ರದ ಮೂಲಕ ಸಂಗೀತ ನಿರ್ದೇಶಕರಾಗಿ ಬಂದ ವೆಂಕಟರಾಜು, ಕನಕದಾಸ

ಚಿತ್ರರಂಗದ ಶ್ರೀಮಂತಿಕೆಗೆ ಶ್ರಮಿಸಿದವರು

ಚಿ. ಉದಯಶಂಕರ್

ಎಂ. ರಂಗರಾವ್.

ಜಿ. ಕೆ. ವೆಂಕಟೇಶ್.

ವಿಜಯಭಾಸ್ಕರ್

*1945ರಲ್ಲಿ "ಹೇಮರೆಡ್ಡಿ ಮಲ್ಲಮ್ಮ" ಚಿತ್ರದಲ್ಲಿ ಅಭಿನಯಿಸಿದ ಕುಮಾರರಾಮ ಸೀತಾರಾಮಶಾಸ್ತ್ರಿ (ಕು.ರಾ.ಸೀ) ನಂತರ ಎಚ್.ಎಲ್.ಎನ್. ಸಿಂಹ ಅವರ ಬಳಿ ಸಹನಿರ್ದೇಶಕರಾಗಿ ಸೇರಿದರು. 1955ರಲ್ಲಿ ಹೊನ್ನಪ್ಪ ಭಾಗವತರ್ ಅಭಿನಯದ "ಮಹಾಕವಿ ಕಾಳಿದಾಸ" ಚಿತ್ರದ ಮೂಲಕ ನಿರ್ದೇಶಕರಾದರು. ನಂತರ "ಸದಾರಮೆ" (1956), "ಅಣ್ಣಾತಂಗಿ" (1958), ರಾಣಿ ಹೊನ್ನಮ್ಮ (1960), "ಬೆರೆತ ಜೀವ" (1965) ಚಿತ್ರಗಳನ್ನು ನಿರ್ದೇಶಿಸಿದರು. ಬೆರೆತ ಜೀವ ಚಿತ್ರದ ಅವರ ಸಾಹಿತ್ಯ "ಅಂಕದ ಪರದೆ ಜಾರಿದ ಮೇಲೆ ನಾಟಕವಿನ್ನೂ ಉಳಿದಿಹುದೇ?", "ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ"; "ಮನಮೆಚ್ಚಿದ ಮಡದಿ" ಚಿತ್ರದ "ತುಟಿಯ ಮೇಲೆ ತುಂಟ ಕಿರುನಗೆ..." "ಕನ್ಯಾರತ್ನ"ದ "ಬಿಂಕದ ಸಿಂಗಾರಿ"... ಹಾಡುಗಳು ಅವರ ಸಾಹಿತ್ಯವನ್ನು ಪರಿಚಯಿಸುತ್ತದೆ.*





ಕಾದಂಬರಿ ಆಧರಿಸಿದ ಚಿತ್ರತಯಾರಿಕೆಗೆ ಒಲವು ತೋರಿದ ನಿರ್ದೇಶಕ ಟಿ. ವಿ. ಸಿಂಗ್ ಠಾಕೂರ್

ಸೇರಿ ಹಲವಾರು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ..." ಮೊದಲಾದ ಗೀತೆಗಳು ಅಕಾಲ ಮರಣಕ್ಕೀಡಾದ ವೆಂಕಟರಾಜು ಅವರನ್ನೂ ಸದಾ ನೆನಪಿಗೆ ತರುತ್ತವೆ. ಮಾತಾಪಿಕ್ಚರ್ಸ್ ಲಾಂಛನದಲ್ಲಿ ಕಣಗಾಲ್ ಪ್ರಭಾಕರ ಶಾಸ್ತ್ರಿ ಸಾಹಿತ್ಯ ಬರೆದು ನಿರ್ದೇಶಿಸಿದ **ಸತಿಶಕ್ತಿ** ಚಿತ್ರದಲ್ಲಿ ರಾಜಕುಮಾರ್ ಮೊದಲಬಾರಿಗೆ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. **ಸಾಕು ಮಗಳು** ಚಿತ್ರದಲ್ಲಿ ಬಿ. ಆರ್. ಪಂತುಲು ಕಲ್ಪನಾ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ.

ಎಂ. ಎಸ್. ನಾಯಕ್ ನಿರ್ದೇಶಿಸಿದ **ಶ್ರೀ ರಾಮಾಂಜನೇಯ ಯುದ್ಧ** ಚಿತ್ರದ ಮೂಲಕ ಸತ್ಯಂ ಸಂಗೀತ ನಿರ್ದೇಶಕರಾದರು. ಗೀತಪ್ರಿಯ ಈ ಚಿತ್ರಕ್ಕೆ ಸಂಭಾಷಣೆ ಮತ್ತು ಗೀತೆಗಳನ್ನು ಬರೆದಿದ್ದಾರೆ. ರಾಜಕುಮಾರ್, ಉದಯಕುಮಾರ್, ಕೆ. ಎಸ್. ಅಶ್ವತ್ಥ್, ಡಿಕ್ಕಿ ಮಾಧವರಾವ್, ಬಿ. ರಾಘವೇಂದ್ರ ರಾವ್, ಪಂಢರಿಬಾಯಿ, ಜಯಶ್ರೀ,ಆದವಾನಿ ಲಕ್ಷ್ಮೀದೇವಿ,ಜಯಂತಿ, ಎಚ್. ಆರ್. ಶಾಸ್ತ್ರಿ, ರಾಜೇಂದ್ರಕೃಷ್ಣ, ಸೂರ್ಯಕುಮಾರ್ ಮೊದಲಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

### ಬಣ್ಣ

ಕನ್ನಡ ಚಲನಚಿತ್ರಗಳು ಬಣ್ಣದ ಯುಗಕ್ಕೆ ಕಾಲಿಟ್ಟದ್ದು ಈ ದಶಕದಲ್ಲಿಯೇ. 1955ರಲ್ಲಿ ತೆರೆಕಂಡ **ಸ್ತ್ರೀರತ್ನ** ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಹೆಸರಿಸಲೇ ಬೇಕಾದ ಮತ್ತೊಂದು ಹೆಸರು. ಭಾಗಶಃ ವರ್ಣದಲ್ಲಿ ಬಂದ ಮೊದಲ ಕನ್ನಡ ಚಿತ್ರ ಇದು. ನಾಯಕನಟನಾಗಿ, ಪೋಷಕ ನಟನಾಗಿ ಹೆಸರುಗಳಿಸಿರುವ ಕೆ ಎಸ್. ಅಶ್ವತ್ಥ್ ಹಾಗೂ ತಮಿಳು ನಾಡಿನ ರಾಜಕೀಯರಂಗದಲ್ಲಿ ಮಿನುಗಿದ ನಟಿ ಜಯಲಲಿತಾ ಅವರ ತಾಯಿ ಸಂಧ್ಯಾ ಅವರುಗಳು ಚಿತ್ರರಂಗ ಪ್ರವೇಶಿಸಿದ್ದು ಈ ಚಿತ್ರದಿಂದಲೇ. 1955ರಲ್ಲೇ ಮೈಸೂರಿನಲ್ಲಿ ಆರಂಭವಾದ ಪ್ರೀಮಿಯರ್ ಸ್ಟುಡಿಯೋದಲ್ಲೇ ಸಂಪೂರ್ಣವಾಗಿ ತಯಾರಾದ **ಸ್ತ್ರೀರತ್ನ** ಚಿತ್ರಕ್ಕೆ ಅನಕೃ ಸಂಭಾಷಣೆ ಬರೆದಿದ್ದಾರೆ. ಕೆ. ಸುಬ್ರಹ್ಮಣ್ಯಂ ನಿರ್ದೇಶಿಸಿದ್ದಾರೆ. ಈ ಚಿತ್ರದ ಎರಡು ರೀಲುಗಳನ್ನು ಬಣ್ಣದಲ್ಲಿ ಚಿತ್ರೀಕರಿಸಲಾಗಿತ್ತು. ಈ ಚಿತ್ರದ ಮತ್ತೊಂದು ವಿಶೇಷವೆಂದರೆ ಆಗ ತಮಿಳು ಚಿತ್ರರಂಗದಲ್ಲಿ ಖ್ಯಾತ ಹಾಸ್ಯನಟರಾಗಿದ್ದ ಎನ್. ಎಸ್. ಕೃಷ್ಣನ್ ಮತ್ತು ಟಿ. ಎ.ಮಧುರಂ ಈ ಚಿತ್ರದಲ್ಲಿ ಅಭಿನಯಿಸಿರುವುದು. 1960ರಲ್ಲಿ ಬಿ. ಆರ್. ಪಂತುಲು, ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಿಸಿದ **ಮಕ್ಕಳರಾಜ್ಯ** ಕೂಡ ಭಾಗಶಃ ವರ್ಣದಲ್ಲಿತ್ತು. **ವೀರಕೇಸರಿ** (1963) ಚಿತ್ರವೂ ಭಾಗಶಃ ವರ್ಣದಲ್ಲಿ ತಯಾರಾಗಿತ್ತು. 1956ರಲ್ಲಿ ಗುಬ್ಬಿ ವೀರಣ್ಣನವರು ನಿರ್ಮಿಸಿದ **ಸದಾರಮೆ** ಚಿತ್ರ ಕೂಡ ಭಾಗಶಃ ವರ್ಣದಲ್ಲಿತ್ತು. 1935ರಲ್ಲಿ ತೆರೆಕಂಡಿದ್ದ ಚಿತ್ರದಲ್ಲಿ ವೀರಣ್ಣನವರೆ ನಾಯಕ. 1956ರ **ಸದಾರಮೆ**ಯಲ್ಲಿ ಕಲ್ಯಾಣ್ ಕುಮಾರ್ ನಾಯಕರಾಗಿದ್ದಾರೆ. ಕು. ರಾ. ಸೀತಾರಾಮಶಾಸ್ತ್ರಿ ನಿರ್ದೇಶನದ ಈ ಚಿತ್ರದಲ್ಲಿ ಕಲ್ಯಾಣ್ ಕುಮಾರ್ ಜತೆಗೆ ಗುಬ್ಬಿ ವೀರಣ್ಣ,




ಕನ್ನಡ ಕಾದಂಬರಿಯೊಂದನ್ನು ಆಧರಿಸಿದ ಚಿತ್ರಕಥೆಯನ್ನುಳ್ಳ "ಕರುಣೆಯೇ ಕುಟುಂಬದ ಕಣ್ಣು" (1962) ಸಾಹಿತ್ಯ-ಚಿತ್ರ ಜಗತ್ತಿನ ನಡುವೆ ಬೆಸೆದ ನಂಟು.



ಕನ್ನಡ ಚಿತ್ರರಂಗದ ಚಳವಳಿಗೆ ಬಲತಂದ ಮತ್ತೊಂದು ಚಿತ್ರ "ಕಣ್ತೆರೆದು ನೋಡು". ಅ.ನ.ಕೃ., ಮ.ರಾಮಮೂರ್ತಿ *1960*ರಲ್ಲಿ ಆರಂಭಿಸಿದ ಕನ್ನಡ ಚಳವಳಿಗೆ ಬಿಸಿ ಏರಿದ್ದ ಸಮಯದಲ್ಲಿ ಬಂದ ಈ ಚಿತ್ರ ಚಳವಳಿಗೆ ಹುಮ್ಮಸ್ಸು ತಂದಿತು. ಸಂಗೀತ ನಿರ್ದೇಶಕ ಜಿ. ಕೆ. ವೆಂಕಟೇಶ್ ಹಾಡಿದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ನಾನ್ ಕೀಳ್ ಎಂಬುವವರ ಬಾಯ್ ಮುಚ್ಚ ಬನ್ನಿ' ಎನ್ನುವ ಹಾಡು ಚಳವಳಿಸಭೆಗಳ ಆರಂಭಕ್ಕೆ ಮೊದಲ ಹಾಡಾಯಿತು.

ಸಾಹುಕಾರ ಜಾನಕಿ, ನರಸಿಂಹರಾಜು, ಬಾಲಕೃಷ್ಣ ಅಭಿನಯಿಸಿದ್ದಾರೆ. 1964ರಲ್ಲಿ **ಅಮರಶಿಲ್ಪಿ ಜಕಣಾಚಾರಿ** ಚಿತ್ರ ಬಿಡುಗಡೆಯಾಗುವವರೆಗೆ ಕನ್ನಡ ವಾಕ್ಚಿತ್ರಗಳ ಪೈಕಿ ನಾಲ್ಕು ಚಿತ್ರಗಳಷ್ಟೇ ಭಾಗಶಃ ವರ್ಣದಲ್ಲಿದ್ದುವು. ವಿಕ್ರಂ ಪ್ರೊಡಕ್ಷನ್ಸ್ ಅವರು ತಯಾರಿಸಿದ **ಅಮರಶಿಲ್ಪಿ ಜಕಣಾಚಾರಿ** ಕನ್ನಡದ ಮೊದಲ ವರ್ಣಚಿತ್ರ. ವಾಕ್ಚಿತ್ರ ಆರಂಭವಾದ 30 ವರ್ಷಗಳ ನಂತರ ಕನ್ನಡ ಚಿತ್ರರಂಗದಲ್ಲಿ ಬಣ್ಣದ ಯುಗ ಆರಂಭವಾಯಿತು.

ಬಹುಭಾಷಾ ನಿರ್ಮಾಪಕ, ನಿರ್ದೇಶಕ, ಛಾಯಾಗ್ರಾಹಕ, ಸ್ಟುಡಿಯೋ ಮಾಲೀಕ ಬಿ. ಎಸ್. ರಂಗ 1964ರಲ್ಲಿ ಕನ್ನಡ ಚಿತ್ರರಂಗದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹ ದಾಖಲೆಯೊಂದನ್ನು ಮಾಡಿದರು. ಅದುವರೆಗೆ ಕಪ್ಪು ಬಿಳುಪು ಚಿತ್ರಗಳನ್ನೇ ನೋಡುತ್ತಿದ್ದ ಕನ್ನಡ ಪ್ರೇಕ್ಷಕರಿಗಾಗಿಯೇ ಅವರು ಬಣ್ಣದ ಲೋಕವನ್ನು ತೆರೆದರು. 1964ರಲ್ಲಿ ಅವರು ತಯಾರಿಸಿದ **ಅಮರ ಶಿಲ್ಪಿ ಜಕಣಾಚಾರಿ** ಕನ್ನಡ ಚಿತ್ರರಂಗದ ಮೊದಲ ಬಣ್ಣದ ಚಿತ್ರ ಎಂಬ ದಾಖಲೆ ನಿರ್ಮಿಸಿತು. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಒಟ್ಟಿಗೆ ತಯಾರಿಸಲಾದ ಈ ಚಿತ್ರವನ್ನು ಅಂದಿನ ದಿನಗಳಲ್ಲಿ ಬಿ. ಎಸ್. ರಂಗ ಅವರು ಈಸ್ಟ್‌ಮನ್ ಕಲರ್‌ನಲ್ಲಿ ನಿರ್ಮಿಸಲು ನಿರ್ಧರಿಸಿದಾಗ ಅದು ಕನ್ನಡ ಚಿತ್ರರಂಗಕ್ಕೆ ಅಪರೂಪದ ವಿಷಯವಾಗಿತ್ತು. ಕಲ್ಯಾಣ್ ಕುಮಾರ್, ಬಿ.ಸರೋಜಾದೇವಿ, ಉದಯಕುಮಾರ್, ನರಸಿಂಹರಾಜು, ಜಿ. ಸದಾಶಿವಯ್ಯ ಅವರುಗಳು ಅಭಿನಯಿಸಿದ್ದ ಈ ಚಿತ್ರ ತಯಾರಿಕೆಗೆ ಅಂದಿನ ದಿನಗಳಲ್ಲಿ 11 ಲಕ್ಷ ರೂ. ವೆಚ್ಚವಾಗಿತ್ತು, ಎಂದು ಬಿ. ಎಸ್. ರಂಗ ಹೇಳುತ್ತಾರೆ.







"ವಿಚಿತ್ರ ಪ್ರಪಂಚ" ಚಿತ್ರಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ದ. ರಾ. ಬೇಂದ್ರೆ ಸಾಹಿತ್ಯ ರಚಿಸಿರುವುದೊಂದು ವೈಶಿಷ್ಟ್ಯ.

"ಚಂದ್ರಹಾಸ"ದಲ್ಲಿ ಎಂ. ಲೀಲಾವತಿ.

"ಭಕ್ತ ಪ್ರಹ್ಲಾದ" ಚಿತ್ರ 1958ರಲ್ಲಿ ಮತ್ತೆ ಚಿತ್ರವಾಯಿತು. ಸುಬ್ಬಯ್ಯನಾಯ್ಡು ಅವರ ಎಸ್. ಎಸ್. ಎಸ್. ನಾಟಕ ಮಂಡಳಿ ಲಾಂಛನದಲ್ಲಿ ತಯಾರಾದ ಈ ಚಿತ್ರದಲ್ಲಿ ಇಂದು ಪೋಷಕನಟ ಆಗಿರುವ ಲೋಕೇಶ್ ಬಾಲನಟನಾಗಿ ಕಾಣಿಸಿಕೊಂಡಿದ್ದಾರೆ. ಇದು ನಟಿ ಲೀಲಾವತಿಯವರ ಪ್ರಥಮ ಚಿತ್ರ. ಈ ಚಿತ್ರದಲ್ಲಿ ಲೀಲಾವತಿ ರೇಖಾ ಎನ್ನುವ ಸಖಿಯ ಪಾತ್ರ ವಹಿಸಿದ್ದಾರೆ. ನರಸಿಂಹರಾಜು ವಿದುರು ಹಾಸ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.






ಎಂ.ಆರ್. ವಿಠಲ್ ಸಾಮಾಜಿಕ ಚಿತ್ರಗಳ ನಿರ್ದೇಶನಕ್ಕೆ ಹೆಸರು. ಅವರು ನಿರ್ದೇಶಿಸಿದ "ನಂದಾದೀಪ"ದ ಒಂದು ದೃಶ್ಯ.



ಸುಂದರರಾವ್ ನಾಡಕರ್ಣಿ ನಿರ್ದೇಶಿಸಿದ "ಸಂತ ತುಕಾರಾಂ" ಅತ್ಯುತ್ತಮ ಸಾಹಿತ್ಯ ಹಾಗೂ ರಾಜ್‌ಕುಮಾರ್ ಅವರ ಗಂಭೀರ ಅಭಿನಯದಿಂದ ರಾಷ್ಟ್ರ ಪ್ರಶಸ್ತಿ ಗಳಿಸಿತು. ಜಿ. ಉದಯಶಂಕರ್ ಸಾಹಿತ್ಯ ರಚನೆ ಈ ಚಿತ್ರದ ಮೂಲಕ ಆರಂಭವಾಯಿತು.




"ಅಬ್ಬಾ! ಆ ಹುಡುಗಿ!!" (1959) ಚಿತ್ರದ ತಂಡ. ನಿರ್ದೇಶಕ ಎಚ್. ಎಲ್. ಎನ್. ಸಿಂಹ, ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ನರಸಿಂಹರಾಜು, ರಾಜ್‌ಕುಮಾರ್, ನಟಿ ರಾಜಾಶಂಕರ್, ಪಂಢರಿಬಾಯಿ, ಹೀಗೆ ಚಿತ್ರದ ಎಲ್ಲ ನಟನಟಿಯರೂ ಇದ್ದಾರೆ.

ಅನಂತರವೂ ಬಹಳದಿನ ದುಬಾರಿ ವೆಚ್ಚ ಎಂಬ ಕಾರಣದಿಂದ ತಕ್ಷಣವೇ ಯಾವ ನಿರ್ಮಾಪಕರೂ ಬಣ್ಣದ ಚಿತ್ರ ನಿರ್ಮಾಣಕ್ಕೆ ಇಳಿಯಲಿಲ್ಲ. ಐದು ವರ್ಷಗಳ ನಂತರ ರಂಗಾ ಅವರೇ ಉದಯಕುಮಾರ್ ನಾಯಕರಾಗಿರುವ **ಭಲೇ ಬಸವ** ಚಿತ್ರವನ್ನು ವರ್ಣದಲ್ಲಿ ನಿರ್ಮಿಸಿದರು. 1970ರಲ್ಲಿ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯ ಬಿ. ಆರ್. ಪಂತುಲು **ಶ್ರೀಕೃಷ್ಣದೇವರಾಯ** ಐತಿಹಾಸಿಕ ಚಿತ್ರವನ್ನು ಬಣ್ಣದಲ್ಲಿ ಅದ್ದೂರಿಯಾಗಿ ನಿರ್ಮಿಸಿದರು.

## ವಿಕ್ರಂ ಪ್ರೊಡಕ್ಷನ್ಸ್

ಕನ್ನಡ ಚಿತ್ರರಂಗದಲ್ಲಿ ಪ್ರಥಮ ವರ್ಣಚಿತ್ರ ತಯಾರಿಸಿದ ದಾಖಲೆ ನಿರ್ಮಿಸಿರುವ ನಿರ್ಮಾಪಕ ಬಿ. ಎಸ್. ರಂಗಾ ಹಾಗೂ ಅವರ ನಿರ್ಮಾಣ ಸಂಸ್ಥೆ ವಿಕ್ರಂ ಪ್ರೊಡಕ್ಷನ್ಸ್ ಚಿತ್ರರಂಗದ ಇತಿಹಾಸದಲ್ಲಿ ಮರೆಯಲಾಗದ ಹೆಸರು. ಕಾಲೇಜು ಓದು ಬಿಟ್ಟ ರಂಗಾ ಅವರು ಬೆಂಗಳೂರಿನಲ್ಲಿ ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ ಹುಟ್ಟು ಹಾಕಿ, ಅದರ ಕಾರ್ಯದರ್ಶಿಗಳಾಗಿದ್ದರು.

ಛಾಯಾಗ್ರಾಹಕರಾಗಿದ್ದ ಬಿ. ಎಸ್. ರಂಗಾ, ವಾಕ್ಚಿತ್ರಗಳ ಭರಾಟೆ ಆರಂಭವಾದ ನಂತರ ಮುಂಬೈಗೆ ತೆರಳಿ, ಅಲ್ಲಿದ್ದ ಆಟೊಮ್ಯಾಟಿಕ್ ಪ್ರೋಸೆಸಿಂಗ್ ಲ್ಯಾಬೋರೇಟರಿಯಲ್ಲಿ ಕೆಲಸಕ್ಕೆ ಸೇರಿದರು. ಲ್ಯಾಬ್‌ನ ಸ್ಥಾಪಕ ಕೃಷ್ಣಗೋಪಾಲರ ಸಹಾಯಕರಾಗಿ 17 ಹಿಂದಿ ಚಿತ್ರಗಳ ನಿರ್ಮಾಣ ಕಾರ್ಯದಲ್ಲಿ ದುಡಿದು,

ಅನುಭವ ಗಳಿಸಿದರು. ನಂತರದ ದಿನಗಳಲ್ಲಿ ಮದರಾಸಿನ ಜೆಮಿನಿ ಸ್ಟುಡಿಯೋದಲ್ಲಿ ಸ್ವತಂತ್ರ ಛಾಯಾಗ್ರಾಹಕರಾಗಿ ಸೇರಿದರು. ಅವರು ಛಾಯಾಗ್ರಹಣ ಮಾಡಿದ ಮೊದಲ ಚಿತ್ರ **ಭಕ್ತ ನಾರದರ್**. ಜೆಮಿನಿ ಸಂಸ್ಥೆಯ ತಯಾರಿಕೆಯ ಹಲವಾರು ಚಿತ್ರಗಳಲ್ಲಿ ಛಾಯಾಗ್ರಾಹಕರಾಗಿ ಹೆಸರು ಪಡೆದ ರಂಗಾ, ಸ್ವಂತ ನಿರ್ಮಾಪಕನಾಗುವ ಬಯಕೆಯಿಂದ 1946ರಲ್ಲಿ ಸಂಸ್ಥೆಗೆ ರಾಜಿನಾಮ ನೀಡಿ ಹೊರಬಂದರು. "ವಿಕ್ರಂ ಪ್ರೊಡಕ್ಷನ್ಸ್" ಉದಯವಾಗಿದ್ದು ಹೀಗೆ. ಈ ಸಂಸ್ಥೆಯ ಮೂಲಕ ರಂಗಾ ನಿರ್ಮಿಸಿ, ನಿರ್ದೇಶಿಸಿದ ಮೊದಲ ಚಿತ್ರ ತಮಿಳು ಭಾಷೆಯ **ತುಲಸೀ ದಾಸ್** ಚಿತ್ರ ಹಣ ಗಳಿಸಲು ವಿಫಲವಾಯಿತು.



1947ರಲ್ಲಿ ಮದರಾಸಿಗೆ ಮತ್ತೆ ಮರಳಿದ ರಂಗಾ, ಛಾಯಾಗ್ರಾಹಕರಾಗಿಯೇ ಮುಂದುವರೆದು 25 ಚಿತ್ರಗಳಲ್ಲಿ ದುಡಿದರು. ಸ್ವಂತ ಲ್ಯಾಬ್ ಆರಂಭಿಸುವ ಆಲೋಚನೆ ಮಾಡಿ, 1950ರಲ್ಲಿ ಬೆಂಗಳೂರು ಬಳಿಯ ನಾಯಂಡಹಳ್ಳಿಯಲ್ಲಿ 'ವಿಕ್ರಂ ಸ್ಟುಡಿಯೋಸ್ ಅಂಡ್ ಲ್ಯಾಬ'ನ್ನು 1950ರಲ್ಲಿ ಆರಂಭಿಸಿದರು.

1956ರಲ್ಲೇ ಅವರು ಮದರಾಸಿನಲ್ಲಿ ವಿಕ್ರಂ ಸ್ಟುಡಿಯೋ ಆರಂಭಿಸಿದರು. ಹೊರರಾಜ್ಯದಲ್ಲಿ ಸ್ಟುಡಿಯೋ ಆರಂಭಿಸಿದ ಮೊದಲ ಕನ್ನಡಿಗ. ಈ ಸ್ಟುಡಿಯೋ ಮೂಲಕ ಅವರು ತಯಾರಿಸಿದ ಪ್ರಥಮ ಚಿತ್ರ **ಭಕ್ತ ಮಾರ್ಕಂಡೇಯ**. ಕನ್ನಡ, ತಮಿಳು ಮತ್ತು ತೆಲುಗು ಈ ಮೂರು ಭಾಷೆಗಳಲ್ಲಿ ತಯಾರಿಸಲಾದ ಈ ಚಿತ್ರವನ್ನು ಬಿ. ಎಸ್.ರಂಗ ಅವರೇ ನಿರ್ದೇಶಿಸಿದರು.

ಬೆಂಗಳೂರಿನ ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್ ಪ್ರದರ್ಶಿಸುತ್ತಿದ್ದ **ಭಕ್ತ ಮಾರ್ಕಂಡೇಯ** ನಾಟಕವನ್ನೇ ಚಲನಚಿತ್ರವನ್ನಾಗಿ ತಯಾರಿಸಲಾಯಿತು. ಆ ನಾಟಕದಲ್ಲಿ ಸನ್ಯಾಸಿಯ ಪಾತ್ರ ನಿರ್ವಹಿಸುತ್ತಿದ್ದ ಸಾಹಿತಿ ಜಿ. ಸದಾಶಿವಯ್ಯ, ಚಲನಚಿತ್ರದಲ್ಲೂ ಅದೇ ಪಾತ್ರ ವಹಿಸಿದರು. ಹೆಸರಾಂತ

*ಬಿ. ಎಸ್. ರಂಗಾ*




*ಕನ್ನಡ ಚಲನಚಿತ್ರಕ್ಕೆ ಬಣ್ಣದ ಸ್ಪರ್ಶ ನೀಡಿದ ಚಿತ್ರ. ಬಿ. ಎಸ್. ರಂಗಾ ನಿರ್ದೇಶನದ "ಅಮರಶಿಲ್ಪಿ ಜಕಣಾಚಾರಿ" ಕನ್ನಡದ ಪ್ರಪ್ರಥಮ ಬಣ್ಣದ ಚಿತ್ರ ಎಂಬ ದಾಖಲೆ ಗಳಿಸಿಕೊಂಡಿತು.*



ಜಕಣಾಚಾರಿ 1964

ನಟನಟಿಯರಾದ ವಿ. ನಾಗಯ್ಯ, ಪುಷ್ಪವಲ್ಲಿ, ನರಸಿಂಹರಾಜು, ಚಿ. ಸದಾಶಿವಯ್ಯ ಸುರಭಿ,ಬಾಲಸರಸ್ವತಿ, ಮಾ ಆನಂದ್, ಬೇಬಿ ಉಮಾ, ಆರ್. ನಾಗೇಂದ್ರರಾವ್, ಕಾಂತಾರಾವ್, ಸೂರ್ಯಕಲಾ, ರಮಾದೇವಿ ತಾರಾಗಣದಲ್ಲಿದ್ದಾರೆ. ಆದುವರೆಗೆ ಕನ್ನಡ ಚಿತ್ರೋದ್ಯಮದಲ್ಲಿ ಮಹಾತ್ಮ ಪಿಕ್ಚರ್ಸ್, ಗುಬ್ಬಿ ಫಿಲಂಸ್, ಪದ್ಮಿನಿ ಪಿಕ್ಚರ್ಸ್‌ಗಳು ಸತತ ಚಿತ್ರ ತಯಾರಿಕೆಯಲ್ಲಿ ನಿರತವಾಗಿದ್ದವು. **ಭಕ್ತ ಮಾರ್ಕಂಡೇಯ** ಮೂಲಕ ವಿಕ್ರಂ ಪ್ರೊಡಕ್ಷನ್ಸ್ ಕನ್ನಡ ಚಿತ್ರರಂಗದಲ್ಲಿ ಪ್ರಮುಖ ತಯಾರಿಕಾ ಸಂಸ್ಥೆಯಾಗಿ ಕಾಣಿಸಿಕೊಂಡಿತು.

1959ರಲ್ಲಿ ವಿಕ್ರಂ ಪ್ರೊಡಕ್ಷನ್ಸ್ ರವರು ಬಿ. ಎಸ್. ರಂಗ ನಿರ್ದೇಶನದಲ್ಲಿ **ಮಹಿಷಾಸುರ ಮರ್ದಿನಿ** ನಿರ್ಮಿಸಿದರು. ಸಮುದ್ರ ರಾಘವಾಚಾರ್ಯ ಮತ್ತು ಚಿ. ಸದಾಶಿವಯ್ಯ ಸೇರಿ ಸೃಷ್ಟಿಸಿದ ಈ ಪುರಾಣ ಕತೆಯಿರುವ ಚಿತ್ರದಲ್ಲಿ ರಾಜಕುಮಾರ್, ಉದಯಕುಮಾರ್,ಸಾಹುಕಾರ್ ಜಾನಕಿ, ಅಶ್ವತ್ಥ್, ನರಸಿಂಹರಾಜು, ಚಿ. ಸದಾಶಿವಯ್ಯ , ಸಂಧ್ಯಾ, ಗಣಪತಿಭಟ್, ಉದಯಶಂಕರ್, ಸೂರ್ಯ ಕುಮಾರ್, ರಾಜನಾಲ ನಟಿಸಿದ್ದಾರೆ. 1960ರಲ್ಲಿ ಈ ಸಂಸ್ಥೆಯ **ದಶಾವತಾರ** ಗಮನ ಸೆಳೆವ ಚಿತ್ರವೆನಿಸಿತು. ಜಿ. ವಿ. ಅಯ್ಯರ್, ನಿರ್ದೇಶಿಸಿದ ಈ ಚಿತ್ರದಲ್ಲಿ ರಾಜ್‌ಕುಮಾರ್, ಉದಯಕುಮಾರ್ ರಾಜಾಶಂಕರ್, ಲೀಲಾವತಿ, ರಾಜಶ್ರೀ, ಅಶ್ವತ್ಥ್, ನರಸಿಂಹರಾಜು ಅಭಿನಯಿಸಿದ್ದಾರೆ. ಎರಡೂ ಚಿತ್ರಗಳು ಜನಪ್ರಿಯತೆ ಗಳಿಸಿದವು. "ಪ್ರತಿಜ್ಞೆ" (1964). "ಮಹಾಸತಿ ಅನಸೂಯ" (1965), "ಪಾರ್ವತಿ ಕಲ್ಯಾಣ" (1967), "ಒಡಹುಟ್ಟಿದವರು" (1969), ಮಿಸ್ಟರ್ ರಾಜ್ ಕುಮಾರ್ (1970), ಸಿಡಿಲ ಮರಿ (1971), ಮಣ್ಣಿನ ಮಗಳು (1974), ಸುಳಿ (1978) ವಿಕ್ರಂ ಪ್ರೊಡಕ್ಷನ್ಸ್ ತಯಾರಿಕೆಗಳು.



1957ರಲ್ಲಿ ಮೊಟ್ಟ ಮೊದಲಬಾರಿಗೆ ರಾಜಕುಮಾರ್ ಸಾಮಾಜಿಕ ಚಿತ್ರ **ರಾಯರ ಸೊಸೆ**




ಭಾಗಶಃ ವರ್ಣದ "ವೀರಕೇಸರಿ"

ಮಹಾತ್ಮ ಪಿಕ್ಚರ್ಸ್ ಸಂಸ್ಥೆ ಉದಯಕ್ಕೆ ಶಂಕರ್ ಸಿಂಗ್ ಜತೆ ಕೈಗೂಡಿಸಿದ್ದ ಬಿ. ವಿಠಲಾಚಾರ್ಯ. ಅನಂತರದ ಕಾಲಾವಧಿಯಲ್ಲಿ ತಮ್ಮದೇ ಚಿತ್ರ ಸಂಸ್ಥೆ ಆರಂಭಿಸಿ ಮತ್ತಷ್ಟು ಚಿತ್ರಗಳನ್ನು ನಿರ್ಮಿಸಿದ ಕೀರ್ತಿ ಇವರದು.



ಪಂಢರಿಬಾಯಿ: ಪರಿವರ್ತನ ಯುಗದ ಮಹಾತಾರೆ. 1943ರ "ವಾಣಿ" ಚಿತ್ರದಿಂದ ಅಭಿನಯ ವೃತ್ತಿ ಆರಂಭಿಸಿದ ಇವರು ಸ್ವಂತ ನಿರ್ಮಾಣ ಸಂಸ್ಥೆಯ ಮೂಲಕ ಹಲವಾರು ಉತ್ತಮ ಚಿತ್ರಗಳ ನಿರ್ಮಾಪಕಿಯೂ ಆಗಿದ್ದಾರೆ. ಸ್ವಂತ ನಿರ್ಮಾಣ ತೇಜಸ್ವಿನಿಯಲ್ಲಿ ಒಂದು ದೃಶ್ಯ.

ಯಲ್ಲಿ ಅಭಿನಯಿಸಿದರು. ಇದೊಂದು ಉಲ್ಲೇಖಾರ್ಹ ಸಂಗತಿ. ಪಾಂಡುರಂಗ ಪ್ರೊಡಕ್ಷನ್ಸ್ ಲಾಂಛನದ ಈ ಚಿತ್ರವನ್ನು ಆರ್. ರಾಮಮೂರ್ತಿ, ಟಿ. ಆರ್. ಎಸ್. ಗೋಪು ನಿರ್ದೇಶಿಸಿದ್ದಾರೆ. ಅದುವರೆಗೆ ರಾಜ್‌ಕುಮಾರ್ ಐದು ಚಿತ್ರಗಳಲ್ಲಿ ಅಭಿನಯಿಸಿದ್ದರೂ ಸಾಮಾಜಿಕ ಚಿತ್ರದಲ್ಲಿ ಅವಕಾಶ ದೊರಕಿರಲಿಲ್ಲ. ಕೆಂಪರಾಜ್ ಅರಸು ಅಭಿನಯದ **ನಳ ದಮಯಂತಿ,** ಆರ್. ನಾಗೇಂದ್ರರಾವ್ ಅಭಿನಯದ **ಮಹಿರಾವಣ ರತ್ನಗಿರಿ** ರಹಸ್ಯ ತೆರೆಕಂಡವು. 1957-58ರಲ್ಲಿ ಬಿಡುಗಡೆಯಾದ ಚಿತ್ರಗಳು ಕನ್ನಡಿಗರನ್ನು





ಚಿತ್ರಮಂದಿರಕ್ಕೆ ಸೆಳೆಯುವ ನಿಟ್ಟಿನಲ್ಲಿ ಯಶಸ್ವಿಯಾದವು. ನಾಗೇಂದ್ರರಾಯರ **ಪ್ರೇಮದ ಪುತ್ರಿ** ಪಂತುಲು ಅವರ **ಸ್ಕೂಲ್ ಮಾಸ್ಟರ್** ಚಿತ್ರಗಳು ಕುಟುಂಬ ಸಹಿತ ಜನ ಚಿತ್ರಮಂದಿರಕ್ಕೆ ಬರುವಂತೆ ಮಾಡಿ ಕನ್ನಡ ಚಿತ್ರಗಳ ಕುಸಿತವನ್ನು ತಡೆದವು ಎನ್ನಬಹುದು. 1958ರಲ್ಲಿ ಬಿಡುಗಡೆಯಾದ **ಸ್ಕೂಲ್ ಮಾಸ್ಟರ್** ದಾಖಲೆ ನಿರ್ಮಿಸಿದೆ. ಕು. ರಾ. ಸೀತಾರಾಮಶಾಸ್ತ್ರಿಗಳು ಸಾಹಿತ್ಯ ಬರೆದು ನಿರ್ದೇಶಿಸಿದ **ಅಣ್ಣತಂಗಿ** ಯಲ್ಲಿ ರಾಜಕುಮಾರ್, ಬಿ.ಸರೋಜಾದೇವಿಯವರು ಗ್ರಾಮೀಣ ಪ್ರದೇಶದ ಭಾಷಾ ವೈಖರಿಗೆ ನೀಡಿರುವ ಮೆರಗು ಮಸುಕಾಗಿಲ್ಲ. ಎಸ್. ಎಸ್. ಎಸ್. ನಾಟಕ ಮಂಡಳಿಯ ಎಂ. ಎಸ್. ಸುಬ್ಬಯ್ಯನಾಯ್ಡು **ಭಕ್ತ ಪ್ರಹ್ಲಾದ** ನಿರ್ಮಿಸಿದ್ದಾರೆ. ಅವರೊಂದಿಗೆ ಎಚ್. ಎಸ್. ಕೃಷ್ಣಸ್ವಾಮಿ ಅವರೂ ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಸುಬ್ಬಯ್ಯನಾಯ್ಡು, ಉದಯಕುಮಾರ್, ಕೆ.ಎಸ್. ಅಶ್ವತ್ಥ್, ಮಾಸ್ಟರ್ ಲೋಕೇಶ್,

ಇಂದುಶೇಖರ್ ಆರಂಭ ದಶಕದ ನಾಯಕನಟ, ಹರಿಣಿ ಇಂದುಶೇಖರ್ ಜೋಡಿಯ "ಸೌಭಾಗ್ಯಲಕ್ಷ್ಮಿ", "ಮಂಗಳಗೌರಿ" ಚಿತ್ರಗಳು ಜನಪ್ರಿಯ.

ಕನ್ನಡ ಚಿತ್ರರಂಗ ಕಂಡ ಮತ್ತೊಬ್ಬ ಪ್ರತಿಭಾವಂತ ಕಲಾವಿದ ಕೆ. ಎಸ್. ಅಶ್ವತ್ಥ್

ಲೀಲಾವತಿ, ಲಕ್ಷ್ಮೀಬಾಯಿ ಈ ಚಿತ್ರದಲ್ಲಿ ಪಾತ್ರ ವಹಿಸಿದ್ದಾರೆ. ಈಗ ಪೋಷಕ ಪಾತ್ರಗಳಲ್ಲಿ ಅಭಿನಯಿಸುತ್ತಿರುವ ಸುಬ್ಬಯ್ಯನಾಯ್ಡು ಅವರ ಪುತ್ರ ಲೋಕೇಶ್ ಈ ಚಿತ್ರದಲ್ಲಿ ಪ್ರಹ್ಲಾದನಾಗಿ ಕಾಣಿಸಿಕೊಂಡಿದ್ದಾರೆ. ಈ ರೀತಿ ತಂದೆ ಹಿರಣ್ಯಕಶಿಪುವಾಗಿ, ಮಗ ಪ್ರಹ್ಲಾದನಾಗಿ ನಟಿಸುವ ಪರಂಪರೆಯನ್ನು ಮತ್ತೆ 1983ರಲ್ಲಿ ಕಾಣಬಹುದು. ರಾಜಕುಮಾರ್ ನಾಯಕತ್ವದಲ್ಲಿ ತಯಾರಾದ **ಭಕ್ತ ಪ್ರಹ್ಲಾದ**ದಲ್ಲಿ ರಾಜಕುಮಾರ್ ಹಿರಣ್ಯಕಶಿಪುವಾಗಿ ಅವರ ಪುತ್ರ ಮಾ.ಲೋಹಿತ್ (ಈಗ ಪುನೀತ್) ಪ್ರಹ್ಲಾದನಾಗಿ ಅಭಿನಯಿಸಿದ್ದಾರೆ. 1942ರಲ್ಲೂ **ಪ್ರಹ್ಲಾದ** ಎಂಬ ಚಿತ್ರವೊಂದು ತಯಾರಾಗಿದ್ದು ಕೆ.ಸುಬ್ರಹ್ಮಣ್ಯಂ ನಿರ್ದೇಶಿಸಿದ್ದಾರೆ. ಬಾಲನಟಿ ಚಂದ್ರಮ್ಮ ಪ್ರಹ್ಲಾದ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಎಂ.ವಿ. ರಾಜಮ್ಮ ಅಚ್ಯುತರಾವ್, ಸೇಲಂ ಶ್ರೀನಿವಾಸ ಮೂರ್ತಿ ಕೂಡ ಅಭಿನಯಿಸಿದ್ದು, ಬೆಳ್ಳಾವೆ ನರಹರಿಶಾಸ್ತ್ರಿಗಳು ಹಾಡು ಹಾಗೂ ಸಂಭಾಷಣೆ ರಚಿಸಿದ್ದಾರೆ.

1954ರಿಂದಲೂ ಕನ್ನಡ ಚಿತ್ರರಂಗಕ್ಕೆ ಹೊಸ ಹೊಸ ಪ್ರತಿಭೆಗಳ ಸೇರ್ಪಡೆಯಾಗುತ್ತಲೇ ಇದೆ. 1955ರಲ್ಲಿ ಬಿಡುಗಡೆಯಾದ ಬಿ. ಆರ್. ಕೃಷ್ಣಮೂರ್ತಿ ಅವರ **ಶ್ರೀರಾಮ ಪೂಜಾ** ಬಿ. ಸರೋಜಾದೇವಿ ಅವರು ಕಾಣಿಸಿಕೊಂಡ ಎರಡನೆಯ ಚಿತ್ರ. ವಿಜಯಭಾಸ್ಕರ್ ಅವರನ್ನು ತೆರೆಗೆ ಪರಿಚಯಿಸಿದ ಚಿತ್ರ. ಅಲ್ಲದೆ ನಿರ್ದೇಶಕ ಎನ್. ಲಕ್ಷ್ಮೀನಾರಾಯಣ್ ಹಾಗೂ ಗೀತಪ್ರಿಯ ಅವರುಗಳು ಕೂಡ ಈ ಚಿತ್ರದ ಮೂಲಕವೇ ಚಿತ್ರರಂಗ ಪ್ರವೇಶಿಸಿದರು. 1956ರಲ್ಲಿ ತೆರೆಕಂಡ ಕಲ್ಯಾಣ್ ಕುಮಾರ್ ಅಭಿನಯದ ಎರಡನೆಯ ಚಿತ್ರ **ಭಾಗ್ಯಚಕ್ರ**ಕ್ಕೆ ವಿಜಯಭಾಸ್ಕರ್ ಕತೆ ಮತ್ತು ಚಿತ್ರಕಥೆ ಬರೆದಿದ್ದಾರೆ. ಸಂಗೀತ ನಿರ್ದೇಶನವೂ ಅವರದೇ. ಗೀತಪ್ರಿಯ ಈ ಚಿತ್ರಕ್ಕೆ ಮೊದಲ ಬಾರಿಗೆ ಸಂಭಾಷಣೆ ಬರೆದರು. "ಶ್ರೀ ರಾಮಪೂಜಾ"ದಲ್ಲಿ ಒಂದೇ ಒಂದು ಹಾಡನ್ನೂ ಅವರು ಬರೆದಿದ್ದರು. **ಭಾಗ್ಯಚಕ್ರ** ಮೊದಲ ಛಾಯಾಚಿತ್ರ ನಿರ್ದೇಶಿಸಿದ ವೈ. ವಿ. ರಾವ್ ಅವರ ನಿರ್ದೇಶನದ ಎರಡನೆಯ ಚಿತ್ರ. 1956ರ **ಓಹಿಲೇಶ್ವರ** ಮೂಲಕ ಸಂಗೀತ ನಿರ್ದೇಶಕ ಜಿ. ಕೆ. ವೆಂಕಟೇಶ್ ಅವರು ಚಿತ್ರ ಜಗತ್ ಪ್ರವೇಶಿಸಿದರು. ಎಚ್. ಎಲ್. ಎನ್. ಸಿಂಹ ನಿರ್ದೇಶನದ ***ಅಬ್ಬಾ! ಆ ಹುಡುಗಿ!*** (1959) ಚಿತ್ರದ ಮೂಲಕ ರಾಜಾಶಂಕರ್, **ರತ್ನಮಂಜರಿ** (1962) ಮೂಲಕ ಎಂ. ಪಿ. ಶಂಕರ್, **ನಾಂದಿ** (1964) ಚಿತ್ರದ ಮೂಲಕ ಖಳ ಹಾಗೂ ಹಾಸ್ಯ ಪಾತ್ರಗಳಲ್ಲಿ ಮಿಂಚಿದ ದಿನೇಶ್ ಚಿತ್ರರಂಗಕ್ಕೆ ಬಂದರು. **ಭಕ್ತ ಪ್ರಹ್ಲಾದ** (1958) ಮೂಲಕ ಲೀಲಾವತಿ ಚಿತ್ರರಂಗ ಪ್ರವೇಶಿಸಿದರು. **ರತ್ನಮಂಜರಿ** (1962) ಚಿತ್ರದಲ್ಲಿ ಹಾಡುವ ಮೂಲಕ ಎಸ್. ಜಾನಕಿ ಕನ್ನಡ ಚಿತ್ರಗಳ ಗಾಯಕಿಯಾದರು. ಪಿ. ಆರ್. ಕೌಂಡಿನ್ಯ ನಿರ್ದೇಶನದ **ಶಿವರಾತ್ರಿ ಮಹಾತ್ಮೆ** (1964)ಗಾಗಿ ಚಿ. ಉದಯಶಂಕರ್ ಮೊದಲ



*ಗುಬ್ಬಿ ಕಂಪನಿಯ ಜೀವನ ನಾಟಕ ಚಿತ್ರದಲ್ಲಿ ಕೆಂಪರಾಜ್ ಅರಸು ಹಾಗೂ ಬಿ. ಜಯಮ್ಮ*

ಚಿತ್ರಗೀತೆ ಬರೆದರು. **ದೇವ ಕನ್ನಿಕ** (1954) ಚಿತ್ರದ ಮೂಲಕ ಸಾಹುಕಾರ್ ಜಾನಕಿ ರಜತ ಪರದೆಯ ತಾರೆಯಾದರು.

1955ರಲ್ಲಿ ನಡೆದ ಒಂದು ಬೆಳವಣಿಗೆ ಚಿತ್ರರಂಗದಲ್ಲಿ ಅಷ್ಟೇನೂ ಹಿತಕರವಾಗಿರಲಿಲ್ಲ. "ಶಿವಶರಣೆ ನಂಬಿಯಕ್ಕ" ನನ್ನು ಕುರಿತಂತೆ ಎರಡು ಚಿತ್ರಗಳು ಈ ವರ್ಷ ಪೈಪೋಟಿಯಲ್ಲಿ ತಯಾರಾದವು.ಮಹಾತ್ಮಪಿಕ್ಚರ್ಸ್ ಲಾಂಛನದಲ್ಲಿ ಡಿ. ಶಂಕರ್ ಸಿಂಗ್ ಅವರು **ಶಿವಶರಣೆ ನಂಬಿಯಕ್ಕ** ಚಿತ್ರವನ್ನು ನಿರ್ದೇಶಿಸಿ ತಯಾರಿಸಿದರು. ಅಶ್ವತ್ಥ್, ಪ್ರತಿಮಾದೇವಿ, ಬಾಲಕೃಷ್ಣ, ಬಾಬುರಾಜೇಂದ್ರಸಿಂಗ್ ತಾರಾಗಣದಲ್ಲಿದ್ದರು. ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ಬಿ. ಆರ್. ಪಂತುಲು ಕೂಡಾ ಇದೇ ವರ್ಷ **ನಂಬೆಕ್ಕ** ಚಿತ್ರ ತಯಾರಿಸಿದರು. ಪ.



ಬಿ. ಆರ್. ಪಂತುಲು ನಿರ್ದೇಶನದ 'ಕಿತ್ತೂರು ಚೆನ್ನಮ್ಮ', ಬಿ. ಸರೋಜಾದೇವಿ ಅವರ ಉತ್ತಮ ಅಭಿನಯದಿಂದ ಜನಪ್ರಿಯ ಚಾರಿತ್ರಿಕ ಚಿತ್ರವೆನಿಸಿದೆ.

ನೀಲಕಂಠನ್ ನಿರ್ದೇಶನದ ಈ ಚಿತ್ರದಲ್ಲಿ ಎಂ. ವಿ.ರಾಜಮ್ಮ, ಬಿ. ಆರ್. ಪಂತುಲು,ರಾಜಸುಲೋಚನ ಅವರುಗಳು ಅಭಿನಯಿಸಿದ್ದಾರೆ.

**ಕಿತ್ತೂರು ಚೆನ್ನಮ್ಮ** (1961), **ವಿಜಯನಗರದ ವೀರಪುತ್ರ** (1961), **ವೀರಸಂಕಲ್ಪ** (1964) ಐತಿಹಾಸಿಕ ಚಿತ್ರಗಳಿಗೆ **ರಣಧೀರ ಕಂಠೀರವದ** ಯಶಸ್ಸು ಪ್ರೇರಣೆಯಾದಂತೆ ಕಾಣುತ್ತದೆ. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ಏನು ಎಂಬುದನ್ನು ನಿರೂಪಿಸುವ ಪದ್ಮಿನಿ ಪಿಕ್ಚರ್ಸ್‌ರವರ "ಕಿತ್ತೂರು ಚೆನ್ನಮ್ಮ" ರಾಷ್ಟ್ರೀಯ ಪ್ರಶಸ್ತಿ ಪಡೆಯಿತು. ಈ ಚಿತ್ರದ ಮೂಲಕ ರಾಜ್‌ಕುಮಾರ್ ಮೊದಲಬಾರಿಗೆ ಪದ್ಮಿನಿ ಚಿತ್ರ ಸಂಸ್ಥೆ ಪ್ರವೇಶಿಸಿದರು. ನರಸಿಂಹರಾಜು, ಬಾಲಕೃಷ್ಣ, ಚಿಂದೋಡಿಲೀಲಾ, ರಮಾದೇವಿ, ಬಿ. ಹನುಮಂತಾಚಾರ್, ಎಚ್. ಟಿ. ಅರಸ್, ಅಶ್ವತ್ಥ್, ರಾಜಾಶಂಕರ್, ವೀರಪ್ಪ ಚಿಂದೋಡಿ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರಕಥೆ ಸಂಭಾಷಣೆ, ಹಾಡುಗಳು ಜಿ. ವಿ. ಅಯ್ಯರ್ ಅವರದು. ಸಂಗೀತ ಟಿ. ಜಿ. ಲಿಂಗಪ್ಪ, ನಿರ್ದೇಶನ ಬಿ ಆರ್. ಪಂತುಲು. ಉತ್ತರಕರ್ನಾಟಕದ ಕಡೆಯ ಸಂಭಾಷಣೆಯನ್ನು ಈ ಚಿತ್ರಕ್ಕಾಗಿ ಎಚ್. ಎನ್. ಹೂಗಾರ್ ರಚಿಸಿದ್ದಾರೆ.

## ಬಿ. ವಿಠಲಾಚಾರ್ಯ

ಬಿ. ವಿಠಲಾಚಾರ್ಯ ಅವರದು ಕನ್ನಡ ಚಲನಚಿತ್ರರಂಗದ ಬೆಳವಣಿಗೆಯ ಹಾದಿಯಲ್ಲಿ ಮಹತ್ವದ ಸಾಧನೆ. ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ವಾಸವಾಗಿದ್ದ ಪದ್ಮನಾಭಾಚಾರ್ಯ ಹಾಗೂ ಸೀತಮ್ಮ ಅವರ ಪುತ್ರರಾದ ವಿಠಲಾಚಾರ್ಯರು ಹೋಟೇಲ್ ಉದ್ಯಮದಲ್ಲಿದ್ದವರು. ಆ ಉದ್ಯಮದಲ್ಲಿ ಹಣ

ಸಂಪಾದಿಸಿ ಅರಸೀಕೆರೆಗೆ ಹಿಂತಿರುಗಿದರು. ಡಿ. ಶಂಕರ್ ಸಿಂಗ್ ಅವರ ಜತೆ ಸೇರಿ ಟೂರಿಂಗ್ ಟಾಕೀಸ್ ಆರಂಭಿಸಿದರು.

"ಕೃಷ್ಣಲೀಲಾ" ಚಿತ್ರ ತಯಾರಿಕೆಯ ಸಮಯದಲ್ಲಿ ಮೈಸೂರಿಗೆ ಬಂದ ವಿಠಲಾಚಾರ್ಯ ಅವರು ಮಹಾತ್ಮ ಪಿಕ್ಚರ್ಸ್ ಸಂಸ್ಥಾಪಕರಲ್ಲಿ ಒಬ್ಬರಾದರು. ಮಹಾತ್ಮ ಪಿಕ್ಚರ್ಸ್‌ನವರು 1952ರಲ್ಲಿ ತಯಾರಿಸಿದ ಸಂಸ್ಥೆಯ ಐದನೆಯ ಚಿತ್ರ **ಶ್ರೀನಿವಾಸ ಕಲ್ಯಾಣ**ದ ನಿರ್ದೇಶಕರುಗಳಲ್ಲಿ ಒಬ್ಬರಾದರು. ಅದೇ ಸಂಸ್ಥೆಯ ಎಂಟನೆಯ ತಯಾರಿಕೆ **ಸೌಭಾಗ್ಯಲಕ್ಷ್ಮೀ** (1953) ಚಿತ್ರಕ್ಕೆ ಪೂರ್ಣ ಪ್ರಮಾಣದ ನಿರ್ದೇಶಕರಾದರು. 1953ರಲ್ಲೇ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯಿಂದ ಬೇರ್ಪಟ್ಟು ತಮ್ಮದೇ ಆದ ವಿಠಲ್ ಪ್ರೊಡಕ್ಷನ್ಸ್ ಸಂಸ್ಥೆ ಆರಂಭಿಸಿದರು. ಈ ಲಾಂಛನದಲ್ಲಿ ತಯಾರಾದ ಮೊದಲ ಚಿತ್ರವೇ **ಕನ್ಯಾದಾನ** (1954). "ಹೆಣ್ಣಿಗೆ ಗುಣ ಮುಖ್ಯ ಬಣ್ಣವಲ್ಲ" ಎಂಬ ತತ್ತ್ವದ ಆಧಾರದ ಮೇಲೆ ತಯಾರಿಸಿದ ಈ ಸಾಮಾಜಿಕ ಚಿತ್ರದ ಮೂಲಕ ಭಾರೀ ಜನಪ್ರಿಯತೆ ಗಳಿಸಿದ ಕಲಾವಿದರೆಂದರೆ ದಳ್ಳಾಳಿ ಸೀತಾರಾಮಯ್ಯನ ಪಾತ್ರ ವಹಿಸಿದ್ದ



ಬಾಲಕೃಷ್ಣ ಹಾಗೂ ಕಪ್ಪು ಹುಡುಗಿ ಪದ್ಮಳ ಪಾತ್ರ ವಹಿಸಿದ್ದ ಹರಿಣಿ. ಚಿತ್ರದ ಇತರ ಪಾತ್ರವರ್ಗದಲ್ಲಿ ಇಂದುಶೇಖರ್, ಮೇಕಪ್ ಸುಬ್ಬಣ್ಣ, ಈಶ್ವರಪ್ಪ, ಜಯಶ್ರೀ, ರೇವತಿ, ಸರೋಜಮ್ಮ ಮೊದಲಾದವರಿದ್ದರು. ಚಿತ್ರಕ್ಕೆ ಸಂಭಾಷಣೆ ಮತ್ತು ಗೀತೆಗಳ ರಚನೆಯನ್ನು ಗೌತಮ ಎನ್ನುವವರು ಮಾಡಿದ್ದರು. 1953ರಲ್ಲಿ ಬಿ. ವಿಠಲಾಚಾರ್ಯ ಅವರು ನಿರ್ದೇಶಿಸಿದ **ಸೌಭಾಗ್ಯಲಕ್ಷ್ಮಿ** ಚಿತ್ರದ ಮೂಲಕ ರಾಜನ್-ನಾಗೇಂದ್ರ ಪೂರ್ಣ ಪ್ರಮಾಣದ ಸಂಗೀತ ನಿರ್ದೇಶಕರಾದರು. **ಕನ್ಯಾದಾನ** ಚಿತ್ರದ ಹಾಡುಗಳನ್ನು ಬರೆದಿರುವ ಹುಣಸೂರು ಕೃಷ್ಣಮೂರ್ತಿಗಳು ಆ ಚಿತ್ರದಲ್ಲಿ ಹಾಡೊಂದನ್ನು ಹಾಡಿ ಹಿನ್ನೆಲೆಗಾಯಕರೂ ಆದರು.

1954ರಲ್ಲೇ ವಿಠಲ್ ಪ್ರೊಡಕ್ಷನ್ಸ್ ಲಾಂಛನದಲ್ಲಿಯೇ **ರಾಜಲಕ್ಷ್ಮೀ** ಎಂಬ ಚಿತ್ರ ತೆರೆಕಂಡಿತು. ಮಾಯ, ತಂತ್ರ, ಮಂತ್ರಗಳ ಕತೆಯನ್ನು ಒಳಗೊಂಡ "ರಾಜಲಕ್ಷ್ಮಿ" ಯ ನಾಯಕ ಸಂಪತ್. ರೇವತಿ (ಕಲ್ಯಾಣ್ ಕುಮಾರ್) ನಾಯಕಿ. ಹುಣಸೂರು ಕೃಷ್ಣಮೂರ್ತಿ ಹಾಗೂ ಎಚ್. ಎಲ್. ನಾರಾಯಣರಾವ್ ಈ ಚಿತ್ರದ ಸಂಭಾಷಣೆ ಹಾಗೂ ಗೀತರಚನಕಾರರಾಗಿದ್ದರು. ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಈ ಚಿತ್ರ ತಯಾರಾಯಿತು. ಈ ಚಿತ್ರದಲ್ಲೇ ರೇವತಿಯ ಪರಿಚಯ ಚಿತ್ರ ರಂಗಕ್ಕೆ ಆಯಿತು. 1959ರಲ್ಲಿ **ಮನೆಗೆ ಬಂದ ಮಹಾಲಕ್ಷ್ಮಿ** ಚಿತ್ರದಲ್ಲಿ ನಟಿಸಿದ ಆ ಚಿತ್ರದಲ್ಲಿ ನಾಯಕರಾಗಿದ್ದ ನಟ ಕಲ್ಯಾಣ್ ಕುಮಾರ್ ಅವರನ್ನೇ ರೇವತಿ ವಿವಾಹವಾದರು. ವಿಠಲಾಚಾರ್ಯರು 1956ರಲ್ಲಿ **ಮುತ್ತೈದೆ ಭಾಗ್ಯ** ಚಿತ್ರ ನಿರ್ದೇಶಿಸಿದರು.

*"ಕನ್ಯಾದಾನ" (1954) ಬಿ. ವಿಠಲಾಚಾರ್ಯ ನಿರ್ದೇಶನದ ಈ ಚಿತ್ರ ಸಮಕಾಲೀನ ಸಾಮಾಜಿಕ ಸಮಸ್ಯೆಯನ್ನು ಹೊಂದಿತ್ತು. ಹರಿಣಿಯವರ ಪಾತ್ರ,ಹಾಸ್ಯನಟ ಹಾಗೂ ಖಳನಟ ಟಿ. ಎನ್. ಬಾಲಕೃಷ್ಣ ಅವರ ಪಾತ್ರವೂ ಜನ ಮೆಚ್ಚುಗೆ ಗಳಿಸಿತು.*

ಮೈನಾವತಿಯನ್ನು (ಪಂಢರಿಬಾಯಿ ಅವರ ಸಹೋದರಿ) ನಾಯಕಿಯಾಗಿ ತೆರೆಗೆ ಪರಿಚಯಿಸಿದ ಚಿತ್ರವಿದು. ಕಲ್ಯಾಣ್ ಕುಮಾರ್, ಹುಣಸೂರು ಕೃಷ್ಣಮೂರ್ತಿ, ಬಾಲಕೃಷ್ಣ, ಮಾಸ್ಟರ್ ಹಿರಣ್ಣಯ್ಯ, ರೇವತಿ, ಜಯಶ್ರೀ ಮೊದಲಾದವರು ಅಭಿನಯಿಸಿದ್ದ ಈ ಚಿತ್ರದಲ್ಲಿ ವಿದ್ಯಾವತಿಯಾದ ಸ್ವಾತಂತ್ರ್ಯಪ್ರಿಯ ತರುಣಿ, ತಂದೆ ತಾಯಿಗಳ ಅತಿ ಮುದ್ದಿನಿಂದ ಬೆಳೆದು ಗರ್ವಿಷ್ಟೆ ಆಗಿರುತ್ತಾಳೆ. ಆಕೆಯ ಮನ ಪರಿವರ್ತನೆ ಹೇಗಾಯಿತೆಂಬ ವಸ್ತುವಿದೆ. ಮೈನಾವತಿ ಈ ಚಿತ್ರದ ಆಕರ್ಷಣೆ. ಗೌತಮ ಈ ಚಿತ್ರಕ್ಕೆ ಗೀತೆ, ಸಂಭಾಷಣೆ ರಚಿಸಿದ್ದಾರೆ. ರಾಜನ್ ನಾಗೇಂದ್ರ ಸಂಗೀತ. 1958ರಲ್ಲಿ **ಮನೆ ತುಂಬಿದ ಹೆಣ್ಣು** ನಿರ್ಮಿಸಿದರು. "ಅತ್ತೆಗೊಂದು ಕಾಲ ಸೊಸೆಗೊಂದು ಕಾಲ" ಎಂಬ ಗಾದೆಯನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದ್ದ ಚಿತ್ರಕಥೆ-ಸಂಭಾಷಣೆ ಇಂದಿರಾತನಯ (ವಿ.ಆರ್. ಶ್ಯಾಮ್) ಅವರದು. ಚಿತ್ರದ ಗೀತೆಗಳನ್ನು ಸೋರಟ್ ಅಶ್ವತ್ಥ್ ಬರೆದಿದ್ದಾರೆ. "ಮನೆ ತುಂಬಿದ ಹೆಣ್ಣು" ಮಂಗಳೆಯಾಗಿ ಆದವಾನಿ ಲಕ್ಷ್ಮೀದೇವಿ ಪಾತ್ರ ವಹಿಸಿದ್ದಾರೆ. ಉದಯಕುಮಾರ್, ಲಲಿತಾರಾವ್, ಜಯಶ್ರೀ, ರಮಾದೇವಿ, ಎಚ್. ಆರ್. ಶಾಸ್ತ್ರಿ, ನರಸಿಂಹರಾಜು, ಬಾಲಕೃಷ್ಣ ಇತರ ಪಾತ್ರವರ್ಗದಲ್ಲಿದ್ದಾರೆ.

**ಮನೆ ತುಂಬಿದ ಹೆಣ್ಣು** ವಿನ ನಂತರ ವಿಠಲಾಚಾರ್ಯರು 1959ರಲ್ಲಿ **ಮನೆಗೆ ಬಂದ ಮಹಾಲಕ್ಷ್ಮಿ** ಯನ್ನು ಗೋವಿಂದಯ್ಯನವರ ಜತೆ ಜಂಟಿಯಾಗಿ ನಿರ್ದೇಶಿಸಿದರು. ಮತ್ತೆ 1958ರಲ್ಲಿ ತೆಲುಗು ಚಿತ್ರರಂಗಕ್ಕೆ ತೆರಳಿದ ಅವರು ಅಲ್ಲಿಯೂ ಜನಪ್ರಿಯ ಯಶಸ್ವಿ ಚಿತ್ರ ನಿರ್ಮಾಪಕರೆನಿಸಿದರು. ನಂತರ 1963ರಲ್ಲಿ ರಾಜಲಕ್ಷ್ಮಿ ಪ್ರೊಡಕ್ಷನ್ಸ್ ಲಾಂಛನದಲ್ಲಿ **ವೀರಕೇಸರಿ** ಚಿತ್ರ ನಿರ್ದೇಶಿಸಿದರು. ರಾಜಕುಮಾರ್, ಲೀಲಾವತಿ ಅಭಿನಯದ ಈ ಚಿತ್ರ ಭಾಗಶಃ ವರ್ಣದಲ್ಲಿದೆ. ಇದೇ ಅವರ ಕೊನೆಯ ಕನ್ನಡ ಚಿತ್ರ.

## ಕೆಂಪರಾಜ್

ತಾರಾಪದ್ಧತಿಯ ಉಗಮ, ಚಿತ್ರ ನಿರ್ಮಾಣದಲ್ಲಿ ಸೌಕರ್ಯಗಳು ಬರಲಾರಂಭಿಸಿದ್ದು, ಹಿನ್ನೆಲೆಗಾಯನ, ಹಲವಾರು ಸಂಗೀತ ನಿರ್ದೇಶಕರ ಆಗಮನ ಮೊದಲಾದ ಬೆಳವಣಿಗೆಗಳೆಲ್ಲ ನಾಟಕಕಂಪನಿಗಳ ಮೂಲಕ ತೆರೆಗೆ ಬಂದ ಎಂ. ವಿ. ಸುಬ್ಬಯ್ಯ ನಾಯ್ಡು, ಕೆಂಪರಾಜ ಅರಸು ಅವರಂತಹ ನಟರನ್ನು ಹಿನ್ನೆಲೆಗೆ ಸರಿಸಿತು. 1954ರಿಂದ 1964ರ ಕಾಲಾವಧಿಯಲ್ಲಿ ವಾಕ್ಚಿತ್ರದ ಆರಂಭದ ದಿನಗಳಿಂದ ಬಂದವರು ಕೂಡ ಪ್ರಬಲ ಸ್ಪರ್ಧೆ ಎದುರಿಸುವಂತಾಯಿತು. ಅಂದಿನ ದಿನಗಳಲ್ಲೇ ಅದ್ದೂರಿ ಸಿನಿಮಾ ನಿರ್ಮಿಸುವವರೆಂಬ ಹೆಸರುಗಳಿಸಿದ್ದ ಡಿ. ಕೆಂಪರಾಜ ಅರಸು ಈ ಅವಧಿಯಲ್ಲಿ ನಟಿಸಿದ್ದು ಕೇವಲ ಮೂರು ಚಿತ್ರಗಳಲ್ಲಿ ಮಾತ್ರ. ಕೆಂಪರಾಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ತಾವೇ ನಿರ್ಮಿಸುತ್ತಿದ್ದ ಕೆಂಪರಾಜರ ಚಿತ್ರಗಳಲ್ಲಿ ಬಹು ತಾರಾಗಣವಿರುತ್ತಿತ್ತು. 1954ರಲ್ಲಿ ಅವರು ತಯಾರಿಸಿದ **ರಾಜಾವಿಕ್ರಮ** ಶನಿಮಹಾರಾಜನ ಕತೆ. ನಾಯಕನಟ ಕೆಂಪರಾಜ್, ಎಂ. ವಿ. ರಾಜಮ್ಮ, ಪಂಢರಿಬಾಯಿ, ಬಿ ಜಯಮ್ಮ ಮೂವರು ನಾಯಕಿಯರು, ಹಾಸ್ಯನಟ ಜಿ. ವಿ. ಕೃಷ್ಣಮೂರ್ತಿರಾವ್, ಎಂ. ಎನ್. ಸುಬ್ಬಣ್ಣ, ಮಹಾಬಲರಾವ್ ಇತರ ಪಾತ್ರದಲ್ಲಿದ್ದರು. ಹೆಚ್ಚು ಹಣ ಹಾಕಿ ಕನ್ನಡದಲ್ಲಿ ಚಿತ್ರ ಮಾಡುವ ಪರಂಪರೆಯನ್ನು ಆರಂಭಿಸಿದವರಲ್ಲಿ ಕೆಂಪರಾಜ ಅರಸು ಮೊದಲಿಗರು (ಈಗ ರವಿಚಂದ್ರನ್ ಆ ಪರಂಪರೆ ಮುಂದುವರೆಸಿದ್ದಾರೆ.) **ರಾಜಾವಿಕ್ರಮ** ಗಳಿಕೆಯಲ್ಲೂ ವಿಕ್ರಮ ಸಾಧಿಸಿತು. 1942ರಲ್ಲಿ ಗುಬ್ಬಿ ಫಿಲಂ ಕಂಪನಿ ತಯಾರಿಕೆ **ಜೀವನನಾಟಕ** ಚಿತ್ರದ ಮೂಲಕ ಬೆಳ್ಳಿತೆರೆಗೆ ಪರಿಚಿತರಾದ ಡಿ. ಕೆಂಪರಾಜ್, ಅನಂತರ **ಕೃಷ್ಣಲೀಲಾ** (1947), **ಭಕ್ತ ರಾಮದಾಸ್** (1948) ಚಿತ್ರಗಳಲ್ಲಿ ಅಭಿನಯಿಸಿದರು. 1954ರಲ್ಲಿ **ರಾಜಾವಿಕ್ರಮ** ಯಶಸ್ವಿಯಾದ ನಂತರ ಅದೇ ವರ್ಷ ಕೆಂಪರಾಜ್ ಸ್ವತಃ **ಜಲದುರ್ಗ** ನಿರ್ಮಿಸಿದರು. ಫ್ರೆಂಚ್ ಕತೆ "ಕೌಂಟ್ ಆಫ್ ಮಾಂಟೆ ಕ್ರಿಸ್ಟೊ" ಆಧಾರಿತ ಕತೆಯ ಚಿತ್ರದಲ್ಲಿ ಕೆಂಪರಾಜ್ ನಾಯಕ. ಕೃಷ್ಣಕುಮಾರಿ ನಾಯಕಿ. ಬಿ. ಆರ್. ಪಂತುಲು, ಜಯಲಕ್ಷ್ಮಿ ಗಣಪತಿಭಟ್, ಸಂಧ್ಯಾ ಅಭಿನಯಿಸಿದ್ದ "ಜಲದುರ್ಗ" ಗಲ್ಲಾಪೆಟ್ಟಿಗೆ ಗಳಿಕೆಯಲ್ಲಿ ಸೋಲನ್ನಪ್ಪಿತು. ನಂತರ 1957ರವರೆಗೆ ಕೆಂಪರಾಜ್ ಅವರಿಗೆ ಅವಕಾಶಗಳು ಸಿಗಲಿಲ್ಲ. ಆಗ ತಮ್ಮ ಸ್ವಂತ ಲಾಂಛನದಲ್ಲಿ **ನಳದಮಯಂತಿ** (1957) ನಿರ್ಮಿಸಿದರು. ಭಾನುಮತಿ ಈ ಚಿತ್ರದ ನಾಯಕಿ. ಚಿತ್ರದ ಹಾಡುಗಳನ್ನು ಅವರೇ ಬರೆದಿದ್ದಾರೆ. ನರಸಿಂಹರಾಜು ಅವರೂ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಕೊನೆಗಾಲದಲ್ಲಿ ಚಿತ್ರಜೀವನ ಈ ರೀತಿ ಮಸುಕಾಯಿತು. 1978ರಲ್ಲಿ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ



"ಅಣ್ಣ ತಂಗಿ" (1958) ಚಿತ್ರದಲ್ಲಿ ಬಿ. ಸರೋಜಾದೇವಿ. 1955ರ ತಯಾರಿಕೆ "ಮಹಾಕವಿ ಕಾಳಿದಾಸ"ದ ಮೂಲಕ ಬೆಳ್ಳಿ ತೆರೆ ಪ್ರವೇಶಿಸಿದ ಬಿ. ಸರೋಜಾದೇವಿ ಮಂಡ್ಯ ಜಿಲ್ಲೆಯಿಂದ ಮೂಡಿ ಬಂದ ತಾರೆ ಪಂಚಭಾಷಾ ತಾರೆಯಾಗಿ ಬೆಳೆದು ಪದ್ಮಶ್ರೀ ಪ್ರಶಸ್ತಿವರೆಗೆ ಖ್ಯಾತಿ ವಿಸ್ತರಿಸಿಕೊಂಡ ಬಹುಮುಖ ಪ್ರತಿಭೆ.

ನಳದಮಯಂತಿಯ ಕೆಂಪರಾಜ ಅರಸು.

ಅಧ್ಯಕ್ಷರಾಗಿ ಕೆಂಪರಾಜ ಅರಸು ಸೇವೆ ಸಲ್ಲಿಸಿದ್ದಾರೆ. ತಮ್ಮ 65ನೇ ವಯಸ್ಸಿನಲ್ಲಿ 1982ರ ಮೇ 18ರಂದು ಕೆಂಪರಾಜು ಅರಸು ಇನ್ನಿಲ್ಲವಾದರು.

ಡಿ. ಕೆಂಪರಾಜ ಅರಸರು ತಾವು ಆರಂಭದ ಕಾಲದಲ್ಲಿ ಚಲನ ಚಿತ್ರರಂಗದಲ್ಲಿ ಪಟ್ಟಶ್ರಮವನ್ನು ಭಾರತೀಯ ವಾಕ್ಚಿತ್ರದ ಸುವರ್ಣೋತ್ಸವ ಸಮಾರಂಭದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಸಂಸ್ಥೆ ಹೊರತಂದ ಸ್ಮರಣ ಸಂಚಿಕೆ (1981)ಯಲ್ಲಿ ಹೀಗೆ ಹೇಳಿದ್ದಾರೆ; ".. ಭಾಷಾ ಪ್ರೇಮಿಗಳಾದ ಕೆಲವು ಕನ್ನಡಿಗರು ಕೊಲ್ಲಾಪುರ, ಪುಣೆಗಳಿಗೆ ತೆರಳಿ ಅನೇಕ ಸಂಕಷ್ಟಗಳನ್ನು ಎದುರಿಸಿ, **ಭಕ್ತ ಧ್ರುವ**, **ವಸಂತ ಸೇನ**, **ಸಂಸಾರ ನೌಕ**, **ಸುಭದ್ರ** ಚಿತ್ರಗಳನ್ನು ತಯಾರಿಸಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ, ಕುಂದಿ, ಕಂಗೆಟ್ಟಿದ್ದರು..



22. ನಳದಮಯಂತಿ 1957

ನಿರಾಶಾದಾಯಕವಾಗಿದ್ದ ಇಂತಹ ವಾತಾವರಣದಲ್ಲಿ, ಕನ್ನಡ ಚಿತ್ರ ಉದ್ಯಮದತ್ತ ಕಾಲಿಡಲು ಹೆದರಿ ಗರಬಡಿದಂತೆ ಕುಳಿತಿದ್ದ ಕಾಲದಲ್ಲಿ ನಾಟಕರತ್ನ ಗುಬ್ಬಿ ವೀರಣ್ಣನವರು **ಸುಭದ್ರಾ ಪರಿಣಯ**ವನ್ನು ಮಾಡಿ ನೊಂದಿದ್ದರೂ ಇನ್ನೊಂದು ಕನ್ನಡ ಚಿತ್ರವನ್ನು ತಯಾರಿಸಲು ಹವಣಿಸಿಕೊಳ್ಳುತ್ತಿದ್ದರು. 1941ರಲ್ಲಿ ಅವರನ್ನು ಕಂಡು ಚಿತ್ರನಟನಾಗಬೇಕೆಂಬ ನನ್ನ ಹಂಬಲವನ್ನು ಅವರಲ್ಲಿ ಉಸಿರಿದೆ. ಅವರು ತಯಾರಿಸಲು ಸಿದ್ಧಪಡಿಸುತ್ತಿದ್ದ **ಜೀವನ ನಾಟಕ** ಎಂಬ ಕನ್ನಡ ಚಿತ್ರದಲ್ಲಿ ಮುಖ್ಯ ಪಾತ್ರಧಾರಿಯಾಗಿ ನನ್ನನ್ನು ಆರಿಸಿಕೊಂಡು ಚಲನ ಚಿತ್ರ ಪ್ರಪಂಚದ ಹೆಬ್ಬಾಗಿಲನ್ನು ತೆರೆದುಕೊಟ್ಟರು. ಅವರ ನಿರೀಕ್ಷೆಗೆ ಕುಂದು ಬಾರದಂತೆ ಆ ಚಿತ್ರದಲ್ಲಿ ನನ್ನ ಪಾತ್ರವನ್ನು ನಿರ್ವಹಿಸಿ ಉತ್ತಮ ಕಲಾವಿದನೆಂಬ ಹೆಸರನ್ನೇನೋ ಗಳಿಸಿದೆ. **ಜೀವನ ನಾಟಕ** ಚಿತ್ರ ತಯಾರಿಸಿ ನಷ್ಟ ಅನುಭವಿಸಿದ ವೀರಣ್ಣನವರು ಚಿತ್ರ ತಯಾರಿಕೆಯಿಂದ ದೂರವಾದರು. ಬೊಂಬಾಯಿ, ಪುಣೆಯಲ್ಲಿ ನಟನಾಗಿ ಮುಂದುವರೆಯುವ ಸಾಧ್ಯತೆ ಇರಬಹುದೆಂಬ ಆಸೆಯಿಂದ ಅತ್ತ ಕಡೆ ಹೊರಟೆ. ಎರಡು ವರ್ಷಗಳ ಕಾಲ ಸತತ ಪ್ರಯತ್ನ ಮಾಡಿ ವಿಫಲನಾದೆ....

"...... 1946ರ ತರುಣದಲ್ಲಿ ಅರಸೀಕೆರೆಯಿಂದ ಬಂದ ಶ್ರೀ ಶಂಕರ ಸಿಂಗ್ ಮತ್ತು ವಿಠಲಾಚಾರ್ಯ ಎಂಬುವರು ಮಹಾತ್ಮ ಪಿಕ್ಚರ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದರಲ್ಲಿ ನಿರ್ದೇಶಕರಾಗಿದ್ದ ಸಿ. ವಿ. ರಾಜು ಅವರು **ಕೃಷ್ಣಲೀಲಾ** ಎಂಬ ಕನ್ನಡ ಚಿತ್ರದಲ್ಲಿ ಕಂಸನ ಪಾತ್ರವನ್ನು ವಹಿಸಬೇಕೆಂದು ನನ್ನನ್ನು ಒತ್ತಾಯಿಸಿದರು. ಕೆಲವು ದಿನಗಳ ನಂತರ ಅವರ ಒತ್ತಾಯಕ್ಕೆ ಮಣಿದೆ. ಅದೇ ಸಮಯದಲ್ಲಿ ಜಿ. ಆರ್. ರಾಮಯ್ಯ ಮೈಸೂರು ನಗರದಲ್ಲಿ ನವಜ್ಯೋತಿ ಎಂಬ ಸ್ಟುಡಿಯೋವನ್ನು ಸ್ಥಾಪಿಸಿದರು. **ಕೃಷ್ಣಲೀಲಾ** ಚಿತ್ರವನ್ನು ಆ ಸ್ಟುಡಿಯೋದಲ್ಲಿ ತಯಾರಿಸಲು ಮಹಾತ್ಮ ಪಿಕ್ಚರ್ಸ್‌ನವರು ಒಪ್ಪಂದ ಮಾಡಿಕೊಂಡರು. ಶಂಕರ್‌ಸಿಂಗ್ ಮತ್ತು ವಿಠಲಾಚಾರ್ಯರು ಚಲನಚಿತ್ರ ಉದ್ಯಮಕ್ಕೆ ಹೊಸಬರಾಗಿದ್ದುದಲ್ಲದೆ. ಮೈಸೂರು ನಗರದ ಜನರಿಗೂ ಅಪರಿಚಯಸ್ಥರಾಗಿದ್ದರು. ಮೈಸೂರು ಪಟ್ಟಣದಲ್ಲಿ ನನ್ನ ಬಂಧುಗಳು, ಪರಿಚಯಸ್ಥರು ಬಹುಮಂದಿ ಇದ್ದುದರಿಂದಲೂ, **ಜೀವನ ನಾಟಕ** ಚಿತ್ರದ ಮೂಲಕ ಜನಪ್ರಿಯತೆ ಗಳಿಸಿದ್ದುದರಿಂದಲೂ ಚಿತ್ರ ತಯಾರಿಕೆಯ ನಿರ್ವಹಣೆಯನ್ನು ನನ್ನ ಮೇಲೇ ಹೇರಿದರು...

"ನವಜ್ಯೋತಿ ಸ್ಟುಡಿಯೋದಲ್ಲಿದ್ದ ಯಂತ್ರೋಪಕರಣಗಳು ಬಹಳ ಹಳೆಯದಾಗಿದ್ದವು. ಶಬ್ದಗ್ರಹಣ ಯಂತ್ರವು ಎಷ್ಟು ಹಳೆಯದಾಗಿತ್ತೆಂದರೆ ಕಂಸನ ಪಾತ್ರದಲ್ಲಿ ಗಗನ ಮುಟ್ಟುವಷ್ಟು ಎತ್ತರದ ಧ್ವನಿಯಲ್ಲಿ ಕೂಗಿದರೂ ಅಚ್ಚಾಗುತ್ತಿದ್ದ ಪ್ರತಿಧ್ವನಿ ಎಲ್ಲಿಯೋ ಬಾವಿಯೊಳಗೆ ಕೂಗಿದಂತೆ ದುರ್ಬಲವಾಗಿ ಕೇಳುತ್ತಿತ್ತು.




'ನಳದಮಯಂತಿ' ಚಿತ್ರದಲ್ಲಿ ಕೆಂಪರಾಜ್ ಅರಸು, ಭಾನುಮತಿ. ಭಾನುಮತಿ ಆ ಕಾಲದಲ್ಲಿ ತಮಿಳು ಚಿತ್ರರಂಗದ ಹೆಸರಾಂತ ನಟಿ.

ಕೂಗಿ ಕೂಗಿ ನನ್ನ ಗಂಟಲು ಕಟ್ಟಿ ಹೋಗಿತ್ತು. ಅಂತೂ **ಕೃಷ್ಣಲೀಲಾ** ತಯಾರಿಕೆ ಮುಗಿಯಿತು. ಚಿತ್ರವನ್ನು ಪ್ರದರ್ಶನ ಮಾಡಿದ್ದೂ ಆಯಿತು. ಆ ಚಿತ್ರವು ನಷ್ಟ ಹೊಂದಿ ಹಾಳಾದ ಚಿತ್ರಗಳ ಶ್ರೇಣಿಯನ್ನು ಹಿಡಿಯಿತು. **ಭಕ್ತ ರಾಮದಾಸ್** ಎಂಬ ಇನ್ನೊಂದು ಚಿತ್ರವನ್ನು ತಯಾರಿಸಿದೆವು. ಅದರಲ್ಲಿ ನಾನು ಬಾದಷಾ ತಾನೇಷನ ಪಾತ್ರವನ್ನು ವಹಿಸಿದೆ. ಆ ಚಿತ್ರವೂ ನಷ್ಟದ ಹಾದಿ ಹಿಡಿಯಿತು. ಮಹಾತ್ಮ ಪಿಕ್ಚರ್ಸ್‌ನ ಮಿತ್ರರಿಂದ ದೂರವಾದೆ.

"ಶ್ರೀ ಜಾನಕೀರಾಂ ಎಂಬುವವರು **ಮಹಾನಂದ** ಎಂಬ ಚಿತ್ರವನ್ನು ತೆಗೆದರು. ಅದರಲ್ಲಿ ನಾನು ಒಂದು ಪಾತ್ರವನ್ನು ವಹಿಸಿದ್ದೆ. ಎಲ್ಲಾ ಕನ್ನಡ ಚಿತ್ರಗಳಿಗೆ ತಗುಲಿದ ಗ್ರಹದೋಷ ಮಹಾನಂದಕ್ಕೂ ತಗುಲಿತು. ಚಿತ್ರ ತಯಾರಕರು ನಷ್ಟಕ್ಕೆ ಸಿಕ್ಕಿ ಕಂಗಾಲಾದರು.

"1947ರಲ್ಲಿ ನಾನೇ ಸ್ವತಃ ಚಿತ್ರ ತಯಾರಿಸಲು ತೀರ್ಮಾನಿಸಿ "ಶನಿ ಮಹಾತ್ಮೆ" ಎಂಬ ಕಥೆಯನ್ನು ಆರಿಸಿಕೊಂಡೆ. ಕಥಾವಸ್ತು, ಕಂಗೊಳಿಸುವ ಮನೆ ಮಂದಿರ ಮಂಟಪಗಳು, ಆಕರ್ಷಣೀಯ ಉಡುಪು, ಆಭರಣಗಳು, ಸುಶ್ರಾವ್ಯ ಸಂಗೀತ, ಆಹ್ಲಾದಕರ ಹಾಸ್ಯ... ಹೀಗೆ ಎಲ್ಲ ರೀತಿಯಲ್ಲೂ ಅನ್ಯ ಭಾಷೆಗಳ ಚಿತ್ರಗಳಿಗೆ ಸರಿತೂಗುವಂತೆ ಚಿತ್ರವನ್ನು ತಯಾರಿಸಿದರೆ ಅದು ಕನ್ನಡಿಗರ ಮನವನ್ನು ಸೆಳೆಯಬಹುದೆಂಬ ಹಂಬಲದಿಂದ ಸಾಕಷ್ಟು ಸೌಲಭ್ಯವಿಲ್ಲದಿದ್ದ ಮೈಸೂರನ್ನು ಬಿಟ್ಟು ಮದರಾಸಿಗೆ ತೆರಳಿದೆ. ಚಿತ್ರಕಥೆ, ಹಾಡು ಮತ್ತು ಸಂಭಾಷಣೆ ಬರೆಯುವ ಜವಾಬ್ದಾರಿಯನ್ನು ಹುಣಸೂರು ಕೃಷ್ಣಮೂರ್ತಿ ಅವರಿಗೆ ವಹಿಸಿದೆ. ಒಂದೇ ಚಿತ್ರವನ್ನು ಏಕಕಾಲದಲ್ಲಿ ಎರಡು ಭಾಷೆಗಳಲ್ಲಿ ತಯಾರಿಸಿದರೆ ವೆಚ್ಚ ಕಡಿಮೆಯಾಗಿ, ಮಾರುಕಟ್ಟೆ ಅಧಿಕವಾಗುವುದೆಂಬ ನಂಬಿಕೆಯಿಂದ "ಶನಿಮಹಾತ್ಮೆ" ಎಂಬ ಹೆಸರನ್ನು ತೆಗೆದು **ರಾಜಾವಿಕ್ರಮ** ಎಂಬ ನಾಮಕರಣ ಮಾಡಿ, ಚಿತ್ರವನ್ನು ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ತಯಾರಿಸಲು ತೀರ್ಮಾನಿಸಿದೆ. ಕತ್ತಿವರಸೆ, ಕಠಾರಿಕಾಳಗ, ಮಲ್ಲಯುದ್ಧ, ಕುದುರೆ ಸವಾರಿ ಇತ್ಯಾದಿ ಅನೇಕ ವಿದ್ಯೆಗಳ ಸಾಧನೆಯನ್ನು ಮಾಡಿ, ನನ್ನ ಪಾತ್ರದಲ್ಲಲ್ಲದೆ ಇತರ ಪಾತ್ರಗಳಲ್ಲಿಯೂ ಲೋಪ ದೋಷಗಳು ಬಾರದಂತೆ ಎಲ್ಲದರ ಮೇಲ್ವಿಚಾರಣೆ ನಿರ್ವಹಿಸಿದೆ. 2 ವರ್ಷಗಳ ಕಾಲ ಶ್ರಮಿಸಿದ ನಂತರ ಚಿತ್ರ ಪೂರ್ಣಗೊಂಡಿತು. ಎಲ್ಲರ ಮೆಚ್ಚುಗೆಯನ್ನು ಪಡೆಯಿತು....

"1952ರಲ್ಲಿ **ಜಲದುರ್ಗ** ಚಿತ್ರವನ್ನು ಮತ್ತೆ ದ್ವಿಭಾಷೆಗಳಲ್ಲಿ ತೆಗೆಯಲು ತೀರ್ಮಾನಿಸಿದೆ. ದಕ್ಷಿಣದಲ್ಲಿ ಮಾತ್ರವಲ್ಲದೆ ಉತ್ತರ ಭಾರತದಲ್ಲಿಯೂ ಕೂಡ ಯಾರೂ ನೆನೆಸದಿದ್ದ ಈ ರೀತಿಯ ಚಿತ್ರೀಕರಣ ವೈಶಿಷ್ಟ್ಯ ನನ್ನ ಪಾಲಿನದಾಗಿತ್ತು. ಹೊಸ ಅಲೆ, ನವ್ಯ ಪ್ರಯೋಗ ಎಂಬ ಮಾತುಗಳು ಆಗ ನನಗೆ ಹೊರತಾಗಿರಲಿಲ್ಲ. ತಮಿಳು ಮತ್ತು ತೆಲುಗು ಪ್ರಾಂತ್ಯಗಳಲ್ಲಿಯೂ ಕೂಡ ಜನಸಾಮಾನ್ಯರ ಒಲವು ಆರ್ಥಿಕವಾಗಿ ಪೌರಾಣಿಕ ಚಿತ್ರಗಳ ಕಡೆಗೇ ಇದ್ದು ಒಂದೆರಡು ಸಾಮಾಜಿಕ ಚಿತ್ರಗಳನ್ನೂ ತೆಗೆದ ಕನ್ನಡ ನಿರ್ಮಾಪಕರು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ತಪಿಸುತ್ತಿದ್ದ ಕಾಲದಲ್ಲಿ ಹೊಸ ಅಲೆ. ಹೊಸ ರೀತಿ ಎಂದು ಹೇಳಿ "ಜಲದುರ್ಗ" ಎಂಬ ಸಾಮಾಜಿಕ ಕಥೆ ಅದರಲ್ಲೂ ದುರಂತ ಕಥೆಯನ್ನು ಚಿತ್ರೀಕರಿಸಲು ಹವಣಿಸಿಕೊಂಡೆ.




"ಹದಗೆಟ್ಟಿದ್ದ ನಮ್ಮ ಸಮಾಜದ ಅನೇಕ ನ್ಯೂನತೆಗಳನ್ನು ನಿರೂಪಿಸಿ,ಲಾಭಕೋರರರು, ಕಳ್ಳ ಮಾರುಕಟ್ಟೆಯ ಖದೀಮರು, ಬೆರಕೆ ಮಾಡುವ ಪದಾರ್ಥಗಳನ್ನು ಮಾರುವವರು, ಬಡವರ ಶೋಷಣೆ ಮಾಡುವವರು ಇತ್ಯಾದಿ ಹಲವು ಬಗೆಯ ಸಮಾಜ ದ್ರೋಹಿಗಳ ಅವಗುಣಗಳನ್ನು ಎತ್ತಿ ತೋರಿಸಿ ಅಲ್ಲಗಳೆದೆ. ಅಂದಿನ ಬುದ್ಧಿ ಜೀವಿಗಳಾಗಿದ್ದ ಅನೇಕ ಜನರು ನನ್ನ ಪ್ರಯೋಗವನ್ನು ಮೆಚ್ಚಿದರು. ನನ್ನ ಪಾತ್ರವನ್ನು ಹೊಗಳಿದರು. ನನ್ನ ನಿರ್ದೇಶಕತ್ವವನ್ನು ಶ್ಲಾಘಿಸಿದರು. ಆದರೆ



**ಜಲದುರ್ಗ** ಜಲ ಸಮಾಧಿಯನ್ನು ಕಂಡಿತು. ಅದರೊಡನೆ ನನ್ನ ಆರ್ಥಿಕ ಜಲಸಮಾಧಿಯೂ ಆಯಿತು.

"1955ರಲ್ಲಿ **ನಳದಮಯಂತಿ** ಚಿತ್ರವನ್ನು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತಯಾರಿಸಲು ಸನ್ನಾಹ ಮಾಡಿಕೊಂಡೆ. ನಳನ ಪಾತ್ರವನ್ನು ಎರಡು ಭಾಷೆಗಳಲ್ಲೂ ನಾನೇ ನಿರ್ವಹಿಸಿದೆ. ದಮಯಂತಿ ಪಾತ್ರಕ್ಕೆ ಭಾನುಮತಿ ಅವರನ್ನು ಆರಿಸಿಕೊಂಡೆ. ಎಲ್ಲ ಕಷ್ಟಗಳ ಮಧ್ಯೆ ಹೇಗೋ **ನಳದಮಯಂತಿ** ಚಿತ್ರವನ್ನು ಪೂರ್ತಿಗೊಳಿಸಿ ಪ್ರದರ್ಶಿಸಿದ್ದಾಯಿತು. ಕೀರ್ತಿಗೆ ಚ್ಯುತಿ ಇಲ್ಲ. ಹಣಕ್ಕೆ ಗತಿ ಇಲ್ಲ....

"ಬಳಲಿ ಬೆಂಡಾದ ನಾನು 1960ರ ಹೊತ್ತಿಗೆ ಚಲನಚಿತ್ರ ಉದ್ಯಮದಿಂದ ಹೊರಗೆ ಬಂದೆ.... ಆದರೆ 20 ವರ್ಷಗಳ ಕಾಲ ಕನ್ನಡ ಚಲನಚಿತ್ರ ಉದ್ಯಮದ ಬೆಳವಣಿಗೆಗೆ ಮತ್ತು ಪ್ರಗತಿ ಸಾಧನೆಗಾಗಿ ದುಡಿದದ್ದಕ್ಕಾಗಿ ಒಂದು ತೃಪ್ತಿ. ಅದೇ ಸಮಾಧಾನ" ಎಂದು ಕೆಂಪರಾಜ ಅರಸು ಹೇಳಿದ್ದಾರೆ.




## ಹೊನ್ನಪ್ಪ ಭಾಗವತರ್

1955ರ ಬೆಳವಣಿಗೆ ಎಂದರೆ ಹೊನ್ನಪ್ಪ ಭಾಗವತರ್ ತಾವೇ ಸ್ವಂತ ನಿರ್ಮಾಣ ಆರಂಭಿಸಿದ್ದು. 1955ರಲ್ಲಿ ಬಿಡುಗಡೆಯಾದ ಹೊನ್ನಪ್ಪ ಭಾಗವತರ್ ಅಭಿನಯದ "ಮಹಾಕವಿ ಕಾಳಿದಾಸ" ಅವರ ಸ್ವಂತ ತಯಾರಿಕೆ, ಲಲಿತ ಕಲಾ ಫಿಲಂಸ್ ಸಂಸ್ಥೆ ಸ್ಥಾಪಿಸಿ ತಯಾರಿಸಿದ "ಮಹಾಕವಿ ಕಾಳಿದಾಸ"ದಲ್ಲಿ ಅವರೇ ಕಾಳಿದಾಸನಾಗಿ ಅಭಿನಯಿಸಿ, ಸಂಗೀತ ನಿರ್ದೇಶನ ಮಾಡಿದರು. ಬಿ. ಸರೋಜಾದೇವಿ ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಚಿತ್ರರಂಗದಲ್ಲಿ ಬೆಳಗಿದರು. ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಗಳಿಸಿದ್ದು ಈ ಚಿತ್ರದ ಹೆಗ್ಗಳಿಕೆ.

ಬೆಂಗಳೂರು ಜಿಲ್ಲೆಯ ನೇಯ್ಗೆ ಮನೆತನದ ಹೊನ್ನಪ್ಪನವರು "ಭಾಗವತರ್" ಎಂಬ ಬಿರುದು ಪಡೆದು ಸನ್ಮಾನಿತರಾಗಿ ನಂತರ, ಚಲನ ಚಿತ್ರರಂಗದ ನಾಯಕನಟರಾಗಿ ಮೆರೆದದ್ದು ಒಂದು ಸಾಹಸ ಕತೆಯಂತೆಯೇ ಇದೆ.

ಹೊನ್ನಪ್ಪ (ಭಾಗವತರ್) 1916ರ ಜನವರಿ 15 ರಂದು ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಚೌಡಸಂದ್ರ ಗ್ರಾಮದಲ್ಲಿ ಜನಿಸಿದರು. ನೇಯ್ಗೆ ಮನೆತನದ ವೃತ್ತಿಯಾಗಿತ್ತು. ಐದನೇ ವಯಸ್ಸಿನಲ್ಲೇ ತಂದೆ ಚಿಕ್ಕಲಿಂಗಪ್ಪನವರನ್ನು ಕಳೆದುಕೊಂಡ ಹೊನ್ನಪ್ಪನವರಿಗೆ, ತಾಯಿ ಹೇಳುತ್ತಿದ್ದ ಭಜನೆ, ಸಂಗೀತವೆಂದರೆ ಭಾರಿ ಆಕರ್ಷಣೆ. ಕೆಲ ವರ್ಷಾನಂತರ ಬೆಂಗಳೂರಿಗೆ ಬಂದ ಹೊನ್ನಪ್ಪ ನೌಕರಿ ಹಿಡಿದರು. ಮೊದಲು

ಮಹಾತ್ಮ ಪಿಕ್ಚರ್ಸ್ ಮೂಲಕ ತಯಾರಾದ "ಶ್ರೀ ಕೃಷ್ಣ ಲೀಲಾ" ನಾಯಕ ಡಿ. ಕೆಂಪರಾಜ್ ಅರಸು.

ಹೊನ್ನಪ್ಪ ಭಾಗವತರ್ ಸ್ವಂತ ತಯಾರಿಕೆ "ಮಹಾಕವಿ ಕಾಳಿದಾಸ" (1955) ಸಾಹಿತ್ಯ-ಅಭಿನಯ ದೃಷ್ಟಿಯಿಂದ ಗಮನ ಸೆಳೆಯಿತು.

ಹೊನ್ನಪ್ಪ ಭಾಗವತರ್ "ಜಗಜ್ಯೋತಿ ಬಸವೇಶ್ವರ" ಚಿತ್ರದಲ್ಲಿ.



ಸಂಬಂಧಮೂರ್ತಿ ಭಾಗವತರ ಶಿಷ್ಯವೃತ್ತಿ ಹಿಡಿದರು. ನಂತರ ಹಾರ್ಮೋನಿಯಂ ಅರುಣಾಚಲಪ್ಪನವರಿಂದಲೂ ಶಿಷ್ಯವೃತ್ತಿ ಪಡೆದರು.

ಒಮ್ಮೆ ಸೇಲಂನಲ್ಲಿ ಹೊನ್ನಪ್ಪನವರ ಕಚೇರಿ ಏರ್ಪಾಡಾಯಿತು. ಅವರ ಚಿತ್ರರಂಗ ಪ್ರವೇಶವಾದದ್ದು ಅಲ್ಲೇ. ಸೇಲಂನ ಗೆಳೆಯರು ಆಗ ಎಂ. ಕೆ. ತ್ಯಾಗರಾಜ ಭಾಗವತರ್ ನಾಯಕರಾಗಿದ್ದ **ಅಂಬಿಕಾ ಪತಿ** ತಮಿಳು ಸಿನಿಮಾಕ್ಕೆ ನಾಯಕನ ಗೆಳೆಯನ ಪಾತ್ರಕ್ಕೆ ಕಲಾವಿದನನ್ನು ಹುಡುಕುತ್ತಿದ್ದರು. ಹೊನ್ನಪ್ಪನವರನ್ನು ಕಂಡ ನಂತರ ಆ ಪಾತ್ರಕ್ಕೆ ಇವರೇ ಸೂಕ್ತ ಎಂದು ನಿರ್ಧರಿಸಿದರು. ಸೇಲಂನಲ್ಲಿ ಅದ್ಭುತ ಕಚೇರಿ ಮಾಡಿದ ಕನ್ನಡಿಗ ಹೊನ್ನಪ್ಪ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಹೊನ್ನಪ್ಪನವರನ್ನು ಸನ್ಮಾನಿಸಿ, ಅವರ ಹೆಸರಿನ ಮುಂದೆ ಭಾಗವತರ್ ಎಂದು ಬಿರುದನ್ನು ಸೇರಿಸಿ ಗೌರವಿಸಿದರು. ಅಲ್ಲಿಂದ ಮುಂದೆ ಬೆಂಗಳೂರಿನ ಹೊನ್ನಪ್ಪನವರು **ಅಂಬಿಕಾ ಪತಿಯ** ಹೊನ್ನಪ್ಪ ಭಾಗವತರ್ ಆದರು.




ಆಗ ತಮಿಳು ಚಿತ್ರರಂಗದಲ್ಲಿ ಎಂ.ಕೆ. ತ್ಯಾಗರಾಜ ಭಾಗವತರ್ ಮೇರು ನಟರಾಗಿದ್ದರು. ಕಾಲಾನಂತರ ತ್ಯಾಗರಾಜ ಭಾಗವತರ್ ಸ್ಥಾನ ತೆರವಾಯಿತು. ಆ ಸ್ಥಾನ ತುಂಬಿದ ಹೊನ್ನಪ್ಪ ಭಾಗವತರ್ ಅನೇಕ ತಮಿಳುಭಾಷಾ ಚಿತ್ರಗಳಲ್ಲಿ ಅಭಿನಯಿಸಿದರು. ಗುಬ್ಬಿ ವೀರಣ್ಣನವರು ಹೊನ್ನಪ್ಪ ಭಾಗವತರ್ ಅಭಿನಯ ಮೆಚ್ಚಿ 1941ರಲ್ಲಿ ತಾವು ತಯಾರಿಸಿದ **ಸುಭದ್ರ** ಚಿತ್ರದ ನಾಯಕನನ್ನಾಗಿ ಆಯ್ಕೆ ಮಾಡಿದರು. ಅರ್ಜುನನ ಪಾತ್ರ ಮೆಚ್ಚುವಂತಿತ್ತು. ಹೀಗಾಗಿ ಇತರ ಚಿತ್ರಗಳಲ್ಲೂ ಪಾತ್ರ. **ಹೇಮರೆಡ್ಡಿ ಮಲ್ಲಮ್ಮ** (1945), ***ಗೋರ ಕುಂಬಾರ*** (1949), ***ಗುಣಸಾಗರಿ*** (1953)ಗಳಲ್ಲಿ ಅಭಿನಯಿಸಿದರು. 1955ರಲ್ಲಿ ಸ್ವಂತ ನಿರ್ಮಾಣ ಸಂಸ್ಥೆ ಆರಂಭಿಸಿ **ಮಹಾಕವಿ ಕಾಳಿದಾಸ** (1955), **ಪಂಚರತ್ನ** (1956) **ಜಗಜ್ಯೋತಿ ಬಸವೇಶ್ವರ** (1959) ನಿರ್ಮಿಸಿದರು. 1961ರಲ್ಲಿ ಸಿನಿಮಾ ಬಿಟ್ಟು ಉಮಾ ಮಹೇಶ್ವರಿ ಸಂಗೀತ ನಾಟಕ ಮಂಡಲಿ ನಿರ್ಮಿಸಿ ರಾಜ್ಯಾದ್ಯಂತ ನಾಟಕಗಳನ್ನು ಆಡಲಾರಂಭಿಸಿದರು. "ಶ್ರೀನಿವಾಸ ಕಲ್ಯಾಣ", "ಬ್ರೋಕರ್ ಭೀಷ್ಮಾಚಾರಿ" ಅವರು ಆಡುತ್ತಿದ್ದ ಜನಪ್ರಿಯ ನಾಟಕಗಳು. 1964ರಲ್ಲಿ ಈ ಕಂಪೆನಿಯನ್ನು ಭಾಗವತರ್ ಮುಚ್ಚಿದರು. ಹೊನ್ನಪ್ಪ ಭಾಗವತರ್‌ಗೆ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಪ್ ಕೂಡ ದೊರೆತಿದೆ.

1979ರಲ್ಲಿ ಅವರು ಛಾಯಾ ಚಿತ್ರಾ ಲಾಂಛನದಡಿ **ಸದಾನಂದ** ಎಂಬ ಚಿತ್ರವನ್ನು ರಾಜ್ಯ ಚಲನ ಚಿತ್ರೋದ್ಯಮ ಅಭಿವೃದ್ಧಿ ಸಂಸ್ಥೆಯ ನೆರವಿನಿಂದ ತಯಾರಿಸಿ ತಾವೂ ಒಂದು ಪಾತ್ರ ವಹಿಸಿದ್ದರು. ಅದೇ ಅವರ ಕಡೆಯ ಚಿತ್ರ. 1992ರಲ್ಲಿ ಹೊನ್ನಪ್ಪ ಭಾಗವತರ್ ಇನ್ನಿಲ್ಲವಾದರು.



*"ಭಕ್ತ ಕುಂಬಾರ" ಚಿತ್ರದಲ್ಲಿ ಸಿ. ಹೊನ್ನಪ್ಪ ಭಾಗವತರ್ ತನ್ಮಯ ಭಾವ.*

## ಬಿ. ಆರ್. ಪಂತುಲು




ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಪದ್ಮಿನಿ ಪಿಕ್ಚರ್ಸ್ ಹಾಗೂ ಅದರ ಸಂಸ್ಥಾಪಕ, ನಿರ್ಮಾಪಕ, ನಿರ್ದೇಶಕ, ನಟ ಬಿ. ಆರ್. ಪಂತುಲು ಅವರ ಹೆಸರನ್ನು ಮರೆಯುವಂತೆಯೇ ಇಲ್ಲ. ಅವರು ಕನ್ನಡವೇ ಅಲ್ಲದೆ ತಮಿಳು, ತೆಲುಗಿನಲ್ಲಿಯೂ ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ. 1955ರಿಂದ ತಮ್ಮ ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ಕನ್ನಡ ಚಿತ್ರ ತಯಾರಿಕೆ ಆರಂಭಿಸಿದರು. ಕನ್ನಡಕ್ಕೆ ಪ್ರತಿಷ್ಠೆ ಗೌರವ ಕರ್ನಾಟಕದಲ್ಲೇ ಮೂಡುವಂತೆ ಮಾಡಿದ ಸಾಹಸಿ ಲಾಂಛನಗಳಲ್ಲಿ ಇದೂ ಒಂದು. 21 ವರ್ಷಗಳ ಕಾಲ ಕನ್ನಡ ಚಿತ್ರಗಳ ತಯಾರಿಕೆಯಲ್ಲಿ ನಿರತವಾಗಿದ್ದ ಪದ್ಮಿನಿ ಪಿಕ್ಚರ್ಸ್, ಕನ್ನಡ ಚಿತ್ರಗಳ ಬಗೆಗೆ ಆಸಕ್ತಿ ಕೆರಳಿಸುವುದರಲ್ಲಿ ಕರ್ನಾಟಕದ ಪ್ರೇಕ್ಷಕರಲ್ಲಿ ಕನ್ನಡ ಚಿತ್ರ ನೋಡುವ ಅಭ್ಯಾಸ ರೂಢಿಸುವುದರಲ್ಲೂ ನಿರ್ವಹಿಸಿದ ಪಾತ್ರ ಗಣನೀಯವಾದದ್ದು.

ಆಂಧ್ರಗಡಿ ಬಂಗಾರಪೇಟೆ ಬಳಿಯ ಕುಪ್ಪಂಗೆ 11 ಕಿ. ಮಿ. ದೂರದ ಬಡಗೂರು ಪಂತುಲು ಅವರ ಜನ್ಮಸ್ಥಳ. ಬಿ. ರಾಮಕೃಷ್ಣ ಪಂತುಲು ಅವರ ಮನೆ ಮಾತು ತೆಲುಗು. ಉಪಾಧ್ಯಾಯ ವೃತ್ತಿಯಲ್ಲಿದ್ದರೂ ಅವರಿಗೆ ಬಣ್ಣದ ಲೋಕದ ಗೀಳು. ಹೀಗಾಗಿ ಎಚ್. ಎಲ್. ಎನ್. ಸಿಂಹ ಹಾಗೂ ಪೀರ್ ಸಾಹೇಬರ ಗೆಳೆತನ ಬೆಳೆಸಿದರು. ಪೀರ್ ಸಾಹೇಬರ "ಚಂದ್ರಕಲಾ ನಾಟಕ ಮಂಡಲಿ"ಯ ಹಲವಾರು ನಾಟಕಗಳಲ್ಲಿ ಅಭಿನಯಿಸಿದರು. *ಸಂಸಾರನೌಕ*ದ ಸುಂದರನ ಪಾತ್ರ ಅವರಿಗೆ ಹೆಸರು ತಂದಿತು. 1936ರಲ್ಲಿ "ಸಂಸಾರ ನೌಕ" ಚಲನಚಿತ್ರವಾದಾಗ ಪಂತುಲು ಅವರೂ ಚಲನಚಿತ್ರರಂಗ ಪ್ರವೇಶಿಸಿದಂತಾಯಿತು. ನಂತರ **ರಾಧಾರಮಣ, ಜಲದುರ್ಗ**ಗಳಲ್ಲಿ ಅಭಿನಯಿಸಿದರು. 1955ರಲ್ಲಿ ಪ. ನೀಲಕಂಠನ್ ಅವರ ಸಹಕಾರದೊಡನೆ ಪದ್ಮಿನಿ ಪಿಕ್ಚರ್ಸ್ ಸಂಸ್ಥೆ ಸ್ಥಾಪಿಸಿ **ಮೊದಲ ತೇದಿ** ಎಂಬ ಚಿತ್ರ ನಿರ್ಮಿಸಿದರು. ದಾದಾಮಿರಾಸಿ ಅವರ ಕಥೆಯನ್ನು ಆಧರಿಸಿದ ಈ ಚಿತ್ರವನ್ನು ಪ. ನೀಲಕಂಠನ್ ನಿರ್ದೇಶಿಸಿದ್ದಾರೆ. ಚಿ. ಸದಾಶಿವಯ್ಯ ಚಿತ್ರದ ಸಂಭಾಷಣೆ, ಗೀತೆ ರಚಿಸಿದ್ದರು. ಗುಮಾಸ್ತನ ಪಾತ್ರದಲ್ಲಿ ಬಿ. ಆರ್.ಪಂತುಲು, ಆತನ ಮಡದಿ ಪಾತ್ರದಲ್ಲಿ ಎಂ. ವಿ. ರಾಜಮ್ಮ ಉತ್ತಮ ಅಭಿನಯ ನೀಡಿದ್ದಾರೆ. ಇತರ ಪಾತ್ರಗಳಲ್ಲಿ ಎಂ. ಮಾಧವರಾವ್, ಮಾಸ್ಟರ್ ಹಿರಣ್ಣಯ್ಯ, ಎಚ್. ರಾಮಚಂದ್ರಶಾಸ್ತ್ರಿ, ರೇವತಿ, ಸದಾಶಿವಯ್ಯ ಹಾಗೂ ಚಿ. ಉದಯಶಂಕರ್ ಅಭಿನಯಿಸಿದ್ದಾರೆ. ತಮಿಳಿನ ಪ್ರಖ್ಯಾತ ನಟ ಶಿವಾಜಿಗಣೇಶನ್ ಸಣ್ಣ ಪಾತ್ರವೊಂದರಲ್ಲಿ ಗೌರವನಟರಾಗಿ ಕಾಣಿಸಿಕೊಂಡಿದ್ದಾರೆ. ಇದಾದ ನಂತರ ಪದ್ಮಿನಿ ಪಿಕ್ಚರ್ಸ್ ಮೂಲಕ ಪಂತುಲು ನಿರ್ಮಿಸಿದ ಎರಡನೇ ಕನ್ನಡ ಚಿತ್ರ ನಂಬಿಕ್ಕೆ ಅದೇ ವರ್ಷ ತೆರೆಕಂಡು ಗಳಿಕೆಯಲ್ಲಿ ವಿಫಲವಾಯಿತು. ಈ ಹಂತದಲ್ಲಿ ನಿರ್ದೇಶಕ ಪ. ನೀಲಕಂಠನ್ ಪದ್ಮಿನಿ ಪಿಕ್ಚರ್ಸ್ ಬಿಟ್ಟರು. ಎದೆಗುಂದದ ಬಿ. ಆರ್. ಪಂತುಲು 1957ರಲ್ಲಿ ತಾವೇ ನಿರ್ದೇಶಕರಾಗಿ ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ **ರತ್ನಗಿರಿ ರಹಸ್ಯ** ಎಂಬ ಟಾರ್ಜಾನ್ ಮಾದರಿಯ ಚಿತ್ರ ತಯಾರಿಸಿದರು. (ಇದೇ ಮಾದರಿಯನ್ನು ಆಧರಿಸಿ 1976ರಲ್ಲಿ ನಿರ್ಮಾಪಕ ಎಂ.ಪಿ. ಶಂಕರ್ **ಕಾಡಿನ ರಹಸ್ಯ**, 1985ರಲ್ಲಿ **ಕಾಡಿನರಾಜ** ತಯಾರಿಸಿದರು). ಬಿ. ಆರ್. ಪಂತುಲು ನಿರ್ದೇಶನದ ಈ ಚಿತ್ರದಲ್ಲಿ ಉದಯಕುಮಾರ್, ಜಮುನ, ಬಿ. ಆರ್. ಪಂತುಲು, ಬಿ.ಆರ್.ರಾಮಚಂದ್ರನ್, ಎಂ. ವಿ. ರಾಜಮ್ಮ, ಬಿ. ಸರೋಜಾದೇವಿ ಬಾಲಕೃಷ್ಣ, ಸಾಹುಕಾರ್‌ಜಾನಕಿ, ರೇವತಿ ಎಂ. ಎನ್. ಮೊದಲಾದವರು ಅಭಿನಯಿಸಿದ್ದಾರೆ. ಸಾರ್ವತ್ರಿಕ ಪಾತ್ರವಾಗಿರುವ ಟಾರ್ಜಾನನ್ನು ಭಾರತೀಕರಣಗೊಳಿಸಿ, ಜಾನಪದದ ಲೇಪನೀಡಿ ಚಿತ್ರ ತಯಾರಿಸಿರುವುದೇ ಈ ಚಿತ್ರದ ವಿಶೇಷ. ಕಣಗಾಲ್ ಪ್ರಭಾಕರಶಾಸ್ತ್ರಿ ಅವರ ಸಾಹಿತ್ಯ ಮತ್ತು ಹಾಡುಗಳು ಈ ಚಿತ್ರವನ್ನು ಮತ್ತಷ್ಟು ಜನಪ್ರಿಯಗೊಳಿಸಿದವು. ಈ ಚಿತ್ರದಲ್ಲಿ ಬರುವ "ಅಮರ

'ರತ್ನಗಿರಿ ರಹಸ್ಯ' (1957) ಕನ್ನಡಕ್ಕೆ ಟಾರ್ಜಾನ್ ಮಾದರಿಯ ಚಿತ್ರಗಳ ಪರಿಚಯ ಮಾಡಿಸಿತು. ಈ ಜಾನಪದ ಚಿತ್ರವನ್ನು ಬಿ. ಆರ್. ಪಂತುಲು ಎರಡು ಭಾಷೆಗಳಿಗಾಗಿ ಒಮ್ಮೆಲೇ ನಿರ್ದೇಶಿಸಿದರು.

ಪದ್ಮಿನಿ ಪಿಕ್ಚರ್ಸ್........

1 ಮೊದಲ ತೆರೆ

...ಕನ್ನಡ...

ಮಧುರ.. ಪ್ರೇಮ...." ಹಾಡು ಎಂದೆಂದಿಗೂ ಜನಪ್ರಿಯವೆನಿಸಿದೆ. ಖ್ಯಾತ ನಿರ್ದೇಶಕ ಎಸ್. ಆರ್. ಪುಟ್ಟಣ್ಣ ಕಣಗಾಲ್ ತಮ್ಮ ಸಿನಿಮಾ ಜೀವನ ಆರಂಭಿಸಿದ್ದು ಈ ಚಿತ್ರದ ಮೂಲಕವೇ. ಚಿತ್ರ ಗಳಿಸಿದ ಅಪಾರ ಯಶಸ್ಸು ಬಿ. ಆರ್. ಪಂತುಲು ಅವರಿಗೆ ನಿರಂತರ ಕನ್ನಡ ಚಿತ್ರಗಳ ತಯಾರಿಕೆಗೆ ಸ್ಫೂರ್ತಿ ನೀಡಿತು.

ಈ ಪರಿವರ್ತನಾಯುಗದಲ್ಲಿ ಕನ್ನಡ ಚಿತ್ರಗಳು ಕನ್ನಡ ಪ್ರೇಕ್ಷಕರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸಲಾರಂಭಿಸಿದ್ದು ಪಂತುಲು, ಬಿ. ಎಸ್ ರಂಗ ಅಂತಹ ನಿರ್ದೇಶಕರುಗಳಿಂದಾಗಿ ಎಂದರೆ ತಪ್ಪಾಗದು. 1958ರಲ್ಲಿ ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ತಯಾರಾದ **ಸ್ಕೂಲ್ ಮಾಸ್ಟರ್** ಕನ್ನಡ ಚಿತ್ರರಂಗದಲ್ಲಿ ಅಂದಿನ ದಿನಗಳಲ್ಲಿ ಇತಿಹಾಸ ಸೃಷ್ಟಿಸಿತು. ಬೆಂಗಳೂರಿನಲ್ಲಿ ರಜತೋತ್ಸವ ಆಚರಿಸಿಕೊಂಡ ಮೊದಲ ಕನ್ನಡ ಸಾಮಾಜಿಕ ಚಿತ್ರ. ಬೆಂಗಳೂರಿನಲ್ಲಿ ಸುಮಾರು ಐವತ್ತೊಂದು ವಾರಗಳ ಕಾಲ ಒಂದಲ್ಲಾ ಒಂದು ಚಿತ್ರ ಮಂದಿರದಲ್ಲಿ ನಡೆದು ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆದಿತ್ತು.

ಅಖಿಲಭಾರತ ಅರ್ಹತಾ ಪತ್ರ, ಪ್ರಾದೇಶಿಕ ಚಿತ್ರಗಳಿಗೆ ನೀಡುವ ರಜತಪದಕ ಗಳಿಸಿದ ಈ ಚಿತ್ರದ ಅಪಾರ ಯಶಸ್ಸು ಬಿ. ಆರ್.ಪಂತುಲು ಅವರನ್ನು ಪುಳಕಗೊಳಿಸಿತು. ರಂಗಣ್ಣನ ಪಾತ್ರದಲ್ಲಿ ಬಿ. ಆರ್. ಪಂತುಲು, ನಾಗಪ್ಪನ ಪಾತ್ರದಲ್ಲಿ ಡಿಕ್ಕಿ ಮಾಧವರಾವ್, ರವಿ ಪಾತ್ರದಲ್ಲಿ ಉದಯಕುಮಾರ್, ನರಸಿಂಹರಾಜು, ಎಂ. ವಿ. ರಾಜಮ್ಮ ಜಾನಕಿ, ಬಿ. ಸರೋಜಾದೇವಿ, ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಗೌರವನಟರಾಗಿ ಶಿವಾಜಿಗಣೇಶನ್ ಅಭಿನಯ ಚಿತ್ರದ ಯಶಸ್ಸಿಗೆ ಕಾರಣವಾಯಿತು. ಕಣಗಾಲ್ ಪ್ರಭಾಕರಶಾಸ್ತ್ರಿ ಸಂಭಾಷಣೆ, ಗೀತೆ ರಚನೆ ಮಾಡಿದ್ದರು. ಶಿರವಾಡ್ಕರ್ ಅವರ 'ವೈಷ್ಣವಿ' ಕಥೆಯ ಆಧಾರದ ಮೇಲೆ **ಸ್ಕೂಲ್ ಮಾಸ್ಟರ್** ತಯಾರಾಗಿತ್ತು. ಡಬ್ಲ್ಯೂ. ಆರ್. ಸುಬ್ಬರಾವ್ ಮತ್ತು ಎಂ. ಕರ್ಣನ್ ಛಾಯಾಗ್ರಾಹಕರಾಗಿದ್ದರು.

1960ರಲ್ಲಿ ಭಾಗಶಃ ವರ್ಣದಲ್ಲಿ ಬಿ. ಆರ್. ಪಂತುಲು ಮಕ್ಕಳ ಚಿತ್ರ **ಮಕ್ಕಳ ರಾಜ್ಯ** ನಿರ್ಮಿಸಿದರು. ದಾದಾ ಮಿರಾಸಿಯವರ ಕಥೆ ಆಧರಿತ ಈ ಚಿತ್ರದ ಮೂಲಕ ಈಗ ಹಾಸ್ಯನಟರಾಗಿರುವ ಎಂ. ಎಸ್. ಉಮೇಶ್ ಚಿತ್ರರಂಗಕ್ಕೆ ಬಂದರು. ಈ ಚಿತ್ರದಲ್ಲಿ ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ನರಸಿಂಹರಾಜು, ಎಂ. ವಿ. ರಾಜಮ್ಮ ಹಾಗೂ ಗೌರವನಟರಾಗಿ ಶಿವಾಜಿಗಣೇಶನ್ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ಬಿ. ಆರ್. ಪಂತುಲು ಅವರೇ ನಿರ್ಮಾಪಕ ನಿರ್ದೇಶಕರಾದರೂ ಎಂ. ವಿ. ಆರ್. ಪ್ರೊಡಕ್ಷನ್ಸ್ ಲಾಂಛನದಲ್ಲಿ ಚಿತ್ರ ತಯಾರಾಗಿದೆ. ಚಿ.ಸದಾಶಿವಯ್ಯ ಸಂಭಾಷಣೆ ಬರೆದಿದ್ದಾರೆ. ನಂತರದ



"ಶ್ರೀ ಕೃಷ್ಣದೇವರಾಯ"ದಲ್ಲಿ ಈ ಪಾತ್ರಕ್ಕಾಗಿ ಬಿ. ಆರ್. ಪಂತುಲು ಶ್ರೇಷ್ಠ ಪೋಷಕನಟ ಪ್ರಶಸ್ತಿ ಗಳಿಸಿದರು.

ಬಿ. ಆರ್. ಪಂತುಲು ಆರಂಭದ ಹಂತದಲ್ಲಿ ಹಲವಾರು ಸಾಹಸಗಳನ್ನೂ, ಪ್ರಯೋಗಗಳನ್ನೂ ಚಿತ್ರರಂಗಕ್ಕೆ ನೀಡಿದ್ದಾರೆ. "ಸ್ಕೂಲ್ ಮಾಸ್ಟರ್" ದಾಖಲೆಯ ಚಿತ್ರದಲ್ಲಿ ಅವರೇ ಪ್ರಮುಖ ಪಾತ್ರಧಾರಿ.




ದಿನಗಳಲ್ಲಿ ಬಿ. ಆರ್. ಪಂತುಲು ಅವರು ಕಿತ್ತೂರು ಚೆನ್ನಮ್ಮ (1961), ಗಾಳಿಗೋಪುರ (1962), ಸಾಕುಮಗಳು (1963), ಚಿನ್ನದ ಗೊಂಬೆ (1964), ದುಡ್ಡೇ ದೊಡ್ಡಪ್ಪ (1966), ಎಮ್ಮೆ ತಮ್ಮಣ್ಣ (1966), ಗಂಗೆಗೌರಿ (1967), ಬೀದಿಬಸವಣ್ಣ (1967), ಚಿನ್ನಾರಿ ಪುಟ್ಟಣ್ಣ (1968), ಅಮ್ಮ (1968), ಗಂಡೊಂದು ಹೆಣ್ಣಾರು (1969), ಶ್ರೀ ಕೃಷ್ಣದೇವರಾಯ (1970), ಅಳಿಯ ಗೆಳೆಯ (1971), ಮಾಲತಿ ಮಾಧವ (1971), ಒಂದು ಹೆಣ್ಣಿನ ಕಥೆ (1972) ಹಾಗೂ ಕಾಲೇಜುರಂಗ (1976) ಚಿತ್ರಗಳನ್ನು ತಯಾರಿಸಿದ್ದಾರೆ. "ಕಾಲೇಜು ರಂಗ" ಸಿದ್ಧತೆ ಕಾರ್ಯ ನಡೆಯುತ್ತಿರುವಾಗಲೇ ಬೆಂಗಳೂರಿನಲ್ಲಿ ಹೃದಯಘಾತದಿಂದ 1974ರ ಅಕ್ಟೋಬರ್ 8ರಂದು ಪಂತುಲು ನಿಧನರಾದರು. ಪಂತುಲು ಅವರ ಕನಸನ್ನು ಅವರ ಪುತ್ರ ಬಿ. ಆರ್. ರವಿಶಂಕರ್ ನೆರವೇರಿಸಿ **ಕಾಲೇಜುರಂಗ** ನಿರ್ಮಿಸಿದರು. ಪುಟ್ಟಣ್ಣಕಣಗಾಲ್ ನಿರ್ದೇಶನದ **ಈ** ಚಿತ್ರ ಪದ್ಮಿನಿ ಪಿಕ್ಚರ್ಸ್ ಲಾಂಛನದ ಕೊನೆಯ ಚಿತ್ರ.


## ನಾಂದಿ

ಹೊಸ ಅಲೆಯ ದಾರಿಯಲ್ಲಿ ನಡೆದ ಮೊದಲ ಚಿತ್ರ "ನಾಂದಿ"

1964ರಲ್ಲಿ ತಯಾರಾಗಿರುವ **ನಾಂದಿ** ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ ನಾಂದಿಯೇ? 1964ರ ಕಾಲದಲ್ಲೇ ವಿಭಿನ್ನಕತೆಯೊಂದನ್ನು, ವಿಭಿನ್ನರೀತಿಯಲ್ಲೇ ಚಿತ್ರಿಸಿ ಎನ್.



ಲಕ್ಷ್ಮೀನಾರಾಯಣ್, ಚಿತ್ರರಂಗದಲ್ಲಿ ಏಕತಾನತೆಯ ಪರಿವರ್ತನೆಗೆ ಹೊರಟಂತೆಯೇ ಕಾಣುತ್ತದೆ. ಕಿವುಡ ಮೂಗರ ಸಮಸ್ಯೆಯನ್ನು 1964ರಲ್ಲೇ ಅವರು ಚಲನ ಚಿತ್ರವಾಗಿಸಲು ಯತ್ನಿಸಿರುವ ರೀತಿ ಮೆಚ್ಚತಕ್ಕ ವಿಷಯ.



ವಾದಿರಾಜ್-ಜವಾಹರ್‌ರವರು ನಿರ್ಮಾಪಕರಾಗಿರುವ ಶ್ರೀ ಭಾರತೀ ಚಿತ್ರಾ ಲಾಂಛನದಲ್ಲಿ ತೆರೆಕಂಡ **ನಾಂದಿ** ಚಿತ್ರದ ತಾರಾಗಣದಲ್ಲಿ ರಾಜಕುಮಾರ್,ಹರಿಣಿ,ಕಲ್ಪನಾ, ಬಾಲಕೃಷ್ಣ, ವಾದಿರಾಜ್,ದಿನೇಶ್ ಮೊದಲಾದವರು ಇದ್ದಾರೆ. ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಚಲನ ಚಿತ್ರೋತ್ಸವದಲ್ಲಿ "ನಾಂದಿ" ಪ್ರದರ್ಶನಗೊಂಡಿತ್ತು. ಹೊರದೇಶದಲ್ಲಿ ನಡೆದ ಚಿತ್ರೋತ್ಸವದಲ್ಲಿ ಪಾಲ್ಗೊಂಡ ಮೊದಲ ಕನ್ನಡ ಚಿತ್ರವಿದು. ಅಲ್ಲದೆ ಕಿವುಡರಿಗೆ, ಮೂಗರಿಗೆ ಪುನರ್ವಸತಿ ಕಲ್ಪಿಸುವ ಕಥಾವಸ್ತು ಹೊಂದಿದ್ದ ಭಾರತದ ಮೊದಲನೆಯ ಚಿತ್ರವೂ ಇದೇ ಆಗಿದೆ. ವಸ್ತುನಿಷ್ಠ ಚಿತ್ರಗಳನ್ನೇ ತಯಾರಿಸಬೇಕೆಂಬ ಸಂಕಲ್ಪ ಹೊಂದಿದ್ದ ಎನ್. ಲಕ್ಷ್ಮೀನಾರಾಯಣ್, ಮಸಾಲೆ ಸೂತ್ರಗಳ ಚಿತ್ರಗಳಿಂದ ದೂರ ಉಳಿದು ಚಿತ್ರೋದ್ಯಮವನ್ನು ಇನ್ನೊಂದು ಆಯಾಮದಿಂದ ಕಂಡರು.

**ಶ್ರೀರಾಮಪೂಜೆ** (1954) ಚಿತ್ರದ ಸಹಾಯಕ ನಿರ್ದೇಶಕರಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಎನ್. ಲಕ್ಷ್ಮೀನಾರಾಯಣ್, ಚಿತ್ರರಂಗದಲ್ಲಿ ಹಂತಹಂತವಾಗಿ ಮೇಲಕ್ಕೇರಿದವರು. **ನಾಂದಿ** ತಯಾರಿಸುವುದಕ್ಕೆ ಮುಂಚೆ ಅವರು 1963ರಲ್ಲಿ 'ಬ್ಲಿಸ್' ಎಂಬ ಕಿರು ಚಿತ್ರವೊಂದನ್ನು ತಯಾರಿಸಿದ್ದರು. ಇದಕ್ಕೆ ಅಂತರಾಷ್ಟ್ರೀಯ ಪ್ರಶಸ್ತಿಯೂ ಬಂದಿದೆ. ಅಲ್ಲದೆ ಬ್ರಿಟಿಷ್ ಫಿಲಂ ಇನ್‌ಸ್ಟಿಟ್ಯೂಟ್ ಸಂಸ್ಥೆಯಿಂದ ಲಕ್ಷ್ಮೀನಾರಾಯಣ್ ಅವರಿಗೆ ಮಾನ್ಯತೆ ದೊರಕಿತು. ನಂತರ ಸ್ಯಾನ್ ಫ್ರಾನ್ಸಿಸ್ಕೊ ಚಲನ ಚಿತ್ರೋತ್ಸವದಲ್ಲಿಯೂ ಪ್ರದರ್ಶನಗೊಂಡಿತು. ಈ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದು, ಈ ಪ್ರಶಸ್ತಿ ಪಡೆದ ದಕ್ಷಿಣಭಾರತದ



ಹೊಸ ಚಿಂತನೆಗಳ ನಿರ್ದೇಶಕ ಎನ್. ಲಕ್ಷ್ಮೀನಾರಾಯಣ್

'ಮುಕ್ತಿ' ಚಿತ್ರದಲ್ಲಿ ಹೊಸ ವಸ್ತು ಅಂತರರಾಷ್ಟ್ರೀಯ ಗೌರವ ಪಡೆದ ಚಿತ್ರ.




ಮೊದಲ ನಿರ್ದೇಶಕರೆನಿಸಿದರು. **ನಾಂದಿ** ಚಿತ್ರ ತಯಾರಿಕೆಗೆ "ಬ್ಲಿಸ್" ಕಿರುಚಿತ್ರ ನಿರ್ಮಿಸಿದ ಹಿನ್ನೆಲೆಯೇ ಸ್ಫೂರ್ತಿ ಎಂದು ಲಕ್ಷ್ಮೀನಾರಾಯಣ್ ಹೇಳಿದ್ದಾರೆ.

**ನಾಂದಿ**ಯ ಯಶಸ್ಸಿನಿಂದ ಉತ್ತೇಜಿತರಾದ ಎನ್. ಲಕ್ಷ್ಮೀ ನಾರಾಯಣ್ ತಮ್ಮ ಮುಂದಿನ ಚಿತ್ರಕ್ಕೆ ಚದುರಂಗರ ಕಾದಂಬರಿ **ಉಯ್ಯಾಲೆ**ಯನ್ನು ಆಯ್ಕೆ ಮಾಡಿಕೊಂಡರು. (1969) ರಾಜಕುಮಾರ್, ಕಲ್ಪನಾ, ಕೆ. ಎಸ್. ಅಶ್ವತ್ಥ್, ಬಾಲಕೃಷ್ಣ, ಪ್ರೇಮಲತಾ ತಾರಾಗಣದಲ್ಲಿರುವ ಈ ಕತೆ ತ್ರಿಕೋನ ಪ್ರೇಮದ್ದಾಗಿದ್ದು, ಪ್ರಬುದ್ಧ ನಿರ್ದೇಶನವನ್ನು ಇದರಲ್ಲಿ ಕಾಣಬಹುದಾಗಿತ್ತು.

1971ರಲ್ಲಿ ಬಿಡುಗಡೆಯಾದ ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ **ಮುಕ್ತಿ** ವಿ. ಎಂ. ಇನಾಂದಾರರ ಕಾದಂಬರಿ ಆಧರಿಸಿದೆ. ಯಾವುದೇ ತಪ್ಪಿಲ್ಲದೆ ಗುಹ್ಯರೋಗಕ್ಕೆ ಒಳಗಾಗುವ ನಾಯಕಿ ಎಲ್ಲರಂತೆ ಬದುಕಬೇಕೆಂಬ ಬಯಕೆಯಲ್ಲಿ ನಿರಾಶಳಾಗುವ ಕತೆ ಇದು. ಕಲ್ಪನಾ, ರಾಜಶೇಖರ್, ಕೆ. ಎಸ್. ಅಶ್ವತ್ಥ್ ಶಿವರಾಂ, ಬಿ. ಜಯಮ್ಮ ಉದಯಕುಮಾರ್ ತಾರಾಗಣದಲ್ಲಿದ್ದಾರೆ.

ನವೋದಯ ಚಿತ್ರ ಲಾಂಛನದಲ್ಲಿ ತಯಾರಾದ **ಮುಕ್ತಿ**ಗೆ 1971ರ ಸಾಲಿನ ದ್ವಿತೀಯ ಶ್ರೇಷ್ಠ ಚಿತ್ರ ಪ್ರಶಸ್ತಿ ದೊರಕಿದೆ. ನಂತರ ಈ ಚಿತ್ರ ವೆನಿಸ್, ರೋಂ ಚಿತ್ರೋತ್ಸವಗಳಲ್ಲಿಯೂ ಪ್ರದರ್ಶನಗೊಂಡಿತು.

1973ರಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಸಣ್ಣಕಥೆ ಆಧರಿಸಿ ಎನ್. ಲಕ್ಷ್ಮೀನಾರಾಯಣ್ **ಅಬಚೂರಿನ ಪೋಸ್ಟಾಫೀಸು** ಎಂಬ ಚಿತ್ರವನ್ನು ನಿರ್ದೇಶಿಸಿದರು. ವಾಣಿ, ಗಿರಿಜ, ಸೀತಾರಾಂ, ಬಿ.ಎಸ್. ರಾಮರಾವ್, ಶಾಂತಾ, ದಾಶರಥಿ ದೀಕ್ಷಿತ್ ತಾರಾಗಣದಲ್ಲಿರುವ ಈ ಚಿತ್ರಕೂಡ ಎನ್. ಲಕ್ಷ್ಮೀನಾರಾಯಣರ ಹೊಸ ದೃಷ್ಟಿಯ ಚಿತ್ರವೇ ಆಗಿತ್ತು. 1979ರಲ್ಲಿ ಎಲ್. ಎಸ್. ಶೇಷಗಿರಿರಾಯರ ಸಣ್ಣಕಥೆ ಆಧರಿಸಿ **ಮುಯ್ಯಿ** ಚಿತ್ರ ನಿರ್ದೇಶಿಸಿದರು.

1985ರಲ್ಲಿ ವೈಷ್ಣವಿ ಮೂವೀಸ್ ಅವರಿಗಾಗಿ **ಬೆಟ್ಟದ ಹೂವು** ಚಿತ್ರ ನಿರ್ದೇಶಿಸಿದರು. ಮಾಸ್ಟರ್ ಪುನೀತ್, ಬಾಲಕೃಷ್ಣ, ಅರವಿಂದ್, ಪದ್ಮಾವಾಸಂತಿ, ತಾರಾಗಣದ ಈ ಚಿತ್ರ, ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲೂ ಪಾಲ್ಗೊಂಡಿತ್ತು. ದಿವಂಗತ ಎನ್. ಲಕ್ಷ್ಮೀನಾರಾಯಣ್ ಅವರ ಕೊನೆಯ ಚಿತ್ರವಿದು. ವಿದೇಶಗಳಲ್ಲಿ ಕನ್ನಡ ಚಿತ್ರಕ್ಕಾಗಿ ಪುರಸ್ಕಾರ ಪಡೆದ ಮೊದಲ ನಿರ್ದೇಶಕ ಎನ್ನೆಲ್ 1991ರ ಫೆಬ್ರವರಿ 16 ರಂದು ಕಣ್ಮರೆಯಾದರು.

ಹೀಗೆ ಕನ್ನಡ ಚಿತ್ರರಂಗ ತನ್ನ ಪೌರಾಣಿಕ ಜಾನಪದ ಐತಿಹಾಸಿಕಗಳ ಪೊರೆ ಕಳಚಿಕೊಂಡು, ಕಾಲಜಿಯುಕ್ತವಾಯಿತು. ಜತೆಗೆ ವೈವಿಧ್ಯಮಯ ಸಾಮಾಜಿಕ ವಸ್ತುವಿನತ್ತವೂ ಹೊರಳಿ, ಸುವರ್ಣಯುಗದತ್ತ ಮುನ್ನಡೆಯಿತು.




ಇದೊಂದು ಮಹತ್ವದ ಘಟ್ಟ. 1965ರ ವೇಳೆಗೆ ಕನ್ನಡ ಚಿತ್ರರಂಗ ಒಂದು ಪ್ರಬುದ್ಧ ಸ್ಥಿತಿಗೆ ತಲುಪಿತ್ತು. ಆಗಲೇ ಬಣ್ಣದ ಲೋಕವೂ ತೆರೆದುಕೊಂಡಿತ್ತು. ಈ ವೇಳೆಗೆ ಕನ್ನಡ ಚಿತ್ರಗಳಿಗೆ ಮಾರುಕಟ್ಟೆಯೊಂದನ್ನು ಸೃಷ್ಟಿಸಲು ಹಾಗೂ ತನ್ನದೇ ಆದ ಪ್ರೇಕ್ಷಕ ವರ್ಗವನ್ನು ಸೃಷ್ಟಿಸಲು ಚಿತ್ರರಂಗದ ಗಣ್ಯರು ಶ್ರಮಿಸಿದ್ದರು. ಅದರಲ್ಲಿ ಯಶಸ್ವಿಯೂ ಆಗಿದ್ದರು. ಸೀಮಿತ ಮಾರುಕಟ್ಟೆ ಕನ್ನಡದ ಪಾಲಿಗೆ ಇಂದಿಗೂ ಹಾಗೆಯೇ ನಿಂತಿದೆ. ಇತರ ಭಾಷಾ ಚಿತ್ರಗಳಿಗೆ ಇರುವಂತಹ ಸೌಲಭ್ಯ, ಪ್ರದರ್ಶನಾವಕಾಶ ಕನ್ನಡ ಚಿತ್ರಗಳಿಗೆ ಇಲ್ಲ ಎಂಬುದು ಅಂದಿಗೂ ನಿಜವಾಗಿತ್ತು. ಇಂದಿಗೂ ಹಾಗೆ ಇದೆ. ಆದರೆ ಸದಭಿರುಚಿಯ ಚಿತ್ರ ತಯಾರಿಕೆಯ ಮೂಲಕ ಕನ್ನಡ ಪ್ರೇಕ್ಷಕ ವರ್ಗವೊಂದನ್ನು ಸೃಷ್ಟಿಸಿದ ಕೀರ್ತಿ ಅರವತ್ತರ ದಶಕದ ನಿರ್ಮಾಪಕ-ನಿರ್ದೇಶಕರಿಗೆ ಸಲ್ಲುತ್ತದೆ. ಕನ್ನಡ ಚಿತ್ರರಂಗದ ಪರಿಸ್ಥಿತಿ ಅರಿತ ರಾಜ್ಯ ಸರ್ಕಾರ ಸಬ್ಸಿಡಿ ನೀಡುವ ನೀತಿಯನ್ನು ತರುವ ಮೂಲಕ 1967ರಲ್ಲಿ ಕನ್ನಡ ಚಿತ್ರರಂಗಕ್ಕೆ ಕೈ ಆಸರೆಯಾಗಿ ಬಂದಿತು. ಇದೂ ಕೂಡ ನಮ್ಮ ಕನ್ನಡ ಚಿತ್ರರಂಗದ ಏರುಮುಖಕ್ಕೆ ಪ್ರಮುಖ ಕಾರಣವಾಗಿದೆ ಎಂಬುದನ್ನು ಮರೆಯುವಂತೆಯೇ ಇಲ್ಲ. ರಾಜ್ಯದಲ್ಲೇ ತಯಾರಾದ ಚಿತ್ರಗಳಿಗೆ ಸಹಾಯ ಧನ ನೀಡುವ ನೀತಿ, ಕನ್ನಡ ಚಿತ್ರರಂಗ ಕರ್ನಾಟಕದಲ್ಲೇ ತಳ ಊರುವಂತೆ ಮಾಡಲು ಸಹಕಾರಿಯಾಯಿತು. ಜೊತೆಗೆ ಹುಮ್ಮಸ್ಸಿರುವ

ನಿರ್ಮಾಪಕರಿಗೆ ಆರ್ಥಿಕ ಭದ್ರತೆಯನ್ನು ನೀಡಿದಂತಾಯಿತು. ಶೇ. 50ರಷ್ಟು ತೆರಿಗೆ ವಿನಾಯಿತಿ ಕೂಡ ಸರ್ಕಾರದ ಮತ್ತೊಂದು ಕೊಡುಗೆ. ಸಬ್ಸಿಡಿ ನೀಡಿಯೂ, ಕನ್ನಡ ಚಿತ್ರರಂಗದ ಸ್ಥಿತಿ ಕುಸಿತದತ್ತವೇ ಸಾಗಲಾರಂಭಿಸಿದಾಗ ಬಂದದ್ದು ಸರ್ಕಾರದಿಂದ ಶೇ 50ರಷ್ಟು ತೆರಿಗೆ ವಿನಾಯಿತಿ ಘೋಷಣೆ. ಈಗ ಶೇಕಡ ನೂರು ತೆರಿಗೆ ವಿನಾಯಿತಿ. ಕನ್ನಡ ಚಿತ್ರರಂಗವನ್ನು ಹಿಡಿದಿಟ್ಟ ಮತ್ತೊಂದು ಭದ್ರ ಆಸರೆ ಇದು.

1965ರಿಂದ 85ರವರೆಗಿನ ಕನ್ನಡ ಚಿತ್ರರಂಗದ 20 ವರ್ಷಗಳ ಹಾದಿಯಲ್ಲಿ ಈ ಆಸರೆಗಳೂ ನೆರವಿಗೆ ಬಂದು ಕನ್ನಡ ಚಿತ್ರರಂಗ ಸುವರ್ಣ ಯುಗವನ್ನೇ ಕಂಡಿತು. ಈಗಾಗಲೇ ಪರಿಪಕ್ವ ಹಾದಿಯಲ್ಲಿದ್ದ ಚಿತ್ರರಂಗ ತನ್ನ ಪ್ರಬುದ್ಧಾವಸ್ಥೆಯನ್ನು ಪ್ರದರ್ಶಿಸಿತು. ಅನಕೃ ಕಾದಂಬರಿ ಆಧರಿಸಿದ **ಸಂಧ್ಯಾರಾಗ** ದಂತಹ ಚಿತ್ರಗಳು ಕನ್ನಡ ಚಿತ್ರರಂಗದ ಸದಭಿರುಚಿಗೆ ಸಾಕ್ಷಿಯಾದವು. ಎ.ಸಿ. ನರಸಿಂಹಮೂರ್ತಿ, ಎಸ್. ಕೆ. ಭಗವಾನ್ ನಿರ್ದೇಶನದಲ್ಲಿ ತೆರೆಕಂಡ **ಸಂಧ್ಯಾರಾಗ**ದಲ್ಲಿ ರಾಜಕುಮಾರ್, ಭಾರತಿ, ಉದಯಕುಮಾರ್ ಮೊದಲಾದವರ ತಾರಾಗಣವಿತ್ತು. ಎ. ಎನ್. ಮೂರ್ತಿರಾವ್ ಅವರ "ಆಷಾಢಭೂತಿ" ನಾಟಕವನ್ನು ಆಧರಿಸಿ ಎಂ. ವಿ. ಕೃಷ್ಣಮೂರ್ತಿ ಅವರು ನಿರ್ಮಿಸಿದ **ಸುಬ್ಬಾಶಾಸ್ತ್ರಿ** (1965) ಮತ್ತೊಂದು ಸದಭಿರುಚಿಯ ಚಿತ್ರ. ಸಾಹಿತ್ಯ ಮತ್ತು ಚಿತ್ರರಂಗವನ್ನು ಬೆಸೆಯುವ ಸನ್ನಿವೇಶವೂ ಈ ಮೂಲಕ ಕಂಡುಬಂದಿದೆ. ಈ ಸಂಬಂಧ ಮತ್ತಷ್ಟು ನಿಕಟವಾಗುತ್ತಾ ನಡೆದದ್ದೂ ಈ ದಶಕದ ಸಾಧನೆಯೇ ಆಗಿದೆ. ಕಲ್ಯಾಣ್ ಕುಮಾರ್, ಹರಿಣಿ, ಚಂದ್ರಕಲಾ, ಮೈನಾವತಿ ಮೊದಲಾದವರು ಈ ಚಿತ್ರದ ತಾರಾಗಣದಲ್ಲಿದ್ದರು. ಹಾಗೆ ನೋಡಿದರೆ ಇದು ಎಂ. ವಿ. ಕೃಷ್ಣಸ್ವಾಮಿಗಳ ಮೊದಲ ಚಿತ್ರವಲ್ಲ. ಮೈಸೂರಿನಲ್ಲಿ ಅಧ್ಯಾಪಕರಾಗಿದ್ದ ಅವರು 1947ರಲ್ಲೇ **ಭಾರತಿ** ಚಿತ್ರದಲ್ಲಿ ನಾಯಕರಾಗಿದ್ದರು. 1977ರಲ್ಲಿ ಪ್ರೊ. ವಿ. ಸೀತಾರಾಮಯ್ಯನವರ ಕಥೆ ಆಧರಿಸಿ ಎಂ. ವಿ. ಕೃಷ್ಣಸ್ವಾಮಿ ಅವರು **ಪಾಪಪುಣ್ಯ** ಎಂಬ ಚಿತ್ರ ನಿರ್ಮಿಸಿದರು.




ಈ ಘಟ್ಟದಲ್ಲಿ ಕನ್ನಡ ಚಿತ್ರರಂಗ ಎಂದೂ ಅಳಿಸಲಾಗದ ಮಹತ್ವದ ಹೆಜ್ಜೆಗುರುತುಗಳನ್ನು ಬಿಟ್ಟು ಹೋಗಿದೆ. ಹಲವಾರು ದಾಖಲೆಗಳು ಕನ್ನಡ ಚಿತ್ರರಂಗದ ಗರಿ ಸೇರಿದೆ. ಕನ್ನಡ ಚಿತ್ರರಂಗದ ಮುನ್ನಡೆಗೆ ಇವೆಲ್ಲಾ ಭದ್ರ ಬುನಾದಿ ಎಂದರೆ ತಪ್ಪಿಲ್ಲ. ತಂತ್ರಜ್ಞಾನ ಸುಧಾರಣೆಯ ಜತೆಗೆ ಚಿತ್ರರಂಗ ಹಂತಹಂತವಾಗಿ ಬಣ್ಣದತ್ತ ಹೊರಳಿದ್ದು ಈ ದಶಕಗಳಲ್ಲೇ. ಜಾನಪದ, ಪೌರಾಣಿಕ ಭರಾಟೆಯನ್ನು ಕಡಿಮೆ ಮಾಡಿಕೊಂಡು ಹೊಸ ಹೊಸ ಟ್ರೆಂಡ್‌ಗಳ ಜಾಡು ಹಿಡಿಯುವ ಪ್ರವೃತ್ತಿ ಆರಂಭವಾದದ್ದು ಈ ಕಾಲಾವಧಿಯಲ್ಲಿಯೇ. ಜೇಮ್ಸ್‌ಬಾಂಡ್ ಚಿತ್ರಗಳ ಮಾದರಿಯಲ್ಲಿ ರಾಜಕುಮಾರ್ ಅವರನ್ನು ಸಿ. ಐ. ಡಿ. 999 ಮಾಡಿ ಬಂದ ಚಿತ್ರಗಳ ಸರಣಿ (ಜೇಡರ ಬಲೆಯಿಂದ ಆರಂಭ) ಕನ್ನಡದಲ್ಲಿ ಈ ಮಾದರಿಯ



ಎಂ. ವಿ. ಕೃಷ್ಣ ಸ್ವಾಮಿ ಅವರ "ಸುಬ್ಬಾಶಾಸ್ತ್ರಿ" ಎ. ಎನ್. ಮೂರ್ತಿರಾಯರ ಆಷಾಢಭೂತಿ ನಾಟಕ ಆಧಾರಿತ ಹೊಸ ಪ್ರಯೋಗ.

ಪತ್ತೇದಾರಿ ಟ್ರೆಂಡನ್ನು ಆರಂಭಿಸಲು ಕಾರಣವಾಯಿತು. ಹೀಗೆ ಈ ಇಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ಈ ರೀತಿಯ ಟ್ರೆಂಡ್ ಸೃಷ್ಟಿಸುವ ಪ್ರಕ್ರಿಯೆ ಹಲವಾರು ಬಾರಿ ಆಗಿದೆ. 1980ರಲ್ಲಿ ತೆರೆಕಂಡ **ಅಂತ**, 1982ರಲ್ಲಿ ತೆರೆಕಂಡ **ಸಾಹಸ ಸಿಂಹ** ಚಿತ್ರಗಳು ಏಕತಾನತೆಯಲ್ಲಿದ್ದ ಕನ್ನಡ ಚಿತ್ರಗಳ ಟ್ರೆಂಡನ್ನು ಬದಲಾಯಿಸಿವೆ.

ಸಿದ್ದಲಿಂಗಯ್ಯ ನಿರ್ದೇಶಿಸಿ, ರಾಜಕುಮಾರ್ ಅಭಿನಯಿಸಿದ **ಬಂಗಾರದ ಮನುಷ್ಯ** ಸೃಷ್ಟಿಸಿದ ಇತಿಹಾಸ ಕನ್ನಡ ಚಿತ್ರರಂಗ ಮರೆಯಲಾಗದಂತಹದು. 104 ವಾರಗಳ ಕಾಲ ಪ್ರದರ್ಶನಗೊಂಡು ಸೀಮಿತ ಮಾರುಕಟ್ಟೆಯಲ್ಲೇ ಚಿತ್ರವೊಂದಕ್ಕೆ ಯಾವ ರೀತಿಯ ಉತ್ತೇಜನ ದೊರೆಯುತ್ತದೆ ಎಂಬುದನ್ನು ಸಾಬೀತು ಪಡಿಸಿದ ಚಿತ್ರವಿದು. ಈ ಚಿತ್ರದ ಜಯಭೇರಿ ಕನ್ನಡ ಚಿತ್ರರಂಗಕ್ಕೆ ಒಂದು ರೀತಿಯ ಮಾನಸಿಕ ಸ್ಥೈರ್ಯ ನೀಡಿತು. ತಾರಾಮೌಲ್ಯವನ್ನು ಮೀರಿ ನಿರ್ದೇಶಕನಿಗೂ ಸಮಾನ ಸ್ಥಾನವಿದೆ ಎಂದು ನಿರೂಪಿಸಿದ ಸಾಧನೆ





ನಿರ್ದೇಶಕ ಎಸ್. ಆರ್. ಪುಟ್ಟಣ್ಣ ಕಣಗಾಲ್ ಅವರಿಂದ ಆಯಿತು. ಈ ಕಾಲಾವಧಿಯಲ್ಲಿ ವಿಜೃಂಭಿಸಿದ ನಿರ್ದೇಶಕ ಎಂದು ಪುಟ್ಟಣ್ಣನವರನ್ನು ಕರೆಯಬಹುದು. 1967ರಿಂದ 1985ರವರೆಗೆ ಮಿಂಚಿ, ಕನ್ನಡ ಚಿತ್ರರಂಗವನ್ನು ಶ್ರೀಮಂತಿಕೆಯತ್ತ ತಳ್ಳಿ ಮರೆಯಾದ ಪುಟ್ಟಣ್ಣ ತಾವು ಮಾಡಿರುವ ಸಾಧನೆಯ ಮೂಲಕ ಇತಿಹಾಸದಲ್ಲಿ ಮಿನುಗುತ್ತಿರುತ್ತಾರೆ. 1970ರಲ್ಲಿ ಚಿತ್ರರಂಗದಲ್ಲಿ ಹೊಸ ಅಲೆಯ ಪ್ರವೇಶ. ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಆಧರಿಸಿ ಪಟ್ಟಾಭಿ ರಾಮರೆಡ್ಡಿ ನಿರ್ದೇಶಿಸಿದ **ಸಂಸ್ಕಾರ**

"ಚಂದವಳ್ಳಿಯ ತೋಟ" ದಾಖಲೆ ಚಿತ್ರ. ತರಾಸು ಕಾದಂಬರಿ ಆಧರಿಸಿ ಟಿ. ವಿ. ಸಿಂಗ್ ಠಾಕೂರ್ ಇದನ್ನು ಚಲನಚಿತ್ರವಾಗಿಸಿದರು. ಉದಯಕುಮಾರ್, ರಾಜಕುಮಾರ್ ಅಭಿನಯ ಮಿಗಿಲಾಗಿದೆ.

"ಉಯ್ಯಾಲೆ" ದಿ. ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ ಚಿತ್ರ. ಕಲ್ಪನಾ - ರಾಜ್‌ಕುಮಾರ್ - ಅಶ್ವತ್ಥ್ ಅಭಿನಯದ ಮೈಲಿಗಲ್ಲು.





ಅದ್ದೂರಿ ನಿರ್ಮಾಣಕ್ಕೆ ಹೆಸರಾದ ಬಿ. ಆರ್. ಪಂತುಲು ನಿರ್ಮಿಸಿದ "ಶ್ರೀಕೃಷ್ಣದೇವರಾಯ" ಚಿತ್ರದಲ್ಲಿ ಭಾರತಿ, ರಾಜ್‌ಕುಮಾರ್, ಜಯಂತಿ.

ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆ ಚಿತ್ರಗಳ ಪ್ರವಾಹವನ್ನೇ ಹುಟ್ಟು ಹಾಕಿತು. ಇಂದಿನ ಕನ್ನಡ ಚಿತ್ರರಂಗದ ಬೆಳವಣಿಗೆಗೆ ಇವೆಲ್ಲಾ ತಳಹದಿಗಳಾಗಿವೆ. ಹಲವಾರು ಪ್ರಯೋಗಗಳಿಗೆ ಹೊಸಬರನ್ನು ಇಟ್ಟುಕೊಂಡು ಚಿತ್ರ ನಿರ್ಮಿಸುವುದಕ್ಕೆ ಇವೆಲ್ಲಾ ಪ್ರೇರಣೆಗಳಾಗಿವೆ. ಹೀಗಾಗಿಯೇ 48 ಗಂಟೆಗಳಲ್ಲಿ ಕನ್ನಡ ಸಿನಿಮಾ ತೆಗೆಯಲು ಸಾಧ್ಯವಾಗಿದೆ. ಸಿನಿಮಾಸ್ಕೋಪ್‌ನಲ್ಲಿ ಚಿತ್ರ ನಿರ್ಮಾಣಕ್ಕೆ ತೊಡಗಲು ಧೈರ್ಯ ಬಂದಿದೆ. ಹೊಸ ಅಲೆಯ ಚಿತ್ರಗಳು ರಾಷ್ಟಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ತರಲಾರಂಭಿಸಿದವು. ರಾಜಕುಮಾರ್ ಅವರಂತಹ ಮೇರು ನಟರು ಚಿತ್ರ ಜೀವನದಲ್ಲಿ ನಾಯಕರಾಗಿ 200 ಚಿತ್ರಗಳನ್ನು ಪೂರೈಸಿದರು. ಡಾಕ್ಟರೇಟ್, ಪದ್ಮಭೂಷಣ, ಫಾಲ್ಕೆ ಪ್ರಶಸ್ತಿಗಳು ಕನ್ನಡದತ್ತ ಬಂದು ಕನ್ನಡದ ಕೀರ್ತಿಯನ್ನು ಹೆಚ್ಚಿಸಲಾರಂಭಿಸಿತು. ವರ್ಷದಿಂದ ವರ್ಷಕ್ಕೆ ಮುನ್ನಡೆದ ಚಿತ್ರರಂಗದಲ್ಲಿ ಈಗ ವರ್ಷಕ್ಕೆ ಸರಾಸರಿ 80 ಚಿತ್ರಗಳು ತಯಾರಾಗುತ್ತಿರುವುದು ಈ ಎಲ್ಲ ಹಿನ್ನೆಲೆಯ ಹುಮ್ಮಸ್ಸಿನಲ್ಲೇ.

1965ರ ನಂತರದ ಮಹತ್ವದ ಬೆಳವಣಿಗೆ ಎಂದರೆ ಸಾಹಿತ್ಯ ಮತ್ತು ಸಾಹಿತಿಗಳನ್ನು ಚಿತ್ರರಂಗ ಗೌರವಿಸಿದ್ದು. ಹಾಗೆ ನೋಡಿದರೆ ವಾಕ್ಚಿತ್ರದ ಆರಂಭದ ವರ್ಷಗಳಿಂದಲೂ ಕನ್ನಡ ಚಿತ್ರರಂಗಕ್ಕೂ ಸಾಹಿತಿಗಳಿಗೂ ನಿಕಟ ಸಂಪರ್ಕವಿದೆ. ಮೊದಲವಾಕ್ಚಿತ್ರ **ಸತಿ ಸುಲೋಚನ**ದ ಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು. ಎರಡನೆಯ ವಾಕ್ಚಿತ್ರದ ಸಾಹಿತಿ ದೇವುಡು ನರಸಿಂಹಶಾಸ್ತ್ರಿ. ಮೂಕಚಿತ್ರಗಳ ಕಾಲದಲ್ಲೇ ಸಾಹಿತಿಗಳು ಚಲನಚಿತ್ರ ತಯಾರಿಕೆಯತ್ತ ಮನ ಹರಿಸಿದ್ದ ಉದಾಹರಣೆ ಇದೆ. ಕೈಲಾಸಂ, ಬಿ. ಪುಟ್ಟಸ್ವಾಮಯ್ಯ, ಅನಕೃ ಅವರುಗಳು ನೇರವಾಗಿ ಚಿತ್ರ ಸಂಭಾಷಣೆ, ಗೀತೆ ರಚನೆಗಳಿಗೆ ತೊಡಗಿ, ಚಿತ್ರರಂಗದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. 1965ರ ನಂತರ ಈ ಪ್ರವೃತ್ತಿ ಹೆಚ್ಚಾಯಿತು. ಹೆಸರಾಂತ ಸಾಹಿತಿಗಳ



ಹುಣಸೂರು ಕೃಷ್ಣಮೂರ್ತಿ ಸತ್ವಯುತ ಸಾಹಿತ್ಯಕ್ಕೆ ನಿದರ್ಶನ "ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ". ನಟ, ನಿರ್ದೇಶಕ, ನಿರ್ಮಾಪಕ, ಸಂಭಾಷಣೆ, ಗೀತ ರಚನೆಕಾರರಾಗಿ ಹುಣಸೂರು ಕೃಷ್ಣಮೂರ್ತಿಯವರದು ಬಹುಮುಖಿ ಪ್ರತಿಭೆ. ಎವರ್‌ಗ್ರೀನ್ ಪ್ರೊಡಕ್ಷನ್ಸ್ ಎಂಬ ಸ್ವಂತ ನಿರ್ಮಾಣ ಸಂಸ್ಥೆಯ ಮೂಲಕ ವೀರ ಸಂಕಲ್ಪ, ರತ್ನಮಂಜರಿ, ಕನ್ನಿಕಾಪರಮೇಶ್ವರಿ ಕತೆ, ಮಂತ್ರ ಶಕ್ತಿ ಹಾಗೂ ಅಷ್ಟದಾರಿ ಎಂಬ ಐದು ಚಿತ್ರಗಳನ್ನು ನಿರ್ಮಿಸಿದ್ದಾರೆ. 1965ರಲ್ಲಿ ಸತ್ಯಹರಿಶ್ಚಂದ್ರ ಹಾಗೂ ಮದುವೆ ಮಾಡಿ ನೋಡು ಚಿತ್ರಗಳ ಸಾಹಿತ್ಯಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ಭಕ್ತ ಕುಂಬಾರ, ಬಂಗಾರದ ಮನುಷ್ಯ, *(1973)* ಭೂತಯ್ಯನ ಮಗ ಅಯ್ಯು *(1974)*, ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ *(1981)* ಚಿತ್ರಗಳ ಸಾಹಿತ್ಯ ರಚನೆಗಾಗಿ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. 52 ಕನ್ನಡ ಚಿತ್ರಗಳಲ್ಲಿ ತಮ್ಮ ಸಾಹಿತ್ಯ ಸುಧೆ ಹರಿಸಿರುವ ಹುಣಸೂರು ಕೃಷ್ಣಮೂರ್ತಿ ಪೌರಾಣಿಕ, ಚಾರಿತ್ರಿಕ ಚಿತ್ರಗಳ ನಿರ್ದೇಶನಕ್ಕೆ ಸಿದ್ಧ ಹಸ್ತರಾಗಿದ್ದರು.

ಕೃತಿಗಳನ್ನು ಚಲನಚಿತ್ರಕ್ಕೆ ಅಳವಡಿಸಲು ನಿರ್ಮಾಪಕರು, ನಿರ್ದೇಶಕರು ಮುಂದಾದರು. ಕತೆ, ಕಾದಂಬರಿ, ಕವನ, ನಾಟಕಗಳನ್ನು ಅಳವಡಿಸುವ ಕೆಲಸ ನಡೆಯಿತು. 1960ರ ದಶಕದಲ್ಲೇ ಕೃಷ್ಣಮೂರ್ತಿ ಪುರಾಣಿಕರ "ಧರ್ಮದೇವತೆ" ಕಾದಂಬರಿ ಆಧರಿಸಿ ಟಿ.ಪಿ. ಸಿಂಗ್‌ಠಾಕೂರ್ **ಕರುಣೆಯೇ ಕುಟುಂಬದ ಕಣ್ಣು** ಚಿತ್ರವನ್ನು ನಿರ್ದೇಶಿಸಿದರು. ಕನ್ನಡ ಕಾದಂಬರಿಯನ್ನು ಆಧರಿಸಿ ತಯಾರಿಸಿದ ಮೊದಲ ವಾಕ್ಚಿತ್ರ ಇದಾಯಿತು. [ಈ ಪ್ರಯತ್ನ 1930ರಲ್ಲಿಮೂಕಿ ಚಿತ್ರಯುಗದಲ್ಲಿ ನಡೆದಿತ್ತು. ಆಗ ಗುಬ್ಬಿ ವೀರಣ್ಣನವರು ದೇವುಡು ನರಸಿಂಹ ಶಾಸ್ತ್ರಿಗಳು ಬರೆದ "ಕಳ್ಳರ ಕೂಟ" ಕಾದಂಬರಿ ಆಧರಿಸಿ ***ಹಿಸ್ ಲವ್ ಅಫೇರ್*** ಎಂಬ ಮೂಕ ಚಿತ್ರ ತಯಾರಿಸಿದ್ದರು] 1963ರಲ್ಲಿ ಮತ್ತೆ ಕೃಷ್ಣಮೂರ್ತಿ ಪುರಾಣಿಕರದೇ ಆದ **ಕುಲವಧು** ಚಲನಚಿತ್ರವಾಗಿ ತೆರೆಕಂಡಿತು. ಈ ಪರಂಪರೆ ಸುವರ್ಣಯುಗದಲ್ಲಿ ಮತ್ತಷ್ಟು ಮುಂದುವರೆಯಿತು. ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳಾದ ಕುವೆಂಪು, ದ. ರಾ. ಬೇಂದ್ರೆ, ಶಿವರಾಮಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು. ಆರ್. ಅನಂತಮೂರ್ತಿ ಅವರುಗಳೇ ಅಲ್ಲದೆ ಜನಪ್ರಿಯ ಸಾಹಿತಿಗಳಾದ ಎಸ್. ಎಲ್. ಭೈರಪ್ಪ, ಪೂರ್ಣಚಂದ್ರತೇಜಸ್ವಿ, ಕೃಷ್ಣಮೂರ್ತಿ ಪುರಾಣಿಕ, ಅನಕೃ, ತರಾಸು, ಚದುರಂಗ, ಎಂ.ಕೆ. ಇಂದಿರಾ, ತ್ರಿವೇಣಿ, ಟಿ. ಕೆ. ರಾಮರಾವ್, ಶ್ರೀಕೃಷ್ಣ ಆಲನಹಳ್ಳಿ, ಜಿ. ಎಸ್. ಶಿವರುದ್ರಪ್ಪ ಮೊದಲಾದವರ ಕೃತಿಗಳು, ಕವನಗಳು ಒಂದಲ್ಲಾ ಒಂದು ಚಿತ್ರದಲ್ಲಿ ಸೇರಿದವು.ರಾಷ್ಟ್ರಕವಿ ಕುವೆಂಪು ಅವರ ಗೀತೆಗಳನ್ನು ಚಿತ್ರ ನಿರ್ದೇಶಕರು ಹಲವಾರು ಚಿತ್ರಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. 1963ರಲ್ಲಿ **ಗೌರಿ** ಚಿತ್ರದಲ್ಲಿ ಕುವೆಂಪು ಅವರ "ಯಾವ ಜನ್ಮದ ಮೈತ್ರಿ...." ಕವನವನ್ನು ಅಳವಡಿಸಲಾಗಿದೆ. 1965ರಲ್ಲಿ **ಮಿಸ್ ಲೀಲಾವತಿ** ಚಿತ್ರದಲ್ಲಿ "ದೋಣಿಸಾಗಲಿ ಮುಂದೆ ಹೋಗಲಿ... ದೂರ ತೀರವ ಸೇರಲಿ" ಹಾಡು ಇಂದಿಗೂ ಜನಪ್ರಿಯ ಚಿತ್ರಗೀತೆಯಾಗಿದೆ. 1964ರಲ್ಲಿ **ಕಲಾವತಿ** ಚಿತ್ರದಲ್ಲಿ "ಕುಹು ಕುಹೂ... ಎನ್ನುತ ಹಾಡುವ ಚೆನ್ನದ ಕಂಠದ ಕೋಗಿಲೆಯೇ..." ಎಂಬ ಹಾಡನ್ನು ಮನ್ನಾಡೆ ಹಾಡಿದ್ದಾರೆ. ಮಾವನ ಮಗಳು

(1965) ಚಿತ್ರದಲ್ಲಿ "ನಾನೇ ವೀಣೆ ನೀನೇ ತಂತಿ..." **ಮಧುಮಾಲತಿ** (1966) ಚಿತ್ರದಲ್ಲಿ "ಷೋಡಶ ಚೈತ್ರದ ಸುಂದರಿ ನೀನು..." ಅನಿರೀಕ್ಷಿತ (1970). "ಹಂತಕನ ಸಂಚು" (1980) "ಜೀವನ ಸಂಜೀವನಾ..." ಹಾಡುಗಳು ಮುದನೀಡಿವೆ. 1963ರ **ಮನಮೆಚ್ಚಿದ ಮಡದಿ**ಯಲ್ಲಿ ಕುವೆಂಪು ಬರೆದ ದೇಶಭಕ್ತಿ ಗೀತೆ "ನಡೆ ಮುಂದೆ ನಡೆಮುಂದೆ ಹಿಗ್ಗಿ ನಡೆ ಮುಂದೆ" ಗೀತೆಯನ್ನು ಅಳವಡಿಸಲಾಗಿದೆ. ಹಾಗೆಯೇ ಹೊಸಬೆಳಕು (1982), ಕಾಮನಬಿಲ್ಲು (1983) ಚಿತ್ರಗಳಲ್ಲೂ ಕುವೆಂಪು ಗೀತೆಗಳಿವೆ. 1984ರಲ್ಲಿ ಶ್ರೀಹರ್ಷ ಅವರು ಕುವೆಂಪು ಅವರ ಪ್ರಸಿದ್ಧ **ಬೆರಳ್‌ಗೆ ಕೊರಳ್** ನಾಟಕವನ್ನು ಚಲನಚಿತ್ರವಾಗಿಸಿದರು. ಹಳಗನ್ನಡದಲ್ಲೇ ಸಂಭಾಷಣೆಗಳೂ ಇದ್ದ ಈ ಚಿತ್ರ 1984-85ನೇ ಸಾಲಿನ ತೀರ್ಪುಗಾರರ ವಿಶೇಷ ರಾಜ್ಯ ಪ್ರಶಸ್ತಿ ಪಡೆಯಿತು.




ರಾಜ್‌ಕುಮಾರ್ ಅಭಿನಯದ 100ನೇ ಚಿತ್ರ "ಭಾಗ್ಯದ ಬಾಗಿಲು"

ದ. ರಾ. ಬೇಂದ್ರೆ ಅವರು 1955ರಲ್ಲಿ **ವಿಚಿತ್ರ ಪ್ರಪಂಚ** ಚಿತ್ರಕ್ಕೆ ಏಳುಗೀತೆ ಹಾಗೂ ಸಂಭಾಷಣೆ ಬರೆದರು. 1963ರಲ್ಲಿ **ಕುಲವಧು** ಚಿತ್ರದಲ್ಲಿ ಬೇಂದ್ರೆಯವರ "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ" ಕವನವನ್ನು ಅಳವಡಿಸ ಲಾಯಿತು. ಈ ಹಾಡನ್ನು ಇಂದೂ ನಾವು ಬಾನುಲಿಯಲ್ಲಿ ಆಲಿಸುತ್ತಿದ್ದೇವೆ. **ಬೆಳ್ಳಿಮೋಡ** ಚಿತ್ರದಲ್ಲಿ ಮೂಡಣ ಮನೆಯ ಮುತ್ತಿನ ನೀರಿನ ಎರಕಾವಾ ಹೊಯ್ದಾ... ಪರಿಣಾಮಕಾರಿ ಹಾಡು. **ಅರಿಶಿನ ಕುಂಕುಮ** (1970) ಚಿತ್ರದಲ್ಲಿ "ಇಳಿದು ಬಾ ತಾಯಿ ಇಳಿದು ಬಾ...", **ಚಕ್ರತೀರ್ಥ** (1967)ದಲ್ಲಿ "ಕುಣಿಯೋಣ ಬಾ...", **ಶರಪಂಜರ** ದಲ್ಲಿ (1971) "ಉತ್ತರ ಧ್ರುವದಿಂ... ". **ಶೃಂಗಾರ ಮಾಸ** (1984) ದಲ್ಲಿ "ಬಂತಿದೋ ... ಶೃಂಗಾರ ಮಾಸ.." ಕವನ 1994ರ **ಪ್ರೇಮತರಂಗ** ಚಿತ್ರದಲ್ಲಿ "ನೀ ಹೀಂಗ ನೋಡಬ್ಯಾಡ ನನ್ನ..." ಕವನ ಅಳವಡಿಸಿ ಕೊಳ್ಳಲಾಗಿದೆ. ಶಿವರಾಮಕಾರಂತರು ಮೂಕಿ ಚಿತ್ರ ನಿರ್ಮಾಣ ಕಾಲದಲ್ಲೇ ಆ ಸಾಹಸಕ್ಕೆ ಕೈ ಹಾಕಿ ದವರು. ಅವರ ಕಾದಂಬರಿ **ಚೋಮನ ದುಡಿ** ಚಲನಚಿತ್ರವಾಗಿ



ಶತಚಿತ್ರ ಪೂರೈಸಿದ ರಾಜ್ ಕುಮಾರ್‌ಗೆ ನಡೆದ ಸನ್ಮಾನ ಸಮಾರಂಭದಲ್ಲಿ ಉದಯಕುಮಾರ್ ಅವರಿಂದ ಅಭಿನಂದನೆ

ರಾಜ್‌ಕುಮಾರ್



ರಾಷ್ಟ್ರ ಪ್ರಶಸ್ತಿಯನ್ನೇ ಗಳಿಸಿತು. ಅವರೇ **ಮಲೆಯ ಮಕ್ಕಳು** (1978) ಚಿತ್ರ ನಿರ್ದೇಶಿಸಿದರು. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ **ಕಾಕನಕೋಟೆ** (1977) ಚಲನಚಿತ್ರವಾಗಿದೆ. ಯು. ಆರ್. ಅನಂತಮೂರ್ತಿ ಅವರ ಕಾದಂಬರಿ ***ಸಂಸ್ಕಾರ*** (1970) ಕನ್ನಡ ಚಲನಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರಗಳಿಗೇ ನಾಂದಿ ಹಾಡಿದ ಚಿತ್ರ. **ಬರ, ಅವಸ್ಥೆ, ಘಟಶ್ರಾದ್ಧ** ಅವರದೇ ಕತೆ. 1975ರಲ್ಲಿ **ಕಂಕಣ** ಚಿತ್ರಕ್ಕೆ ಅನಂತಮೂರ್ತಿ ಸಂಭಾಷಣೆ ಬರೆದಿದ್ದಾರೆ. ಎಸ್. ಎಲ್. ಭೈರಪ್ಪನವರ ಕಾದಂಬರಿ **ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ** ಚಲನಚಿತ್ರಗಳಾಗಿ ಜನಪ್ರಿಯವಾಗಿವೆ.

ಕನ್ನಡ ಚಲನ ಚಿತ್ರಗಳಿಗೆ ಸಾಹಿತ್ಯ ಸ್ಪರ್ಶ ನೀಡುವ ಈ ಪ್ರವೃತ್ತಿಯಿಂದಾಗಿ ಕನ್ನಡ ಚಿತ್ರಗಳಲ್ಲಿ ಗುಣಾತ್ಮಕ ಬೆಳವಣಿಗೆ ಕಂಡು ಬಂತು. ಈ ಪರಂಪರೆ ಇಂದಿಗೂ ಬೆಳೆದು ಬಂದಿರುವುದರಿಂದ ಕನ್ನಡ ಚಿತ್ರಗಳಲ್ಲಿ ಸಾಹಿತ್ಯದ ಗಂಧವಿದ್ದು ಪ್ರೌಢತೆ ಕಂಡು ಬರುತ್ತಿದೆ.

ಈ 20 ವರ್ಷಗಳ ಕಾಲಾವಧಿಯಲ್ಲಿ ಪೌರಾಣಿಕ, ಜಾನಪದ ಚಿತ್ರಗಳ ತಯಾರಿಕೆ ಇಳಿಮುಖವಾಗಿ ಸಾಮಾಜಿಕ ಚಿತ್ರಗಳ ತಯಾರಿಕೆ ಹೆಚ್ಚಿತು. ಸಾಮಾಜಿಕ ಚಿತ್ರ ತಯಾರಿಕೆ ಹೆಚ್ಚಾದಂತೆ ನಡುನಡುವೆ



ಉದಯಕುಮಾರ್ - ಕಲ್ಪನಾ "ಹೂವು ಮುಳ್ಳು" ಚಿತ್ರದಲ್ಲಿ. ಸಾಹಸ ಚಿತ್ರಗಳಲ್ಲಿ ಉದಯಕುಮಾರ್ ಹೆಸರಾದರು.

ಬಂದ ಒಂದೊಂದು ಪೌರಾಣಿಕ, ಐತಿಹಾಸಿಕ ಚಿತ್ರಗಳು ಕೂಡ ಮತ್ತೆ ಜನಪ್ರಿಯವಾದವು. ಇದು ಪರಂಪರೆಯ ಉಳಿವು. **ಬೆರೆತ ಜೀವ** (1965). **ಬೆಟ್ಟದ ಹುಲಿ** (1965) **ಮಿಸ್ ಲೀಲಾವತಿ** (1965),



**ಮದುವೆ ಮಾಡಿನೋಡು** (1965), **ಬದುಕುವ ದಾರಿ** (1968) ಮೊದಲಾದ ಸಾಮಾಜಿಕ, ಹಾಸ್ಯ ಚಿತ್ರಗಳ ಜನಪ್ರಿಯತೆಯ ನಡುವೆಯೇ, **ನಾಗಪೂಜಾ** (1965), **ಚಂದ್ರಹಾಸ** (1965) **ಸರ್ವಜ್ಞಮೂರ್ತಿ** (1965), **ಸಂತ ತುಕಾರಾಂ** (1963), **ಮಹಾಸತಿ ಅನಸೂಯ** (1965), **ಮಂತ್ರಾಲಯ ಮಹಾತ್ಮೆ** (1966) ಚಿತ್ರಗಳು ಜನಕ್ಕೆ ಹತ್ತಿರವಾದವು. ವಿಜಯಾ ಪ್ರೊಡಕ್ಷನ್ಸ್ ತಯಾರಿಕೆ **ಸತ್ಯ ಹರಿಶ್ಚಂದ್ರ**ವಂತೂ ಇಂತಹ ಕತೆಗಳಿಗೆ ಮುಕ್ತಾಯವೇ ಇಲ್ಲ ಎನ್ನುವ ಭಾವನೆ ಮೂಡಿಸಿತು. ಮತ್ತೊಂದು ಗಮನಾರ್ಹ ಸಂಗತಿ ಎಂದರೆ 1954ರಿಂದ ಇಲ್ಲಿಯವರೆಗೆ ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ ಚಿತ್ರಗಳ ನಾಯಕನ ಸ್ಥಾನ ತುಂಬುವ ನಟ ರಾಜಕುಮಾರ್ ಅವರನ್ನು ಹೊರತು ಪಡಿಸಿದರೆ ಮತ್ತೊಬ್ಬರು ಕಾಣಲಿಲ್ಲ ಎಂಬುದು. ಇಂತಹ ಪಾತ್ರಗಳನ್ನು ಲೀಲಾಜಾಲ ವಾಗಿ ಅಭಿನಯಿಸುವ ಕಲೆ ಪಡೆದಿರುವ ಡಾ|| ರಾಜ್ ಕುಮಾರ್, **ಶ್ರೀಕೃಷ್ಣದೇವರಾಯ**, **ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ** (1971), **ಭಕ್ತ ಕುಂಬಾರ** (1974), **ಶ್ರೀನಿವಾಸ ಕಲ್ಯಾಣ** (1974) **ಮಯೂರ** (1975), **ಬಬ್ರುವಾಹನ**, **ಭಕ್ತ ಪ್ರಹ್ಲಾದ** ಚಿತ್ರಗಳ ಅಭಿನಯದ ಮೂಲಕ ಇತಿಹಾಸ ಸೃಷ್ಟಿಸಿದರು. ಇಂತಹ ಚಿತ್ರಗಳು



"ಸುವರ್ಣ ಭೂಮಿ" ಚಿತ್ರದಲ್ಲಿ ಪಂಢರೀಬಾಯಿ-
ಸುದರ್ಶನ್ ಡಕಾಯಿತನ ಪಾತ್ರದಲ್ಲಿ ಸುದರ್ಶನ್.

"ಒಂದೇ ಕುಲ ಒಂದೇ ದೈವ" ಕಲ್ಪನಾ.

ಪರಂಪರೆಯ ಪ್ರತೀಕವಾಗಿಯೇ ಕಂಡು ಬಂದಿವೆ. ಲೋಕೇಶ್ ಅಭಿನಯದ **ಭಕ್ತ ಸಿರಿಯಾಳ, ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಮಹಿಮೆ, ಭೂಮಿಗೆ ಬಂದ ಭಗವಂತ** ಚಿತ್ರಗಳು ಕೂಡ ಭಕ್ತಿ ಪರಂಪರೆಯನ್ನು ಪ್ರತಿಪಾದಿಸಿದವು. ಹುಣಸೂರು ಕೃಷ್ಣಮೂರ್ತಿಗಳ ಸಾಹಿತ್ಯ, ಸಿರಿಯಾಳದ ಹಿನ್ನೆಲೆಯಲ್ಲಿತ್ತು ಎಂಬುದನ್ನು ಮರೆಯುವಂತಿಲ್ಲ.

ಈ ಅವಧಿಯಲ್ಲಿಯೇ ಹಲವಾರು ನಾಯಕರು ರಂಗ ಪ್ರವೇಶಿಸಿದ್ದಾರೆ. 15 ಮಂದಿ ನಾಯಕರು ಪ್ರಮುಖರಾಗಿ ಪ್ರಭಾವಶಾಲಿ ನಟರಾಗಿ ಉದಯಿಸಿದ್ದಾರೆ. **ಮಧುರಮಿಲನದ** ಮೂಲಕ ಶ್ರೀನಾಥ್ (1969) **ಚೌಕದದೀಪದ** ಮೂಲಕ ಗಂಗಾಧರ್ (ರಾಜೇಂದ್ರಕುಮಾರ್) (1969), **ನಮ್ಮ ಊರು** ಮುಖಾಂತರ ರಾಜೇಶ್ (1968), **ನಾಗರಹಾವು** ಮೂಲಕ ವಿಷ್ಣುವರ್ಧನ್ ಮತ್ತು ಅಂಬರೀಷ್ (1972), (ವಿಷ್ಣುವರ್ಧನ್ ಇದಕ್ಕೆ ಮುನ್ನ ಬಿಡುಗಡೆಯಾಗಿದ್ದ **ವಂಶವೃಕ್ಷ** ಚಿತ್ರದಲ್ಲಿ ಕುಮಾರ್ ಎಂಬ ತಮ್ಮ ಮೂಲ ಹೆಸರಿನಲ್ಲೇ ಅಭಿನಯಿಸಿದ್ದರು.) **ಬೀಸಿದ ಬಲೆಯಲ್ಲಿ** ರಾಂಗೋಪಾಲ್ (1973), **ಎಡಕಲ್ಲು ಗುಡ್ಡದ ಮೇಲೆ** ಮೂಲಕ ಚಂದ್ರಶೇಖರ್ (1973), **ಭೂತಯ್ಯನ ಮಗ ಅಯ್ಯು** ಮೂಲಕ ಲೋಕೇಶ್



ಕೆಲಕಾಲ ನಾಯಕನಟನಾಗಿದ್ದು ಅಸ್ತಂಗತರಾದ ರಮೇಶ್, ಬಿ. ಸರೋಜಾದೇವಿ ಅವರೊಂದಿಗೆ "ಲಕ್ಷ್ಮೀ ಸರಸ್ವತಿ" ಚಿತ್ರದಲ್ಲಿ.

(1974), **ಸಂಕಲ್ಪ** ಚಿತ್ರದ ಮೂಲಕ ಅನಂತನಾಗ್ (1973), **ವಿಜಯವಾಣಿ** ಮೂಲಕ ಅಶೋಕ್ (1976), **ಫಲಿತಾಂಶದ** ಮೂಲಕ ಜೈಜಗದೀಶ್ (1976), **ಬಬ್ರುವಾಹನದ** ಮೂಲಕ ರಾಮಕೃಷ್ಣ (1977), **ತಬ್ಬಲಿಯು ನೀನಾದೆ ಮಗನೆ** ಚಿತ್ರದ ಮೂಲಕ ಮಾನು (1978), **ಒಂದಾನೊಂದು ಕಾಲದಲ್ಲಿ** ಚಿತ್ರದ ಮೂಲಕ ಶಂಕರ್‌ನಾಗ್ (1978) ನಾಯಕನಟರಾಗಿ ಚಿತ್ರರಂಗ ಪ್ರವೇಶಿಸಿದರು. ವಿಷ್ಣುವರ್ಧನ್, ಅಂಬರೀಷ್, ಶ್ರೀನಾಥ್ ಶತಚಿತ್ರ ನಟರಾದರು. ಅನಂತನಾಗ್ ಶತಕದ ಸಮೀಪ ಇದ್ದಾರೆ. ಆದರೆ 1996ರಲ್ಲೂ ಡಾ|| ರಾಜ್‌ಕುಮಾರ್ ಅವರೇ ಕನ್ನಡ ಚಿತ್ರರಂಗದ ಸೂಪರ್ ಸ್ಟಾರ್. 1965ರಿಂದ 1985ರ ವರೆಗಿನ ಕಾಲಾವಧಿಯಲ್ಲಿ ಚಿತ್ರರಂಗದ ಮೇಲೆ ರಾಜ್‌ಕುಮಾರ್ ಬೀರಿದ ಪ್ರಭಾವ, ಆಕರ್ಷಣೆ, ಇಡೀ ಕಾಲಾವಧಿಯನ್ನು ರಾಜಕುಮಾರ್ ಯುಗವನ್ನಾಗಿ ಪರಿವರ್ತಿಸಿತು. 1968ರಲ್ಲಿ ಬಿಡುಗಡೆಯಾದ ಎಸ್. ಜೆ. ಕೆ. ಪ್ರೊಡಕ್ಷನ್ಸ್, ಲಾಂಛನದ, ಕೆ. ಎಸ್. ಎಲ್. ಸ್ವಾಮಿ (ರವಿ) ನಿರ್ದೇಶನದ **ಭಾಗ್ಯದ ಬಾಗಿಲು** ವರನಟ ರಾಜಕುಮಾರ್ ನಾಯಕನಟನಾಗಿ ಕಾಣಿಸಿಕೊಂಡ ನೂರನೇ ಚಿತ್ರ. ಆಗ ಅವರಿಗೆ ನಾಡಿನಾದ್ಯಂತ ಸಂಭ್ರಮದ ಸನ್ಮಾನ. ಅವರ ನೂರು ಚಿತ್ರಗಳ ತುಣುಕುಗಳನ್ನು ಸೇರಿಸಿ **ನಟಸಾರ್ವಭೌಮ** ಚಿತ್ರ ತಯಾರಿಸಿದ್ದು ಒಂದು ಹೊಸ ಪ್ರಯೋಗ. ಮುಂದೆ ಅದೇ ಬಿರುದು ರಾಜಕುಮಾರ್ ಅವರದಾಯಿತು. ಮುಂದಿನ 20 ವರ್ಷಗಳಲ್ಲಿ ರಾಜ್‌ಕುಮಾರ್ ಮತ್ತೂ ನೂರು ಚಿತ್ರಗಳಲ್ಲಿ ಅಭಿನಯಿಸಿ 200 ಚಿತ್ರಗಳಲ್ಲಿ

ನಾಯಕನಾಗಿ ಅಭಿನಯಿಸಿದ ಕನ್ನಡದ ಏಕೈಕ ಕಲಾವಿದರಾದರು. 1988ರಲ್ಲಿ ಬಿಡುಗಡೆಯಾದ ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ **ದೇವತಾ ಮನುಷ್ಯ** ರಾಜ್ ಕುಮಾರ್ ಅಭಿನಯದ 200ನೇ ಚಿತ್ರ. ಸಂಖ್ಯೆ ದೃಷ್ಟಿಯಿಂದ **ಶಿವ ಮೆಚ್ಚಿದ ಕಣ್ಣಪ್ಪ** 200ನೇ ಚಿತ್ರವಾಗುತ್ತದೆ. ಆದರೆ ಅದರಲ್ಲಿ ರಾಜಕುಮಾರ್ ಗೌರವನಟರಾಗಿರುವುದರಿಂದ ಆ ಚಿತ್ರವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಪೂರ್ಣ ಪ್ರಮಾಣದ ನಾಯಕ ಪಾತ್ರ ವಹಿಸಿರುವ ಚಿತ್ರಗಳ ಲೆಕ್ಕ ತೆಗೆದುಕೊಂಡಾಗ "ದೇವತಾ ಮನುಷ್ಯ" 200ನೇ ಚಿತ್ರವಾಗುತ್ತದೆ.

1974ರಲ್ಲಿ **ಸಂಪತ್ತಿಗೆ ಸವಾಲ್** ಚಿತ್ರದಲ್ಲಿ ಹಾಡೊಂದನ್ನು ಹಾಡುವ ಮೂಲಕ ಗಾಯಕರೂ ಆದ ರಾಜ್‌ಕುಮಾರ್, ವೃತ್ತಿ ರಂಗಭೂಮಿಯ ಪರಂಪರೆಯನ್ನು ಎತ್ತಿ ಹಿಡಿದ ನಟರೂ ಆಗಿದ್ದಾರೆ. ಚಿತ್ರಗಳಲ್ಲಿ ತಮ್ಮ ಹಾಡನ್ನು ತಾವೇ ಹಾಡುವ ಪರಂಪರೆಯಲ್ಲಿದ್ದ ಎಂ.ವಿ. ಸುಬ್ಬಯ್ಯನಾಯ್ಡು, ಕೆಂಪರಾಜು, ಆರ್. ನಾಗೇಂದ್ರರಾವ್, ಹೊನ್ನಪ್ಪ ಭಾಗವತರ್ ಪರಂಪರೆಯನ್ನು ಕನ್ನಡದಲ್ಲಿ ಪ್ರತಿನಿಧಿಸುತ್ತಿರುವ ಏಕೈಕ ಕಲಾವಿದರೆಂದರೆ ರಾಜಕುಮಾರ್. ಅದಕ್ಕಾಗಿಯೇ ಅವರಿಗೆ ರಾಷ್ಟ್ರದ ಉತ್ತಮ ಗಾಯಕ ಪ್ರಶಸ್ತಿಯೂ



ಕಲ್ಪನಾ - ಅನಂತನಾಗ್ "ಬಯಲುದಾರಿ". ಅನಂತನಾಗ್‌ಗೆ ನಾಯಕ ನಟ ಸ್ಥಾನ ಭದ್ರ ಪಡಿಸಿದ ಚಿತ್ರ


ಲಭ್ಯವಾಗಿದೆ. ಅವರ ಚಿತ್ರರಂಗದ ಸಾಧನೆಗಾಗಿ ರಾಷ್ಟ್ರದ ಅತ್ಯುನ್ನತ ಚಲನಚಿತ್ರ ಪ್ರಶಸ್ತಿ "ದಾದಾ ಸಾಹೇಬ್ ಫಾಲ್ಕೆ" ಪ್ರಶಸ್ತಿಯೂ ಬಂದಿದೆ.

**ಬೇಡರ ಕಣ್ಣಪ್ಪ** ಚಿತ್ರದ ನಾಯಕನಾಗಿ, ಪ್ರಶಂಸೆಗೆ ಪಾತ್ರರಾದ ರಾಜಕುಮಾರ್,ಹೇಗೆ ತಾರಾಮೌಲ್ಯ, ತಾರಾಪದ್ಧತಿಯ ಸೃಷ್ಟಿಗೆ ಕಾರಣರಾದರೋ ಅದೇ ರೀತಿ ಕನ್ನಡ ಚಿತ್ರರಂಗದ ಗತಿಯನ್ನು ಆಗಾಗ ಬದಲಿಸುತ್ತಾ, ಅಭಿಮಾನಿಗಳಿಗೆ ಬೇಕಾದ ವಸ್ತು ವೈವಿಧ್ಯ ನೀಡುತ್ತಾ ಬಂದಿದ್ದಾರೆ. 1968ರಲ್ಲಿ ದೊರೆಭಗವಾನ್

ನಿರ್ದೇಶಕದ್ವಯರು ಜೇಮ್ಸ್ ಬಾಂಡ್ ಚಿತ್ರಗಳ ಮಾದರಿಯ **ಜೇಡರ ಬಲೆ** ನಿರ್ಮಿಸಿ ರಾಜಕುಮಾರ್ ಅವರಿಗೆ ಸಿ. ಐ. ಡಿ. 999 ಪಾತ್ರ ನೀಡಿದರು. ರಾಜಕುಮಾರ್ ಅವರ ಮೊದಲ ಸಾಮಾಜಿಕ **ರಾಯರ ಸೊಸೆ**ಯಂತೆಯೇ ಇದು ಹೊಸ ಟ್ರೆಂಡ್ ಸೃಷ್ಟಿಸಿತು. ಈ ಚಿತ್ರದ ಜನಪ್ರಿಯತೆ ಹೀಗೆಯೇ ಮುಂದುವರೆದು, ***ಗೋವಾದಲ್ಲಿ ಸಿ.ಐ.ಡಿ 999*** (1968), ***ಆಪರೇಷನ್ ಜಾಕ್‌ಪಾಟ್‌ನಲ್ಲಿ ಸಿ.ಐ.ಡಿ999*** (1969), **ಆಪರೇಷನ್ ಡೈಮಂಡ್ ರಾಕೆಟ್** (1978) ಚಿತ್ರಗಳು ಬಂದವು. ಈ ಚಿತ್ರಗಳ ಮೂಲಕ ಯುವಕರನ್ನು ರಾಜ್‌ಕುಮಾರ್ ಸೆಳೆದರು. ಹೊಸ ಪೀಳಿಗೆಯವರೂ ರಾಜಕುಮಾರ್ ಅಭಿಮಾನಿಗಳಾದರು. ಕನ್ನಡ ಚಿತ್ರರಂಗದ ಟ್ರೆಂಡ್ ಕೂಡ ಬದಲಾಯಿತು.

## ಪುಟ್ಟಣ್ಣ ಕಣಗಾಲ್


1965ರ ನಂತರದ ಮಹತ್ವದ ಬೆಳವಣಿಗೆ ಎಂದರೆ ಚಲನಚಿತ್ರ ನಿರ್ದೇಶಕನ ಮಾಧ್ಯಮ ಎಂಬುದನ್ನು ಪುಟ್ಟಣ್ಣ ಕಣಗಾಲ್ ರುಜುವಾತು ಪಡಿಸಿದ್ದು. 1967ರಲ್ಲಿ **ಬೆಳ್ಳಿಮೋಡ** ಚಿತ್ರದ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದ ಪುಟ್ಟಣ್ಣ ಕಣಗಾಲ್, ತಾರಾ ಮೌಲ್ಯವಿಲ್ಲದೆ, ಸತ್ವಶಾಲಿ ಕಥೆಯನ್ನೇ ನಂಬಿದರೆ ಯಶಸ್ಸು ಖಚಿತ ಎಂಬುದನ್ನು ಸಾಧಿಸಿ ತೋರಿಸಿದರು. ಅವರ ಚಿತ್ರಗಳಲ್ಲಿ ಕತೆಯೇ ನಾಯಕ. ಈ ಕಾರಣದಿಂದಾಗಿ ಚಿತ್ರರಂಗದ ಇತಿಹಾಸದಲ್ಲಿ ಅವರ ಹೆಸರು ಸ್ಥಿರ.




ಪುಟ್ಟಣ್ಣ ಕಣಗಾಲ್ : ನಿರ್ದೇಶಕನಿಗೆ ತಾರಾ ಮೌಲ್ಯ ತಂದ ಹೀರೊ.

ಬಿ. ಆರ್. ಪಂತುಲು ಅವರ ಬಳಿ 1954ರಲ್ಲಿ ಡೈಲಾಗ್ ಕೋಚ್ ಆಗಿ ಸೇರಿದ ಪುಟ್ಟಣ್ಣ ನಂತರದ ದಿನಗಳಲ್ಲಿ ಪದ್ಮಿನಿ ಪಿಕ್ಚರ್ಸ್‌ನ ಸಹಾಯಕ ನಿರ್ದೇಶಕರಾಗಿ ಬಡ್ತಿ ಪಡೆದರು. ಒಂಬತ್ತು ವರ್ಷ ಅಲ್ಲಿ ತರಬೇತಿ. 1967ರಿಂದ ಸ್ವತಂತ್ರ ನಿರ್ದೇಶನ. ಮೊದಲಿಗೆ ಪುಟ್ಟಣ್ಣ ಮಲಯಾಳಂ ಭಾಷೆಯಲ್ಲಿ **ಪೂಚ್ಚಕಣ್ಣು** ಎಂಬ ಚಿತ್ರ ನಿರ್ದೇಶನ ಮಾಡಿದರು.

1967ರಲ್ಲಿ ಎಸ್. ಆರ್. ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿ ತೆರೆಕಂಡ **ಬೆಳ್ಳಿಮೋಡ** ಅಪಾರ ಯಶಸ್ಸು ಗಳಿಸಿದ ಚಿತ್ರ. ತ್ರಿವೇಣಿ ಅವರ ಕಥೆ ಆಧರಿಸಿದ ಈ ಚಿತ್ರದ ತಾರಾಗಣದಲ್ಲಿ ಕಲ್ಯಾಣ್ ಕುಮಾರ್, ಕಲ್ಪನಾ, ಕೆ. ಎಸ್. ಅಶ್ವತ್ಥ್, ಪಂಡರಿಭಾಯಿ, ಬಾಲಕೃಷ್ಣ, ಜಯ, ಗಣಪತಿಭಟ್, ಬೇಬಿರಾಣಿ ಮೊದಲಾದವರ ತಾರಾಗಣವಿದ್ದರೂ ಚಿತ್ರದ ಯಶಸ್ಸಿಗೆ ನಿರ್ದೇಶಕನೇ ಕಾರಣ ಎಂಬುದು ಪದೇ ಪದೇ ವ್ಯಾಖ್ಯಾನವಾಗುತ್ತಿತ್ತು.



ಮಧ್ಯಮ ವರ್ಗದ ಹಿನ್ನೆಲೆಯಲ್ಲಿ ಮದುವೆ ವಯಸ್ಸಿನ ಹೆಣ್ಣೊಬ್ಬಳು ಅನುಭವಿಸುವ ಯಾತನೆ ಕುರಿತ ಕತೆ ಎಲ್ಲರನ್ನು ಸೆಳೆಯಿತು. ಕತೆಯೇ ಉತ್ತಮ ಚಿತ್ರಗಳ ಬಂಡವಾಳ ಎಂಬುದನ್ನರಿತಿದ್ದ ಪುಟ್ಟಣ್ಣಕಣಗಾಲ್ ಮುಂದೆ ತಮ್ಮ ಎಲ್ಲ ಚಿತ್ರಗಳಿಗೂ ಅದೇ ಸೂತ್ರವನ್ನು ಅನ್ವಯಿಸಿದರು. **ಸಾಕುಮಗಳು** (1963) ಚಿತ್ರದಿಂದ ತೆರೆಗೆ ಬಂದಿದ್ದ ಕಲ್ಪನಾ, ಅಂದು ಇನ್ನೂ ನಾಯಕಿಯಾಗಿ ತಮಸ್ಥಾನ ಕಂಡು ಕೊಂಡಿರಲಿಲ್ಲ. ಜಯಂತಿ, ಲೀಲಾವತಿ, ಹರಿಣಿ ಇನ್ನೂ ನಾಯಕಿಯ ಪಟ್ಟದಿಂದ ಕದಲಿರಲಿಲ್ಲ ಆದ್ದರಿಂದ ಕಲ್ಪನಾ, **ಚಿನ್ನದಗೊಂಬೆಯ** ಎರಡನೆಯ ನಾಯಕಿ. **ಪತಿಯೇ ದೈವದಲ್ಲೂ** ಅದೇ. ಅನಂತರ ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ **ನಾಂದಿಯಲ್ಲೂ** ಕೆಲಕಾಲ ಮಾತ್ರ ಬಂದು ಹೋಗುವ ಪಾತ್ರದಲ್ಲಿ ಅಭಿನಯಿಸಿದರು. 1965ರಲ್ಲಿ **ಕವಲೆರಡು ಕುಲ ಒಂದು** ಎಂಬ ಒಂದೇ ಚಿತ್ರದಲ್ಲಿ ಕಾಣಿಸಿಕೊಂಡರು. 1966ರಲ್ಲಿ **ಬಾಲನಾಗಮ್ಮ** , ಶ್ರೀಕನ್ನಿಕಾ



"ಬಿಳಿಹೆಂಡ್ತಿ" - ಮಾರ್ಗರೆಟ್ ಥಾಂಸನ್, ಅಂಬರೀಷ್

ಧರಣಿ ಮಂಡಲ ಮಧ್ಯದೊಳಗೆ - ಶ್ರೀನಾಥ್, ಪದ್ಮಾವಾಸಂತಿ

**ಪರಮೇಶ್ವರಿ ಕಥೆ** ಎರಡು ಚಿತ್ರಗಳಲ್ಲಿ ಅಭಿನಯ. 1967ರಲ್ಲಿ ಪುಟ್ಟಣ್ಣ ಕಣಗಾಲರ "ಬೆಳ್ಳಿಮೋಡ" ಬರುವವರೆಗೆ ಅವರು ಮಿನುಗುತಾರೆ ಆಗಿರಲೇ ಇಲ್ಲ. **ಬೆಳ್ಳಿಮೋಡ** ದಿಂದ ಪುಟ್ಟಣ್ಣಕಣಗಾಲ್ ಹಾಗೂ ಕಲ್ಪನಾ ಇಬ್ಬರೂ ಚಿತ್ರರಂಗದಲ್ಲಿ ಪ್ರತಿಭಾವಂತ ತಾರೆಯರಾಗಿ ಉದಯಿಸಿದಂತಾಯಿತು.

ಕಲ್ಪನಾ ಅವರ ಭಾವುಕ ಅಭಿನಯ ಶೈಲಿಯೇ ಬಲು ಜನಪ್ರಿಯ. ಹೀಗಾಗಿ ಪುಟ್ಟಣ್ಣ ಕಣಗಾಲ್ ತಾವು ಚಿತ್ರೀಕರಿಸುವ ಪಾತ್ರದಲ್ಲಿ ಕಲ್ಪನಾಳನ್ನು ರೂಪಿಸುತ್ತಿದ್ದರು. ಹೀಗಾಗಿ ಮುಂದೆ **ಗೆಜ್ಜೆಪೂಜೆ**, **ಶರಪಂಜರ**, **ಕಪ್ಪು-ಬಿಳುಪು** ಚಿತ್ರಗಳು ಕಲ್ಪನಾಮಯವಾಗಿದ್ದವು. ನಿರ್ದೇಶಕನಾಗಿ ಆರಂಭಿಸಿದ ಬೆಳ್ಳಿಮೋಡದಿಂದ ಆರಂಭಿಸಿ ಪುಟ್ಟಣ್ಣಕಣಗಾಲ್, 1985ರವರೆಗೆ 23 ಚಿತ್ರಗಳನ್ನು ನಿರ್ದೇಶಿಸಿದ್ದಾರೆ. 1985ರಲ್ಲಿ ಬಿಡುಗಡೆಯಾದ **ಮಸಣದ ಹೂವು** ಅವರು ನಿರ್ದೇಶಿಸಿದ ಕೊನೆಯ ಚಿತ್ರ. ಈ ಚಿತ್ರ ಪೂರ್ಣಗೊಳ್ಳುವ ಮುನ್ನವೇ ಅವರು ನಿಧನರಾದರು. ಚಿತ್ರದ ಉಳಿದ ಭಾಗವನ್ನು ಕೆ.ಎಸ್. ಎಲ್. ಸ್ವಾಮಿ (ರವಿ) ಸಂಪೂರ್ಣಗೊಳಿಸಿ ತೆರೆಗೆ ತಂದರು.

ಬೆಳ್ಳಿ ತೆರೆಯ ಮೇಲೆ ತಮ್ಮದ್ದೇ ಶೈಲಿಯ ಮೂಲಕ ವಿಜೃಂಭಿಸಿದ ಪುಟ್ಟಣ್ಣನವರು ಪರಿಚಯಿಸಿದ ಕಲಾವಿದರು ಅನೇಕ. **ನಾಗರಹಾವು** ಮೂಲಕ ವಿಷ್ಣುವರ್ಧನ್, ಅಂಬರೀಷ್, **ಎಡಕಲ್ಲುಗುಡ್ಡದ ಮೇಲೆ** ಮೂಲಕ ಚಂದ್ರಶೇಖರ್, **ಉಪಾಸನೆ**ಯಲ್ಲಿ ಡಾ. ಗೋವಿಂದ ಮಣ್ಣೂರ್, **ಬಿಳಿ ಹೆಂಡ್ತಿ**ಯಲ್ಲಿ ಅನಿಲ್ ಕುಮಾರ್, **ಫಲಿತಾಂಶದ** ಮೂಲಕ ಜೈಜಗದೀಶ್, **ಅಮೃತಘಳಿಗೆ**ಯಲ್ಲಿ ಶ್ರೀಧರ್ ಅವರುಗಳನ್ನು ನಾಯಕನಟರನ್ನಾಗಿ ಪರಿಚಯಿಸಿದರು. ಪುಟ್ಟಣ್ಣ ಕಣಗಾಲರ ಚಿತ್ರಕಥೆಯ ಆಯ್ಕೆಯೇ ನಾಯಕಿ ಪ್ರಧಾನವಾಗಿರುತ್ತಿದ್ದುದರಿಂದ **ನಾಗರ ಹಾವು** ಬಿಟ್ಟು ಅವರ ಎಲ್ಲ ಚಿತ್ರಗಳಲ್ಲೂ ನಾಯಕರ ಸ್ಥಾನ ಗೌಣವಾಗಿರುತ್ತಿತ್ತು. ಆದರೆ ನಾಯಕಿಯ ಪಾತ್ರಗಳು ಮೆರೆಯುತ್ತಿದ್ದವು. ಆರಂಭದ ಚಿತ್ರಗಳಲ್ಲಿ ಕಲ್ಪನಾ, ನಂತರ ಆರತಿ ಕೊನೆಯ ದಿನಗಳಲ್ಲಿ ಪದ್ಮಾವಾಸಂತಿ ಪುಟ್ಟಣ್ಣ ಚಿತ್ರಗಳ ನಾಯಕಿಯರಾಗಿದ್ದರು.




1967ರಲ್ಲಿ **ಬೆಳ್ಳಿಮೋಡ** ಯಶಸ್ಸಾದ ನಂತರ ಅವರು ರಾಜ್‌ಕುಮಾರ್, ಬಿ. ಸರೋಜಾದೇವಿ, ಅಭಿನಯದ **ಮಲ್ಲಮ್ಮನ ಪವಾಡ** ಚಿತ್ರ ನಿರ್ದೇಶನ ಮಾಡಿದರು. ಬಿ. ಪುಟ್ಟಸ್ವಾಮಯ್ಯ ಅವರ ಕಥೆಯಾಧರಿಸಿದ ಈ ಚಿತ್ರ ಕೂಡ ಯಶಸ್ಸಾಯಿತು. ವಜ್ರಮುನಿ ಈ ಚಿತ್ರದ ಮೂಲಕ ಪರಿಚಿತರಾದರು.



*"ಶರಪಂಜರ" ತ್ರಿವೇಣಿ ಕಾದಂಬರಿಯ ಮೊಸಳು. ಶಿವರಾಂ, ಗಂಗಾಧರ್, ಕಲ್ಪನಾ*






ನಂತರ ಕಲ್ಪನಾ ದ್ವಿಪಾತ್ರದಲ್ಲಿ ಅಭಿನಯಿಸಿದ ಆರ್ಯಾಂಬ ಪಟ್ಟಾಭಿ ಅವರ ಕಥೆ ಆಧರಿಸಿದ **ಕಪ್ಪು ಬಿಳುಪು** ಚಿತ್ರ ನಿರ್ಮಿಸಿದರು. ಈ ಚಿತ್ರವೂ ಯಶಗಳಿಸಿತು. 1970ರಲ್ಲಿ ಎಂ.ಕೆ. ಇಂದಿರಾ ಅವರ ಕಥೆ ಆಧರಿಸಿ ಅವರು **ಗೆಜ್ಜೆಪೂಜೆ** ಚಿತ್ರ ನಿರ್ದೇಶಿಸಿದರು. ಕಲ್ಪನಾ ನಾಯಕಿ ಜಿ.ವಿ. ಅಯ್ಯರ್ ಅವರ **ಚೌಕದ ದೀಪ** ಚಿತ್ರದಲ್ಲಿ (1969) ನಾಯಕನಾಗಿ ತೆರೆಗೆ ಪರಿಚಿತರಾಗಿದ್ದ ಗಂಗಾಧರ್ ಈ ಚಿತ್ರದ ನಾಯಕ.

ಚಿತ್ರಜ್ಯೋತಿ ಲಾಂಛನದಲ್ಲಿ ತಯಾರಾದ ಈ ಚಿತ್ರ ಗಲ್ಲಾಪೆಟ್ಟಿಗೆ ಯಶಸ್ಸೇ ಅಲ್ಲದೆ ಹಲವಾರು ಪ್ರಶಸ್ತಿಗಳನ್ನು ಪಡೆಯಿತು. ರಾಜ್ಯ ಸರ್ಕಾರದಿಂದ ವರ್ಷದ ಶ್ರೇಷ್ಠ ಚಿತ್ರ ಪ್ರಶಸ್ತಿ ಪಡೆಯಿತು. ಎಂ. ಲೀಲಾವತಿ ಶ್ರೇಷ್ಠ ಪೋಷಕನಟಿ ಪ್ರಶಸ್ತಿ ಹಾಗೂ ಚಿತ್ರದ ಸಂಭಾಷಣೆಗಾಗಿ ನವರತ್ನರಾಂ ಅವರು ಪ್ರಶಸ್ತಿಗಳನ್ನು ಪಡೆದರು. ಅತ್ಯುತ್ತಮ ಚಿತ್ರಕತೆಗಾಗಿ ಪುಟ್ಟಣ್ಣನವರು ಕೇಂದ್ರ ಸರ್ಕಾರದ ಪ್ರಶಸ್ತಿ ಪಡೆದರು. ದೇವದಾಸಿಯರ ಪದ್ಧತಿಯನ್ನು ಕೈಗೆತ್ತಿಕೊಂಡು ಮಾನವೀಯತೆಯ ಹಿನ್ನೆಲೆಯಲ್ಲಿ ಪುಟ್ಟಣ್ಣ ಚಿತ್ರವನ್ನು ನಿರೂಪಿಸಿದ್ದರು. ಈ ಬಗೆಯ ಕತೆಯನ್ನು ಬೆಳ್ಳಿತೆರೆಗೆ ಯಶಸ್ವಿಯಾಗಿ ತರುವ ಸಾಹಸ ಕೂಡ ಮೊದಲನೆಯದೇ.

ಅನಂತರ ರಾಜ್‌ಕುಮಾರ್, ಕಲ್ಪನಾ ಅಭಿನಯದ **ಕರುಳಿನ ಕರೆ** (1970) ನಿರ್ದೇಶಿಸಿದರು. **ಸಾಕ್ಷಾತ್ಕಾರ**ದಲ್ಲಿ (1971) ಭಾವಾವೇಶ, ಮೇಲೋಡ್ರಾಮ, ನಾಟಕೀಯತೆಗಳು ಹೆಚ್ಚಾಗಿದ್ದವು. ಹಿಂದಿಯ ಪೃಥ್ವಿರಾಜ್ ಕಪೂರ್ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂಬುದು ವಿಶೇಷ.


1971ರಲ್ಲಿ ತ್ರಿವೇಣಿ ಅವರ ಕಾದಂಬರಿ ಆಧರಿಸಿ ಪುಟ್ಟಣ್ಣ ನಿರ್ದೇಶಿಸಿದ **ಶರಪಂಜರ** ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ಮೈಲಿಗಲ್ಲಾಯಿತು. ಮತ್ತೊಮ್ಮೆ ಕಲ್ಪನಾ ಅವರ ಅಭಿನಯ ಮೆರೆಯಿತು. ಮನೋವೈಜ್ಞಾನಿಕ ಕಥೆಯನ್ನು ಪುಟ್ಟಣ್ಣ, ದೃಶ್ಯಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿ, ಕನ್ನಡ ಚಿತ್ರಗಳು ಇತರ

"ಕಥಾ ಸಂಗಮ" - ಕಲ್ಯಾಣ್ ಕುಮಾರ್, ಬಿ. ಸರೋಜಾದೇವಿ.

ಭಾಷೆಗಳ ಚಿತ್ರಗಳಿಗಿಂತ ಒಂದು ಹೆಜ್ಜೆ ಮುಂದು ಎಂಬುದನ್ನು ನಿರೂಪಿಸಿದರು. ಕನ್ನಡದಲ್ಲಿ ಶ್ರೀಮಂತ ಚಿತ್ರಗಳ ಪರಂಪರೆಯನ್ನು ಈ ಚಿತ್ರ ಆರಂಭಿಸಿತು.

ವರ್ಧಿನಿ ಆರ್ಟ್ಸ್ ಲಾಂಛನದ ಈ ಚಿತ್ರದಲ್ಲಿ ಕಲ್ಪನಾ, ಗಂಗಾಧರ್, ಶ್ರೀನಾಥ್, ಲೀಲಾವತಿ, ಶಿವರಾಂ, ಚಿಂದೋಡಿ ಲೀಲಾ, ನರಸಿಂಹರಾಜು, ಅಶ್ವತ್ಥ್ ಪಂಢರಿಬಾಯಿ ಅಭಿನಯಿಸಿದ್ದಾರೆ.

1972ರಲ್ಲಿ ತರಾಸು ಅವರ ಮೂರು ಕಾದಂಬರಿಗಳನ್ನು ಆಧರಿಸಿ **ನಾಗರಹಾವು** ಚಿತ್ರ ನಿರ್ದೇಶಿಸಿದರು. ಎನ್. ವೀರಾಸ್ವಾಮಿ ಅವರು ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ತಯಾರಿಸಿದ ಈ ಚಿತ್ರ ದಾಖಲೆ ಸ್ಥಾಪಿಸಿತು. (ಈಶ್ವರಿ ಪಿಕ್ಚರ್ಸ್ ಹಲವಾರು ಉತ್ತಮ ಚಿತ್ರಗಳನ್ನು ನೀಡಿದೆ.) ವಿಷ್ಣುವರ್ಧನ್ ನಾಯಕನಾಗಿ, ಅಂಬರೀಷ್ ಖಳನಟನಾಗಿ ಈ ಚಿತ್ರದ ಮೂಲಕ ತೆರೆಗೆ ಪರಿಚಿತರಾದರು. ಅಶ್ವತ್ಥ್ ಅಭಿನಯ  ಈ ಚಿತ್ರದ ಮತ್ತೊಂದು ಉತ್ತಮ ಅಂಶವಾಗಿದೆ. 1973ರಲ್ಲಿ **ಎಡಕಲ್ಲು ಗುಡ್ಡದ ಮೇಲ** ಭಾರತೀಸುತರ ಕಾದಂಬರಿ ಆಧರಿಸಿದ ಈ ಚಿತ್ರವನ್ನು ಪುಟ್ಟಣ್ಣ ಚಿತ್ರಿಸಿದರು. ಜಯಂತಿ ಕಾಮತೃಷೆಯಿಂದ ಬಳಲುವ ಹೆಣ್ಣಾಗಿ ಈ ಚಿತ್ರದಲ್ಲಿ ಮೊದಲ ಬಾರಿಗೆ ವಿಭಿನ್ನ ಅಭಿನಯ ನೀಡಿದರು. ಪುಟ್ಟಣ್ಣ ಇಲ್ಲೂ ಕಥಾವಸ್ತುವಿಗೇ ಮಹತ್ವ ನೀಡಿದ್ದರು.




**ಉಪಾಸನೆ** (1974), **ಶುಭಮಂಗಳ** (1975) **ಬಿಳಿಹೆಂಡ್ತಿ** (1975) ಗಳಲ್ಲಿ ಹೊಸ ಹೊಸ ವಸ್ತುವನ್ನೇ ಆಯ್ಕೆಮಾಡಿಕೊಂಡ ಪುಟ್ಟಣ್ಣ 1976ರಲ್ಲಿ ಒಂದು ವಿಭಿನ್ನ ಪ್ರಯೋಗವೊಂದನ್ನು ಮಾಡಿದರು. ಒಂದೇ ಚಿತ್ರದಲ್ಲಿ ಮೂರುಕತೆಯನ್ನುಳ್ಳ ಒಂದೇ ಚಿತ್ರ **ಕಥಾಸಂಗಮ** ನಿರ್ಮಿಸಿದರು. ಇದು ಕನ್ನಡ ಚಿತ್ರರಂಗದಲ್ಲಿ ಹೊಸ ಪ್ರಯೋಗ. ಇದುವರೆಗೆ ಈ ರೀತಿ ಮೂರುಕತೆಯನ್ನು ಒಂದೇ ಚಿತ್ರದಲ್ಲಿ ಹೇಳುವ ಪ್ರಯತ್ನವನ್ನು ಮತ್ತೆ ಇದುವರೆಗೆ ಯಾರೂ ಮಾಡಿಲ್ಲ.

ಈ ಹೊಸ ಪ್ರಯೋಗದಲ್ಲಿ ಮೂರುಕತೆಗಳಿವೆ. ಈಶ್ವರಚಂದ್ರರ ಸಣ್ಣ ಕತೆ ಆಧರಿಸಿದ "ಮುನಿತಾಯಿ"ಯಲ್ಲಿ ರಜನೀಕಾಂತ್, ಗಂಗಾಧರ್, ಆರತಿ, ಉಮೇಶ್, ಸಂಪತ್, ರಮಣಿ, ಈಶ್ವರ್, ಶ್ರೀರಂಗಮೂರ್ತಿ ಅಭಿನಯಿಸಿದ್ದಾರೆ. ಅಂಧ ಗೃಹಿಣಿಯೊಬ್ಬಳನ್ನು ದುಷ್ಟನೊಬ್ಬ ದುರುಪಯೋಗ ಪಡಿಸಿಕೊಳ್ಳುವ ಮನಮಿಡಿಯುವ ಕತೆಯನ್ನು ಪುಟ್ಟಣ್ಣ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಶ್ರೀಮತಿ ವೀಣಾ ಶಾಂತೇಶ್ವರ ಅವರ "ಅತಿಥಿ" ಕತೆ ಆಧರಿಸಿದ ಚಿತ್ರದಲ್ಲಿ ಕಲ್ಯಾಣ್ ಕುಮಾರ್, ಬಿ. ಸರೋಜಾದೇವಿ, ಕುಮಾರಿ ಪದ್ಮಿನಿ, ಗೌರವನಟರಾಗಿ ಎಂ. ಲೀಲಾವತಿ, ಅಂಬರೀಷ್, ರತ್ನಾಕರ್ ಅಭಿನಯಿಸಿದ್ದಾರೆ.



"ಎಡಕಲ್ಲು ಗುಡ್ಡದ ಮೇಲೆ" ಅಂತರಂಗ ಸಂಘರ್ಷದ ಸೂಕ್ಷ್ಮ ಚಿತ್ರಣ ಆರತಿ, ಜಯಂತಿ.

ಗಿರಡ್ಡಿ ಗೋವಿಂದರಾಜ ಅವರ ಕತೆ "ಹಂಗು" ಆಧರಿಸಿದ ಚಿತ್ರದಲ್ಲಿ ಜಿ. ಕೆ. ಗೋವಿಂದರಾವ್, ಸಿ. ಎಚ್. ಲೋಕನಾಥ್, ಎಸ್. ಎಸ್. ವಾಮನ್, ಶ್ರೀಮತಿ ಮಂಗಳರಾವ್, ಡಾ. ಗೋವಿಂದ ಮಣ್ಣೂರ, ಮಾಸ್ಟರ್ ಅರುಣ್ ಅಭಿನಯಿಸಿದ್ದಾರೆ. ಚಿತ್ರಕ್ಕೆ ವಿಜಯಭಾಸ್ಕರ್ ಸಂಗೀತ ನೀಡಿದ್ದಾರೆ.

1976ರ ನಂತರ ಬಿಡುಗಡೆಯಾದ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳಾದ **ಫಲಿತಾಂಶ**, **ಕಾಲೇಜುರಂಗ** (1976) **ಪಡುವಾರಹಳ್ಳಿ ಪಾಂಡವರು** (1978), **ಧರ್ಮಸೆರೆ** (1979) ಚಿತ್ರಗಳು ವಿಫಲವಾದವು. 1981ರಲ್ಲಿ ಪುಟ್ಟಣ್ಣ ನಿರ್ದೇಶಿಸಿದ **ರಂಗನಾಯಕಿ** ನಿರ್ದೇಶಕನೊಬ್ಬನ ಕಲಾಕೌಶಲ್ಯಕ್ಕೆ ಒಳ್ಳೆಯ ಉದಾಹರಣೆ. ಆರತಿ, ಅಂಬರೀಷ್, ರಾಜಾನಂದ್, ರಾಮಕೃಷ್ಣ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪುಟ್ಟಣ್ಣ ನಿರ್ದೇಶನದ ಚಿತ್ರಗಳಲ್ಲಿ ಆರತಿ ಅಭಿನಯಿಸಿದ ಕಡೆಯ ಚಿತ್ರವಿದು. **ಗೆಜ್ಜೆಪೂಜೆ** (1970) ಚಿತ್ರದಲ್ಲೇ ಚಿಕ್ಕ ಪಾತ್ರವೊಂದನ್ನು ಪುಟ್ಟಣ್ಣ ಆರತಿಯವರಿಗೆ ನೀಡಿದ್ದರು. 1972ರಲ್ಲಿ **ನಾಗರಹಾವು** ವಿನಲ್ಲಿ ನಾಯಕಿಯನ್ನಾಗಿ ಆರತಿಯವರನ್ನು ಪುಟ್ಟಣ್ಣ ಆಯ್ಕೆ ಮಾಡಿದರು. ಅಲ್ಲಿಂದ 1981ರವರೆಗೆ ಪುಟ್ಟಣ್ಣನವರ ಎಲ್ಲ ಚಿತ್ರಗಳಲ್ಲೂ ಆರತಿ ನಾಯಕಿ. **ರಂಗನಾಯಕಿಯ** ನಂತರ ಈ ಜೋಡಿ ಬೇರ್ಪಟ್ಟಿತು.

**ಶುಭಮಂಗಳ** ಪುಟ್ಟಣ್ಣ ನಿರ್ದೇಶನದ ಮತ್ತೊಂದು ಯಶಸ್ವಿ ಚಿತ್ರ. ನಟ ಶ್ರೀನಾಥ್ ಅವರ ನಟನಾಜೀವನಕ್ಕೆ ಹೊಸ ತಿರುವು ನೀಡಿದ ಚಿತ್ರವೂ ಇದಾಯಿತು. ಅಲ್ಲದೆ ಈ ಚಿತ್ರದ ಮೂಲಕ ಆರ್. ಎನ್. ಸುದರ್ಶನ್, ನಿರ್ದೇಶಕ ರವಿ ಹಿನ್ನೆಲೆಗಾಯಕರೂ ಆದರು.

1982ರಲ್ಲಿ ಪುಟ್ಟಣ್ಣ ಕಣಗಾಲ್ **ಮಾನಸ ಸರೋವರ** ನಿರ್ದೇಶಿಸಿದರು. ಈ ಚಿತ್ರದ ಮೂಲಕ ಪದ್ಮಾವಾಸಂತಿಯನ್ನು



ಪುಟ್ಟಣ್ಣ ಕಣಗಾಲ್ ನಿರ್ದೇಶನ,ಕಲ್ಪನಾ ಅಭಿನಯದಲ್ಲಿ ಹೊಸ ಬಗೆಯ ವಸ್ತು ನಿರೂಪಣೆ. ಎಂ. ಕೆ. ಇಂದಿರಾ ಕಾದಂಬರಿ ಆಧರಿಸಿದ "ಗೆಜ್ಜೆಪೂಜೆ"




ರಂಗನಾಯಕಿ - ರಾಮಕೃಷ್ಣ - ಆರತಿ

ನಾಯಕಿಯನ್ನಾಗಿಸಿದರು. ತಮ್ಮ ಹಳೆಯ ಚಿತ್ರಗಳ ಸ್ಪರ್ಶವನ್ನು ಈ ಚಿತ್ರದಲ್ಲಿ ಪುಟ್ಟಣ್ಣ ಮೂಡಿಸಿದ್ದರು. ಹಿಂದೆಯೇ **ಧರಣಿ ಮಂಡಲ ಮಧ್ಯದೊಳಗೆ, ಅಮೃತಘಳಿಗೆ ಋಣ ಮುಕ್ತಳು ಮಸಣದ ಹೂವು** ನಿರ್ದೇಶಿಸಿದರು. 1984ರಲ್ಲಿ ಪುಟ್ಟಣ್ಣ ಕಣಗಾಲರ ನಿಧನದೊಂದಿಗೆ ಕನ್ನಡ ಚಿತ್ರರಂಗದಲ್ಲಿ ಮಹತ್ವಪೂರ್ಣ ಅಧ್ಯಾಯವೊಂದು ಕೊನೆಗೊಂಡಂತಾಯಿತು. ಇದೇ ದಶಕದಲ್ಲಿ ಕಲ್ಪನಾ ಅವರ ದುರಂತ ಸಾವು ವರ್ಣರಂಜಿತ ನಾಯಕಿಯೊಬ್ಬಳನ್ನು ಕಣ್ಮರೆಯಾಗಿಸಿತು.

ಕಲ್ಪನಾ ಕನ್ನಡ ಚಿತ್ರರಂಗ ಕಂಡ ವಿಭಿನ್ನ ನಟಿ. ಅವರು ಅಭಿನಯಿಸಿ ಭಾರಿ ಯಶಸ್ವಿಯಾದ ಚಿತ್ರಗಳೂ ಆಕೆ ದುರಂತಪಾತ್ರದಲ್ಲಿ ಅಭಿನಯಿಸಿದ ಚಿತ್ರಗಳೇ ಆಗಿದ್ದವು. ಅವರ ಜೀವನ ಕತೆಯೂ ದುರಂತವಾಗಿ ಕಲ್ಪನಾ ಆತ್ಮಹತ್ಯೆ ಮಾಡಿಕೊಂಡರು. 1963ರಲ್ಲಿ ಬಿ. ಆರ್. ಪಂತುಲು ಅವರ **ಸಾಕು ಮಗಳು** ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಕಲ್ಪನಾ, ಹದಿನಾರು ವರ್ಷಗಳ ಕಾಲ ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿ ಕಣ್ಮರೆಯಾದರು. ಒಟ್ಟು 73 ಚಿತ್ರಗಳಲ್ಲಿ ಅಭಿನಯ. ಕನ್ನಡದ 64, ಐದು ತಮಿಳು, ಎರಡು ತುಳು, ಹಾಗೂ ಮಲಯಾಳಂ, ತೆಲುಗಿನಲ್ಲಿ ತಲಾ ಒಂದೊಂದು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 1969ರ **ಬೆಳ್ಳಿಮೋಡ**ದ ಮೂಲಕ ಚಿತ್ರರಂಗದ ಉಜ್ವಲ ತಾರೆಯಾಗಿ ಬೆಳಕಿಗೆ ಬಂದ ಕಲ್ಪನಾ ಆನಂತರ ಬಹು ಬೇಡಿಕೆಯ ಅಭಿನೇತ್ರಿಯಾಗಿದ್ದರು.

**ಗೆಜ್ಜೆಪೂಜೆ, ಶರಪಂಜರ, ಮುಕ್ತಿಗಳಲ್ಲಿ ದುರಂತನಾಯಕಿ, ನಾಂದಿ, ನಾ ಮೆಚ್ಚಿದ ಹುಡುಗ, ಪ್ರೇಮಕ್ಕೂ ಪರ್ಮಿಟ್ಟೆ, ಗಂಧದಗುಡಿ, ಎರಡು ಕನಸು, ಬಯಲುದಾರಿ, ನಾರಿ ಮುನಿದರೆ ಮಾರಿ, ಕಪ್ಪುಬಿಳುಪು, ಉಯ್ಯಾಲೆ, ಹಣ್ಣೆಲೆ ಚಿಗುರಿದಾಗ** ಮೊದಲಾದ ಚಿತ್ರಗಳು ಅವರ ವೈವಿಧ್ಯಮಯ ಅಭಿನಯಕ್ಕೆ ಸಾಕ್ಷಿಯಾಗಿವೆ.

### ಸಿದ್ದಲಿಂಗಯ್ಯ

ಉತ್ತಮ ಸಾಂಸಾರಿಕ ಚಿತ್ರಗಳ ನಿರ್ದೇಶನಕ್ಕೆ ಹೆಸರಾದ ಸಿದ್ದಲಿಂಗಯ್ಯ ಬೆಳೆದದ್ದು ಈ ಅವಧಿಯಲ್ಲಿಯೇ. ಹಲವಾರು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ದುಡಿಯುತ್ತಿದ್ದ ಸಿದ್ದಲಿಂಗಯ್ಯ, ದ್ವಾರಕಾ ಫಿಲಂಸ್ ಲಾಂಛನದಲ್ಲಿ ಹಾಸ್ಯನಟ ದ್ವಾರಕೀಶ್ ನಿರ್ಮಿಸಿದ ಚೊಚ್ಚಲ ಚಿತ್ರ **ಮೇಯರ್ ಮುತ್ತಣ್ಣ** (1969) ಚಿತ್ರದ ಮೂಲಕ ನಿರ್ದೇಶಕರಾದರು. ರಾಜ್‌ಕುಮಾರ್, ಭಾರತಿ, ದ್ವಾರಕೀಶ್, ಎಂ.ಪಿ. ಶಂಕರ್ ಮೊದಲಾದವರು ಅಭಿನಯಿಸಿರುವ ಈ ಚಿತ್ರ ಯಶಸ್ಸು ಗಳಿಸಿತು. 1970ರಲ್ಲಿ ರಾಜಕುಮಾರ್, ಭಾರತಿ, ಜಯಂತಿ ಅಭಿನಯದ **ಬಾಳು ಬೆಳಗಿತು** ನಿರ್ದೇಶಿಸಿದ ಸಿದ್ದಲಿಂಗಯ್ಯ ತಮ್ಮ ನಿರ್ದೇಶಕ



"ಪಡುವಾರ ಹಳ್ಳಿ ಪಾಂಡವರು" ಶಾಂತಲಾ-ಅಂಬರೀಷ್

ಕಲ್ಪನಾ



ಸ್ಥಾನವನ್ನು ಭದ್ರಪಡಿಸಿಕೊಂಡರು. ನಂತರದ ವರ್ಷಗಳಲ್ಲಿ ನಮ್ಮ ಸಂಸಾರ, ತಾಯಿದೇವರು, ನ್ಯಾಯವೇ ದೇವರು, ದೂರದಬೆಟ್ಟ, ಬಂಗಾರದ ಮನುಷ್ಯ ಚಿತ್ರಗಳನ್ನು ನಿರ್ದೇಶಿಸಿದರು. ಟಿ. ಕೆ. ರಾಮರಾವ್ ಕಾದಂಬರಿ ಆಧಾರಿತ **ಬಂಗಾರದ ಮನುಷ್ಯ** 104 ವಾರಗಳ ಕಾಲ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿತು.

1974ರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಥೆಯನ್ನಾಧರಿಸಿ **ಭೂತಯ್ಯನ ಮಗ ಅಯ್ಯು** ಚಿತ್ರವನ್ನು ಸಿದ್ದಲಿಂಗಯ್ಯ ನಿರ್ದೇಶಿಸಿದರು. ಇದುವರೆಗೆ ಸಿದ್ದಲಿಂಗಯ್ಯ ನಿರ್ದೇಶಿಸಿದ ಎಲ್ಲ ಚಿತ್ರಗಳಲ್ಲೂ ರಾಜ್‌ಕುಮಾರ್ ನಾಯಕರಾಗಿದ್ದರು. "ಭೂತಯ್ಯನ ಮಗ ಅಯ್ಯು" ವಿನಲ್ಲಿ ವಿಷ್ಣುವರ್ಧನ್, ಲೋಕೇಶ್ ಎಂ. ಪಿ. ಶಂಕರ್, ಎಲ್.ವಿ. ಶಾರದ, ಭವಾನಿ ತಾರಾಗಣದಲ್ಲಿದ್ದರು. ವಿಭಿನ್ನ ಕತೆ, ಪರಿಣಾಮಕಾರಿ ನಿರೂಪಣೆಯಿಂದಾಗಿ ಚಿತ್ರ ಯಶಸ್ವಾಯಿತು. 1977ರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ **ಹೇಮಾವತಿ** ಕಾದಂಬರಿಯನ್ನು ಚಲನಚಿತ್ರವಾಗಿಸಿದರು. ಸಿದ್ದಲಿಂಗಯ್ಯನವರ ಆನಂತರದ ಚಿತ್ರಗಳು "ಭೂಲೋಕದಲ್ಲಿ ಯಮರಾಜ" (1979), ನಾರದವಿಜಯ (1980) ಬಿಳಿಗಿರಿಯ ಬನದಲ್ಲಿ (1980), ನಾರಿ ಸ್ವರ್ಗಕ್ಕೆ ದಾರಿ (1981) ಕೂಡಿಬಾಳಿದರೆ ಸ್ವರ್ಗಸುಖ (1981) ಪರಾಜಿತ, ಕಂಪನ (1982), ಪ್ರೇಮಪರ್ವ (1983) ಸಂಭವಾಮಿ ಯುಗೇ ಯುಗೇ (1988), ಬಾರೇ  ನನ್ನ ಮುದ್ದಿನ ರಾಣಿ (1990), ಬಾ ನನ್ನ ಪ್ರೀತಿಸು (1992), ಭೂ ತಾಯಿ ಮಕ್ಕಳು (1994).



ತಮ್ಮ ಪುತ್ರ ಮುರುಳಿಯನ್ನು ಸಿದ್ದಲಿಂಗಯ್ಯ **ಪ್ರೇಮಪರ್ವ** ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದರು. ಇದೇ ಚಿತ್ರದಲ್ಲಿ ನಟಿ ಭವ್ಯ ಅವರ ಚಿತ್ರರಂಗ ಪ್ರವೇಶವಾಯಿತು. ಮುರುಳಿ ಕನ್ನಡ ಚಿತ್ರರಂಗದಲ್ಲಿ ಅವಕಾಶ ಸಿಗದೆ ತಮಿಳು ಚಿತ್ರರಂಗಕ್ಕೆ  ಜಿಗಿದರು. ಈ ರೀತಿ ಕನ್ನಡದಿಂದ ತಮಿಳಿಗೆ ಜಿಗಿದ ಉದಾಹರಣೆ ಬಹಳಷ್ಟಿದೆ. ರಜನೀಕಾಂತ್, ಕೋಕಿಲ ಮೋಹನ್, ಅರ್ಜುನ್ ಸರ್ಜಾ, ಪ್ರಕಾಶ್ ರಾಜ್ ಇವರುಗಳು ಕನ್ನಡ ಚಿತ್ರಗಳಲ್ಲಿ ಅಭಿನಯ ಆರಂಭಿಸಿ ತಮಿಳಿಗೆ ಜಿಗಿದು ಯಶಸ್ವಿಯಾದರು. ಈ ಪರಂಪರೆ ಈಗಲೂ ಕಡಿಮೆಯಾಗಿಲ್ಲ.



"ಫಲಿತಾಂಶ" ಜೈಜಗದೀಶ್, ವೈಶಾಲಿ

"ಧರ್ಮಸೆರೆ" ಆರತಿ - ಸೀತಾರಾಂ.











ವಾಕ್ಚಿತ್ರದ ಆರಂಭದ ದಶಕದಿಂದ ಚಿತ್ರರಂಗದಲ್ಲಿ ಅಭಿನಯಿಸುತ್ತಿದ್ದ ನಂತರದ ದಿನಗಳಲ್ಲಿ ಪದ್ಮಿನಿ ಪಿಕ್ಚರ್ಸ್ ಸ್ಥಾಪಿಸಿ ಉತ್ತಮ ಚಿತ್ರಗಳನ್ನು ತೆರೆಗಿತ್ತ ಬಿ. ಆರ್. ಪಂತುಲು ಹಾಗೂ ಅವರೊಂದಿಗೆ ಪದ್ಮಿನಿ ಪಿಕ್ಚರ್ಸ್ ಈ ಅವಧಿಯಲ್ಲಿ ಅಂತ್ಯ ಕಂಡಿತು. ಪದ್ಮಿನಿ ಪಿಕ್ಚರ್ಸ್, ವಿಕ್ರಂ ಪ್ರೊಡಕ್ಷನ್ಸ್‌ಗಳು ಸಂಪೂರ್ಣವಾಗಿ ಸ್ಥಗಿತಗೊಂಡದ್ದು ಈ ಅವಧಿಯಲ್ಲಿಯೇ 1972ರಲ್ಲಿ ಬಿಡುಗಡೆಯಾದ **ಒಂದು ಹೆಣ್ಣಿನ ಕಥೆ** ಬಿ. ಆರ್. ಪಂತುಲು ನಿರ್ದೇಶನದ ಅಂತಿಮ ಚಿತ್ರ. ರಾಜೇಶ್, ಜಯಂತಿ, ರಾಜಮ್ಮ ಬಿ. ವಿ. ರಾಧ, ಸುದರ್ಶನ್ ಅವರುಗಳು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. 1976ರಲ್ಲಿ "ಪದ್ಮಿನಿ ಪಿಕ್ಚರ್ಸ್" ಸಂಸ್ಥೆಯ ಕೊನೆಯ ಚಿತ್ರ **ಕಾಲೇಜುರಂಗ**ವನ್ನು ಪಂತುಲು ಅವರ ಶಿಷ್ಯ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದರು. ನಂತರ ಈ ಸಂಸ್ಥೆ ಇತಿಹಾಸದ ಗರ್ಭದಲ್ಲಿ ಹುದುಗಿ ಹೋಯಿತು.

1976ರಲ್ಲಿ ಬಿ. ಆರ್. ಪಂತುಲು ನಿರ್ದೇಶಿಸಿದ **ಶ್ರೀ ಕೃಷ್ಣದೇವರಾಯ** ಒಂದು ಮಹತ್ವದ ಚಿತ್ರ. ಈ ಚಿತ್ರದ ಅತ್ಯುತ್ತಮ ಅಭಿನಯಕ್ಕಾಗಿ ಬಿ. ಆರ್. ಪಂತುಲು ಅವರಿಗೆ ಆ ವರ್ಷದ ಅತ್ಯುತ್ತಮ ಪೋಷಕನಟ ಪ್ರಶಸ್ತಿ ದೊರಕಿತು. ಆದರೆ ಈ ಪ್ರಶಸ್ತಿಯನ್ನು ಪಡೆಯಲು ಬಿ. ಆರ್. ಪಂತುಲು ನಿರಾಕರಿಸಿದರು.

ಟಿ. ಜಿ. ಲಿಂಗಪ್ಪ
ದೊರೆ
ಭಗವಾನ್
ರಾಜನ್
ನಾಗೇಂದ್ರ
ರವಿ
ಸಿದ್ಧಲಿಂಗಯ್ಯ
ಎ. ವಿ. ಶೇಷಗಿರಿರಾವ್
ಗೀತಪ್ರಿಯ


**ಶ್ರೀ ಕೃಷ್ಣದೇವರಾಯ** ನಾಗಿ ರಾಜಕುಮಾರ್ ಅವರು ಅತ್ಯುತ್ತಮ ಅಭಿನಯ ನೀಡಿದ್ದು, ಅವರಿಗೆ ಪ್ರಶಸ್ತಿ ದೊರಕಬೇಕಿತ್ತು ಎಂಬ ವಾದ ಒಡ್ಡಿದ್ದ ಪಂತುಲು ತಮಗೆ ಬಂದ ಪ್ರಶಸ್ತಿಯನ್ನು ಪಡೆಯಲು ನಿರಾಕರಿಸಿದರು.

ಕಾದಂಬರಿ ಆಧರಿಸಿದ ಮೊದಲ ವಾಕ್ಚಿತ್ರ ನಿರ್ದೇಶಿಸಿದ ಅನಂತರವೂ ಹೆಚ್ಚು ಕಾದಂಬರಿಗಳನ್ನೇ ಚಿತ್ರೀಕರಿಸಿದ ನಿರ್ದೇಶಕ ಟಿ. ವಿ. ಸಿಂಗ್ ಠಾಕೂರ್ ನಿಧನ ಈ ಅವಧಿಯ ಮತ್ತೊಂದು ನಷ್ಟದ ಸಂಗತಿ. ಇದರೊಂದಿಗೆ ಆರಂಭದ ದಶಕಗಳ ಮತ್ತೊಂದು ಕೊಂಡಿಯೂ ಕಳಚಿದಂತಾಯಿತು. 1955ರಲ್ಲಿ ರಾಜ್‌ಕುಮಾರ್ ಅಭಿನಯದ ಎರಡನೆಯ ಚಿತ್ರ **ಸೋದರಿಯನ್ನು** ನಿರ್ದೇಶಿಸುವುದರೊಂದಿಗೆ ಚಲನಚಿತ್ರರಂಗ ಪ್ರವೇಶಿಸಿದ ತಿಪಟೂರಿನ ಟಿ. ವಿ. ಸಿಂಗ್‌ಠಾಕೂರ್, 1956ರಲ್ಲಿ 'ಹರಿಭಕ್ತ', 'ಓಹಿಲೇಶ್ವರ' ನಿರ್ದೇಶಿಸಿದರು. ಜಗಜ್ಯೋತಿ ಬಸವೇಶ್ವರ (1959), 'ಕೈವಾರ ಮಹಾತ್ಮೆ', 'ಕಣ್ತೆರೆದು ನೋಡು' (1961), 'ಕರುಣೆಯೇ ಕುಟುಂಬದ ಕಣ್ಣು' (1962), 'ಕುಲವಧು' (1963), 'ಮಂತ್ರಾಲಯ ಮಹಾತ್ಮೆ' (1966), 'ಭಾಗೀರಥಿ' (1969) ಚಿತ್ರಗಳನ್ನು ತೆರೆಗಿತ್ತರು. 1974ರಲ್ಲಿ ತಮ್ಮ ಜೀವನದ ಕೊನೆಯ ಚಿತ್ರ **ಹೇಮರೆಡ್ಡಿ ಮಲ್ಲಮ್ಮ** ನಿರ್ದೇಶಿಸಿದರು. ***ಚಂದವಳ್ಳಿಯ ತೋಟ*** (1964), **ಕರುಣೆಯೇ ಕುಟುಂಬದ ಕಣ್ಣು** ಗಳ ಮೂಲಕ ಅವರ ನೆನಪು ಸದಾ ಉಳಿದಿರುತ್ತದೆ. 1979ರ ನವೆಂಬರ್ 17ರಂದು ನಿಧನರಾದ ಸಿಂಗ್ ಠಾಕೂರ್, ಒಟ್ಟು 18 ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

KCN enterprises

1967 ರ ವೇಳೆಗೆ ಕನ್ನಡ ಚಿತ್ರೋದ್ಯಮದ ನೆರವಿಗೆ ರಾಜ್ಯ ಸರ್ಕಾರ ಮುಂದಾಯಿತು. ಕನ್ನಡ ಚಿತ್ರ ನಿರ್ಮಾಣ ಕನ್ನಡ ನಾಡಿನಲ್ಲಿ ನೆಲೆಯೂರಬೇಕೆಂಬ ಉದ್ದೇಶದಿಂದ ಕರ್ನಾಟಕದಲ್ಲೇ ತಯಾರಾದ ಕನ್ನಡ ಚಿತ್ರಗಳಿಗೆ ಸಹಾಯಧನ (ಸಬ್ಸಿಡಿ) ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿತು. ಈ ಆಕರ್ಷಕ ಯೋಜನೆಯಿಂದಾಗಿ ಕನ್ನಡ ಚಿತ್ರರಂಗ ನಿಧಾನವಾಗಿ ಮದರಾಸಿನಿಂದ ಬೆಂಗಳೂರಿಗೆ ವರ್ಗಾವಣೆಯಾಗಲಾರಂಭಿಸಿತು. ಈ ಯೋಜನೆಯಿಂದ ಪ್ರೇರಿತವಾಗಿ ಸಂಪೂರ್ಣವಾಗಿ ಬೆಂಗಳೂರಿನಲ್ಲೇ ಚಿತ್ರಿತವಾಗಿ ಸಬ್ಸಿಡಿ ಪಡೆದ ಮೊದಲನೆ ಚಿತ್ರ ***ನಕ್ಕರದೇ ಸ್ವರ್ಗ*** (1967). ಈ ಚಿತ್ರದ ಮೂಲಕ ಎಂ. ರಂಗರಾವ್ ಸಂಗೀತ ನಿರ್ದೇಶಕರಾಗಿ, ಎಸ್. ಪಿ. ಬಾಲಸುಬ್ರಹ್ಮಣ್ಯಂ ಹಿನ್ನೆಲೆಗಾಯಕರಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಂಡರು.

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಜಿ. ವಿ. ಅಯ್ಯರ್ ಅವರ ಹೆಸರು ಹಲವಾರು ಘಟ್ಟಗಳಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. 1943ರಲ್ಲಿ **ರಾಧಾರಮಣ** ಚಿತ್ರದ ಮೂಲಕ ನಟನಾವೃತ್ತಿಯನ್ನು ಆರಂಭಿಸಿದ ಜಿ. ವಿ. ಅಯ್ಯರ್ ಹಾಸ್ಯನಟನಾಗಿ ಮೊದಲನೆಯ ಹಂತದಲ್ಲಿ ಕಾಣಿಸಿಕೊಂಡರು. 1954ರ **ಬೇಡರ ಕಣ್ಣಪ್ಪದ** ನಂತರ ಅವರು ಜನಪ್ರಿಯತೆ ಹೆಚ್ಚಿಸಿಕೊಂಡರು. ಗಣಪತಿ ವೆಂಕಟರಮಣ ಅಯ್ಯರ್ ಮೂಲತಃ ನಂಜನಗೂಡಿನವರು. ಕಡು ಬಡತನ. ಬಾಲ್ಯದಲ್ಲೇ ಮೂಕಿ ಚಿತ್ರಗಳ ಆಕರ್ಷಣೆಗೆ ಒಳಗಾದವರು. 10ನೇ ವಯಸ್ಸಿನಲ್ಲಿ ಗುಬ್ಬಿ ಕಂಪನಿ ಸೇರಿದರು. ಸಿನಿಮಾನಟನಾಗಬೇಕೆಂಬ ಹಂಬಲದಿಂದ ಪುಣೆಗೆ ತೆರಳಿ ಪ್ರಭಾತ್ ಸ್ಟುಡಿಯೋ ಬಾಗಿಲನ್ನು ತಟ್ಟಿದರು. ನಿರಾಶರಾಗಿ ವಾಪಸಾದರು. 15ನೇ ವಯಸ್ಸಿಗೆ ಮತ್ತೆ ಗುಬ್ಬಿ ಕಂಪನಿ ಸೇರಿದಾಗ ಬಾಲಕೃಷ್ಣರ ಜತೆ, ಟಿ. ಪಿ. ಕೈಲಾಸಂ ಕಂಡು ಅವರಿಂದ ಸ್ಫೂರ್ತಿ. ಅಲ್ಲಿಂದ ಗಂಭೀರವಾಗಿ ನಾಟಕರಂಗದ ಅಧ್ಯಯನ. ಜಿ. ವಿ.



*ಕನ್ನಡದಿಂದ ಸಂಸ್ಕೃತದವರೆಗೆ ಚಿತ್ರ ನಿರ್ಮಿಸಿ ದೇಶವ್ಯಾಪಿ ಜನಪ್ರಿಯತೆ ಗಳಿಸಿದ ಜಿ. ವಿ. ಅಯ್ಯರ್*

*ಕನ್ನಡದಲ್ಲಿ ಇದುವರೆಗೆ ಇನ್ನೂ ಮುರಿಯಲಾಗದ ದಾಖಲೆ ಚಿತ್ರ "ಬಂಗಾರದ ಮನುಷ್ಯ" ದಲ್ಲಿ ಭಾರತಿ, ರಾಜ್‌ಕುಮಾರ್*




ಅಯ್ಯರ್ ಆಗಿ ಬೆಳೆಯಲು ಇದೇ ಕಾರಣ. **ಬೇಡರ ಕಣ್ಣಪ್ಪ** ನಾಟಕ-ಸಿನಿಮಾ ಅವರು ಚಿತ್ರ ಜೀವನದಲ್ಲಿ ಬೆಳೆಯಲು ಕಾರಣವಾಯಿತು. 1960ರಲ್ಲಿ ವಿಕ್ರಂ ಪ್ರೊಡಕ್ಷನ್ಸ್‌ರವರ **ದಶಾವತಾರ** ಚಿತ್ರ ನಿರ್ದೇಶನ ಮಾಡುವುದರೊಂದಿಗೆ ಎರಡನೆಯ ಹಂತ ಪ್ರವೇಶಿಸಿದರು. ಈ ಕಾಲಾವಧಿಯಲ್ಲಿ ಜಿ. ವಿ. ಅಯ್ಯರ್ ಕತೆಯ ಸಂಭಾಷಣೆ, ಚಿತ್ರಕಥೆ ಹಾಗೂ ಗೀತೆಗಳನ್ನು ಬರೆಯುವ ಮೂಲಕ ಹಾಗೂ ನಟನೆ ಮೂಲಕ ತಮ್ಮ ಪ್ರತಿಭೆ ಮೆರೆದಿದ್ದಾರೆ. 1975ರಲ್ಲಿ **ಹಂಸಗೀತೆ** ನಿರ್ದೇಶಿಸಿ ಪ್ರಬುದ್ಧತೆ ಮೆರೆದಿದ್ದಾರೆ. ಕೊನೆಯ ಘಟ್ಟದಲ್ಲಿ ಅಂದರೆ ಈಗ ನಾವು ನೋಡುತ್ತಿರುವ ಅಯ್ಯರ್ ಏರಿದ ಹಂತ ದಾರ್ಶನಿಕ ಜಿ. ವಿ. ಅಯ್ಯರ್ ಅವರದು. ಈಗ ಸಂಪೂರ್ಣ ಯಾರೂ ಮಾಡದ ಸಾಹಸ ಮಾಡಿದ್ದಾರೆ. ಅವರು ನಿರ್ದೇಶಿಸಿದ ಪ್ರಥಮ ಸಂಸ್ಕೃತ ಚಿತ್ರ **ಆದಿ ಶಂಕರಾಚಾರ್ಯ** ಭಾರತದ ಅತ್ಯುತ್ತಮ ಚಿತ್ರವೆನಿಸಿ ಸ್ವರ್ಣಕಮಲ ಪ್ರಶಸ್ತಿ ಗಳಿಸಿದೆ. **ಮಧ್ವಾಚಾರ್ಯ, ಭಗವದ್ಗೀತೆ,** ಸ್ವಾಮಿ ವಿವೇಕಾನಂದ ಚಿತ್ರಗಳನ್ನು ಜಿ. ವಿ. ಅಯ್ಯರ್ ನಿರ್ಮಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಜಿ. ವಿ. ಅಯ್ಯರ್ ಅವರ ಸೇವೆ 56 ವರ್ಷಗಳ ದೀರ್ಘ ಕಾಲದ್ದು. ಇದೊಂದು ಅವಿಸ್ಮರಣೀಯ ದಾಖಲೆ.

**ಶ್ರೀರಾಮಪೂಜಾ** (1954) ಚಿತ್ರದ ಸಾಹಿತ್ಯ ರಚನೆ ಮಾಡುವುದರ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಗೀತಪ್ರಿಯ, 1968ರಲ್ಲಿ ಸುದರ್ಶನ್ ಮೂವೀಸ್ ರವರ **ಮಣ್ಣಿನ ಮಗ** ಚಿತ್ರದೊಂದಿಗೆ ನಿರ್ದೇಶಕರಾದರು. ರಾಜ್‌ಕುಮಾರ್, ಕಲ್ಪನಾ, ಎಂ. ಪಿ. ಶಂಕರ್, ಈಪ್ ಜಯಕುಮಾರಿ ತಾರಾಗಣದ ಈ ಚಿತ್ರ ನೀತಿಬೋಧಕ ಎಂಬ ಕಾರಣಕ್ಕೆ ರಾಜ್ಯ ಸರ್ಕಾರ ಈ ಚಿತ್ರಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿತ್ತು. **ಮಣ್ಣಿನ ಮಗ** ಚಿತ್ರದ ಯಶಸ್ಸು ಗೀತಪ್ರಿಯ ಅವರನ್ನು ಯಶಸ್ವಿ ನಿರ್ದೇಶಕನ ಸಾಲಿನಲ್ಲಿ ನಿಲ್ಲಿಸಿತು. ನಿರ್ದೇಶಕರಾಗುವವರೆಗೆ ಅತ್ಯುತ್ತಮ ಗೀತ ರಚನಕಾರರಾಗಿಯೂ ಜನಪ್ರಿಯರಾಗಿದ್ದ ಗೀತಪ್ರಿಯ,



*1963ರಲ್ಲಿ ತೆರೆಕಂಡ ವೈ. ಆರ್. ಸ್ವಾಮಿ ನಿರ್ದೇಶನದ "ಜೇನುಗೂಡು" ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಜಯಂತಿಯವರ ಮೂಲ ಹೆಸರು ಕಮಲ ಕುಮಾರಿ. ಅದಕ್ಕಿಂತ ಮುನ್ನ "ಜಗದೇಕ ವೀರನ ಕಥೆ" ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ಅಭಿನಯ. ಆರು ಭಾಷೆಗಳ ಚಿತ್ರಗಳಲ್ಲಿ ಅಭಿನಯಿಸಿ ಖ್ಯಾತಿ ಗಳಿಸಿರುವ ಜಯಂತಿ ಕನ್ನಡದ 190 ಚಿತ್ರಗಳಲ್ಲಿ ನಟಿಸಿದ್ದಾರೆ. ನಿರ್ಮಾಪಕಿಯು ಹೌದು, ನಿರ್ದೇಶಕಿಯೂ ಹೌದು. 1965ರ "ಮಿಸ್ ಲೀಲಾವತಿ" ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ಬಂದಿದೆ. ಎರಡು ಮುಖ (1969), ಮನಸ್ಸಿನಂತೆ ಮಾಂಗಲ್ಯ (1976), ಧರ್ಮ ದಾರಿ ತಪ್ಪಿತು (1981), ಮಸಣದ ಹೂವು (1985), ಆನಂದ್" (1986) ಚಿತ್ರಗಳ ಉತ್ತಮ ಅಭಿನಯಕ್ಕಾಗಿ ಐದು ಭಾರಿ ರಾಜ್ಯ ಪ್ರಶಸ್ತಿ ಗಳಿಸಿದ್ದಾರೆ.*





ಆರತಿ

**ಬೆಟ್ಟದ ಹುಲಿ** ಚಿತ್ರದಲ್ಲಿ "ಹಕ್ಕಿ ಹಾರುತಿದೆ... ಕಾಲದ ಹಕ್ಕಿಯು ಹಾರುತಿದೆ..." ಮೂಲಕ ಹೆಸರುವಾಸಿ. **ಒಂದೇ ಬಳ್ಳಿಯ ಹೂಗಳು ಶ್ರೀರಾಮಾಂಜನೇಯ ಯುದ್ಧ** ಚಿತ್ರದಲ್ಲಿನ ಅವರ ಗೀತೆಗಳು ಸದಾ ನೆನಪಿನಲ್ಲಿ ಉಳಿಯುವ ಇಂಪಿನಿಂದ ಕೂಡಿದೆ **ಮಣ್ಣಿನ ಮಗ** ಯಶಸ್ಸಿನ ನಂತರ ಗೀತಪ್ರಿಯ **ಕಾಡಿನ ರಹಸ್ಯ, ಮದುವೆ!ಮದುವೆ! ಮದುವೆ!** (1969), **ಭೂಪತಿರಂಗ** (1970) **ಕಲ್ಯಾಣಿ** (1971), **ನಾರಿ ಮುನಿದರೆ ಮಾರಿ, ಯಾವ ಜನ್ಮದ ಮೈತ್ರಿ, ಜೀವನ ಜೋಕಾಲಿ** (1972) **ಬೆಳುವಲದ ಮಡಿಲಲ್ಲಿ** (1975), **ಬೆಸುಗೆ** (1976) ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿದರು. ಉಷಾನವರತ್ನರಾಂ ಅವರ ಕಾದಂಬರಿ ಆಧರಿಸಿದ **ಹೊಂಬಿಸಿಲು** (1978) ಗೀತಪ್ರಿಯ ಅವರ ನಿರ್ದೇಶನದಲ್ಲಿ ಪ್ರಚಂಡ ಜನಪ್ರಿಯತೆ ಪಡೆಯಿತು. ವಿಷ್ಣುವರ್ಧನ್ ಆರತಿ, ಶಿವರಾಂ, ಲೀಲಾವತಿ, ಎಚ್. ಪಿ. ಸರೋಜಾ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಅದೇ ವರ್ಷ ಗೀತಪ್ರಿಯ **ಪ್ರೇಮಾಯಣ** ಹಾಸ್ಯ ಚಿತ್ರ ನಿರ್ದೇಶಿಸಿದರು. 1979ರಲ್ಲಿ **ಪುಟಾಣಿ ಏಜೆಂಟ್ *1 2 3*** ಎಂಬ ಮಕ್ಕಳ ಸಾಹಸ ಪ್ರಧಾನ ಚಿತ್ರ ನಿರ್ದೇಶಿಸಿ ಯಶಸ್ವಿಯಾದರು. 1981ರಲ್ಲಿ **ಪ್ರಚಂಡ ಪುಟಾಣಿಗಳು** ಎಂಬ ಮತ್ತೊಂದು ಮಕ್ಕಳ ಚಿತ್ರ ನಿರ್ದೇಶಿಸಿದರು. 1984ರಲ್ಲಿ ಕಲ್ಯಾಣ್‌ಕುಮಾರ್ ಅವರಿಗೆ ಮತ್ತೆ ನಾಯಕ ಪಟ್ಟ ನೀಡುವ **ಶುಭ ಮುಹೂರ್ತ** ಚಿತ್ರ ನಿರ್ದೇಶಿಸಿದರು.

1965ರಲ್ಲಿ ಕೆ. ಎಸ್. ಜಗನ್ನಾಥ್, ಕಲಾಜ್ಯೋತಿ ಲಾಂಛನದಲ್ಲಿ **ಮಿಸ್ ಲೀಲಾವತಿ** ನಿರ್ಮಿಸಿದರು. ಶ್ರೀನಿವಾಸರಾವ್ ಕೊರಟಿ ಅವರ ಕಾದಂಬರಿಯನ್ನು ಆಧರಿಸಿದ ಈ ಚಿತ್ರವನ್ನು ಎಂ. ಆರ್. ವಿಠಲ್ ನಿರ್ದೇಶಿಸಿದ್ದಾರೆ.




ಕನ್ನಡದಲ್ಲಿ ಮತ್ತೊಂದು ಜನಪ್ರಿಯ ಜೋಡಿ
ಶ್ರೀನಾಥ್, ಮಂಜುಳಾ

ಕನ್ನಡ ಚಿತ್ರರಂಗ ಕಂಡ ಮತ್ತೊಬ್ಬ ಪ್ರತಿಭಾನ್ವಿತ ಪ್ರಯೋಗ ಶೀಲ ನಿರ್ದೇಶಕ ಕೆ. ಎಸ್. ಎಲ್. ಸ್ವಾಮಿ (ರವಿ). ರಾಜಕುಮಾರ್ ಅಭಿನಯದ 100ನೇ ಚಿತ್ರ **ಭಾಗ್ಯದ ಬಾಗಿಲು** (1968) ನಿರ್ದೇಶಿಸಿದ ಕೀರ್ತಿ ಇವರದು. 1965ರಲ್ಲಿ **ತೂಗುದೀಪ** ಚಿತ್ರವನ್ನು ನಿರ್ದೇಶಿಸುವ ಮೂಲಕ ಕೆ. ಎಸ್. ಎಲ್. ಸ್ವಾಮಿ ಕನ್ನಡ ಚಿತ್ರರಂಗದ ನಿರ್ದೇಶಕರುಗಳಲ್ಲಿ ಒಬ್ಬರಾದರು. ಇದು ಅವರ ಮೊದಲ ಚಿತ್ರ. ಶರಶ್ಚಂದ್ರ ಚಟರ್ಜಿ ಅವರ "ಚಂದ್ರನಾಥ" ಕಥೆ ಆಧಾರಿತ **ತೂಗುದೀಪ** ಚಿತ್ರವನ್ನು ಆಗ ಹೊಸ ಜಾಡಿನ ಚಿತ್ರವೆಂದೇ ಹೆಸರಿಸಲಾಗುತ್ತಿತ್ತು. ಕನ್ನಡದ ಖಳನಟರಲ್ಲೊಬ್ಬರಾಗಿದ್ದ ಶ್ರೀನಿವಾಸ್ ಈ ಚಿತ್ರದ ಮೂಲಕವೇ ಅಭಿನಯರಂಗಕ್ಕೆ ಬಂದು, ತೂಗುದೀಪ ಶ್ರೀನಿವಾಸ್ ಎಂದೇ ಹೆಸರಾದರು.

ಕೆ.ಎಸ್. ಎಲ್. ಸ್ವಾಮಿ ನಿರ್ದೇಶಿಸಿದ ಎರಡನೆಯ ಚಿತ್ರ **ಲಗ್ನಪತ್ರಿಕೆ** (1967). ರಾಜ್ ಕುಮಾರ್, ಜಯಂತಿ, ತಾರಾಗಣದ ಈ ಚಿತ್ರ ಸಂಪೂರ್ಣ ಹಾಸ್ಯ ಚಿತ್ರ. ರಘುನಂದನ್ ಲಾಂಛನದಲ್ಲಿ ಅವರದೇ ಸ್ವಂತ ತಯಾರಿಕೆ **ಆರು ಮೂರು ಒಂಭತ್ತು** (1970) ಹೊಸ ಬಗೆಯ ಶೀರ್ಷಿಕೆಯಿಂದಾಗಿ ಗಮನ ಸೆಳೆದ ಚಿತ್ರ. ಅನ್ನಪೂರ್ಣ ಅವರ ಕಥೆಯನ್ನಾಧರಿಸಿದ ಈ ಚಿತ್ರ ಬಹುತಾರಾಗಣ ಹೊಂದಿದ ಚಿತ್ರವೂ ಆಗಿದೆ. ಉದಯಕುಮಾರ್, ರವಿ, ರಮೇಶ್, ಶ್ರೀನಾಥ್, ರಾಜೇಶ್ ಬಿ. ವಿ. ರಾಧಾ ದಿನೇಶ್ ಲೋಕನಾಥ್, ಸ್ವರ್ಣಮ್ಮ ಅಲ್ಲದೆ ಲೀಲಾವತಿ, ಕೆ. ಎಸ್. ಅಶ್ವತ್ಥ್ ಗೌರವನಟರಾಗಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಂಕುದಿಣ್ಣೆ (1968), ಅರಿಶಿನ ಕುಂಕುಮ, ಲಕ್ಷ್ಮೀಸರಸ್ವತಿ (1970), ಭಲೇ ಅದೃಷ್ಟವೋ ಅದೃಷ್ಟ, ಶ್ರೀಕೃಷ್ಣರುಕ್ಮಿಣಿ (1971), "ಕುಳ್ಳ ಏಜಂಟ್ 000" (1972), ದೇವರು ಕೊಟ್ಟ ತಂಗಿ (1973), ಭಾಗ್ಯಜ್ಯೋತಿ (1975), ಮಕ್ಕಳ ಭಾಗ್ಯ, ತುಳಸಿ (1976), ದೇವರದುಡ್ಡು, ಮಾಗಿಯ ಕನಸು, ಮುಗ್ಧಮಾನವ (1977), ಮಲಯ ಮಾರುತ, ಮಿಥಿಲೆಯ ಸೀತೆಯರು (1988) ಹರಕೆಯ ಕುರಿ (1992) ಮೊದಲಾದವು ಕೆ. ಎಸ್. ಎಲ್.ಸ್ವಾಮಿ ನಿರ್ದೇಶನದ ಪ್ರಮುಖ ಚಿತ್ರಗಳು.

ಕನ್ನಡ ಚಿತ್ರರಂಗ ಕಂಡ ಈ ಸುವರ್ಣಯುಗದಲ್ಲಿ ಕನ್ನಡ ಚಿತ್ರರಂಗಕ್ಕೆ ನಿರ್ದೇಶಕರುಗಳ ಅವ್ಯಾಹತ ಆಗಮನವೇ ಆಗಿದೆ. ಹಳಬರ ಜತೆ ಹೊಸ ಚಿಗುರೂ ಸೇರಿಕೊಂಡು ಕನ್ನಡ ಚಿತ್ರರಂಗಕ್ಕೆ



ಅನಂತನಾಗ್, ಲಕ್ಷ್ಮಿ

ಹೊಸ ಸೊಬಗೇ ಬಂದಿದೆ. ಹುಣಸೂರು ಕೃಷ್ಣಮೂರ್ತಿ, ಬಿ. ಎಸ್. ರಂಗ, ಎಂ. ಆರ್. ವಿಠಲ್, ವೈ. ಆರ್. ಸ್ವಾಮಿ, ಗೀತಪ್ರಿಯ. ಎ. ವಿ. ಶೇಷಗಿರಿರಾವ್, ಕೆ. ಎಸ್. ಎಲ್.ಸ್ವಾಮಿ (ರವಿ), ಎಸ್. ಕೆ. ಭಗವಾನ್-ದೊರೈರಾಜ್, ಆರೂರು ಪಟ್ಟಾಭಿ, ಸಿ.ವಿ. ಶಿವಶಂಕರ್, ಬಿ. ಎ. ಅರಸುಕುಮಾರ್, ಪೆಕೆಟಿ ಶಿವರಾಂ, ಎನ್. ಸಿ. ರಾಜನ್, ಆರ್.ರಾಮಮೂರ್ತಿ,ಆರ್. ಎನ್. ಜಯಗೋಪಾಲ್, ಎ. ಎಂ. ಸಮೀವುಲ್ಲಾ, ವಾದಿರಾಜ್, ಬಿ.ಸೋಮಶೇಖರ್, ತಿಪಟೂರು ರಘು, ವಿಜಯ್, ಎಸ್. ವಿ.ರಾಜೇಂದ್ರ ಸಿಂಗ್ ಬಾಬು, ಭಾರ್ಗವ, ಸಿ. ಆರ್.ಸಿಂಹ, ಜೋಸೈಮನ್, ಬಸವರಾಜ ಕೆಸ್ತೂರು, ಪಿ.ಲಂಕೇಶ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾಸರವಳ್ಳಿ, ಎನ್. ಟಿ. ಜಯರಾಮರೆಡ್ಡಿ, ಕೆ.ವಿ. ಜಯರಾಂ, ಶಂಕರ್‌ನಾಗ್, ಎ. ಟಿ. ರಘು, ಟಿ. ಎಸ್. ನಾಗಾಭರಣ, ರೇಣುಕಾಶರ್ಮ,ಸುರೇಶ್ ಹೆಬ್ಳೀಕರ್, ಟಿ. ದತ್ತುರಾಜ್, ರವಿಚಂದ್ರನ್, ಡಿ. ರಾಜೇಂದ್ರ ಬಾಬು, ಉಮೇಶ್ ಕುಲಕರ್ಣಿ, ಸುನಿಲ್ ಕುಮಾರ್ ದೇಸಾಯಿ, ನಂಜುಂಡೇಗೌಡ, ದ್ವಾರಕೀಶ್, ಫಣಿರಾಮಚಂದ್ರ ಮೊದಲಾದ ನಿರ್ದೇಶಕರುಗಳು ಈ ಕಾಲಾವಧಿಯಲ್ಲಿ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಲು ಯತ್ನಿಸಿದ್ದಾರೆ.

ಇದೇ ಅವಧಿಯಲ್ಲೇ ಹೊರರಾಜ್ಯಗಳ ನಿರ್ದೇಶಕರುಗಳೂ ಕನ್ನಡ ಚಿತ್ರರಂಗಕ್ಕೆ ಲಗ್ಗೆ ಇಟ್ಟು ರೀಮೇಕ್ ಚಿತ್ರಗಳನ್ನು ನಿರ್ಮಿಸಿದ್ದಾರೆ. 1975ರಿಂದೀಚೆಗೆ ಸಿ. ವಿ. ಶ್ರೀಧರ್, ಸಿ. ವಿ. ರಾಜೇಂದ್ರನ್, ಕೋವೈ ಮಣಿಶೇಖರನ್, ಅಮೃತಂ, ಸಭಾಪತಿ ದೇವರ್ ಎ. ಭೀಮಸಿಂಗ್, ಸಾಯಿಪ್ರಕಾಶ್, ದಿನೇಶ್ ಬಾಬು ಮೊದಲಾದ ನಿರ್ದೇಶಕರುಗಳು ಕನ್ನಡ ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ದಶಕಕ್ಕೊಮ್ಮೆ ಬದಲಾಗಿ ಬಂದ ನಾಯಕಿಯರು ಕೂಡ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸುವ ಎಲ್ಲ ಯತ್ನ ಮಾಡಿದ್ದಾರೆ. ಆರಂಭದ ದಿನಗಳಲ್ಲಿ ಲಕ್ಷ್ಮೀಬಾಯಿ, ತ್ರಿಪುರಾಂಬ, ಎಂ. ವಿ. ರಾಜಮ್ಮ ಬಿ. ಜಯಮ್ಮ ನಾಯಕಿಯರಾಗಿ, ಪಾತ್ರಗಳಿಗೆ ತಾವೇ ಹಾಡುವ ದಿನಗಳಿಂದ ಚಿತ್ರರಂಗದಲ್ಲಿ ದುಡಿದಿದ್ದಾರೆ.



ಜಯಮಾಲಾ: ದಕ್ಷಿಣ ಕನ್ನಡದ ಚೆಲುವೆ. ಗೀತಪ್ರಿಯ ನಿರ್ದೇಶನದ 'ಕಾಸ್‌ದಾಯ್ ಕಂಡನೆ' ತುಳು ಚಿತ್ರದ ಮೂಲಕ ಸಿನಿಮಾ ಜಗತ್ತು ಪ್ರವೇಶಿಸಿದ ಜಯಮಾಲಾ ನಿರ್ಮಾಪಕಿಯೂ ಆಗಿದ್ದಾರೆ.

ಸುವರ್ಣಯುಗ ಕಂಡ ಮುದ್ದು ನಟಿ ಭಾರತಿ. 1966ರಲ್ಲಿ 'ಲವ್ ಇನ್ ಬೆಂಗಳೂರ್' ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶ ಹಿಂದಿ, ತಮಿಳು, ತೆಲುಗು, ಭಾಷಾ ಚಿತ್ರಗಳಲ್ಲೂ ಅಭಿನಯಿಸಿ ಖ್ಯಾತರಾಗಿದ್ದ ಭಾರತಿ ಶತ ಚಿತ್ರ ನಟಿ.



ಮೂಕಚಿತ್ರಗಳ ಕಾಲದಿಂದಲೂ ಇವರು ಅಭಿನಯಿಸಿದ್ದು, ರಂಗಭೂಮಿಯಿಂದ ತೆರೆಗೆ ಬಂದ ಪರಿಶ್ರಮ ಉಳ್ಳವರಾಗಿದ್ದಾರೆ. ಲಕ್ಷ್ಮೀಬಾಯಿ ಅವರಂತೂ ವಾಕ್ಚಿತ್ರದ ಮೊದಲ ನಾಯಕಿ. ಎಂ. ವಿ. ರಾಜಮ್ಮ, ಬಿ. ಜಯಮ್ಮ ಅವರುಗಳಂತೂ ತಮಿಳು, ತೆಲುಗು ಚಿತ್ರರಂಗದಲ್ಲೂ ಜನಪ್ರಿಯ ನಾಯಕಿಯರಾಗಿದ್ದು, ತ್ರಿಭಾಷಾ ತಾರೆಯರೆನಿಸಿ ಕೊಂಡಿದ್ದರು.

ಎರಡನೆಯ ಹಂತದಲ್ಲಿ ಬಂದ ಪಂಢರಿಬಾಯಿ ಇಂದಿನವರೆಗೆ ಎಲ್ಲ ಬಗೆಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತಮಿಳು ತೆಲುಗು ಚಿತ್ರಗಳಲ್ಲೂ ಅಭಿನಯ. 1943ರ **ವಾಣಿ** ಚಿತ್ರದ ಮೂಲಕ ಎಂ. ಪಂಢರಿಬಾಯಿ ಚಿತ್ರರಂಗ ಪ್ರವೇಶಿಸಿದರು. 1954ರಲ್ಲಿ **ಬೇಡರ ಕಣ್ಣಪ್ಪ** ಚಿತ್ರದಲ್ಲಿ ನಟ ರಾಜಕುಮಾರ್ ಪಾತ್ರಕ್ಕೆ ನಾಯಕಿ. ಅಲ್ಲಿಂದ ಮುಂದೆ ಬಹಳಷ್ಟು ಭಕ್ತಿ ಚಿತ್ರಗಳಲ್ಲಿ ರಾಜಕುಮಾರ್, ಪಂಢರಿಬಾಯಿ ಜೋಡಿ ಅತ್ಯಂತ ಜನಪ್ರಿಯ. 53 ವರ್ಷಗಳಿಂದ ಚಿತ್ರರಂಗದಲ್ಲಿ ಬಿಡುವಿಲ್ಲದೆ ದುಡಿದ ಪಂಢರಿಬಾಯಿ ರಸ್ತೆ ಅಪಘಾತದಲ್ಲಿ ಕೈಯೊಂದನ್ನು ಕಳೆದುಕೊಂಡು ಈಗ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರು ತಾಯಿ ಪಾತ್ರಗಳಲ್ಲಿ ಹೆಸರಾಗಿದ್ದರು.

ಎರಡನೆಯ ಹಂತದಲ್ಲಿ ಹರಿಣಿ, ಎಂ. ಲೀಲಾವತಿ, ಜಯಂತಿ, ಕಲ್ಪನಾ ಮತ್ತು ಭಾರತಿ ಕನ್ನಡ ಚಿತ್ರರಂಗದ ಜನಪ್ರಿಯ ನಟಿಯರಾಗಿದ್ದರು. ರಾಜಕುಮಾರ್ ಅಭಿನಯಿಸಿದ ಆರಂಭಕಾಲದ ಬಹುತೇಕ ಚಿತ್ರಗಳಲ್ಲಿ ಈ ಐದು ಮಂದಿ ಜೋಡಿಯಾಗಿದ್ದಾರೆ. ಆರಂಭದಲ್ಲಿ ಮೊದಲು ರಾಜಕುಮಾರ್ ಜಯಂತಿ ಜೋಡಿ ಅತ್ಯಂತ ಜನಪ್ರಿಯವೆನಿಸಿತು. ಅನಂತರದ ದಿನಗಳಲ್ಲಿ ರಾಜಕುಮಾರ್ ಭಾರತಿ ತೆರೆಯ ಮೇಲಿನ ಅತ್ಯಂತ ಜನಪ್ರಿಯ ನಾಯಕ-ನಾಯಕಿಯರಾಗಿ ಕಾಣಿಸಿಕೊಂಡರು. ಈ ನಾಯಕಿಯರ ನಂತರ ಆರತಿ, ಮಂಜುಳಾ ಮತ್ತು ಲಕ್ಷ್ಮಿ ಜನಪ್ರಿಯರಾದರು. ಈ ಎಲ್ಲ ನಾಯಕಿಯರೂ ಶತಚಿತ್ರಗಳನ್ನು ದಾಟಿರುವುದು ವಿಶೇಷ.

ವಿಜಯಭಾಸ್ಕರ್, ಟಿ. ಜಿ. ಲಿಂಗಪ್ಪ, ಜಿ. ಕೆ. ವೆಂಕಟೇಶ್, ರಾಜನ್ ನಾಗೇಂದ್ರ, ಎಂ. ರಂಗರಾವ್ 70 ದಶಕದಲ್ಲಿ ಕನ್ನಡ ಚಲನ ಚಿತ್ರ ಸಂಗೀತವನ್ನು ಜನಪ್ರಿಯಗೊಳಿಸಿದರು.

1955ರಿಂದಲೂ ಚಿತ್ರರಂಗದ ಜತೆ ನಂಟು ಇಟ್ಟುಕೊಂಡಿರುವ ದೊರೆ-ಭಗವಾನ್ ಜೋಡಿ ಈ ಹಂತದಲ್ಲಿ ಹಲವಾರು ಮಹತ್ವದ ಚಿತ್ರಗಳನ್ನು ನೀಡಿದೆ. ರಾಜಕುಮಾರ್ ಅಭಿನಯದ ಬಾಂಡ್ ಪಾತ್ರಗಳ ಚಿತ್ರ ಸರಣಿಯೇ ಅಲ್ಲದೆ, ಕಾದಂಬರಿಗಳನ್ನು ಚಿತ್ರಕ್ಕೆ ಅಳವಡಿಸಿರುವ ಖ್ಯಾತಿಯೂ ಇವರದಾಗಿದೆ. ಕಸ್ತೂರಿ ನಿವಾಸ (1971), ಎರಡು ಕನಸು (1974), ಗಿರಿಕನ್ಯೆ (1977), ಚಂದನದ ಗೊಂಬೆ (1979), ಬಯಲುದಾರಿ (1976), ವಸಂತಗೀತ (1980), ಗಾಳಿಮಾತು (1981), ಮುನಿಯನ ಮಾದರಿ (1981), ಹೊಸಬೆಳಕು (1982), ಬೆಂಕಿಯ ಬಲೆ (1983), ಸಮಯದ ಗೊಂಬೆ (1984), ಯಾರಿವನು(1984), ನೀನು ನಕ್ಕರೆ ಹಾಲುಸಕ್ಕರೆ (1991) ಜೀವನ ಚೈತ್ರ (1992) ಚಿತ್ರಗಳು ಈ ನಿರ್ದೇಶಕದ್ವಯರ ಒಳ್ಳೆಯ ಕಾಣಿಕೆಗಳಾಗಿವೆ. ಕೆ. ಎಸ್. ಭಗವಾನ್, "ಸಂಧ್ಯಾರಾಗ" (1966) ಚಿತ್ರದಲ್ಲಿ ಎ. ಸಿ. ನರಸಿಂಹ ಮೂರ್ತಿ ಅವರ ಜತೆ ಜಂಟಿ ನಿರ್ದೇಶಕರಾಗಿದ್ದರು. "ರಾಜದುರ್ಗದ ರಹಸ್ಯ" ದಲ್ಲೂ ಈ ಜೋಡಿ ಮುಂದುವರೆದಿತ್ತು. 1968ರಲ್ಲಿ **ಜೇಡರ ಬಲೆ** ಚಿತ್ರದ ಮೂಲಕ ಛಾಯಾಗ್ರಾಹಕ ಬಿ. ದೊರೈರಾಜ್ ಮತ್ತು ಕೆ. ಎಸ್. ಭಗವಾನ್ ಒಟ್ಟುಗೂಡಿ ದೊರೆ ಭಗವಾನ್ ಹೆಸರಿನಲ್ಲಿ ಚಿತ್ರ ನಿರ್ದೇಶನಕ್ಕೆ ತೊಡಗಿದರು. 1993ರಲ್ಲಿ ಈ ಜೋಡಿ ಬೇರ್ಪಟ್ಟಿದೆ.

1977ರಲ್ಲಿ ಭುವನೇಶ್ವರಿ ಆರ್ಟ್ಸ್ ಪ್ರೊಡಕ್ಷನ್ಸ್ (ಹುಬ್ಬಳ್ಳಿ) ಲಾಂಛನದಲ್ಲಿ ಎ. ವಿ. ಶೇಷಗಿರಿರಾವ್ ನಿರ್ದೇಶಿಸಿದ **ಸೊಸೆ ತಂದ ಸೌಭಾಗ್ಯ** ಕನ್ನಡದ ಮೊದಲ ಸಿನಿಮಾಸ್ಕೋಪ್ ಚಿತ್ರ. ಉತ್ತರ ಕರ್ನಾಟಕದ ನಿರ್ಮಾಪಕರ ಕೊಡುಗೆ ಇದು. ಎಸ್.ಡಿ. ಅಂಕಲಗಿ, ಬಿ.ಎಚ್. ಚಂದಣ್ಣವರ, ಹುಬ್ಳೀಕರ್ ಹಾಗೂ ಸುರೇಂದ್ರ ಇಂಗಳೆ, ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದ 'ಚಿಕ್ಕಸೊಸೆ' ನಾಟಕವನ್ನು ಆಧರಿಸಿ, ಈ ದೊಡ್ಡ ಚಿತ್ರ ನಿರ್ಮಿಸುವ ಧೈರ್ಯ ಮಾಡಿದರು. ಅವರ ಸಾಹಸವೇ ಕನ್ನಡದ ಪ್ರಪ್ರಥಮ ಸಿನಿಮಾ ಸ್ಕೋಪ್ ಚಿತ್ರ ತಯಾರಿಕೆಗೆ ನಾಂದಿಯಾಯಿತು. ಈ ಚಿತ್ರದಲ್ಲಿ ವಿಷ್ಣುವರ್ಧನ್, ರಾಜೇಶ್, ಅಶ್ವತ್ಥ್, ಮಂಜುಳಾ, ವಿಜಯಲಲಿತಾ ಅಭಿನಯಿಸಿದ್ದಾರೆ.

"ನಾಗರಹಾವು" ವಿಷ್ಣುವರ್ಧನ್‌ಗೆ ನಾಯಕ ಇಮೇಜು ಸೃಷ್ಟಿಸಿದ ಪುಟ್ಟಣ್ಣ ಕಣಗಾಲ್ ಸೃಷ್ಟಿ.

ಅಂಬರೀಷ್‌ಗೆ ಇಮೇಜ್ ಕೊಟ್ಟ "ಅಂತ". ಎಸ್. ವಿ. ರಾಜೇಂದ್ರ ಸಿಂಗ್ ಅವರಿಂದ ಟ್ರೆಂಡ್ ಆರಂಭ. ಪಿಟೀಲು ವಿದ್ವಾನ್ ಟಿ. ಚೌಡಯ್ಯ ಅವರ ಮೊಮ್ಮಗ ಅಂಬರೀಷ್, "ನಾಗರಹಾವು" ಜಲೀಲನ ಪಾತ್ರದಿಂದ ಬೆಳ್ಳಿ ತೆರೆಗೆ ಪರಿಚಿತರಾದರು. ಆರಂಭದಲ್ಲಿ ಖಳನಟನಾಗಿ ನಂತರ ನಾಯಕ ನಟರಾದ ಅಂಬರೀಷ್ "ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್"" ಚಿತ್ರದ ಮೂಲಕ ಶತ ಚಿತ್ರದ ನಟರಾದರು. ತಮಿಳು, ಮಲೆಯಾಳಂ, ಹಿಂದಿ ಚಿತ್ರದಲ್ಲೂ ಅಭಿನಯಿಸಿರುವ ಅಂಬರೀಷ್ ಈಗ ರಾಜಕೀಯ ರಂಗ ಪ್ರವೇಶಿಸಿದ್ದಾರೆ.






27

1978ರಲ್ಲಿ ತೆರೆಕಂಡ ಸೋಮಶೇಖರ್ ನಿರ್ದೇಶನದ **ಶಂಕರ್ ಗುರು** ದಾಖಲೆ ಸ್ಥಾಪಿಸಿದ ಚಿತ್ರ. ರಾಜಕುಮಾರ್ ತ್ರಿಪಾತ್ರದಲ್ಲಿ ಅಭಿನಯಿಸಿರುವ ಈ ಮನರಂಜನಾತ್ಮಕ ಚಿತ್ರ ಮಧು ಅವರ ಛಾಯಾಗ್ರಹಣ ಕೈಚಳಕಕ್ಕೆ ಉತ್ತಮ ಉದಾಹರಣೆಯಾಗಿದೆ. ಚಿತ್ರ ರಜತ ಮಹೋತ್ಸವ ಆಚರಿಸಿತು. ಸೋಮಶೇಖರ್ 1974ರಲ್ಲಿ **ಬಂಗಾರದ ಪಂಜರ** ನಿರ್ದೇಶಿಸುವ ಮೂಲಕ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಕಾಣಿಸಿಕೊಂಡಿದ್ದರು.

ದಿನೇಶ್‌ಬಾಬು ಎರಡೇ ದಿನದಲ್ಲಿ **ಇದು ಸಾಧ್ಯ** (1989) ಚಿತ್ರ ನಿರ್ಮಿಸಿದ್ದು ದಶಕದ ಹೊಸ ಸಾಹಸವಾಗಿಯೇ ಉಳಿದಿದೆ. ಈ ಚಿತ್ರದ ನಿರ್ಮಾಪಕ ಚಂದೂಲಾಲ್ ಜೈನ್. 1979ರಲ್ಲಿ ವಾದಿರಾಜ್ **ದಂಗೆ ಎದ್ದ ಮಕ್ಕಳು** ಎಂಬ ಚಿತ್ರ ನಿರ್ದೇಶಿಸಿದರು. ಈ ಚಿತ್ರ ಆ ಸಾಲಿನ ರಾಷ್ಟ್ರಪ್ರಶಸ್ತಿ ಗಳಿಸಿತು.

1987ರಲ್ಲಿ ಮಂದಾಕಿನಿ ಚಿತ್ರ ಪ್ರೈವೇಟ್ ಲಿ. ನವರು ಮೂಕಚಿತ್ರ **ಪುಷ್ಪಕ ವಿಮಾನ** ತಯಾರಿಸಿದರು. ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶಿಸಿದ ಈ ಚಿತ್ರದಲ್ಲಿ ಕಮಲಹಾಸನ್, ಅಮಲಾ, ಲೋಕನಾಥ್, ಟೀನೂ ಆನಂದ್, ಪ್ರತಾಪ್ ಪೋತನ್, ರಮ್ಯ, ಪಿ. ಎಲ್.ನಾರಾಯಣ್ ಮೊದಲಾದವರು



*ಬಾಂಡ್ ಪಾತ್ರಗಳ ಕನ್ನಡ ಪ್ರವೇಶ. "ಜೇಡರ ಬಲೆ" ಮೂಲಕ ಆರಂಭವಾದ ಈ ಪಾತ್ರ ರಾಜಕುಮಾರ್ ಅವರಿಗೆ ಮತ್ತೊಂದು ಹೊಸ ರೀತಿಯ ಪಾತ್ರ ಸೃಷ್ಟಿಸಿತು. "ಆಪರೇಷನ್ ಡೈಮಂಡ್ ರಾಕೆಟ್" ನಲ್ಲಿ ರಾಜ್‌ಕುಮಾರ್ ಅವರ ನವೀನ ಶೈಲಿ.*

ಅಭಿನಯಿಸಿದ್ದರು. ನಟರು ಬಹುತೇಕ ತಮಿಳು, ಹಿಂದಿ ಭಾಷೆಯವರು. ನಿರ್ದೇಶಕರೂ ತಮಿಳು ಚಿತ್ರರಂಗದಿಂದ ಬಂದವರು. ನಿರ್ಮಾಪಕರು ಮಾತ್ರ ಕನ್ನಡಿಗರು. 1933ರಲ್ಲೇ ಮುಗಿದು ಹೋಗಿದ್ದ ಮೂಕಿಯುಗವನ್ನು ಈ ಚಿತ್ರ ನೆನಪಿಸಿತು.

**ರಾಜೇಂದ್ರಸಿಂಗ್ ಬಾಬು**

**ನಾಗರಹೊಳೆ** ಚಿತ್ರದ (1977) ಮೂಲಕ ಪ್ರಖ್ಯಾತಿಗೆ ಬಂದ ಎಸ್. ವಿ. ರಾಜೇಂದ್ರಸಿಂಗ್ ಬಾಬು ಕನ್ನಡದ ಮತ್ತೊಬ್ಬ ಗಮನಾರ್ಹ ನಿರ್ದೇಶಕ. ಮೊದಲು ನಿರ್ದೇಶಿಸಿದ ಚಿತ್ರ **ನಾಗಕನ್ಯೆ** (1975). **ನಾಗರಹೊಳೆ** ಮಕ್ಕಳ ಸಾಹಸವನ್ನೊಳಗೊಂಡ ಚಿತ್ರವಾಗಿದ್ದು ಭಾರೀ ಯಶಸ್ಸು ಪಡೆಯಿತು. "1978ರಲ್ಲಿ **ಕಿಲಾಡಿಜೋಡಿ** ಚಿತ್ರ, ನಿರ್ದೇಶಿಸಿದ ರಾಜೇಂದ್ರ ಸಿಂಗ್ ಬಾಬು, ತಾಂತ್ರಿಕವಾಗಿ ಶ್ರೀಮಂತ ಚಿತ್ರಗಳನ್ನು ತೆಗೆಯುವುದರಲ್ಲಿ ನಿಸ್ಸೀಮರೆನಿಸಿದರು. 1980ರಲ್ಲಿ **ಅಂತ** ಚಿತ್ರದ ಮೂಲಕ ಕನ್ನಡ ಚಿತ್ರಗಳ ಟ್ರೆಂಡನ್ನೇ ಅವರು ಬದಲಿಸಿದರು. ಎಚ್. ಕೆ. ಅನಂತರಾವ್ ಅವರ ಕಾದಂಬರಿ ಆಧರಿಸಿದ ಈ ಚಿತ್ರದಲ್ಲಿ ಅಂಬರೀಷ್, ಲಕ್ಷ್ಮಿ, ಜಯಮಾಲಾ, ಸುಂದರಕೃಷ್ಣ ಅರಸು, ವಜ್ರಮುನಿ ಮೊದಲಾದವರು ಅಭಿನಯಿಸಿದ್ದಾರೆ.






ಸೆನ್ಸಾರ್ ಸುಳಿಗೆ ಸಿಲುಕಿ, ನಿಷೇಧವಾಗಿದ್ದ ಚಿತ್ರ ನಂತರ, ಸೆನ್ಸಾರ್‌ಗೊಂಡು ಬಿಡುಗಡೆಯಾಗಿ ಜನರ ಕುತೂಹಲ ಕೆರಳಿಸಿತು. ನಾಯಕ ಅಂಬರೀಷ್ ಅವರ ಚಿತ್ರ ಜೀವನದಲ್ಲಿ ತಿರುವು ನೀಡಿದ ಚಿತ್ರವೂ **ಅಂತ**, **ನಾಗರಹಾವು** ಚಿತ್ರದ ಖಳನ ಪಾತ್ರದಿಂದ ಚಿತ್ರರಂಗ ಪ್ರವೇಶಿಸಿದ ಅಂಬರೀಷ್, ಬಹಳ ಕಾಲ ಖಳ ನಟರಾಗಿದ್ದರು. **ಅಂತ** ಚಿತ್ರದಲ್ಲಿ ಅವರ ಸಬ್‌ಇನ್ಸ್‌ಪೆಕ್ಟರ್ ಹಾಗೂ ಕನ್ವರ್‌ಲಾಲ್ ಎಂಬ ರೌಡಿಯ ಪಾತ್ರ ಭಾರೀ ಜನಪ್ರಿಯವಾಗಿ, ಅವರ ಚಿತ್ರಜೀವನ ತಿರುವು ಪಡೆಯಿತು. ನಾಯಕ ಪಟ್ಟ ಕಾಯಂ ಆಗಿ, ಮುಂದೆ ಅವರ ಕನ್ನಡದ ಯಶಸ್ವಿ ನಾಯಕರಲ್ಲೊಬ್ಬರಾಗಿದ್ದಾರೆ. **ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್** (1989) ಚಿತ್ರದ ಮೂಲಕ ಅಂಬರೀಷ್ ಶತಚಿತ್ರ ನಟರೂ ಆಗಿದ್ದಾರೆ. ಇದೇ ರೀತಿ ಖಳ ನಾಯಕ ಪಾತ್ರದಿಂದ ಚಿತ್ರರಂಗ ಪ್ರವೇಶಿಸಿದ ಪ್ರಭಾಕರ್ ಕೂಡ ನಾಯಕನಟರಾಗಿದ್ದಾರೆ. ಕಾಡಿನರಹಸ್ಯ ಚಿತ್ರದ ಮೂಲಕ ಅವರು ಚಿತ್ರರಂಗ ಪ್ರವೇಶಿಸಿದರು.

"ಸೀತಾರಾಮು" ಟಿಬ್ಬಯ್ಯ ನಾಯ್ಡು ನಿರ್ಮಿಸಿದ ಈ ಚಿತ್ರದಲ್ಲಿ ಶಂಕರ್‌ನಾಗ್‌ಗೆ ಹೊಸ ಇಮೇಜು. ನಟಿ ಬಿ. ಮಂಜುಳಾ ಅವರ ವರ್ಚಸ್ಸೂ ಈ ಚಿತ್ರದಲ್ಲಿ ಹೆಚ್ಚಿತು.

ನಿರ್ದೇಶಕ ಎಸ್. ವಿ. ರಾಜೇಂದ್ರ ಸಿಂಗ್ ಬಾಬು

**ಅಂತ** ಬಿಡುಗಡೆಯಾಗಿ ಜನಪ್ರಿಯತೆ ಪಡೆದ ನಂತರ ಆ ಚಿತ್ರದ ಚೌಕಟ್ಟನ್ನೇ ಕಮರ್ಷಿಯಲ್ ಸಿನಿಮಾಗಳು ಅಳವಡಿಸಿಕೊಂಡವು. ಹಿಂದಿ ಹಾಗೂ ಇತರ ಭಾಷೆಗಳಲ್ಲೂ ಈ ಚಿತ್ರ ತಯಾರಾಯಿತು. ಇಂದಿಗೂ ಕಮರ್ಷಿಯಲ್ ಚಿತ್ರಗಳಲ್ಲಿ **ಅಂತ**ದ ನೆರಳು ಕಂಡು ಬರುತ್ತಿದೆ.

ಆದೇ ವರ್ಷ ರಾಜೇಂದ್ರ ಸಿಂಗ್ ಬಾಬು, **ಸಿಂಹದ ಮರಿ ಸೈನ್ಯ** ಎಂಬ ಮಕ್ಕಳ ಚಿತ್ರ ನಿರ್ದೇಶಿಸಿದರು. ಅರ್ಜುನ್ ಸರ್ಜಾ ಈ ಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. 1981ರಲ್ಲಿ **ಭರ್ಜರಿ ಬೇಟೆ** ಚಿತ್ರ ನಿರ್ಮಿಸಿ, ನಿರ್ದೇಶಿಸುವ ಮೂಲಕ ರಾಜೇಂದ್ರ ಸಿಂಗ್ ಬಾಬು, ತಮ್ಮ ತಂದೆ ಡಿ. ಶಂಕರ್ ಸಿಂಗ್ ಸ್ಥಾಪಿಸಿ, ಹೆಸರುಗಳಿಸಿದ್ದ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯನ್ನು ಮತ್ತೆ ಅಸ್ತಿತ್ವಕ್ಕೆ ತಂದರು. 1984ರಲ್ಲಿ ***ಗಂಡಭೇರುಂಡ*** ತೆರೆಗೆ ಬಂದಿತು. 1984ರಲ್ಲಿ ರೋಹಿಣಿ ಪಿಕ್ಚರ್ಸ್ ಲಾಂಛನದಲ್ಲಿ ಅವರು ನಿರ್ದೇಶಿಸಿದ **ಬಂಧನ** ಕನ್ನಡ ಚಿತ್ರರಂಗದಲ್ಲಿ ಮತ್ತೆ ಯಶಸ್ಸಿನ ಅಲೆ ಎಬ್ಬಿಸಿತು. ವಿಷ್ಣುವರ್ಧನ್, ಸುಹಾಸಿನಿ, ಜೈಜಗದೀಶ್, ರೂಪಾದೇವಿ, ದಿನೇಶ್, ಮುಸುರಿ ಕೃಷ್ಣಮೂರ್ತಿ ಅವರುಗಳ ಅಭಿನಯದ ಈ ಚಿತ್ರ ಜನಪ್ರಿಯ ಚಿತ್ರಗಳಲ್ಲೊಂದು. 1990ರಲ್ಲಿ ರಾಜೇಂದ್ರಸಿಂಗ್ ಬಾಬು **ಮುತ್ತಿನ ಹಾರ**





*ಹಾಸ್ಯ ಪಾತ್ರಕ್ಕೆ ಬ್ರಾಂಡ್ ಪ್ರವೇಶ. ದ್ವಾರಕೀಶ್ ಸ್ವಂತ ತಯಾರಿಕೆ "ಕುಳ್ಳಏಜೆಂಟ್000" ಸರಣಿಯಲ್ಲಿ ದ್ವಾರಕೀಶ್, ಜ್ಯೋತಿಲಕ್ಷ್ಮಿ*

*ಲೋಕೇಶ್‌ಗೆ ವರ್ಚಸ್ಸು ತಂದ "ಭೂತಯ್ಯನ ಮಗ ಅಯ್ಯು" ಎಂ. ಪಿ. ಶಂಕರ್ ಅವರ ಅಭಿನಯ ಇದರಲ್ಲಿ ಒಂದು ವಿಶೇಷ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಥೆ ಆಧರಿಸಿದ ಈ ಚಿತ್ರ ಜನಪ್ರಿಯತೆ ಗಳಿಸಿತು.*

*ಸುವರ್ಣಯುಗದಲ್ಲಿ ಕಂಡ ಪ್ರತಿಭಾನ್ವಿತ ಕಲಾವಿದ ಎಂ. ಲೀಲಾವತಿ*











ಮೊದಲ ಸಿನಿಮಾಸ್ಕೋಪ್ ಚಿತ್ರ.

"ಬೋರೇಗೌಡ ಬೆಂಗಳೂರಿಗೆ ಬಂದ" ರಾಜೇಶ್, ಲೀಲಾವತಿ

ಸಂಪೂರ್ಣ ಹಳಗನ್ನಡ ಚಿತ್ರ, ಕುವೆಂಪು ಅವರ ನಾಟಕ ಚಲನಚಿತ್ರವಾಗಿ. "ಬೆರಳ್‌ಗೆ ಕೊರಳ್"ನಲ್ಲಿ ಶ್ರೀ ಹರ್ಷ.




ಕನ್ನಡದಲ್ಲಿ "ಬಂಗಾರದ ಮನುಷ್ಯ" ದ ನಂತರ ಮತ್ತೊಂದು ದಾಖಲೆ ಸೃಷ್ಟಿಸಿದ "ಶಂಕರ್‌ಗುರು". ವೈಶಾಲಿ, ರಾಜ್ ಕುಮಾರ್, ಪದ್ಮಪ್ರಿಯಾ.

ಪ್ರಭಾಕರ್ - ಖಳನಟ ಸ್ಥಾನದಿಂದ ನಾಯಕ ನಟ ಸ್ಥಾನಕ್ಕೇರಿದ ಕಲಾವಿದ.

ರತ್ನಗಿರಿ ರಹಸ್ಯದಿಂದ ಆರಂಭವಾದ ಟಾರ್ಜಾನ್ ಮಾದರಿ ಚಿತ್ರಗಳ ಪರಂಪರೆಯಲ್ಲಿ ಬಂದ ಎಂ. ಪಿ. ಶಂಕರ್ ತಯಾರಿಕೆ "ಕಾಡಿನ ರಹಸ್ಯ"ದಲ್ಲಿ ಯಶ್‌ಕುಮಾರ್.


ನಿರ್ದೇಶಿಸಿದರು. ಸೋತರೂ ಇದು ಮಹತ್ವದ ಚಿತ್ರ. ಯುದ್ಧ ನಿಷೇದ, ಶಾಂತಿ ಪ್ರತಿಪಾದನೆಯ ತತ್ತ್ವವನ್ನು ವೆ. ಮು. ಜೋಷಿ ಅವರ ಕತೆ ಆಧರಿಸಿ ರಾಜೇಂದ್ರಸಿಂಗ್ ನಿರೂಪಿಸಿದ್ದಾರೆ.



1990 ರಲ್ಲೇ ಮಹಾತ್ಮ ಪಿಕ್ಚರ್ಸ್ ಲಾಂಛನದಲ್ಲಿ **ಬಣ್ಣದ ಗೆಜ್ಜೆ** ತಯಾರಿಸಿದರು. ರವಿಚಂದ್ರನ್, ಅಮಲಾ, ಅಮ್ಜದ್ ಖಾನ್ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದರು. 1993ರಲ್ಲಿ ತ್ರಿವೇಣಿ ಅವರ ಕಾದಂಬರಿ ಆಧರಿಸಿ **ಹೂವು ಹಣ್ಣು** ನಿರ್ದೇಶಿಸಿದರು.

1982ರಲ್ಲಿ ಬಿಡುಗಡೆಯಾದ **ಸಾಹಸ ಸಿಂಹ** ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ರೀತಿಯ ಟ್ರೆಂಡ್ ಸೃಷ್ಟಿಸಿದ ಸಿನಿಮಾ. ಅದುವರೆಗೆ ಏಕತಾನತೆಯ ಅಭಿನಯದಲ್ಲಿದ್ದ ವಿಷ್ಣು ವರ್ಧನ್ ತಾರಾ ಇಮೇಜಗೆ ಹೊಸ ತಿರುವು ನೀಡಿದ ಚಿತ್ರವೂ ಇದಾಯಿತು. ಜೋಸೈಮನ್ ನಿರ್ದೇಶನದ ಈ ಚಿತ್ರ ಹೊಸ ಬಗೆಯ ಸಾಹಸ





ಅಂಬರೀಷ್ - ಅಶ್ವಿನಿಭಾವೆ "ರಂಗೇನ ಹಳ್ಳಿಯಾಗೆ ರಂಗಾದ ರಂಗೇಗೌಡ"



ಗೀತಾಂಜಲಿ - ವಿಷ್ಣುವರ್ಧನ್ "ಜನನಿ ಜನ್ಮ ಭೂಮಿ"

ಸಂಯೋಜನೆಯಿಂದಾಗಿ ಯುವಜನರನ್ನು ಆಕರ್ಷಿಸಿ ಮುಂದೆ ಅದೇ ರೀತಿಯ ಚಿತ್ರಗಳ ಪರಂಪರೆಗೆ ಕಾರಣವಾಯಿತು. ಈ ಚಿತ್ರದ ಹೆಸರಿನ ಮಾದರಿಯಲ್ಲೇ ಹಲವಾರು ಚಿತ್ರಗಳು ಬರುವಂತಾಯಿತು. ಈ ಚಿತ್ರದ ನಂತರ ನಟ ವಿಷ್ಣುವರ್ಧನ್ ಅವರ ಅಭಿಮಾನಿಗಳ ಸಂಖ್ಯೆಯೂ ಬೆಳೆಯಿತು. 1987ರಲ್ಲಿ ಬಿಡುಗಡೆಯಾದ **ಜಯಸಿಂಹ** ಚಿತ್ರದ ಮೂಲಕ ವಿಷ್ಣುವರ್ಧನ್ ಶತಚಿತ್ರಗಳ ನಟರೂ ಆದರು.

1969ರಲ್ಲಿ **ಮೇಯರ್ ಮುತ್ತಣ್ಣ** ನಿರ್ಮಿಸುವುದರ ಮೂಲಕ ನಿರ್ಮಾಪಕರಾದ ಹಾಸ್ಯನಟ ದ್ವಾರಕೀಶ್, ನಂತರದ ದಿನಗಳಲ್ಲಿ ನಿರ್ದೇಶನಕ್ಕೂ ಇಳಿದರು. 1972ರಲ್ಲಿ ದ್ವಾರಕಾಫಿಲಂ ಲಾಂಛನದಲ್ಲಿ ದ್ವಾರಕೀಶ್ **ಕುಳ್ಳ ಏಜಂಟ್ *000*** ಎಂಬ ಹಾಸ್ಯ ಪ್ರಧಾನ ಚಿತ್ರ ತಯಾರಿಸಿದರು. ಕೆ. ಎಸ್. ಎಲ್. ಸ್ವಾಮಿ ನಿರ್ದೇಶನದ ಈ ಚಿತ್ರದಲ್ಲಿ ದ್ವಾರಕೀಶ್ ನಾಯಕ. ಜ್ಯೋತಿಲಕ್ಷ್ಮಿ, ಜಯ, ಸಂಪತ್, ವಜ್ರಮುನಿ ಇತರ ಪಾತ್ರಗಳಲ್ಲಿದ್ದಾರೆ. ಮೊದಲಬಾರಿಗೆ ಹಿಂದಿ ಚಿತ್ರರಂಗದ ಹಿನ್ನೆಲೆಗಾಯಕ ಕಿಶೋರ್ ಕುಮಾರ್ ಅವರಿಂದ ಹಾಡೊಂದನ್ನು ಈ ಚಿತ್ರದಲ್ಲಿ ಹಾಡಿಸಲಾಗಿದೆ. 1973ರಲ್ಲಿ ವಿಜಯ್ ನಿರ್ದೇಶನದಲ್ಲಿ ದ್ವಾರಕೀಶ್ "ಕೌಬಾಯ್ ಕುಳ್ಳ" ತಯಾರಿಸಿದರು. 1978ರಲ್ಲಿ "ಸಿಂಗಾಪೂರ್‌ನಲ್ಲಿ ರಾಜಾಕುಳ್ಳ" ಎಂಬ ಚಿತ್ರ ತಯಾರಿಸಿದರು. ಮೊದಲಬಾರಿಗೆ ಸಿಂಗಾಪೂರ್‌ನಲ್ಲಿ ಚಿತ್ರೀಕರಣ ನಡೆಸಿದ್ದು ಈ ಚಿತ್ರದ ವಿಶೇಷವಾಯಿತು. 1981ರಲ್ಲಿ "ಗುರುಶಿಷ್ಯರು" ಎಂಬ ಹಾಸ್ಯ ಪ್ರಧಾನ ಜಾನಪದ ಚಿತ್ರ ನಿರ್ಮಿಸಿದರು. 1985ರಲ್ಲಿ "ನೀ ಬರೆದ ಕಾದಂಬರಿ" ಚಿತ್ರ ನಿರ್ದೇಶಿಸುವ ಮೂಲಕ ನಿರ್ದೇಶಕರೂ ಆದರು. ನಂತರ "ನೀ ತಂದ ಕಾಣಿಕೆ", 1985ರಲ್ಲಿ "ಆಫ್ರಿಕಾದಲ್ಲಿ ಶೀಲಾ" ತಯಾರಿಸಿದರು. 1993ರಲ್ಲಿ "ರಾಯರು ಬಂದರು ಮಾವನ ಮನೆಗೆ", 1994ರಲ್ಲಿ "ಕಿಲಾಡಿಗಳು" ನಿರ್ದೇಶಿಸಿದರು. ಹೊಸ ಸಾಹಸಗಳನ್ನು ಮಾಡುವುದರಲ್ಲಿ ದ್ವಾರಕೀಶ್ ಪ್ರಖ್ಯಾತರು.

**ಕಲ್ಯಾಣ್‌ಕುಮಾರ್**

1954ರಲ್ಲಿ ಕನ್ನಡ ಚಿತ್ರರಂಗದ ನಾಯಕರಾಗಿ ಆಗಮಿಸಿದ ಕಲ್ಯಾಣ್‌ಕುಮಾರ್ ಚಿತ್ರರಂಗದಲ್ಲಿ ಮರುಹುಟ್ಟು ಪಡೆದದ್ದು ಈ ಕಾಲಾವಧಿಯ ಮತ್ತೊಂದು ಮುಖ್ಯ ಬೆಳವಣಿಗೆ. ಚಿತ್ರರಂಗದಲ್ಲಿ ಮೇಲೇರುತ್ತಾ ಇದ್ದಂತೆಯೇ ಇದ್ದಕ್ಕಿದ್ದಂತೆ ಅಜ್ಞಾತವಾಸ ಅನುಭವಿಸಬೇಕಾಗಿ ಬಂದ ಕಲ್ಯಾಣ್‌ಕುಮಾರ್ 1984ರ ವೇಳೆಗೆ ಮತ್ತೆ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಂಡರು.

1965ರಲ್ಲಿ ಕಲ್ಯಾಣ್ ಕುಮಾರ್ ಅಭಿನಯಿಸಿದ ಚಿತ್ರಗಳ ಸಂಖ್ಯೆ ನಾಲ್ಕು. 1966ರಲ್ಲಿ ತಮ್ಮದೇ ಆದ ಆರ್. ಕೆ.ಪಿಕ್ಚರ್ಸ್ ಸಂಸ್ಥೆಯನ್ನು ಸ್ಥಾಪಿಸಿದ ಕಲ್ಯಾಣ್‌ಕುಮಾರ್ "ಎಂದೂ ನಿನ್ನವನೆ" ಎಂಬ ಚಿತ್ರವನ್ನು ನಿರ್ದೇಶಿಸಿದರು. ನಟನಟಿಯರಿಗೆ ಮೇಕಪ್ ಇಲ್ಲದೆಯೇ ಚಿತ್ರೀಕರಿಸಿದ ಮೊದಲ ಕನ್ನಡ ಚಿತ್ರ ಇದು. ಈ ರೀತಿಯ ಪ್ರಯೋಗ ಮತ್ತೆ ಕನ್ನಡದಲ್ಲಿ ಆಗಿಲ್ಲ. ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಲ್ಯಾಣ್‌ಕುಮಾರ್, ಜಯಂತಿ, ಲತಾ , ರಮೇಶ್ ಮೊದಲಾದವರಿದ್ದಾರೆ. ಅದೇ ವರ್ಷ ಕಲ್ಯಾಣ್ ಕುಮಾರ್, **ಬದುಕುವ ದಾರಿ, ಸುಬ್ಬಾಶಾಸ್ತ್ರಿ** ಚಿತ್ರಗಳಲ್ಲಿ ಅಭಿನಯಿಸಿದರು. 1967ರಲ್ಲಿ ಅವರದೇ ನಿರ್ಮಾಣ ಸಂಸ್ಥೆಯ ಮೂಲಕ **ಕಲ್ಲುಸಕ್ಕರೆ** ನಿರ್ದೇಶಿಸಿದರು. ಆನಂತರ **ಬೆಳ್ಳಿ ಮೋಡ** ಬಿಡುಗಡೆಯಾಯಿತು. 1968ರಲ್ಲಿ ಕಲ್ಯಾಣ್ ಕುಮಾರ್ **ಪ್ರವಾಸಿಮಂದಿರ** ತಯಾರಿಸಿ ನಿರ್ದೇಶಿಸಿದರು. ಸ್ಟುಡಿಯೋಗಳ ನೆರವಿಲ್ಲದೆಯೇ ಸಂಪೂರ್ಣ ಹೊರಾಂಗಣದಲ್ಲೇ ಚಿತ್ರೀಕರಣಗೊಂಡ ಮೊದಲ ಕನ್ನಡ ಚಿತ್ರವಿದು.

1971ರಲ್ಲಿ ಮೂರು ಚಿತ್ರಗಳಲ್ಲಿ ಅಭಿನಯಿಸಿದ ಕಲ್ಯಾಣ್ ಕುಮಾರ್ ಮತ್ತೆ ತೆರೆಯ ಮೇಲೆ ಕಾಣಿಸಿಕೊಂಡದ್ದು 1976ರಲ್ಲಿ. ಎಸ್. ಆರ್. ಪುಟ್ಟಣ್ಣಕಣಗಾಲ್ ನಿರ್ದೇಶಿಸಿದ **ಕಥಾಸಂಗಮ** ಚಿತ್ರದ ಕತೆಯೊಂದರ ನಾಯಕ ಪಾತ್ರದಲ್ಲಿ. ನಂತರ ಪುಟ್ಟಣ್ಣನವರೇ ನಿರ್ದೇಶಿಸಿದ **ಕಾಲೇಜುರಂಗ** ಚಿತ್ರದಲ್ಲಿ ಕಲ್ಯಾಣ್‌ಕುಮಾರ್‌ಗೆ ಮುಖ್ಯ ಪಾತ್ರ. ಅದೇ ವರ್ಷ **ತುಳಸಿ** ಯಲ್ಲಿ ಅಭಿನಯ. 1977ರಲ್ಲಿ **ಮುಗ್ಧ ಮಾನವ, ಶುಭಾಶಯ** ನಂತರ ಎರಡು ವರ್ಷ ಅವಕಾಶಗಳಿಲ್ಲ. 1979ರಲ್ಲಿ ಕೆ. ವಿ.ಜಯರಾಂ ನಿರ್ದೇಶನದ **ಮರಳು ಸರಪಣಿ**ಯಲ್ಲಿ ಅವಕಾಶ. ನಂತರ ಮೂರು ವರ್ಷ ಅಜ್ಞಾತವಾಸ. 1983ರಲ್ಲಿ **ತಾಯಿಯ ನುಡಿ** ಚಿತ್ರದ ಮೂಲಕ ಮತ್ತೆ ಪೋಷಕ ಪಾತ್ರಗಳಲ್ಲಿ ಅಭಿನಯ. ಹೀಗೆ ಸಾಗುತ್ತಿದೆ ಕಲ್ಯಾಣ್ ಕುಮಾರ್ ಅವರ ಜೀವನಕಥೆ.




ಕನ್ನಡ ಚಿತ್ರರಂಗ ಕಂಡ ಮತ್ತೊಬ್ಬ ಪ್ರಯೋಗಶೀಲ ನಟ ಶಂಕರ್‌ನಾಗ್. ಮಿಂಚಿನಂತೆ ಕನ್ನಡ ಚಿತ್ರರಂಗ ಪ್ರವೇಶಿಸಿ, ಅಷ್ಟೇ ವೇಗವಾಗಿ ಮರೆಯಾದ ಶಂಕರ್‌ನಾಗ್ ಅವರ ಹೆಸರು ಸ್ಮರಣೀಯ.

1978ರಲ್ಲಿ ಎಲ್. ಎನ್. ಕಂಬೈನ್ಸ್ ಲಾಂಛನದಲ್ಲಿ ಗಿರೀಶ್ ಕಾರ್ನಾಡ್ ನಿರ್ದೇಶಿಸಿದ "ಒಂದಾನೊಂದು ಕಾಲದಲ್ಲಿ" ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಶಂಕರ್‌ನಾಗ್, ಈ ಚಿತ್ರದ ಅಭಿನಯಕ್ಕಾಗಿ ಆ ವರ್ಷದ ಶ್ರೇಷ್ಠ ನಟ ಪ್ರಶಸ್ತಿ ಪಡೆದರು.1979ರಲ್ಲಿ ಮಧು ಆರ್ಟ್ ಫಿಲಂಸ್ ಲಾಂಛನದಲ್ಲಿ ಅಬ್ಬಯ್ಯನಾಯ್ಡು ನಿರ್ಮಾಪಕರಾಗಿದ್ದ, ವಿ.ಸೋಮಶೇಖರ್ ನಿರ್ದೇಶಿಸಿದ **ಸೀತಾರಾಮು** ಚಿತ್ರದಲ್ಲಿ ನಾಯಕರಾದರು. ಸೇಡಿನ ಕಥೆ ಉಳ್ಳ, ಮಾರಾಮಾರಿ ಪ್ರಿಯರನ್ನು ರಂಜಿಸುವ ಅಂಶಗಳನ್ನೊಂದಿದ್ದ ಈ ಚಿತ್ರ ಭಾರೀ ಯಶಸ್ಸಾಗಿ ಶಂಕರ್‌ನಾಗ್ ಆ್ಯಕ್ಷನ್ ಹೀರೋ ಆಗಿ ಗುರುತಿಸಲ್ಪಟ್ಟರು. ಅಲ್ಲಿಂದ ಮುಂದೆ ಅವರು ಬೇಡಿಕೆಯ ನಾಯಕ ನಟ. ಅದೇ ವರ್ಷ "ಐ ಲವ್ ಯೂ", "ಪ್ರೀತಿಮಾಡು ತಮಾಷೆ ನೋಡು", "ಮಧುಚಂದ್ರ" ಚಿತ್ರಗಳಲ್ಲಿ ಕಾಣಿಸಿಕೊಂಡ ಶಂಕರ್‌ನಾಗ್, 1980ರಲ್ಲಿ ಸಹೋದರ ಅನಂತನಾಗ್ ಅವರೊಂದಿಗೆ ಸೇರಿ ಸಂಕೇತ್ ನಿರ್ಮಾಣ ಸಂಸ್ಥೆ

ಸ್ಥಾಪಿಸಿದರು. ಆ ಸಂಸ್ಥೆಯ ಮೂಲಕ **ಮಿಂಚಿನ ಓಟ** ತಯಾರಿಸಿ ತಾವೇ ನಿರ್ದೇಶಿಸಿದರು. ಅಪಘಾತದಲ್ಲಿ ದುರಂತ ಸಾವನ್ನಪ್ಪುವವರೆಗೆ ಅವರದು "ಮಿಂಚಿನ ಓಟ"ವೇ ಆಗಿತ್ತು. ಈ ಚಿತ್ರದಲ್ಲಿ ಶಂಕರ್‌ನಾಗ್ , ಅನಂತನಾಗ್ ಇಬ್ಬರೂ ಸೇರಿ ಹಾಡಿದ್ದಾರೆ. 1980ರಲ್ಲಿ ಪುನರ್‌ಜನ್ಮದ ಕತೆಯುಳ್ಳ **ಜನ್ಮ ಜನ್ಮದ ಅನುಬಂಧ** ನಿರ್ದೇಶಿಸಿದರು. 1981ರಲ್ಲಿ ಗಾಯಕನ ಕತೆ ಇರುವ ***ಗೀತಾ*** ನಿರ್ದೇಶಿಸಿದರು. ತಮಿಳು ಚಿತ್ರರಂಗದ ಜನಪ್ರಿಯ ಸಂಗೀತ ನಿರ್ದೇಶಕ ಇಳಯರಾಜಾ ಅವರನ್ನು "ಗೀತಾ" ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದರು. (ಇಳಯರಾಜ ಕನ್ನಡದ ಸಂಗೀತ ನಿರ್ದೇಶಕ ಜಿ. ಕೆ. ವೆಂಕಟೇಶ್ ತಂಡದಲ್ಲಿದ್ದವರು). 1983ರಲ್ಲಿ ಜನಪ್ರಿಯ ನಾಟಕ **ನೋಡಿ ಸ್ವಾಮಿ ನಾವಿರೋದೇ ಹೀಗೆ**, 1984ರಲ್ಲಿ **ಆ್ಯಕ್ಸಿಡೆಂಟ್**, 1987ರಲ್ಲಿ ಡಾ. ರಾಜಕುಮಾರ್ ಅಭಿನಯಿಸಿರುವ **ಒಂದು ಮುತ್ತಿನ ಕತೆ** ಚಿತ್ರವನ್ನು ಶಂಕರನಾಗ್ ನಿರ್ದೇಶಿಸಿದರು.

ಸಂಕೇತ್ ಡಬ್ಬಿಂಗ್ ಥಿಯೇಟರ್ ಆರಂಭಿಸಿದರು. ದೂರ ದರ್ಶನಕ್ಕಾಗಿ ಹಿಂದಿ ಚಿತ್ರಸರಣಿಯಲ್ಲಿ ತೊಡಗಿದರು. ಕನ್ನಡ ಚಲನಚಿತ್ರರಂಗದ ಅಭಿವೃದ್ಧಿಗೂ ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದ ಪ್ರಯೋಗಶೀಲ ಶಂಕರ್‌ನಾಗ್, ಕನಸುಗಳು ಕೈಗೂಡುವ ಮುನ್ನವೇ ಕಣ್ಮರೆಯಾದರು.




ಈ ಕಾಲಾವಧಿಯ ಅತ್ಯಂತ ಮಹತ್ವದ ಘಟನೆ ಎಂದರೆ ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರಗಳ ಪರಂಪರೆ ಆರಂಭವಾದದ್ದು. 1964ರಲ್ಲೇ "ನಾಂದಿ" ಚಿತ್ರದಲ್ಲಿ ಈ ಬಗೆಯ ಹೊಸ ಪ್ರಯೋಗಕ್ಕೆ ನಾಂದಿಯಾಗಿತ್ತಾದರೂ 1970ರಲ್ಲಿ ಅದು ಆವಿಷ್ಕಾರ ಗೊಂಡಿತು. 1970ರಲ್ಲಿ ಪಟ್ಟಾಭಿರಾಮರೆಡ್ಡಿಯವರು "ಸಂಸ್ಕಾರ" ಚಿತ್ರ ನಿರ್ದೇಶಿಸುವುದರೊಂದಿಗೆ ಹೊಸ ಅಲೆಯ ಚಿತ್ರಗಳಿಗೆ ಚಾಲನೆ ನೀಡಿದರು. ಈ ಚಿತ್ರದೊಂದಿಗೆ ಬುದ್ಧಿಜೀವಿಗಳ ಹೊಸ ತಂಡವೇ ಚಲನಚಿತ್ರ ನಿರ್ಮಾಣಕ್ಕೆ ಇಳಿಯಿತು. ಅನಂತರದ ದಿನಗಳಲ್ಲಿ ಈ ಅಲೆಯಲ್ಲಿ ಪ್ರತಿಭಾನ್ವಿತ ನಿರ್ದೇಶಕರುಗಳು ಕನ್ನಡ ಚಿತ್ರರಂಗ ಪ್ರವೇಶಿಸಿ ತಮ್ಮ ಹೊಸ ಚಿಂತನೆಗಳನ್ನು ಮಾಧ್ಯಮದಲ್ಲಿ ಬಿಂಬಿಸಲಾರಂಭಿಸಿದರು. ಗಿರೀಶ್ ಕಾರ್ನಾಡ್, ಬಿ. ವಿ ಕಾರಂತ, ಪಿ. ಲಂಕೇಶ್, ಗಿರೀಶ್ ಕಾಸರವಳ್ಳಿ, ಟಿ. ಎಸ್. ನಾಗಾಭರಣ, ಎಂ. ಎಸ್. ಸತ್ಯು, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ಪಿ. ವಿ. ನಂಜರಾಜ ಅರಸು, ಪ್ರೇಮಾ ಕಾರಂತ್, ಕಟ್ಟೆ ರಾಮಚಂದ್ರ, ಸಿ. ಆರ್. ಸಿಂಹ, ವಿ. ಆರ್. ಕೆ. ಪ್ರಸಾದ್ ಮೊದಲಾದವರು ಈ ಅಲೆಯಲ್ಲಿ ಮೂಡಿಬಂದ ನಿರ್ದೇಶಕರುಗಳು.

*ಶಂಕರ್‌ನಾಗ್ ನಿರ್ದೇಶನದಲ್ಲಿ ಹೊಸ ಬಗೆಯ ಟ್ರೆಂಡ್ ಆರಂಭ. "ಮಿಂಚಿನ ಓಟ"*

# ಹೊಸ ಅಲೆ

ಈ ಹೊಸ ಅಲೆ ಎಂಬ ಪದ ಕನ್ನಡ ಚಿತ್ರರಂಗದಲ್ಲಿ ಚಾಲನೆಯಲ್ಲಿ ಬಂದುದು 1970ರಲ್ಲಿ. ಆ ವರ್ಷ ತೆರೆಕಂಡ **ಸಂಸ್ಕಾರ** ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಯನ್ನು ಮುಂದುವರೆಸಿತು. ಚಿತ್ರರಂಗದಲ್ಲಿ ಇಂದಿಗೂ ಬುದ್ಧಿಜೀವಿಗಳು ಈ ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ಚಿತ್ರರಂಗ ಈಗ ಸಂಪೂರ್ಣ ವಾಣಿಜ್ಯ ದೃಷ್ಟಿಯ ಚಲನಚಿತ್ರಗಳನ್ನು ತಯಾರಿಸುತ್ತಾ, ವರ್ಷಕ್ಕೆ 80 ರಿಂದ 90 ಚಿತ್ರಗಳನ್ನು ನಿರ್ಮಿಸುತ್ತಾ ಬೃಹತ್ ಉದ್ಯಮವಾಗಿದೆ. ಈ ಉದ್ಯಮದೊಳಗೆ ಒಂದಾಗಿ ವಾಣಿಜ್ಯ ಸಿದ್ಧ ಸೂತ್ರಗಳ ಜತೆ ರಾಜಿಯಾಗದೆ ತಮ್ಮದ್ದೇ ಆದ ವಿಭಿನ್ನ ಚಿಂತನೆಗಳ ಮೂಲಕ ಈ ಹೊಸ ಅಲೆಯ ನಿರ್ದೇಶಕರು ಗುರುತಿಸಲ್ಪಡುತ್ತಿದ್ದಾರೆ.




ಗಿರೀಶ್ ಕಾರ್ನಾಡ್ - "ಸಂಸ್ಕಾರ"

ಆದರೆ ಇದುವರೆಗೆ 'ಹೊಸ ಅಲೆ' ಎಂಬುದಕ್ಕೆ ಖಚಿತ ಅರ್ಥ ಹಾಗೂ ಆ ಮಾದರಿಯ ಚಿತ್ರಗಳ ಖಚಿತ ವಿಶ್ಲೇಷಣೆ ಸಾಧ್ಯವಾಗಿಲ್ಲ. ಈ ಹೊಸ ಅಲೆಗೆ, ಹೊಸ ಚಿಂತನೆಗೆ ಪ್ರೇರಣೆ ಎಲ್ಲಿಯದು? ಇದು ಯಾವ ಚಿತ್ರ ಚಳವಳಿಯಿಂದ ಪ್ರೇರಿತವಾಗಿದೆ? ಇದರ ಬದ್ಧತೆ ಏನು ಎಂಬುದು ಚರ್ಚೆಗೆ ಒಳಗಾಗಿಲ್ಲ. ಆದರೆ ಆಯಾ ಚಿತ್ರಕ್ಕೆ ಸಂಬಂಧಪಟ್ಟಂತೆ ಚರ್ಚಿತವಾಗುವ ಸುಸಂಗತಿಗಳ ಆಧಾರದ ಮೇಲೆ ಇದು ಕಮರ್ಷಿಯಲ್ ಚಿತ್ರಗಳಿಗಿಂತ ವಿಭಿನ್ನವಾಗಿ ನಿಲ್ಲುವ ಚಿತ್ರ ಎಂಬ ವಿಂಗಡಣೆ ಮಾಡಲಾಗುತ್ತದೆ. 1940ರ ದಶಕದಲ್ಲಿ ಇಟಲಿಯಲ್ಲಿ ಆರಂಭವಾದ ನಿಯೋರಿಯಲಿಸಂನಂತೆ ಕನ್ನಡ ಚಿತ್ರರಂಗದಲ್ಲೂ ಈ ಹೊಸ ಅಲೆಯ ಚಳವಳಿ ಬೆಳೆಯಿತೇ? ಇಲ್ಲವೇ ಪಶ್ಚಿಮ ಬಂಗಾಳದ ನಿರ್ದೇಶಕ ಸತ್ಯಜಿತ್‌ರಾಯ್ ಅವರ ಪ್ರಭಾವ ಈ ಬಗೆಯ ಚಿತ್ರಗಳ ಮೇಲೆ ಪರಿಣಾಮ ಬೀರಿದೆಯೇ ಎಂಬುದನ್ನು ವಿಶ್ಲೇಷಿಸಬೇಕಾಗುತ್ತದೆ. ಏಕೆಂದರೆ ಭಾರತದ ಚಿತ್ರರಂಗಕ್ಕೆ ತಮ್ಮದ್ದೇ ಆದ ವಿಶಿಷ್ಟ ದೃಷ್ಟಿಕೋನ ಮತ್ತು ಚಿಂತನೆಗಳ ಮೂಲಕ ಘನತೆ ತಂದ ಬಂಗಾಲಿ ನಿರ್ದೇಶಕ ಸತ್ಯಜಿತ್‌ರಾಯ್ ಅವರ ಚಿತ್ರಗಳ ದೃಶ್ಯಗಳು, ನಿರೂಪಣೆ ಭಾರತೀಯ ಚಿತ್ರಗಳ ಹೊಸ ಚಿಂತನೆಯ ನಿರ್ದೇಶಕರಲ್ಲಿ ನೇರ ಪ್ರಭಾವ ಬೀರಿರುವುದನ್ನು ನಾವು ಕಾಣುತ್ತೇವೆ. ಕನ್ನಡದಲ್ಲೂ 70ರ ದಶಕದಲ್ಲಿ ಬಂದ **ಚೋಮನ ದುಡಿ, ಕಾಡು** ಚಿತ್ರಗಳು ಸತ್ಯಜಿತ್ ರಾಯ್ ಅವರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು.



"ನಾಂದಿ" ಹೊಸ ಅಲೆಯ ಮೊದಲ ಚಿತ್ರ? ರಾಜ್‌ಕುಮಾರ್, ಹರಿಣಿ.

ಹೊಸ ಅಲೆಯ ಚಿತ್ರ ನಿರ್ದೇಶಕರಲ್ಲಿ ಪ್ರತಿಭಾವಂತ ಹಾಗೂ ಹೊಸ ವಿಚಾರಗಳ ಮೂಲಕ ಹೆಸರಾಗಿರುವ ಗಿರೀಶ್ ಕಾಸರವಳ್ಳಿ ಅವರು ಹೊಸ ಅಲೆಯ ಚಿತ್ರ ಪರಂಪರೆಯಲ್ಲಿ ಮಹತ್ವದ ಚಿತ್ರಗಳನ್ನು ನೀಡಿದ್ದಾರೆ. ರಾಷ್ಟ್ರ ಪ್ರಶಸ್ತಿ ಗಳನ್ನು ಕನ್ನಡ ಚಿತ್ರರಂಗಕ್ಕೆ ಎಳೆತಂದು, ಕನ್ನಡ ಚಿತ್ರರಂಗಕ್ಕೆ ಘನತೆ ತಂದಿದ್ದಾರೆ. ಕನ್ನಡದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಯ ಬಗ್ಗೆ ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ : "60ರ ದಶಕದಲ್ಲಿ ಫ್ರಾನ್ಸ್‌ನಲ್ಲಿ ಕಂಡ ಚಿತ್ರ ಶೈಲಿ 'ಹೊಸ ಅಲೆ'ಯಂತೆ ಜೀವನದ ಬಗೆಗಿನ ಹತಾಶೆ,ಪ್ರಕ್ಷುಬ್ಧತೆ ನಿರಾಶತನವನ್ನು ತಾತ್ವಿಕವಾಗಿ ಗ್ರಹಿಸುತ್ತಾ, ಅದಕ್ಕೆ ಪ್ರತಿರೂಪವಾಗಿ ಸಿನಿಮಾ ಭಾಷೆಯನ್ನು ರೂಢಿಸುವ ಕಾಳಜಿ ನಮ್ಮ ಚಿತ್ರ ನಿರ್ದೇಶಕರದಾಗಿರಲಿಲ್ಲ. ಅಥವಾ 70ರ ದಶಕದಲ್ಲಿ ಜರ್ಮನಿಯ ತರುಣ ನಿರ್ದೇಶಕರೆಲ್ಲ, ಓಬೇರ್ ಹೌಸನ್ ಚಿತ್ರೋತ್ಸವದಲ್ಲಿ ಸೇರಿ ಒಂದು ಪ್ರಣಾಳಿಕೆ ಸಿದ್ಧ ಮಾಡಿಕೊಂಡಂತೆ ಇಲ್ಲಿ ಯಾವುದೇ ಪ್ರಯತ್ನಗಳ ಅಡಿಯಾಳಾಗಿ ನಮ್ಮ ಕನ್ನಡದ ಹೊಸ ಅಲೆ ಬರಲಿಲ್ಲ. ಹಾಗಾಗಿ "ಸಂಸ್ಕಾರ"ದಿಂದ ಈ "ಚಿತ್ರಪಂಥ" ಆರಂಭಗೊಂಡಿತು ಎಂದು ಹೇಳಹೊರಟರೆ ಆ ಚಿತ್ರಕ್ಕಿಂತ ಮೊದಲು



ಕಾಣಿಸಿಕೊಂಡಿದ್ದ ಎನ್. ಲಕ್ಷ್ಮೀನಾರಾಯಣ್ ಅವರ **ನಾಂದಿ**ಯಾಗಲೀ, ಎಂ. ವಿ. ಕೃಷ್ಣಸ್ವಾಮಿಯವರ **ಸುಬ್ಬಾಶಾಸ್ತ್ರಿ** ಯಾಗಲಿ, ಚದುರಂಗ ಅವರ **ಸರ್ವಮಂಗಳಾ** ಚಿತ್ರವನ್ನಾಗಲಿ ಯಾಕೆ ಈ ಗುಂಪಿಗೆ ಸೇರಿಸಬಾರದು ಎಂದು ಯೋಚಿಸುವ ಸಾಧ್ಯತೆಗಳಿವೆ."

ಈ ಮಾತುಗಳ ಮೂಲಕ ಗಿರೀಶ್ ಕಾಸರವಳ್ಳಿ ಹೊಸ ಅಲೆಯ ಚಿತ್ರಗಳ ಹಿನ್ನೆಲೆಯ ಬಗ್ಗೆ ಪುನರ್ ಚಿಂತನೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಹೊಸ ಅಲೆ ಎಂಬುದು ಗಿರೀಶ್ ಕಾಸರವಳ್ಳಿ ಹೇಳುವಂತೆ ಖಚಿತ ಚಳವಳಿಯ ಹಿನ್ನೆಲೆಯಲ್ಲಿ ಬಂದಿಲ್ಲದ್ದಾಗಿರುವುದರಿಂದ ಇದು ಇನ್ನೂ ಅನುಕರಣ ಶೈಲಿಯಲ್ಲಿಯೇ ಉಳಿದು ಕೊಂಡು ಬಂದಿರುವುದು ಅಂತಹ ಚಿತ್ರಗಳ ತೌಲನಿಕ ವಿಶ್ಲೇಷಣೆ, ವಿಮರ್ಶೆಗಳಿಂದ ಕಾಣಬರುತ್ತದೆ. ಹೀಗಾಗಿ ನಾವು 1970ರಿಂದ 80ರ ದಶಕದಲ್ಲಿ ಕಾಣುವ ಹೊಸ ಅಲೆಯ ಚಿತ್ರಗಳು, 80 ರಿಂದ 90ರ ದಶಕದಲ್ಲಿ ಕಾಣುವ ಹೊಸ ಅಲೆಯ ಚಿತ್ರಗಳು ಬೇರೆ ಬೇರೆಯೇ ಆದ ವಿಭಿನ್ನ ಮಜಲುಗಳಲ್ಲಿ ನಿಲ್ಲುತ್ತವೆ. ಆರಂಭದ ದಶಕದ ಚಿತ್ರಗಳಿಗೆ ಸತ್ಯಜಿತ್ ರಾಯ್ ಅವರ ಪ್ರಭಾವವಿದ್ದಂತೆ, 80ರ ದಶಕದ ಕನ್ನಡ ಚಿತ್ರಗಳಿಗೆ 70ರ ದಶಕದ ಚಿತ್ರಗಳು ಪ್ರಭಾವ ಬೀರಿದಂತೆ ಕಾಣುತ್ತದೆ. ಈ ಒಟ್ಟಾರೆ ಚಳವಳಿಯಲ್ಲಿ ಒಂದು ಸುಸಂಘಟನೆ ಇಲ್ಲದಿರುವುದರಿಂದ ಈ ಮಾಧ್ಯಮವನ್ನು ತಮ್ಮ ವೈಚಾರಿಕತೆಯ ಅಭಿವ್ಯಕ್ತಿ ಸಾಧನವಾಗಿ ಬಳಸಿಕೊಂಡು ಅದರಲ್ಲೂ ಕಲಾತ್ಮಕ ಅಂಶಗಳನ್ನು ಪ್ರತಿಬಿಂಬಿಸುವಷ್ಟರ ಮಟ್ಟಕ್ಕೆ ಈ ಪ್ರಕ್ರಿಯೆ ನಿಂತು ಬಿಟ್ಟಿದೆ. ಆದರೆ ಆರಂಭದ ದಶಕಗಳಲ್ಲಿ ಹೊಸ ಅಲೆಯ ಮೂಲಕ ತಮ್ಮನ್ನು ಗುರುತಿಸಿಕೊಂಡವರು, ಎರಡನೆಯ ದಶಕದಲ್ಲಿ ವಿಚಾರಪ್ರಧಾನರಾಗಿ ತಮ್ಮ ದೃಷ್ಟಿಕೋನದಲ್ಲಿ ಬದಲಾವಣೆ ಮಾಡಿಕೊಂಡಿರುವುದೂ ಗಮನಾರ್ಹವಾಗಿದೆ.

ಹಾಗೆ ನೋಡಿದರೆ ಕಲಾತ್ಮಕ ಚಿತ್ರಗಳು ಮೂಕಿಯುಗದಲ್ಲೇ ತಯಾರಾದ ಉದಾಹರಣೆಗಳು ನಮಗೆ ಸಿಗುತ್ತವೆ. ಗುಬ್ಬಿ ವೀರಣ್ಣನವರು 1931ರಲ್ಲಿ ತಯಾರಿಸಿದ **ಹಿಸ್ ಲವ್ ಅಫೇರ್** ಮೂಕಿ ಚಿತ್ರ

ಹೊಸ ಅಲೆಯ ವಾಹಿನಿಯನ್ನು ಕನ್ನಡದಲ್ಲಿ ಹರಿಯ ಬಿಟ್ಟ 'ಸಂಸ್ಕಾರ'ದಲ್ಲಿ ಪಿ.ಲಂಕೇಶ್ (ನಾರಾಣಪ್ಪ) ಹಾಗೂ ಗಿರೀಶ್ ಕಾರ್ನಾಡ್ (ಪ್ರಾಣೇಶಾಚಾರ್ಯ)


ಈ ರೀತಿಯ ಒಂದು ಪ್ರಯೋಗವಾಗಿತ್ತು ಎಂದು ಹೇಳಬಹುದು. ಅನಂತರ ವಾಕ್ಚಿತ್ರಯುಗದ ಆರಂಭಕಾಲದಲ್ಲಿ ಆದುವರೆಗೆ ರಂಗಭೂಮಿಯ ಮೇಲೆ ಹಾಗೂ ಚಿತ್ರರಂಗದ ಒಳಗೆ ಅನಿವಾರ್ಯವಾಗಿದ್ದ ರಾಮ, ಕೃಷ್ಣ, ಅರ್ಜುನ, ಪ್ರಹ್ಲಾದರನ್ನು ಹಿಂದಕ್ಕೆ ಸರಿಸಿದ ಟಿ. ಪಿ. ಕೈಲಾಸಂ, ಎಚ್. ಎಲ್. ಎನ್.





ಸಿಂಹ, ಬಿ. ಪುಟ್ಟಸ್ವಾಮಯ್ಯ ಅವರುಗಳು ಕಿಟ್ಟು, ಪುಟ್ಟು, ಸುಂದ್ರು, ಸುಬ್ಬಿ ಅವರುಗಳನ್ನು ಕತ್ತಲೆ ಬೆಳಕಿನಾಟಕ್ಕೆ ತಂದದ್ದು ಹೊಸ ಅಲೆಯ ಪೂರ್ವಭಾವಿ ಯತ್ನವೆಂದೇ ಕರೆಯಬಹುದು. 1942ರಲ್ಲಿ ಗುಬ್ಬಿ ಫಿಲಂ ಕಂಪನಿಯವರು ತಯಾರಿಸಿದ 'ಜೀವನ ನಾಟಕ' ಚಿತ್ರ ಇಂದಿನ ಹೊಸ ಅಲೆಯ ಸಿನಿಮಾಗಳ ವಸ್ತುವನ್ನು ಹೊಂದಿತ್ತು, ಅಂದು ಇಂದಿನಂತೆ ಪ್ರಚಾರ, ತಾಂತ್ರಿಕ ಪ್ರಗತಿ ಇಲ್ಲದ್ದರಿಂದ 'ಜೀವನ ನಾಟಕ' ಸಿನಿಮಾದ ಮಹತ್ವ ಮರೆಯಾಯಿತು ಎಂದು ಕಾದಂಬರಿಕಾರ ಬಿ. ಪುಟ್ಟಸ್ವಾಮಯ್ಯ ಹೇಳಿದ್ದಾರೆ.


ಈ ಹಿನ್ನೆಲೆಯಲ್ಲಿ ನೋಡಿದರೆ 1964ರಲ್ಲಿ ತಯಾರಾದ ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ **ನಾಂದಿ** ಚಿತ್ರವೇ ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ ನಾಂದಿಯಾದ ಚಿತ್ರ ಎನ್ನಬಹುದು. ಆರು ವರ್ಷಗಳ ನಂತರ 1970ರಲ್ಲಿ **ಸಂಸ್ಕಾರ**ದ ಮೂಲಕ ಈ ನವ್ಯಚಿಂತನೆ ಚಾಲನೆಗೊಂಡು ಗಟ್ಟಿಗೊಂಡಿತು. ಎನ್. ಲಕ್ಷ್ಮೀನಾರಾಯಣ್ ಅವರ ಚಿತ್ರ **ನಾಂದಿ**ಯನ್ನು ನಿರೂಪಿಸಿರುವ ಶೈಲಿ,ಕಥೆ, ಎಲ್ಲವೂ ಅಂದಿನ ದಿನಗಳಲ್ಲಿ ಹೊಸತನವೇ ಆಗಿತ್ತು. ಆದರೆ ಲಕ್ಷ್ಮೀನಾರಾಯಣ್ ಹಾಕಿದ ಈ ಹೊಸ ಹಾದಿಯನ್ನು ತಕ್ಷಣಕ್ಕೆ ಯಾರೂ ಮುಂದುವರೆಸದೇ ಹೋದದ್ದು ಕೂಡ ಈ ಚಿತ್ರವನ್ನು ಏಕಾಂಗಿಯಾಗಿಸಲು ಕಾರಣವಾಗಿರಬಹುದು. "ನಾಂದಿ" ಚಿತ್ರ ಆದುವರೆಗೆ ಭಾರತದ ಯಾವುದೇ ಭಾಷೆ ಚಿತ್ರ ನಿರ್ಮಾಪಕ ನಿರ್ದೇಶಕರು ಯೋಚಿಸದೇ ಇದ್ದ ಕಿವುಡ. ಮೂಗರ ಸಮಸ್ಯೆಯನ್ನು ಹೊಂದಿತ್ತು. ಹಾಗೂ ನಿರ್ದೇಶಕರು ಅದನ್ನು




"ಸಂಸ್ಕಾರ"ದ ನಿರ್ದೇಶಕ ಪಟ್ಟಾಭಿರಾಮರೆಡ್ಡಿ

ಗಿರೀಶ್ ಕಾರ್ನಾಡ್

ಹೊಸ ಅಲೆಯ ಚಿತ್ರ ನಿರ್ದೇಶಕರಿಗೆ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಯು. ಆರ್. ಅನಂತಮೂರ್ತಿಯವರ ಕೃತಿಗಳು ಬಲು ಪ್ರಿಯ "ಸಂಸ್ಕಾರ", "ಘಟಶ್ರಾದ್ಧ", "ಬರ" ಇವೆಲ್ಲ ಅನಂತ ಮೂರ್ತಿಯವರ ಕೃತಿಗಳು.



ಹೇಳುವ ಶೈಲಿ ಅರ್ಥಗರ್ಭಿತವಾಗಿತ್ತು. ಅದುವರೆಗೆ ಕನ್ನಡ ಚಿತ್ರರಂಗದಲ್ಲಿ ಎಲ್ಲ ಬಗೆಯ ವೈವಿಧ್ಯಮಯ ಪಾತ್ರಗಳಲ್ಲಿ ಜನಪ್ರಿಯರಾಗಿದ್ದ ರಾಜಕುಮಾರ್ ಅವರು ನಾಯಕ ಪಾತ್ರದಲ್ಲಿಯೂ ಆ ಕಾಲದ ಜನಪ್ರಿಯ ನಟಿಯಾಗಿದ್ದ ಹರಿಣಿ ನಾಯಕಿಯಾಗಿಯೂ ಪಾತ್ರ ವಹಿಸಿದ್ದರು. ಕಮರ್ಷಿಯಲ್ ನಟರ ಚಿತ್ರ ಎಂಬ ಕಾರಣಕ್ಕೆ ಈ ಚಿತ್ರ ಗಣನೆಗೆ ಬಾರದೆ ಹೋಗಿರಬಹುದೆಂಬ ಶಂಕೆಗೂ ಆಸ್ಪದವಿದೆ. ಆದರೆ 1970ರ "ಸಂಸ್ಕಾರ"ಕ್ಕೆ ಬುದ್ಧಿ ಜೀವಿಗಳ ಒಂದು ತಂಡವೇ ಗುಂಪುಗೂಡಿತ್ತು. 1970ರಲ್ಲಿ "ಸಂಸ್ಕಾರ" ಯಶಸ್ವಿಯಾಗುತ್ತಿದ್ದಂತೆಯೇ "ಸಂಸ್ಕಾರ" ಚಿತ್ರ ತಂಡದಲ್ಲಿದ್ದವರೆಲ್ಲ ಬೇರೆ ಬೇರೆಯಾಗಿ ಅದೇ ಪರಂಪರೆಯ ಚಿತ್ರಗಳನ್ನು ನಿರಂತರವಾಗಿ ತಯಾರಿಸುತ್ತಾ ಬಂದರು. 1972ರಲ್ಲಿ ಗಿರೀಶ್ ಕಾರ್ನಾಡ್, ಬಿ. ವಿ.ಕಾರಂತ್, 1973ರಲ್ಲಿ ಪಿ. ವಿ. ನಂಜರಾಜ್ ಅರಸು, 1974ರಲ್ಲಿ ಗಿರೀಶ್ ಕಾರ್ನಾಡ್, 1975ರಲ್ಲಿ ಬಿ. ವಿ. ಕಾರಂತ, 1976ರಲ್ಲಿ ಪಿ. ಲಂಕೇಶ್, 1977ರಲ್ಲಿ ಸಿ. ಆರ್. ಸಿಂಹ, ಎಂ. ಎಸ್. ಸತ್ಯು, ಗಿರೀಶ್ ಕಾಸರವಳ್ಳಿ, 1978ರಲ್ಲಿ ಬರಗೂರು ರಾಮಚಂದ್ರಪ್ಪ ಹೀಗೆ ""ಸಂಸ್ಕಾರ"ದ ನಂತರದ ದಿನಗಳನ್ನು ಸತತ ಹೊಸ ಅಲೆಯ ಚಿತ್ರಗಳ ನಿರ್ಮಾಣದಲ್ಲಿ ತೊಡಗಿಸಿ ಇದೊಂದು ಸಂಘಟಿತ ಹೊಸ ಪಂಥದ ಚಳವಳಿಯೇನೋ ಎಂಬಂತೆ ಮುಂದುವರೆಸಿ, ಈ ಹೊಸ ಚಟುವಟಿಕೆಯತ್ತ ಎಲ್ಲರ ಗಮನ ಸೆಳೆದರು ಹಾಗೂ ಈ ಹೊಸ ಅಲೆಯನ್ನು ಉಳಿಸಿದರು. ಆದರೆ 1964ರಲ್ಲಿ ಎನ್. ಲಕ್ಷ್ಮೀನಾರಾಯಣ್ ಅವರ ಯತ್ನಕ್ಕೆ ಈ ರೀತಿಯ ಹಿನ್ನೆಲೆ ಯಾವುದೂ ಇರಲಿಲ್ಲ. "ನಾಂದಿ" ಯಶಸ್ವಿಯಾಯಿತು ಎಂಬ ಕಾರಣಕ್ಕೆ ಆ

"ಒಂದಾನೊಂದು ಕಾಲದಲ್ಲಿ" ಗಿರೀಶ್ ಕಾರ್ನಾಡ್ ಕುಶಲತೆಗೆ ಸಾಕ್ಷಿ.

ರೀತಿಯ ಹೊಸಬಗೆಯ ಪ್ರಯತ್ನಗಳ ಮತ್ತಷ್ಟು ಪ್ರಯೋಗ ನಡೆಯಲಿಲ್ಲ. ಅಷ್ಟೇ ಏಕೆ "ನಾಂದಿ" ಯ ನಂತರ ನಿರ್ದೇಶಕ ಲಕ್ಷ್ಮೀನಾರಾಯಣ್ ಅವರಿಗೇ ಐದು ವರ್ಷ ಯಾವುದೇ ಕೆಲಸವಿರಲಿಲ್ಲ. "ನಾಂದಿ" ಮೂಲೆ ಗುಂಪಾಗಲು ಇದೂ ಒಂದು ಕಾರಣ ವಾಗಿರಬಹುದು.



ಕೆ. ಎಂ. ಶಂಕರಪ್ಪ ನಿರ್ದೇಶನದ "ಮಾಡಿ ಮಡಿದವರು" ಸ್ವಾತಂತ್ರ್ಯ ಹೋರಾಟಕಾಲದ ಕತೆಯುಳ್ಳ ಚಿತ್ರ

"ನಾಂದಿ" ಚಿತ್ರ ಹೇಗೆ ಬೇರೆ ಚಿತ್ರಗಳಿಗಿಂತ ಭಿನ್ನ. ಹೊಸ ರೀತಿಯ ನಿರೂಪಣೆ ಇದರಲ್ಲಿ ಹೇಗೆ ಸಾಧ್ಯವಾಗಿದೆ ಎಂಬುದನ್ನು ಎನ್. ಲಕ್ಷ್ಮೀನಾರಾಯಣ್ ಹೀಗೆ ವಿವರಿಸಿದ್ದಾರೆ. "ನಾಂದಿಯಲ್ಲಿ ಹೊಸ ನಿರೂಪಣೆ ತರಲು ನಾನು ಯತ್ನಿಸಿದೆ.ಕಿವುಡು ಮೂಗರ ದೃಷ್ಟಿಯಿಂದ ಸಬ್ಜೆಕ್ಟಿವ್ ಯೂಸ್ ಆಫ್ ಸೌಂಡ್ ಮಾಡಿದೆ. ರಾಜ್ ಕುಮಾರ್, ಹರಿಣಿಯ ಮನೆಗೆ ಬಂದು ಬಾಗಿಲು ತಟ್ಟಿದಾಗ ಪ್ರೇಕ್ಷಕರಿಗೆ ಶಬ್ದ ಕೇಳಿಸುತ್ತದೆ. ಹರಿಣಿಯ ಷಾಟ್ಸ್‌ಗಳು ಬಂದಾಗ ಶಬ್ದ ಬರುವುದೇ ಇಲ್ಲ. ಇನ್ನೂ ಒಂದು ಉದಾಹರಣೆ ಹೇಳುವುದಾದರೆ ಹರಿಣಿ ಕಿವುಡಿ ಮತ್ತು ಮೂಗಿ ಆದ ಮೇಲೆ ಕಸಗುಡಿಸುವಾಗ ತಂಬೂರಿಯ ಮೇಲೆ ಕೈ ಆಡಿಸುತ್ತಾರೆ. ಆಗ ಆ ಷಾಟ್ ತೋರಿಸುವಾಗ ಆಕೆಯ ಕೈಯ ಭಾವನೆಯನ್ನು ಅವರ ಮುಖ ತೋರುತ್ತದೆ. ಪ್ರೇಕ್ಷಕರಿಗೆ ಶಬ್ದ ನಾವು ಹಾಕಿಸುವುದಿಲ್ಲ. ಶಬ್ದ ಜೋಡಣೆ ಬರಬೇಕಾದರೆ ಯಾವಾಗ ಅಂದರೆ ಇನ್ನೊಂದು ರೂಮಿನಲ್ಲಿ ರಾಜ್‌ಕುಮಾರ್ ವ್ಯಾಯಾಮ ಮಾಡುತ್ತಿರುತ್ತಾರೆ. ಅವರ ಮತ್ತು ಹರಿಣಿಯವರ "ಫಿಗರ್" ಇದ್ದಾಗ ಮಾತ್ರ ಶಬ್ದ ಬಳಸಿದ್ದೇನೆ. ರಾಜ್‌ಕುಮಾರ್‌ರವರ ಷಾಟ್ ಮೇಲೆ ಆ ತಂಬೂರಿ ನಾದ ಬರುತ್ತದೆ. ಏಕೆಂದರೆ ಅವರಿಗೆ ಶ್ರವಣ ಶಕ್ತಿ ಇದೆ ಇಬ್ಬರೂ ಜತೆಯಲ್ಲಿದ್ದಾಗ. ಆದರೆ ಹರಿಣಿಯವರ ಷಾಟ್ ತೋರಿಸಿದಾಗ ತಂಬೂರಿ ನಾದ ಇರುವುದಿಲ್ಲ. ಇದನ್ನು ಸಬ್ಜೆಕ್ಟಿವ್ ಯೂಸ್ ಆಫ್ ಸೌಂಡ್ ಎಂದು ಕರೆಯುತ್ತಾರೆ. ಮಾಧ್ಯಮದ ದೃಷ್ಟಿಯಿಂದ ಇದು ಒಂದು ಪ್ರಯೋಗ."

ಆದ್ದರಿಂದ ಎನ್. ಲಕ್ಷ್ಮೀನಾರಾಯಣ್, ಹೊಸ ಅಲೆಯ ಚಿತ್ರಗಳ ಬಗ್ಗೆ ಪ್ರಸ್ತಾಪಿಸುವಾಗ ಸ್ಮರಿಸಲೇ ಬೇಕಾದ ನಿರ್ದೇಶಕರಾಗಿದ್ದಾರೆ. 1963ರಲ್ಲಿ ಅವರು "ಬ್ಲಿಸ್" ಎಂಬ ಕಿರು ಚಿತ್ರ ತಯಾರಿಸಿದರು. "ನಾಂದಿ" ಕಥಾ ಚಿತ್ರಕ್ಕೆ ಇದೇ ಪ್ರೇರಣೆ. ಲಂಡನ್, ಪ್ಯಾರಿಸ್, ಬ್ರೂಸ್ಸೆಲ್ಸ್ ಮಿಲಾನ್ ಮತ್ತು ಸ್ಯಾನ್ ಫ್ರಾನ್ಸಿಸ್ಕೋ ಚಲನ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ಲಕ್ಷ್ಮೀನಾರಾಯಣ್ ಅವರ ಕಿರುಚಿತ್ರ ಪ್ರಶಂಸೆಗೆ ಪಾತ್ರವಾಗಿ, ಪ್ರಶಸ್ತಿಯೂ ದೊರಕಿತು. ಇದೆಲ್ಲದರಿಂದ ಅವರು ಉತ್ತೇಜಿತರಾಗಿ ಹೊಸ ರೀತಿಯ ಸಾಹಸಕ್ಕೆ ಕೈ ಹಾಕಿದರು. "ನಾಂದಿ" ಚಿತ್ರ 1965ರಲ್ಲಿ ಲಂಡನ್ ಕಾಮನ್ ವೆಲ್ತ್ ಚಲನಚಿತ್ರೋತ್ಸವದಲ್ಲಿ ಪಾಲ್ಗೊಂಡಿತು. ಸಬ್‌ಟೈಟಲ್ಸ್ ಇಲ್ಲದೆ ಹೋದರೂ ಚಿತ್ರ ವಿಮರ್ಶಕರ ಪ್ರಶಂಸೆಗೆ ಪಾತ್ರವಾಯಿತು. ವಿದೇಶದಲ್ಲಿ ಸ್ಪರ್ಧೆಗೆ ಪ್ರವೇಶಿಸಿದ ಮೊದಲ ಕನ್ನಡ ಚಿತ್ರ "ನಾಂದಿ". ಕನ್ನಡ ಚಿತ್ರಗಳು



"ನಾಡು" ಚಿತ್ರದ ಅಭಿನಯಕ್ಕಾಗಿ ಊರ್ವಶಿ ಪ್ರಶಸ್ತಿ ಪಡೆದ ನಂದಿನಿ

ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಇದು ನಾಂದಿಯಾಯಿತು ಎಂದು ಎನ್. ಲಕ್ಷ್ಮೀನಾರಾಯಣ್ ಒಂದೆಡೆ ಹೇಳಿದ್ದಾರೆ.

1970ರ ನಂತರ ಆರಂಭವಾದ ಹೊಸ ಅಲೆಯ ವೇಗದೊಳಗೆ ಎನ್. ಲಕ್ಷ್ಮೀನಾರಾಯಣ್ ಅವರೂ ಸೇರಿಕೊಂಡು ಮೂರು ಚಿತ್ರಗಳನ್ನು ನಿರ್ದೇಶಿಸಿದರು. 1969ರಲ್ಲಿ **ಉಯ್ಯಾಲೆ** ನಿರ್ದೇಶಿಸಿದರು. 1971ರಲ್ಲಿ ವಿ. ಎಂ. ಇನಾಂದಾರರ ಕಾದಂಬರಿ ಆಧರಿಸಿ **ಮುಕ್ತಿ** ಚಿತ್ರವನ್ನು ನಿರ್ದೇಶಿಸಿ ಸದಭಿರುಚಿಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದರು. ಇಂಗ್ಲೀಷ್ ಸಬ್ ಟೈಟಲ್ಸ್ ಅಳವಡಿಸಿಕೊಂಡು ವಿದೇಶದಲ್ಲಿ ಸ್ಪರ್ಧೆಗಿಳಿದ ಮೊದಲ ಕನ್ನಡ ಚಿತ್ರವಾಯಿತು **ಮುಕ್ತಿ**. 1973ರಲ್ಲಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಸಣ್ಣಕತೆಯನ್ನಾಧರಿಸಿ **ಅಬಚೂರಿನ ಪೋಸ್ಟ್ ಆಫೀಸ್** ನಿರ್ದೇಶಿಸಿ ಹೊಸ ಯತ್ನ ಮಾಡಿದರು.

1970ರಲ್ಲಿ ಬಿಡುಗಡೆಯಾದ ***ಸಂಸ್ಕಾರ*** ಕನ್ನಡ ಚಿತ್ರರಂಗದ ಘನತೆಯನ್ನು ವಿಸ್ತರಿಸಿದ ಚಿತ್ರವಾಗಿ ಇಂದಿಗೂ ಮಹತ್ವದ್ದಾಗಿದೆ. ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಪಡೆಯುವ ಗಂಭೀರಯತ್ನಗಳ ಚಿತ್ರಗಳನ್ನು ತಯಾರಿಸುವ ಕೇಂದ್ರಗಳೆಂದು ಅದುವರೆಗೆ ಪಶ್ಚಿಮ ಬಂಗಾಳ ಹಾಗೂ ಕೇರಳ ರಾಜ್ಯಗಳತ್ತ ಎಲ್ಲರೂ ಬೊಟ್ಟು ಮಾಡುತ್ತಿದ್ದರು. ***ಸಂಸ್ಕಾರ***ದ ನಂತರ ಎಲ್ಲರ ದೃಷ್ಟಿ ಕರ್ನಾಟಕದತ್ತ ಹೊರಳಿತು.






"ಚೋಮನ ದುಡಿ" ವಾಸುದೇವರಾವ್

ನಿರ್ದೇಶಕ, ಸಂಗೀತ ನಿರ್ದೇಶಕ ಬಿ. ವಿ. ಕಾರಂತ್

**ಸಂಸ್ಕಾರ** ಖ್ಯಾತ ಸಾಹಿತಿ ಯು.ಆರ್. ಅನಂತ ಮೂರ್ತಿ ಅವರ ಕಾದಂಬರಿ ಆಧರಿಸಿದ ಚಿತ್ರ. ಕಾದಂಬರಿ ಪ್ರಕಟವಾದಾಗಲೇ ತೀವ್ರ ವಿವಾದ ಕೆರಳಿಸಿತ್ತು. ಚಲನ ಚಿತ್ರವಾದ ನಂತರ ಮತ್ತಷ್ಟು ವಿವಾದ, ಸೆನ್ಸಾರ್ ತೊಂದರೆಗೆ ಒಳಗಾಗಿ ನಂತರ ಬಿಡುಗಡೆಯಾಯಿತು.





"ಸಂಸ್ಕಾರ" ಚಿತ್ರ ತಯಾರಿಕೆಯ ವಿಷಯವೇ ಕುತೂಹಲಕಾರಿಯಾಗಿದೆ. ಮದರಾಸಿನ ಪಟ್ಟಾಬಿ ರಾಮರೆಡ್ಡಿಯವರ ಮನೆಯಲ್ಲಿ ನಡೆದ ಭೋಜನ ಕೂಟವೊಂದರಲ್ಲಿ ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡ ಅವರು ಡಾ. ರಾಮ ಮನೋಹರ ಲೋಹಿಯಾ ಮತ್ತು ಮಧುಲಿಮೆಯೆ ಅವರಿಗೆ ಕತೆಯೊಂದನ್ನು ಹೇಳುತ್ತಿದ್ದರು. ಅದು ಯು.ಆರ್. ಅನಂತಮೂರ್ತಿ ಅವರು ಬರೆದಿದ್ದ "ಸಂಸ್ಕಾರ" ಕಾದಂಬರಿಯದಾಗಿತ್ತು. ಕಥೆ ಪಟ್ಟಾಭಿರಾಮರೆಡ್ಡಿಯವರ ಕಿವಿಗೆ ಬಿದ್ದು ಚಲನಚಿತ್ರ ದೃಶ್ಯಾವಳಿಗಳಾಗಿ ರೂಪು ತಾಳತೊಡಗಿತು. ಆ ವೇಳೆಗಾಗಲೇ ತೆಲುಗು ಚಿತ್ರರಂಗದಲ್ಲಿ ಮೂರು ಚಿತ್ರಗಳನ್ನು ನಿರ್ದೇಶಿಸಿ ಅನುಭವಗಳಿಸಿಕೊಂಡಿದ್ದ ಪಟ್ಟಾಭಿರಾಮರೆಡ್ಡಿಯವರು "ಸಂಸ್ಕಾರ" ಕಾದಂಬರಿಯನ್ನು ಕೈಗೆತ್ತಿಕೊಂಡದ್ದು ಹೀಗೆ.

"ಕಾಡು" - ಗಿರೀಶ್ ಕಾರ್ನಾಡ್ ನಿರ್ದೇಶನದ ಚಿತ್ರ.

"ವಂಶವೃಕ್ಷ" ಚಿತ್ರದಲ್ಲಿ ವೆಂಕಟರಾವ್ ತಲಗೇರಿ


"ಸಂಸ್ಕಾರ" ಮುಂದೆ ರೂಪತಾಳಿದ ಬಗೆಯನ್ನು ಪಟ್ಟಾಭಿರಾಮರೆಡ್ಡಿಯವರೇ ವಿವರಿಸುವುದು ಹೀಗೆ : "ಸಂಸ್ಕಾರ" ಚಿತ್ರವನ್ನು ಕಡಿಮೆ ವೆಚ್ಚದಲ್ಲಿ ಚಿತ್ರಿಸುವ ಹವಣಿಕೆ ನಮ್ಮದಾಗಿತ್ತು. ಮದ್ರಾಸ್ ಪ್ಲೇಯರ್ಸ್‌ನ ಕಲಾವಿಲಾಸಿ ಸಂಸ್ಥೆಯ ಕಲಾವಿದರನ್ನೇ ಹೆಚ್ಚಾಗಿ ಬಳಸಿಕೊಳ್ಳಲು ನಿರ್ಧರಿಸಲಾಯಿತು. ನನ್ನ ಪತ್ನಿ ಸ್ನೇಹಲತಾ ರೆಡ್ಡಿ ಈ ಕಲಾವಿದ ಸಂಸ್ಥೆಯ ಅಧ್ಯಕ್ಷೆ. ಗಿರೀಶ್ ಕಾರ್ನಾಡ್ ಕೂಡಾ ಇದೇ

ತಂಡದಲ್ಲಿದ್ದರು. ಸಂಸ್ಕಾರದ ವಿಷಯ ಬಂದಾಗ ಗಿರೀಶ್ ಉತ್ಸಾಹ ತೋರಿ ಚಿತ್ರಕಥೆ ಬರೆಯುವುದಾಗಿ ಹೇಳಿದರು. ಪ್ರಾಣೇಶಾಚಾರ್ಯರ ಪಾತ್ರವನ್ನೂ ಗಿರೀಶರೇ ಮಾಡಬೇಕೆಂಬುದು ನನ್ನ ಬಯಕೆಯಾಗಿತ್ತು. ಅದಕ್ಕೆ ಅವರು ಸಮ್ಮತಿಸಿದರು.

"ಶಿವಮೊಗ್ಗದ ತುಂಗಾನದಿಯ ತೀರದಲ್ಲಿರುವ ವೈಕುಂಠಪುರ ಎನ್ನುವ ಗ್ರಾಮದಲ್ಲಿ ಸಂಸ್ಕಾರವನ್ನು ಸಂಪೂರ್ಣವಾಗಿ ಚಿತ್ರೀಕರಿಸಲಾಯಿತು. ಈ ವೇಳೆಗೆ ಆಸ್ಟ್ರೇಲಿಯಾದ ಟಾಮ್‌ಕೋವನ್ ಎಂಬುವವರು. ಆಸ್ಟ್ರೇಲಿಯನ್ ಬ್ರಾಡ್ ಕಾಸ್ಟಿಂಗ್ ಕಾರ್ಪೊರೇಷನ್‌ಗೆ ಸಾಕ್ಷ್ಯಚಿತ್ರ ತಯಾರಿಸುತ್ತಿದ್ದರು. ಸತ್ಯಜಿತ್ ರೇ ಅವರನ್ನು ನೋಡಲು ಭಾರತಕ್ಕೆ ಬಂದಿದ್ದಾಗ ಮದರಾಸಿಗೂ ಬಂದಿದ್ದರು. "ಸಂಸ್ಕಾರ" ಕಥೆಯನ್ನು ಮೆಚ್ಚಿ ಛಾಯಾಗ್ರಹಣದ ಹೊರೆ ಹೊತ್ತರು. ಮೇಕಪ್ ಇಲ್ಲದೆ, ಶೂಟಿಂಗ್ ನಡೆಸಲು ನಾವು ನಿರ್ಧರಿಸಿದೆವು. ಚಿತ್ರದಲ್ಲಿ ಹಾಡುಗಳು ಇರಬಾರದೆಂಬುದೂ ನಮ್ಮ ಧೋರಣೆಯಾಗಿತ್ತು. ಸಿಂಗೀತಂ ಶ್ರೀನಿವಾಸರಾವ್ ಅವರ ಕಾರ್ಯ ನಿರ್ವಾಹಕ ನಿರ್ದೇಶಕತ್ವದಲ್ಲಿ ನಾನೇ "ಸಂಸ್ಕಾರ"ವನ್ನು ನಿರ್ದೇಶಿಸಿದೆ. 29 ದಿನಗಳಲ್ಲಿ ಚಿತ್ರೀಕರಣ ಮುಗಿಯಿತು.ಆದರೆ ಡಬ್ಬಿಂಗ್, ಎಡಿಟಿಂಗ್ ಕಾರ್ಯ ಮುಗಿಸಲು ಆರು ತಿಂಗಳು ಬೇಕಾಯಿತು.



"ಕಂಕಣ" ಹೊಸ ಯತ್ನದ ದಾರಿಯಲ್ಲಿ ಬಂದ ಒಂದು ಚಿತ್ರ.



ಮದರಾಸಿನ ಸೆನ್ಸಾರ್ ಮಂಡಳಿಯು ಚಿತ್ರವನ್ನು ಸಂಪೂರ್ಣ ತಿರಸ್ಕರಿಸಿ, ಏನೊಂದೂ ಕಾರಣ ಹೇಳದೆ ಪ್ರಶ್ನೆಯನ್ನು ಮುಂಬೈ ಕೇಂದ್ರ ಸೆನ್ಸಾರ್ ಮಂಡಳಿಗೆ ಒಪ್ಪಿಸಿತು. ಮುಂಬೈ ಮಂಡಳಿ ಕೂಡ ಏನೊಂದೂ ಕಾರಣ ಹೇಳದೆ ಚಿತ್ರದ ಮೇಲೆ ವಿಧಿಸಿದ್ದ ನಿಷೇಧವನ್ನು ಸ್ಥಿರೀಕರಿಸಿತು. ಈ ಸಮಯದಲ್ಲಿ ಬುದ್ಧಿ ಜೀವಿಗಳು ಹೇಳಿಕೆಗಳನ್ನು ನೀಡಿ "ಸಂಸ್ಕಾರ"ದ ಮೇಲೆ ಹೇರಿರುವ ನಿಷೇಧ ಹಿಂತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಒತ್ತಾಯ ಹೇರಲಾರಂಭಿಸಿದರು. ಲೋಕಸಭೆ ಅಧಿವೇಶನದಲ್ಲೂ ಈ ವಿಷಯ ಅರ್ಧಗಂಟೆ ಚರ್ಚೆಯಾಯಿತು. ಕೊನೆಗೆ ಸೆನ್ಸಾರ್ ಅಧಿಕಾರಿಗಳು ಚಿತ್ರದ ಕೆಲವು ಭಾಗಗಳನ್ನಾದರೂ ಕತ್ತರಿಸಬೇಕೆಂದು ಅಪೇಕ್ಷಿಸಿ, "ಎ" ಸರ್ಟಿಫಿಕೇಟ್ ನೀಡಿದರು. ಭೀತಿಯಿಂದಲೇ ಹೊಸ ಅಲೆಯ ಈ ಚಿತ್ರ ಬಿಡುಗಡೆಯಾಯಿತು. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ "ಸಂಸ್ಕಾರ" ಗಲ್ಲಾ ಪೆಟ್ಟಿಗೆಯಲ್ಲಿ ಯಶಸ್ಸು ಗಳಿಸಿತು."

"ಸಂಸ್ಕಾರ" ಚಿತ್ರದ ವಿವಾದ, ಸೆನ್ಸಾರ್ ಜತೆಗೆ ಅವರು ನಡೆಸಿದ ಹೋರಾಟವನ್ನು ಪಟ್ಟಾಭಿ ರಾಮರೆಡ್ಡಿ ವಿವರಿಸಿದ್ದಾರೆ. "ಪಾರ್ಲಿಮೆಂಟ್ ಸಮಿತಿ ಸಿನಿಮಾವನ್ನು ಬಿಡುಗಡೆ ಮಾಡಿತು. ಆದರೆ ಈ ಸಿನಿಮಾ ಬಿಡುಗಡೆಗೆ ತೀವ್ರ ಅಡ್ಡಿ ಒಡ್ಡಿದ ಗುಂಪು ತಡೆ ಆಜ್ಞೆ ತರುವ ಸನ್ನಾಹ ನಡೆಸಿದ್ದಾಗ, ಇಂತಹ ಚಿತ್ರಗಳಿಗೆ ಬೆಂಬಲ ನೀಡುವ ಬಳಗ ಸದ್ದಿಲ್ಲದೆ ಸಂಸ್ಕಾರವನ್ನು ಬೆಳಗಿನ ಆಟಗಳಲ್ಲಿ ಮಾತ್ರ ಬಿಡುಗಡೆ ಮಾಡಿತು. ಸದ್ದಿಲ್ಲದೆ



"ಸಂಕಲ್ಪ"ದ ಒಂದು ದೃಶ್ಯ.

"ಹಂಸಗೀತೆ" - ಜಿ. ವಿ. ಅಯ್ಯರ್ ಅವರ ನಿರ್ದೇಶನಕ್ಕೆ ಒಂದು ದಕ್ಷ ನಿದರ್ಶನ.

ಬಿಡುಗಡೆಯಾದ ಈ ಚಿತ್ರದ ಬಗ್ಗೆ ಪ್ರತಿಕ್ರಿಯೆ ಕಿವಿಯಿಂದ ಕಿವಿಗೆ ಹಬ್ಬಿ ಚಿತ್ರಮಂದಿರ ತುಂಬಿ, ಚಿತ್ರ ಯಶಸ್ವಿಯಾಗಲು ಕಾರಣವಾಯಿತು. ಹೊಸ ಅಲೆ ಪರಂಪರೆಯನ್ನು ಗಟ್ಟಿಗೊಳಿಸಲು ನೆರವಾದ "ಸಂಸ್ಕಾರ" ಈ ಹೋರಾಟವನ್ನೆಲ್ಲ ಎದುರಿಸಬೇಕಾಯಿತು."

ಹೀಗೆ ಪಟ್ಟಾಭಿರಾಮರೆಡ್ಡಿ, ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರಗಳಿಗೆ ಚಾಲಕ ಶಕ್ತಿಯಾದ "ಸಂಸ್ಕಾರ"ಕ್ಕೆ ನಿರ್ಮಾಪಕರೂ ಆಗಿದ್ದಾರೆ. ನಿರ್ದೇಶಕರೂ ಆಗಿದ್ದಾರೆ. ಸಂಸ್ಕಾರದ ಚಿತ್ರಕಥೆ, ಸಂಭಾಷಣೆ ಗಿರೀಶ್ ಕಾರ್ನಾಡ್ ಅವರದು. ಛಾಯಾಗ್ರಾಹಕರು : ಟಾಮ್‌ಕೋವನ್, ಸಂಗೀತ : ರಾಜೀವ್ ತಾರಾನಾಥ್, ಕಲಾ ನಿರ್ದೇಶಕ : ಎಸ್. ಜಿ. ವಾಸುದೇವ್, ಸಂಕಲನ : ಸ್ಟೀವನ್ ಕಾರ್ಟ್ರ್, ವಾಸು. ನೂರು ನಿಮಿಷಗಳ ಅವಧಿಯ ಕಪ್ಪು ಬಿಳುಪು ಚಿತ್ರದ ಪಾತ್ರ ವರ್ಗದಲ್ಲಿ ಗಿರೀಶ್ ಕಾರ್ನಾಡ್, ಸ್ನೇಹಲತಾ ರೆಡ್ಡಿ, ದಾಶರಥಿ ದೀಕ್ಷಿತ್, ಪಿ. ಲಂಕೇಶ್, ಲಕ್ಷ್ಮೀ ಕೃಷ್ಣಮೂರ್ತಿ ಇದ್ದಾರೆ.

"ಸಂಸ್ಕಾರ"ದ ನಂತರ 1977ರಲ್ಲಿ ಪಟ್ಟಾಭಿರಾಮರೆಡ್ಡಿಯವರು **ಚಂಡಮಾರುತ** (1977) ಎಂಬ ಚಿತ್ರ ತಯಾರಿಸಿದರು. ಸ್ನೇಹಲತಾ ರೆಡ್ಡಿ ಈ ಚಿತ್ರದಲ್ಲಿ ಅಭಿನಯಿಸಿದ್ದಾರಲ್ಲದೆ ಸಂಭಾಷಣೆಯನ್ನೂ ರಚಿಸಿದ್ದಾರೆ. ತುರ್ತು ಪರಿಸ್ಥಿತಿ ಪೂರ್ವದ ಮತ್ತು ತುರ್ತು ಪರಿಸ್ಥಿತಿ ಕಾಲದ ಹಾಗೂ ತುರ್ತು ಪರಿಸ್ಥಿತಿ ನಂತರದ ರಾಜಕೀಯ ಜೀವನದ ಕಥೆಯನ್ನು ಈ ಚಿತ್ರ ಹೊಂದಿತ್ತು. 1984ರಲ್ಲಿ ಪಟ್ಟಾಭಿರಾಮರೆಡ್ಡಿಯವರು **ಶೃಂಗಾರ ಮಾಸ** ಚಿತ್ರ ನಿರ್ಮಿಸಿ ನಿರ್ದೇಶಿಸಿದರು. ಅಮೋಲ್ ಪಾಲೇಕರ್, ದೀಪಾ ಧನರಾಜ್ ಇಬ್ಬರೇ ಇಡೀ ಚಿತ್ರದ ಪಾತ್ರಧಾರಿಗಳು. ಇದೂ ಒಂದು ಹೊಸ ಬಗೆಯ ಪ್ರಯೋಗ.

"ಸಂಸ್ಕಾರ"ಕ್ಕೆ ಚಿತ್ರಕಥೆ ಬರೆದು, ಪ್ರಾಣೇಶಾಚಾರ್ಯರ ಪಾತ್ರವನ್ನೂ ನಿರ್ವಹಿಸಿದ್ದ ಗಿರೀಶ್ ಕಾರ್ನಾಡ್ 1972ರಲ್ಲಿ ರಂಗಭೂಮಿಯಲ್ಲಿ ಪ್ರಸಿದ್ಧರಾಗಿದ್ದ ಬಿ. ವಿ. ಕಾರಂತ ಅವರೊಡಗೂಡಿ ಚಿತ್ರ ನಿರ್ದೇಶನಕ್ಕೆ ಇಳಿದರು. ಜನಪ್ರಿಯ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ **ವಂಶವೃಕ್ಷ** ಕಾದಂಬರಿಯನ್ನು ಅವರು ತೆರೆಗೆ ತಂದರು. ಚಿತ್ರಕಥೆ, ನಿರ್ದೇಶನ ಅವರಿಬ್ಬರದು. ಚಿತ್ರದಲ್ಲಿ ಎಲ್. ವಿ. ಶಾರದಾ, ವೆಂಕಟರಾವ್ ತಲಗೇರಿ, ಕುಮಾರ್ ಮೊದಲಾದವರ ಜತೆ ಅವರೂ ಅಭಿನಯಿಸಿದ್ದಾರೆ. ಕನ್ನಡ ಚಿತ್ರರಂಗಕ್ಕೆ ನಟರಾಗಿ, ಚಿತ್ರಕಥೆಗಾರರಾಗಿ ಪ್ರವೇಶಿಸಿದ ಗಿರೀಶ್ ಕಾರ್ನಾಡ್ ನಂತರ ನಿರ್ದೇಶಕರಾಗಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದಾರೆ. ತುಘಲಕ್, ಯಯಾತಿ, ಹಯವದನ, ಅಂಜುಮಲ್ಲಿಗೆ ನಾಟಕಗಳ ಮೂಲಕ ರಂಗಭೂಮಿಯಲ್ಲಿ ಚಿರಪರಿಚಿತ.



ನಿರ್ದೇಶಕ ಪಿ. ಲಂಕೇಶ್

**ವಂಶವೃಕ್ಷ**ದ ಮೂಲಕ ಗಿರೀಶ್ ಕಾರ್ನಾಡ್, ಬಿ. ವಿ. ಕಾರಂತರು ಹೊಸ ಅಲೆಯ ಚಿತ್ರ ತೆಗೆಯುವವರಿಗೆ ಸ್ಫೂರ್ತಿಯನ್ನೇ ನೀಡಿದರು ಎನ್ನಬಹುದು. ಈ ದಶಕದಲ್ಲಿ ಇಂತಹ ಚಿತ್ರ ಪರಂಪರೆಯ ಬಗ್ಗೆ ತೀವ್ರವಾಗಿ ಚಿಂತಿಸಲಾರಂಭಿಸುವ ತಂಡವೆ ಬೆಳೆದು ಪ್ರತಿ ವರ್ಷವೂ ಅಂತಹ ಯತ್ನ ನಡೆಯಲು ಆರಂಭವಾಯಿತು. 1973ರಲ್ಲಿ ಪಿ.ವಿ. ನಂಜರಾಜ ಅರಸು ಅವರು ಕ್ಷಿತಿಜ ಲಾಂಛನದಲ್ಲಿ **ಸಂಕಲ್ಪ** ತಯಾರಿಸಿದರು. ತರುಣ ಐಂದ್ರಜಾಲಿಕ ಮತ್ತು ದೌರ್ಬಲ್ಯಗಳನ್ನು ಹೊಂದಿದ್ದ ಸ್ವಾಮೀಜಿಯ ನಡುವೆ ಸಂಘರ್ಷದ ಕಥಾ ವಸ್ತುವಿರುವ **ಸಂಕಲ್ಪ** ಚಿತ್ರದ ಮೂಲಕ ಅನಂತನಾಗರಕಟ್ಟೆ (ಅನಂತನಾಗ್) ಚಿತ್ರರಂಗ ಪ್ರವೇಶವಾಯಿತು. ಸಿಂಹ, ಎಚ್. ಎಂ. ಚನ್ನಯ್ಯ, ಬಿಂದು ಜಯದೇವ್ ತಾರಾಗಣದಲ್ಲಿರುವ ಇತರರು. ಇದೇ ವರ್ಷ ಎನ್. ಲಕ್ಷ್ಮೀನಾರಾಯಣ್, ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧರಿಸಿ **ಅಬಚೂರಿನ ಪೋಸ್ಟ್ ಆಫೀಸು** ನಿರ್ದೇಶಿಸಿದರು. ರಂಗಭೂಮಿಯ ಕಲಾವಿದರುಗಳಾದ





ನಾಣಿ, ಗಿರಿಜ, ಸೀತಾರಾಂ, ಬಿ. ಎಸ್. ರಾಮರಾವ್, ಶಾಂತಾ, ದಾಶರಥಿ ದೀಕ್ಷಿತ್ ಈ ಚಿತ್ರದಲ್ಲಿ ಅಭಿನಯಿಸಿದರು.

1974ರಲ್ಲಿ ಗಿರೀಶ್ ಕಾರ್ನಾಡ್ **ಕಾಡು** ಚಿತ್ರವನ್ನು ನಿರ್ದೇಶಿಸುವ ಮೂಲಕ ಮತ್ತೊಮ್ಮೆ ಕನ್ನಡ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬರುವಂತೆ ಮಾಡಿ ಗಮನ ಸೆಳೆದರು. ಗಿರೀಶ್ ಕಾರ್ನಾಡರ ನಿರಂತರ ಚಿತ್ರ ತಯಾರಿಕೆ ಹಾಗೂ ನಿರ್ದೇಶನದ ಯತ್ನಗಳು ಹೊಸ ಅಲೆ ಮಾದರಿಯನ್ನು ಗಟ್ಟಿಗೊಳಿಸುತ್ತಾ ಸಾಗಿತು ಎಂಬುದು ಗಮನಾರ್ಹ. ಅಲ್ಲದೆ ಈ ಚಿತ್ರದ ಮೂಲಕ ಗಿರೀಶ್ ಕಾರ್ನಾಡರು ಜನರನ್ನು ಮುಟ್ಟುವ ಯತ್ನ ಮಾಡಿದರು. **ಕಾಡು**, ಶ್ರೀ ಕೃಷ್ಣ ಆಲನಹಳ್ಳಿ ಅವರ ಅದೇ ಹೆಸರಿನ ಕಾದಂಬರಿಯನ್ನು ಆಧರಿಸಿದೆ. ಚಿತ್ರಕಥೆ ಮತ್ತು ನಿರ್ದೇಶನ ಗಿರೀಶ್ ಕಾರ್ನಾಡ್ ಅವರದು. ನಿರ್ಮಾಪಕ : ಕೆ. ಎನ್. ನಾರಾಯಣ್, ಛಾಯಾಗ್ರಾಹಕರು : ಗೋವಿಂದ ನಿಹಲಾನಿ, ಸಂಗೀತ ಹಾಗೂ ಕಲಾ ನಿರ್ದೇಶನ ಬಿ. ವಿ. ಕಾರಂತ ಅವರದು. ಚಿತ್ರದಲ್ಲಿ ಜಿ. ಎಸ್. ನಟರಾಜ್, ಉಮಾ ಶಿವಕುಮಾರ್, ಅಮರೀಶ್ ಪುರಿ,



ಪಿ. ಲಂಕೇಶರ "ಪಲ್ಲವಿ" ಯಲ್ಲಿ ಎಲ್ಲ ಹೊಸ ನಿರೂಪಣೆ

"ಅನುರೂಪ" ದಲ್ಲಿ ಅನಂತನಾಗ್ - ಆರತಿ

"ಎಲ್ಲಿಂದಲೋ ಬಂದವರು" ಲೋಕೇಶ್

ನಂದಿನಿ, ಲೋಕೇಶ್ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರ ರಾಷ್ಟ್ರಪ್ರಶಸ್ತಿಗಳಿಸಿ ಹೊಸ ಅಲೆ ಚಳವಳಿಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ಇದೇ ವರ್ಷ ಕೆ. ಎಂ. ಶಂಕರಪ್ಪ, ಬಸವರಾಜ ಕಟ್ಟೀಮನಿ ಅವರ ಕಾದಂಬರಿ ಆಧರಿಸಿ **ಮಾಡಿ ಮಡಿದವರು** ನಿರ್ದೇಶಿಸಿದರು.

1975ರಲ್ಲಿ ಬಿ. ವಿ. ಕಾರಂತರು ಸ್ವತಂತ್ರವಾಗಿ **ಚೋಮನದುಡಿ** ನಿರ್ದೇಶಿಸಿದರು. ಶಿವರಾಮ ಕಾರಂತರ ಅದೇ ಹೆಸರಿನ ಕಾದಂಬರಿ ಆಧರಿಸಿದ ಈ ಚಿತ್ರದಲ್ಲಿ ಎಂ. ವಿ. ವಾಸುದೇವರಾವ್ ಚೋಮನಾಗಿ ಅಭಿನಯಿಸಿದ್ದಾರೆ. ಈ ಚಿತ್ರದ ಅಭಿನಯಕ್ಕಾಗಿ ಅವರು ಉತ್ತಮ ನಟ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದರು. ಈ ಚಿತ್ರದ ನಂತರ ಈ ಚಳವಳಿ ಮತ್ತಷ್ಟು ವಿಸ್ತಾರಗೊಂಡಿತು. ಚಿತ್ರ ಗಲ್ಲಾಪೆಟ್ಟಿಗೆಯಲ್ಲೂ ಯಶಸ್ವಿಯಾದುದರಿಂದ ಈ ರೀತಿಯ ಚಿತ್ರ ನಿರ್ಮಾಣಕ್ಕೂ ನಿರ್ಮಾಪಕರು ಮುಂದು ಬರುವಂತಾಯಿತು. "ಚೋಮನ ದುಡಿ" ಆಸ್ಕರ್ ಪ್ರಶಸ್ತಿಗೆ ಭಾರತ ಸೂಚಿಸಿ ಕಳುಹಿಸಿದ್ದ ಹೆಸರಾಗಿತ್ತು ಎಂಬುದು ಉಲ್ಲೇಖಾರ್ಹ.

1975ರಲ್ಲೇ ಮೈಸೂರಿನ ಗೆಳೆಯರು ಮಯೂರ ಫಿಲಂ ಸೊಸೈಟಿಯೊಂದನ್ನು ರಚಿಸಿಕೊಂಡು ತ್ರಿವೇಣಿ ಅವರ ಕಾದಂಬರಿ ಆಧರಿಸಿ **ಕಂಕಣ** ಎಂಬ ಚಿತ್ರ ತಯಾರಿಸಿದರು. ಭಿನ್ನಭಿನ್ನ ಹಿನ್ನೆಲೆಗಳಿಂದ ಬಂದ ಆರು ಮಂದಿ ಕಾಲೇಜು ಗೆಳತಿಯರ ಭವಿಷ್ಯ ಏನಾಯಿತು ಎಂದು ಹೇಳುವ ಮೂಲಕ ಆಧುನಿಕ ಭಾರತದ ಯುವತಿಯರು ಎದುರಿಸುವ ಸಮಸ್ಯೆಗಳ ಕಲ್ಪನೆಯನ್ನು ನಿರ್ದೇಶಕ ಪ್ರಸಾದ್ ಈ ಚಿತ್ರದಲ್ಲಿ ಬಿಂಬಿಸಲು ಯತ್ನಿಸಿದ್ದಾರೆ. ಎಸ್. ರಾಮಚಂದ್ರ ಛಾಯಾಗ್ರಾಹಕರು. ಈ ಚಿತ್ರಕ್ಕೆ ಕಾದಂಬರಿಕಾರ ಡಾ. ಯು. ಆರ್. ಅನಂತಮೂರ್ತಿ ಸಂಭಾಷಣೆ ಬರೆದಿದ್ದಾರೆ. ಗಿರಿಜಾ, ರೇವತಿ, ಸುರೇಶ್ ಹೆಬ್ಳೀಕರ್ (ಮೊದಲ ಚಿತ್ರ) ಯಜಮಾನ್, ದಿವ್ಯಾ ಅಧಿಕಾರಿ ಚಿತ್ರದಲ್ಲಿದ್ದಾರೆ.

1976ರಲ್ಲಿ ಚಿತ್ರರಂಗಕ್ಕೆ ನವ್ಯ ಸಾಹಿತಿ, ನಾಟಕಕಾರ, ಪಿ. ಲಂಕೇಶರ ಪ್ರವೇಶವಾಯಿತು. 1970ರ **ಸಂಸ್ಕಾರ** ದಲ್ಲಿ ಕೇಂದ್ರ ಪಾತ್ರ, ನಾರಾಯಣಪ್ಪನ ಪಾತ್ರದಲ್ಲಿ ಲಂಕೇಶ್ ಅಭಿನಯಿಸಿದ್ದರು. ಲಂಕೇಶ್ ಅವರೊಳಗಿದ್ದ ನಾಟಕಕಾರ, ಕವಿ **ಪಲ್ಲವಿ**ಯಲ್ಲಿ ವಿಜೃಂಭಿಸಿದ್ದರಿಂದ ಅದರಲ್ಲಿ ಹೊಸ ದೃಷ್ಟಿಕೋನವನ್ನು ನೋಡಬಹುದಾಗಿತ್ತು. ಈ ಚಿತ್ರಕ್ಕಾಗಿ ಪಿ. ಲಂಕೇಶ್ 1976ರ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಪಡೆದರು.

ಪಿ. ಲಂಕೇಶರ ಎರಡನೆಯ ಚಿತ್ರ **ಅನುರೂಪ** (1977). ***ಖಂಡವಿದಕೋ ಮಾಂಸವಿದಕೋ*** (1979). **ಎಲ್ಲಿಂದಲೋ ಬಂದವರು** (1989) ಚಿತ್ರಗಳನ್ನು ಅನಂತರದ ವರ್ಷಗಳಲ್ಲಿ ಅವರು ನಿರ್ದೇಶಿಸಿದರು.

ತಮ್ಮ ಚಿತ್ರಗಳ ಬಗ್ಗೆ ಪಿ. ಲಂಕೇಶ್ ಅವರೇ ಹೇಳಿಕೊಂಡಿರುವ ಮಾತುಗಳಿವು. : "ಜನ ಪಲ್ಲವಿ ನೋಡಿ ಭಾರೀ ಖುಷಿ ಆದ್ರು. ಬಹಳ ಭಿನ್ನವಾದ ಚಿತ್ರ ಅಂದ್ರು. ಎರಡನೇ ಚಿತ್ರದಲ್ಲೂ ಬಹಳ ಅದ್ಭುತ ಬಯಸಿದ್ರು. ಅನುರೂಪ ಒಳ್ಳೆ ಚಿತ್ರ - ಬೇರೆಯಾದ ಚಿತ್ರ - ಅದು ಪಲ್ಲವಿಗಿಂತ ಹೆಚ್ಚು ಸಿನಿಮೀಯ ಗುಣಗಳಿಂದ ಕೂಡಿದೆ. ಆದರೆ, ಪ್ರಿಂಟ್, ಸೌಂಡ್ ಮೊದಲಾದ ಕೆಲವು ದೋಷಗಳು ನನ್ನ ಕೈ ಮೀರಿ ಘಟಿಸಿವೆ. ಇದರಿಂದಾಗಿ ಒಟ್ಟಾರೆ ಪರಿಣಾಮ ಒಳ್ಳೆಯದಾಗಲಿಲ್ಲ. ಪಲ್ಲವಿಯಲ್ಲಿ ಒಂದು ಹೆಣ್ಣು ಕೇಂದ್ರವಾಯಿತು. ಅನುರೂಪದಲ್ಲಿ 'ಗಂಡು'. ನಮ್ಮ ಜನ ಗಂಡು ಎಂದರೆ ರೋಪಿನಲ್ಲಿರೋನು, ಜೋರು, ಜಗಳ,ಗತ್ತು ಎಲ್ಲ ನಿರೀಕ್ಷಿಸುತ್ತಾರೆ. ಆದರೆ ಆತ ಬುದ್ಧಿವಂತ-ಕ್ರಾಂತಿ ಮನೋಭಾವದವ, ಸೌಮ್ಯಸ್ವಭಾವದವ ಎಂದರೆ, ಯಾವ ಹಿಂಸೆಯೂ ಇಲ್ಲದೆ ಇದ್ದರೆ ಒಪ್ಪಿಕೊಳ್ಳೋಲ್ಲ, ನನ್ನ ಚಿತ್ರದಲ್ಲಿ ಹಿಂಸೆ ಕಡಿಮೆ ಇತ್ತು. "ಖಂಡವಿದಕೋ



ಗಿರೀಶ್ ಕಾಸರವಳ್ಳಿ

ಮಾಂಸವಿದಕೊ" ಒಂದು ಸಮಾಜದ ವಿಶ್ಲೇಷಣೆ. ಇಲ್ಲಿ ಹೆಣ್ಣಿನ ಕತೆಯನ್ನು ಎರಡು ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನವಿದೆ."

1977ರಲ್ಲಿ **ಘಟಶ್ರಾದ್ಧ** ಚಿತ್ರ ನಿರ್ದೇಶಿಸುವುದರೊಂದಿಗೆ ಚಿತ್ರರಂಗ ಪ್ರವೇಶಿಸಿದ ಗಿರೀಶ್ ಕಾಸರವಳ್ಳಿ ಹೊಸ ಅಲೆಯ ಚಿತ್ರ ನಿರ್ಮಾಣಕ್ಕೆ ಹೊಸತೊಂದು ಆಯಾಮವನ್ನೇ ನೀಡಿದರು. ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನಿಂದ ತರಬೇತಿ ಪಡೆದು ಬಂದ ಗಿರೀಶ್ ಕಾಸರವಳ್ಳಿ, ಬಿ. ವಿ. ಕಾರಂತರ ಸಹಾಯಕ ನಿರ್ದೇಶಕರಾಗಿ **ಚೋಮನದುಡಿ**. ಸಿ. ಆರ್. ಸಿಂಹರ ಜತೆ ಕಾಕನ **ಕೋಟೆ** ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿದ್ದು ಅನುವಭಗಳಿಸಿದರು. ನಂತರ ಡಾ. ಯು. ಆರ್. ಅನಂತಮೂರ್ತಿ ಅವರ ಕತೆಯಾಧಾರಿತ **ಘಟಶ್ರಾದ್ಧ** ಚಿತ್ರವನ್ನು ಸ್ವತಂತ್ರವಾಗಿ ನಿರ್ದೇಶಿಸಿದರು.

ಮಲೆನಾಡಿನ ಕಾಸರವಳ್ಳಿಯಲ್ಲಿ ಹುಟ್ಟಿ ಬೆಳೆದ ಗಿರೀಶ್ ಓದಿದ್ದು ಶಿವಮೊಗ್ಗದಲ್ಲಿ. ಡಿ.ಫಾರ್ಮಾ ಓದಿ, ಔಷಧ ಶಾಸ್ತ್ರದಲ್ಲಿ ಆಸಕ್ತಿ ತಳೆದಿದ್ದ ಗಿರೀಶ್, ಒಮ್ಮೆ ಹೆಗ್ಗೋಡಿಗೆ ಭೇಟಿ ನೀಡಿದ್ದಾಗ ಚಲನಚಿತ್ರಾಭ್ಯಾಸದ ಆಸಕ್ತಿ ಬೆಳೆಯಿತು. ಸತ್ಯಜಿತ್‌ರಾಯ್ ಹಾಗೂ ಮೃಣಾಲ್ ಸೇನರ ಚಿತ್ರಗಳನ್ನು




ಕಂಡು ಆಸಕ್ತಿ ಇನ್ನಷ್ಟು ಹೆಮ್ಮರವಾಯಿತು. ನನ್ನ ಆಸಕ್ತಿ ಏನು ಎಂಬುದನ್ನು ಗಿರೀಶ್ ಕೂಡಲೇ ಕಂಡುಕೊಂಡರು. 1972ರಲ್ಲಿ ಫಾರ್ಮಾಕಾಲಜಿ ಮುಗಿಸಿ ಗಿರೀಶ್, ಪುಣೆಯ ಚಲನಚಿತ್ರ ಸಂಸ್ಥೆಯಲ್ಲಿ ಚಲನಚಿತ್ರ ನಿರ್ದೇಶನದ ಡಿಪ್ಲೊಮಾ ತರಬೇತಿಗೆ ಸೇರಿದರು. ಅಲ್ಲಿನ ವಿದ್ಯಾರ್ಥಿಯಾಗಿದ್ದಾಗ ತರಬೇತಿ ಅವಧಿಯಲ್ಲಿ ಅವರು ತೆಗೆದ 'ಅವಶೇಷ' ಕಿರುಚಿತ್ರ 1975ರ ಅತ್ಯುತ್ತಮ ಪ್ರಯೋಗಾತ್ಮಕ ಚಿತ್ರವೆಂದು ರಾಷ್ಟ್ರೀಯ ಪ್ರಶಸ್ತಿ ಗಳಿಸಿತು.

ಬೆಂಗಳೂರಿನಲ್ಲಿರುವ ಆದರ್ಶ ಚಲನಚಿತ್ರ ಸಂಸ್ಥೆಯ ಪ್ರಿನ್ಸಿಪಾಲರಾಗಿಯೂ ಗಿರೀಶ್ ಕಾಸರವಳ್ಳಿ ಕೆಲಕಾಲ ಸೇವೆ ಸಲ್ಲಿಸಿದ್ದಾರೆ. ಅವರ ಪತ್ನಿ ರಂಗಭೂಮಿ ನಟಿ ವೈಶಾಲಿ ಕೂಡಾ ಚಲನಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ.

**ಘಟಶ್ರಾದ್ಧ** ಕನ್ನಡ ಚಿತ್ರಗಳು ಅತ್ಯಂತ ಅರ್ಥಪೂರ್ಣ ಘಟ್ಟ ತಲುಪಿದ ಸಂಕೇತ ಎಂದು ಲೇಖಕ ಯು. ಆರ್. ಅನಂತಮೂರ್ತಿಯವರೇ ಅಭಿಪ್ರಾಯ ಪಟ್ಟಿರುವುದು ಗಿರೀಶ್ ಕಾಸರವಳ್ಳಿಯವರ ವಿಷಯದಲ್ಲಿ ಸಮಂಜಸವಾಗಿದೆ. ಇಂದಿಗೂ ಅರ್ಥವಂತಿಕೆಯ ಚಿತ್ರ ನಿರ್ಮಾಣದೊಂದಿಗೆ ಗಿರೀಶ್ ಕಾಸರವಳ್ಳಿ

ಕಾಸರವಳ್ಳಿ ನಿರ್ದೇಶನದ "ಘಟಶ್ರಾದ್ಧ"

ಸೃಜನಶೀಲರಾಗಿಯೇ ಉಳಿದಿದ್ದಾರೆ. ಘಟಶ್ರಾದ್ಧ ರಾಷ್ಟ್ರ ಪ್ರಶಸ್ತಿ ಸ್ವರ್ಣ ಕಮಲ ಗಳಿಸಿತು. ಗಿರೀಶ್ ಕಾಸರವಳ್ಳಿ ಅನಂತರದ ದಿನಗಳಲ್ಲಿ "ಆಕ್ರಮಣ" (1980), "ಮೂರು ದಾರಿಗಳು" (1981), "ತಬರನ ಕಥೆ", (1987), "ಬಣ್ಣದ ವೇಷ" (1988), "ಮನೆ" (1990), "ಕ್ರೌರ್ಯ" ಚಿತ್ರಗಳನ್ನು ನಿರ್ದೇಶಿಸಿ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ತಬರನ ಕಥೆ, ಬಣ್ಣದ ವೇಷ ಚಿತ್ರಗಳೂ ರಾಷ್ಟ್ರಪ್ರಶಸ್ತಿ ಪಡೆದಿವೆ. ಆಕ್ರಮಣ, ಮೂರು ದಾರಿಗಳು ರಾಜ್ಯ ಪ್ರಶಸ್ತಿ ಗಳಿಸಿವೆ.

ಗಿರೀಶ್ ಕಾಸರವಳ್ಳಿ ಅವರ ಕಥಾವಸ್ತುವಿನ ಆಯ್ಕೆಯೂ ಕೂಡ ವಿಭಿನ್ನವೇ. "ಘಟಶ್ರಾದ್ಧ"ದಲ್ಲಿ ಸಂಕೇತಗಳನ್ನು ಹೆಚ್ಚು ಹೆಚ್ಚಾಗಿ ಬಳಸಿದ್ದರೆ, ತಬರನ ಕಥೆಯಲ್ಲಿ ತಬರ ಶೆಟ್ಟಿಯ ನೇರನೋಟವಿದೆ. ಇದು ಗಿರೀಶ್ ಕಾಸರವಳ್ಳಿಯವರ ಶೈಲಿಗಳ ಪರಿಚಯ ಮಾಡಿಕೊಡುತ್ತದೆ. ಗಿರೀಶ್ ಕಾಸರವಳ್ಳಿ ಭರವಸೆಯ ನಿರ್ದೇಶಕರಾಗಿದ್ದಾರೆ.



ಹೊಸತನದ ಚಿತ್ರಕ್ಕಷ್ಟೇ ಪ್ರಾಧಾನ್ಯ ನೀಡಿದ ಎಂ. ಎಸ್. ಸತ್ಯು

ಭರವಸೆಯ ನಿರ್ದೇಶನದತ್ತ ಬರಗೂರು ರಾಮಚಂದ್ರಪ್ಪ


ಬರಗೂರು ರಾಮಚಂದ್ರಪ್ಪ ಅವರ "ಬೆಂಕಿ"




ಶ್ರೀಮತಿ ಪ್ರೇಮಾಕಾರಂತ ಕೂಡ "ಫಣಿಯಮ್ಮ" ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು.

1977ರಲ್ಲಿ ವಿ. ಆರ್. ಕೆ. ಪ್ರಸಾದ್ ಅವರ **ಋಷ್ಯ ಶೃಂಗ** ಬಿಡುಗಡೆಯಾಗಿ, ಸಂಗೀತ ಹಾಗೂ ಛಾಯಾಗ್ರಾಹಣಕ್ಕಾಗಿ ಎರಡು ರಾಷ್ಟ್ರೀಯ ಪ್ರಶಸ್ತಿಗಳಿಸಿತು. ಸುರೇಶ್ ಹೆಬ್ಳೀಕರ್, ಸುಂದರಶ್ರೀ, ವಸಂತಲಕ್ಷ್ಮಿ ಮೊದಲಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ನಂತರ **ಪ್ರೇಮ ಕಾಮ** ನಿರ್ದೇಶಿಸಿದರು. ಅದೇ ವರ್ಷ ಸಿ. ಆರ್. ಸಿಂಹ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ **ಕಾಕನ ಕೋಟೆ** ಯನ್ನು ನಿರ್ದೇಶಿಸಿದರು. ಮತ್ತೆ ಬಿ. ವಿ. ಕಾರಂತ್ ಮತ್ತು ಗಿರೀಶ್ ಕಾರ್ನಾಡ್ ಒಟ್ಟಾಗಿ ಎಸ್. ಎಲ್. ಭೈರಪ್ಪ ಅವರ **ತಬ್ಬಲಿಯು ನೀನಾದೆ ಮಗನೆ** ಚಿತ್ರ ನಿರ್ದೇಶಿಸಿದರು. ಮತ್ತೊಬ್ಬ, ಗಮನ ಸೆಳೆವ ಚಿಂತನಶೀಲ ನಿರ್ದೇಶಕ ಎಂ. ಎಸ್. ಸತ್ಯು, ಅನಂತ ಮೂರ್ತಿ ಅವರ ಕಾದಂಬರಿ ಆಧರಿಸಿ **ಬರ** ನಿರ್ದೇಶಿಸಿದರು.

1978 ರಲ್ಲಿ ಹೊಸ ಅಲೆಯಲ್ಲಿ ಕಾಣಿಸಿಕೊಂಡ ಮತ್ತೊಬ್ಬ ನಿರ್ದೇಶಕ ಬರಗೂರು ರಾಮಚಂದ್ರಪ್ಪ, ಮೈತ್ರಿ ಆರ್ಟ್ಸ್ ಮೂಲಕ **ತಮ್ಮದೇ ಆದ ಒಂದು ಊರಿನ ಕಥೆ** ನಿರ್ದೇಶಿಸಿದರು. ಪಂಚಾಯ್ತಿಯಲ್ಲಿ ಸ್ಥಾನ ಗಿಟ್ಟಿಸಲು ಆ ಊರಿನ ವಿವಿಧ ಮತಗಳಿಗೆ ಸೇರಿದವರು ಮಾಡುವ ಪ್ರಯತ್ನಗಳು, ಅಲ್ಲಿನ



"ಕಾಕನಕೋಟೆ" ಯಲ್ಲಿ ಹೊಸತನ



ಸತ್ಯು ಅವರ ವಿಡಂಬನಾತ್ಮಕ ಚಿತ್ರ "ಬರ" ಒಂದು ದಾಖಲೆ

ಡಾ. ಚಂದ್ರಶೇಖರ ಕಂಬಾರರ "ಕಾಡುಕುದುರೆ" ಯಲ್ಲಿ ಮಾನು.



ಮುಖಂಡರ ಚಾಣಾಕ್ಷತನ,ಭದ್ರತೆಗಾಗಿ ಸೆಣಸುವ ವ್ಯವಸ್ಥೆಯ ಕ್ರೌರ್ಯ ಹಾಗೂ ಶೋಷಣೆಯ ವಿವಿಧ ಮುಖಗಳತ್ತ ಹೆಣೆದ ಕತೆಯಿದು. ಪ್ರಮೀಳಾ, ಎಂ. ವಿ. ವಾಸುದೇವರಾವ್, ಎಂ. ಎಸ್. ಉಮೇಶ್, ಪ್ರಸನ್ನ, ವಿಶಾಲಾಕ್ಷಿ, ಉಮಾ ಅಭಿನಯಿಸಿದ್ದಾರೆ. 1978ರ ಸಾಲಿನ ಶ್ರೇಷ್ಠಕತೆ ಹಾಗೂ ಸಂಭಾಷಣೆ ರಚನೆಗಾಗಿ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪಡೆದರು. ನಂತರ ಮೈತ್ರಿದತ್ತ ಮೂವೀಸ್ ಲಾಂಛನದಲ್ಲಿ ಅವರು ತಯಾರಿಸಿದ **ಬೆಂಕಿ** ಚಿತ್ರ 1983-84ನೇ ಸಾಲಿನ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳಿಸಿತು. **ಸೂರ್ಯ**, ಅವರು ನಿರ್ದೇಶಿಸಿದ ಇನ್ನೊಂದು ಚಿತ್ರ. ಮೂರೂ ಚಿತ್ರಗಳು ಪ್ರಶಸ್ತಿ ಪಡೆದಿದ್ದು, ಬರಗೂರು ಚಿಂತನೆ ಹಾಗೂ ವೈಚಾರಿಕ ಚಿತ್ರಗಳನ್ನು ನೀಡುವ ಭರವಸೆದಾಯಕ ನಿರ್ದೇಶಕರಾಗಿದ್ದಾರೆ. ಅವರ ಇತ್ತೀಚಿನ ಚಿತ್ರ **ಕರಡೀಪುರ**(1997). ಒಟ್ಟು ಐದು ಚಿತ್ರಗಳನ್ನು ನಿರ್ದೇಶಿಸಿರುವ ಬರಗೂರು ರಾಮಚಂದ್ರಪ್ಪ ಬೆಂಗಳೂರು ವಿಶ್ವ ವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಬಂಡಾಯ ಸಾಹಿತ್ಯ ಸಂಘಟನೆಯ ಮುಂಚೂಣಿ ಯಲ್ಲಿರುವ ಅವರು ಕರ್ನಾಟಕ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರ ಕಾದಂಬರಿ, ಕತೆ ಹಾಗೂ ವಿಮರ್ಶಾ ಸಂಕಲನಗಳು ಮೌಲಿಕ ಕೊಡುಗೆಗಳಾಗಿವೆ. 78 ರಲ್ಲಿಯೇ ಎಂ. ಎಸ್. ಸತ್ಯು, ವಿಡಂಬನಾತ್ಮಕ **ಚಿತೆಗೂ ಚಿಂತೆ**, ಪಿ. ಎ.ಶ್ರೀನಿವಾಸ್ **ಸ್ಪಂದನ**, ವಿ. ಆರ್. ಕೆ. ಪ್ರಸಾದ್ **ಪ್ರೇಮ-ಕಾಮ**ಗಳನ್ನು ನಿರ್ದೇಶಿಸಿದರು. ಗಿರೀಶ್ ಕಾರ್ನಾಡ್ ಐತಿಹಾಸಿಕ ಹಿನ್ನೆಲೆಯ ಕಥೆ ಉಳ್ಳ **ಒಂದಾನೊಂದು ಕಾಲದಲ್ಲಿ** ನಿರ್ದೇಶಿಸಿದರು. ಗಿರೀಶ್ ಕಾರ್ನಾಡ್ ನಿರ್ದೇಶನದ ಹೊಸ ಅಲೆಯ ಚಿತ್ರಗಳ ಪೈಕಿ **ಒಂದಾನೊಂದು ಕಾಲದಲ್ಲಿ** ಕೊನೆಯ ಚಿತ್ರವಾಗಬಹುದು. ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಶಂಕರನಾಗ್ ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ನಟ ಪ್ರಶಸ್ತಿ ಪಡೆದರು. ಕಳರಿ ಪಯಟ್ ಕತ್ತಿ ಕಾಳಗವಿರುವ 12-13ನೇ ಶತಮಾನದ ಈ ಚಿತ್ರದ ಕತೆಯಲ್ಲಿ ವಿಭಿನ್ನತೆಯಿದ್ದುದರಿಂದ ವಾಣಿಜ್ಯ ದೃಷ್ಟಿಯಿಂದಲೂ ಚಿತ್ರ ಹೆಸರಾಯಿತು. ಹಾಗೆ ನೋಡಿದರೆ ಎಂ. ಎಸ್. ಸತ್ಯು ತಮ್ಮದೇ ಆದ ಶೈಲಿಯ ಮೂಲಕ ಹೆಸರಾಗಿದ್ದಾರೆ. ಅವರು ನಿರ್ದೇಶಿಸಿದ **ಬರ**, **ಕನ್ನೇಶ್ವರರಾಮ**, **ಚಿತೆಗೂ ಚಿಂತೆ** ಹಾಗೂ 1996ರ ***ಗಳಿಗೆ*** ಚಿತ್ರಗಳು ವಿಭಿನ್ನವಾಗಿವೆ. ಟಿ. ಎಸ್. ರಂಗ ***ಗೀಜಗನ ಗೂಡು*** (1978) ಚಿತ್ರದಿಂದ ಭರವಸೆ ಹುಟ್ಟಿಸಿದರು. ನಂತರ 1980ರಲ್ಲಿ **ಸಾವಿತ್ರಿ** ನಿರ್ದೇಶಿಸಿದರು. ಈ ನಡುವೆ ಶಿವರಾಮ ಕಾರಂತರು ಕೂಡ **ಮಲೆಯ ಮಕ್ಕಳು** ಚಿತ್ರವನ್ನು ನಿರ್ದೇಶಿಸಿದರು. 1983ರಲ್ಲಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಪ್ರೇಮಾಕಾರಂತ್, ಎಂ. ಕೆ. ಇಂದಿರಾ ಅವರ **ಫಣಿಯಮ್ಮ** ಕಾದಂಬರಿಯನ್ನು ಚಿತ್ರೀಕರಿಸಿದರು. ಹೊಸ ಅಲೆಯ ಬೆಳವಣಿಗೆಯಲ್ಲಿ ಚಲನಚಿತ್ರ ನಿರ್ದೇಶನಕ್ಕೆ ಬಂದ ಮೊದಲ ಮಹಿಳೆ ಪ್ರೇಮಾಕಾರಂತ್. 1981ರಲ್ಲಿ **ಗ್ರಹಣ** ಚಿತ್ರದ ಮೂಲಕ ಹೊಸ ಅಲೆಯಿಂದ

ಪ್ರಭಾವಗೊಂಡು ಬಂದ ಟಿ. ಎಸ್. ನಾಗಾಭರಣ ಭರವಸೆಯ ನಿರ್ದೇಶಕರೂ ಹೌದು. ಅನಂತರ ಹೊಸ ಅಲೆ ಚಿತ್ರಗಳೆಂದೇ ಚಿತ್ರ ನಿರ್ದೇಶನ ಮಾಡದಿದ್ದರೂ ನಾಗಾಭರಣ **ಮೈಸೂರು ಮಲ್ಲಿಗೆ, ಬ್ಯಾಂಕರ್ ಮಾರ್ಗಯ್ಯ, ಚಿನ್ನಾರಿ ಮುತ್ತ, ನಾಗಮಂಡಲ** ಚಿತ್ರಗಳ ಮೂಲಕ ಪರ್ಯಾಯ ಚಿತ್ರ ಪರಂಪರೆಗೆ ಕಾರಣರಾಗುತ್ತಿದ್ದಾರೆ. 1979ರಲ್ಲಿ ತಮ್ಮದೇ ಕಥೆ ಆಧರಿಸಿ **ಕಾಡು ಕುದುರೆ** ಚಿತ್ರ ನಿರ್ಮಿಸಿ ನಿರ್ದೇಶಕರಾಗಿ ಪ್ರವೇಶಿಸಿದ ನಾಟಕಕಾರ ಚಂದ್ರಶೇಖರ ಕಂಬಾರ, ಅವರದೇ ಆದ ಶೈಲಿಯ ಮೂಲಕ ಗಮನ ಸೆಳೆದರು. ಈ ಚಿತ್ರದ ಗಾಯನಕ್ಕಾಗಿ ಶಿವಮೊಗ್ಗ ಸುಬ್ಬಣ್ಣ ಅವರು ಶ್ರೇಷ್ಠ ಗಾಯಕನಾಗಿ ರಾಷ್ಟ್ರ ಪ್ರಶಸ್ತಿ ಪಡೆದರು. 1981ರಲ್ಲಿ ಚಂದ್ರಶೇಖರ ಕಂಬಾರರು ***ಸಂಗೀತಾ*** ಎನ್ನುವ ಚಿತ್ರ ನಿರ್ದೇಶಿಸಿದರು.



**ಕುಬಿ ಮತ್ತು ಇಯಾಲ** ಮೂಲಕ ಸದಾನಂದ ಸುವರ್ಣ, **ಅವಸ್ಥೆ** ಮೂಲಕ ಕೃಷ್ಣ ಮಾಸಡಿ, **ಕೆಂಡದ ಮಳೆ** ಮೂಲಕ ಬಿ. ಎಸ್. ಗೌರೀಶಂಕರ್, ಇವರುಗಳೆಲ್ಲಾ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಆದರೂ ಹೊಸ ಅಲೆ ಎಂಬುದು ಕರ್ನಾಟಕದಲ್ಲಿ ಇನ್ನೂ ಒಂದು ನಿರಂತರ ಪ್ರಕ್ರಿಯೆಯಾಗಿ ಬೆಳೆಯಲಿಲ್ಲ. ವಾಣಿಜ್ಯ ಚಿತ್ರಗಳಿಗಿಂತ ತೀರಾ ಭಿನ್ನವಾದ ವಸ್ತು, ಭಿನ್ನ ನಿರೂಪಣೆ ಇರುವ ಇಂತಹ ಚಿತ್ರಗಳಿಗೇ ಪ್ರತ್ಯೇಕ ಪ್ರೇಕ್ಷಕ ವರ್ಗ ನಿರ್ಮಿಸುವುದು ಸಾಧ್ಯವಾಗದೇ ಹೋದದ್ದು ದುರದೃಷ್ಟಕರ. ಇಂತಹ ಚಿತ್ರಗಳು 25 ವರ್ಷಗಳ ನಿರಂತರ ಹಾದಿಯಲ್ಲಿ ಸಾಗಿಬಂದ ನಂತರವೂ ಮಾರುಕಟ್ಟೆಯಲ್ಲಿ ಭಾರೀ ಸವಾಲುಗಳನ್ನು ಎದುರಿಸಬೇಕಾಗಿದೆ.

*"ಕನ್ನೇಶ್ವರ ರಾಮ" ಎಂ. ಎಸ್. ಸತ್ಯು ನಿರ್ದೇಶನಕ್ಕೆ ಮತ್ತೊಂದು ಉದಾಹರಣೆ. ದರೋಡೆಕೋರನೊಬ್ಬನ ದಂತ ಕಥೆಯನ್ನು ಎರಡು ಭಾಷೆಗಳಲ್ಲಿ ಚಿತ್ರೀಕರಿಸಲಾಗಿದೆ.*


# ಡಾ. ರಾಜ್‌ಕುಮಾರ್

ಚಿತ್ರರಂಗದ ಇತಿಹಾಸದ ಪುಟಗಳಲ್ಲಿ ಡಾ. ರಾಜ್‌ಕುಮಾರ್ ಅವರದೇ ಒಂದು ಪ್ರತ್ಯೇಕ ಅಧ್ಯಾಯ. ಕನ್ನಡ ಚಿತ್ರರಂಗದ ಇತಿಹಾಸದ ಪುಟಪುಟವನ್ನೂ ಆವರಿಸಿಕೊಂಡಿರುವ ಡಾ. ರಾಜ್‌ಕುಮಾರ್ (ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಮುತ್ತುರಾಜ) ಕನ್ನಡ ಚಿತ್ರರಂಗ ಕಂಡ ವರ್ಣರಂಜಿತ ನಾಯಕ ನಟ. 12 ವರ್ಷದ ಬಾಲ ನಟನಾಗಿರುವಾಗಲೇ ಚಲನಚಿತ್ರರಂಗ ಪ್ರವೇಶಿಸಿದ ಡಾ. ರಾಜ್‌ಕುಮಾರ್, 63 ವರ್ಷ ತುಂಬಿರುವ ಕನ್ನಡ ಚಿತ್ರರಂಗದಲ್ಲಿ 43 ವರ್ಷಗಳಿಂದ ಹಾಸುಹೊಕ್ಕಾಗಿದ್ದಾರೆ. ಅವರು ಅಭಿನಯಿಸದ ಪಾತ್ರವೇ ಇಲ್ಲ. ಅವರು ನಡೆದು ಬಂದ ಹಾದಿಯೇ ಒಂದು ಚರಿತ್ರೆ. ಹೀಗಾಗಿ ಭಾರತ ಸರ್ಕಾರ, ಚಲನಚಿತ್ರ ಪಿತಾಮಹ ದಾದಾಸಾಹೇಬ ಫಾಲ್ಕೆ ಅವರ ಹೆಸರಿನಲ್ಲಿ ನೀಡುವ, ರಾಷ್ಟ್ರದ ಪ್ರತಿಷ್ಠಿತ ಪ್ರಶಸ್ತಿ "ಫಾಲ್ಕೆ ಪ್ರಶಸ್ತಿ"ಯನ್ನು 1996ರಲ್ಲಿ ಡಾ. ರಾಜ್‌ಕುಮಾರ್ ಅವರಿಗೆ ನೀಡಿ ಗೌರವಿಸಿದೆ. ಕನ್ನಡ ಚಲನಚಿತ್ರರಂಗದಲ್ಲಿ ಈ ಪ್ರಶಸ್ತಿ ಪಡೆದ ಮೊದಲಿಗರು ಡಾ. ರಾಜ್‌ಕುಮಾರ್.

"ಶ್ರೀನಿವಾಸ ಕಲ್ಯಾಣ" ದಲ್ಲಿ ಸರೋಜಾದೇವಿ ಹಾಗೂ ಮಂಜುಳಾ ಜೊತೆ



ಹನ್ನೆರಡು ವರ್ಷದ ಬಾಲಕನಾಗಿರುವಾಗ **ಭಕ್ತ ಪ್ರಹ್ಲಾದ** (1942) ಚಿತ್ರದಲ್ಲಿ ಬಾಲನಟನಾಗಿ ಎಸ್. ಪಿ. ಮುತ್ತುರಾಜ ಕಾಣಿಸಿಕೊಂಡರು. ನನ್ನ ಜೀವನದ ಪ್ರಥಮ ಚಿತ್ರ **ಪ್ರಹ್ಲಾದ** ಎಂದು ರಾಜ್‌ಕುಮಾರ್, ದೀಪಾವಳಿ ಸಂಚಿಕೆ (1963) ಯೊಂದಕ್ಕೆ ನೀಡಿದ ಬರಹದಲ್ಲಿ ತಿಳಿಸಿದ್ದಾರೆ. ನಂತರ 1952ರಲ್ಲಿ ಮಹಾತ್ಮ ಪಿಕ್ಚರ್ಸ್‌ರವರ ತಯಾರಿಕೆ **ಶ್ರೀನಿವಾಸ ಕಲ್ಯಾಣ**ದಲ್ಲಿ ಋಷಿಯೊಬ್ಬನ ಪಾತ್ರ ಸಿಕ್ಕಿತು. ಸಪ್ತ ಋಷಿಗಳಲ್ಲಿ ಒಬ್ಬರಾಗಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡರು. ಒಂದೇ ಒಂದು ಸಂಭಾಷಣೆ ಹೇಳುವ ಅವಕಾಶ ದೊರಕಿತು. ಬಿಡುಗಡೆಯಾದ ನಂತರ ಚಿತ್ರದಲ್ಲಿ ಆ ಸಂಭಾಷಣೆ ಇತ್ತೋ ಇಲ್ಲವೋ ಎಂಬುದು ರಾಜಕುಮಾರ್ ಅವರಿಗೂ ನೆನಪಿಲ್ಲ. 1954ರಲ್ಲಿ **ಬೇಡರ ಕಣ್ಣಪ್ಪ** ಚಿತ್ರದ ನಾಯಕ. ನಿರ್ದೇಶಕ ಎಚ್. ಎಲ್. ಎನ್. ಸಿಂಹ ಅವರಿಂದ ಮುತ್ತುರಾಜ್‌ಗೆ "ರಾಜ್‌ಕುಮಾರ್" ಎಂಬ ಹೊಸ ಹೆಸರಿನ ನಾಮಕರಣ. **ಒಡಹುಟ್ಟಿದವರು** (1994) ವರೆಗೆ 205 ಚಿತ್ರಗಳ ಜನಪ್ರಿಯ ನಾಯಕ ನಟರಾಗಿ ರಾಜ್‌ಕುಮಾರ್ ಕನ್ನಡಿಗರ ಕಣ್ಮಣಿ.



ಫೈಟಿಂಗ್‌ನಲ್ಲೂ ಮುಂದು

"ದೇವಸುಂದರಂ" ಜಾನಪದದಲ್ಲಿ

ಕಟೌಟ್ ಸ್ಥಾಪನೆಯಲ್ಲೂ ರಾಜ್‌ಕುಮಾರ್ ಅವರದೇ ವಿಕ್ರಮ.

ಮೈಸೂರು ಜಿಲ್ಲೆ ಚಾಮರಾಜನಗರದ (ಈಗ ಚಾಮರಾಜನಗರವೇ ಜಿಲ್ಲೆಯಾಗಿದೆ) ಬಳಿ ಇರುವ ದೊಡ್ಡ ಗಾಜನೂರಿನಲ್ಲಿ 1929ರ ಏಪ್ರಿಲ್ 24ರಂದು ಮುತ್ತುರಾಜನ ಜನನ. ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಎಂದರೆ ಆ ಕಾಲದಲ್ಲಿ ರಂಗಭೂಮಿಯ ದೊಡ್ಡ ಹೆಸರು. ರೌದ್ರಪಾತ್ರಗಳಿಗೆ ಹೆಸರಾಗಿದ್ದ ಪುಟ್ಟಸ್ವಾಮಯ್ಯನವರು ಗುಬ್ಬಿ ಕಂಪನಿಯಲ್ಲಿ ಕಲಾವಿದರಾಗಿದ್ದರು. ಬಡತನದಿಂದಾಗಿ ಮುತ್ತುರಾಜ್ ವಿದ್ಯಾಭ್ಯಾಸ ಅರ್ಧಕ್ಕೆ ನಿಂತಿತು. ಗುಬ್ಬಿ ಕಂಪನಿಯೇ ವಿಶ್ವವಿದ್ಯಾನಿಲಯವಾಯಿತು. ತಂದೆಯನ್ನು ನೆರಳಿನಂತೆ ಹಿಂಬಾಲಿಸಿದ ಮುತ್ತುರಾಜ್‌ಗೆ ಅವರಿಂದಲೇ ತರಬೇತಿಯಾಯಿತು. ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರ ವಹಿಸುತ್ತಿದ್ದರು. ರಾಜಕುಮಾರ್ ಜೀವನದಲ್ಲಿ ತಂದೆ ಬೀರಿರುವ ಪ್ರಭಾವ ಅಪಾರ. ಫಾಲ್ಕೆ ಪ್ರಶಸ್ತಿ ಪ್ರಕಟವಾದಾಗ ಅವರು ಮೊದಲು ನೆನಪಿಸಿಕೊಂಡದ್ದು ತಂದೆ ಹೇಳಿದ ಮಾತುಗಳನ್ನೇ : "ಇಂತಹ ಸಾಧನೆ ನಿನ್ನಿಂದ ಸಾಧ್ಯ" ಎಂದು ಪುಟ್ಟಸ್ವಾಮಯ್ಯನವರು ಮಗನ ಭವಿಷ್ಯವನ್ನು ಅಂದೇ ನುಡಿದಿದ್ದರು. ಅದು ನಿಜವಾಯಿತು. "ನನ್ನ ತಂದೆ ರಂಗದ ಮೇಲೆ ಹುರಿಮೀಸೆ ತಿರುಗಿಸುತ್ತಾ, ಅರ್ಭಟಿಸುತ್ತಾ ರಂಗ ಪ್ರವೇಶಿಸಿದರೆಂದರೆ ಎಂತಹವರಿಗೂ ಒಂದು ಬಾರಿ ನಡುಕ ಬರುತ್ತಿತ್ತು" ಎಂದು ತಂದೆಯವರ






ಅಭಿನಯವನ್ನು ಬಣ್ಣಿಸುವ ರಾಜ್‌ಕುಮಾರ್ ಅವರಿಗೆ ತಂದೆಯ ಅಭಿನಯ ಬಲು ಪ್ರಿಯ. ನಾನೂ ಅದೇ ರೀತಿ ಮಾಡಬೇಕೆಂದು "ಭಕ್ತ ಪ್ರಹ್ಲಾದ" ಚಿತ್ರದಲ್ಲಿ ಹಿರಣ್ಯಕಶಿಪು ಪಾತ್ರದಲ್ಲಿ ಅವರಂತೆ ಅಭಿನಯಿಸಲು ಸಾಧ್ಯವೇ ಎಂದು ಪ್ರಯತ್ನಿಸಿದೆ. ಆದರೆ ಬರಲಿಲ್ಲ ಎಂದು ಹೇಳುತ್ತಾರೆ. 1942ರಲ್ಲಿ ತಯಾರಾದ 'ಪ್ರಹ್ಲಾದ' ಚಿತ್ರದಲ್ಲಿ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ಹಿರಣ್ಯಕಶಿಪು ಪಾತ್ರದಲ್ಲಿ ಅಭಿನಯಿಸಿದ್ದರು. ಗುಬ್ಬಿ ಕಂಪನಿಯಲ್ಲಿ ಪುಟ್ಟಸ್ವಾಮಯ್ಯನವರು ಅಭಿನಯಿಸುತ್ತಿದ್ದಾಗ ಮುತ್ತುರಾಜುವಿಗೆ ಒಮ್ಮೆ "ಕೃಷ್ಣಲೀಲಾ" ನಾಟಕದಲ್ಲಿ ಸಣ್ಣ ಪಾತ್ರ ದೊರೆತಿತ್ತು. ಕೆಲ ದಿನಗಳ ನಂತರ ಪುಟ್ಟಸ್ವಾಮಯ್ಯನವರು ಗುಬ್ಬಿ ಕಂಪನಿ ತೊರೆದು ಎಂ. ವಿ. ಸುಬ್ಬಯ್ಯ ನಾಯ್ಡು ಅವರ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿಗೆ ಸೇರಿದಾಗ ಅಕಸ್ಮಾತ್ತಾಗಿ ಮುತ್ತುರಾಜ್‌ಗೆ "ಅಂಬರೀಷ" ನಾಟಕದಲ್ಲಿ ಅಂಬರೀಷನ ತಮ್ಮ ರಮಾಕಾಂತನ ಪಾತ್ರ ದೊರಕಿತು. ಅನಂತರ "ಕುರುಕ್ಷೇತ್ರ" ನಾಟಕದಲ್ಲಿ ತಂದೆ ಭೀಮನಾದರೆ ಮಗ ಅರ್ಜುನ. ರಾಜ್‌ಕುಮಾರ್‌ಗೆ ಇದು ರಂಗತಾಲೀಮು. 1951ರಲ್ಲಿ ತಂದೆ ಪುಟ್ಟಸ್ವಾಮಯ್ಯನವರ ನಿಧನ.

ಬಂದೆರಗಿದ ಆಘಾತದಿಂದ ತತ್ತರಿಸಿದ ಮುತ್ತುರಾಜ್, ಮತ್ತೆ ಗುಬ್ಬಿ ಕಂಪನಿ ಸೇರಿ "ಭೂ ಕೈಲಾಸ" ನಾಟಕದಲ್ಲಿ ಅಭಿನಯಿಸಿದರು. ಗುಬ್ಬಿ ಕಂಪನಿ ಅಲ್ಲದೆ, ಶ್ರೀ ಸಾಹಿತ್ಯ ಮಂಡಲಿ, ಶೇಷಾಚಾರ್ಯರ ಶೇಷಕಮಲ ನಾಟಕ ಮಂಡಲಿಯಲ್ಲಿಯೂ ರಾಜ್‌ಕುಮಾರ್ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ.

1954ರಲ್ಲಿ ಗುಬ್ಬಿ ಕರ್ನಾಟಕ ಫಿಲಂಸ್ ಅವರು **ಬೇಡರ ಕಣ್ಣಪ್ಪ** ಚಿತ್ರ ತಯಾರಿಸುವ ಸಲುವಾಗಿ ನಾಯಕನ ಶೋಧನೆಯಲ್ಲಿದ್ದರು. ಗುಬ್ಬಿ ವೀರಣ್ಣ ಹಾಗೂ ಎಚ್.ಎಲ್.ಎನ್. ಸಿಂಹ ಅವರುಗಳು ಮುತ್ತುರಾಜುವನ್ನು ಆಯ್ಕೆ ಮಾಡಿ ಸ್ಕ್ರೀನ್ ಟೆಸ್ಟ್‌ಗಾಗಿ ಮದರಾಸಿಗೆ ಕಳುಹಿಸಿದರು. ಕನ್ನಡ ಚಿತ್ರರಂಗದ ಸೂಪರ್ ಸ್ಟಾರ್ ಒಬ್ಬರ ಉದಯದ ಕಾಲ ಸನ್ನಿಹಿತವಾಗುತ್ತಿತ್ತು. "ಬೇಡರ ಕಣ್ಣಪ್ಪ" ಪಾತ್ರ ಅಭಿನಯಿಸಲು ಮುತ್ತುರಾಜ್ ಆಯ್ಕೆ ನಡೆಯಿತು. ಮುಂದಿನದು ಇತಿಹಾಸ . ಚಿತ್ರ ಶತದಿನ ಓಡಿತು. ಎಲ್ಲೆಡೆ ಸನ್ಮಾನ. ರಾಜ್‌ಕುಮಾರ್ ಅಭಿನಯದ ಪ್ರಶಂಸೆ. ಇದು ಕನ್ನಡದಲ್ಲಿ ತಾರಾಮೌಲ್ಯ ಉದಯಕ್ಕೂ ಕಾರಣವಾಯಿತು. **ಬೇಡರ ಕಣ್ಣಪ್ಪ** ರಾಷ್ಟ್ರೀಯ ಪ್ರಶಸ್ತಿಗಳಿಸಿದ ಮೊದಲ ಚಿತ್ರವಾಗಿಯೂ ದಾಖಲೆಯಲ್ಲಿ ಸೇರಿತು. **ಸೋದರಿ** (1955), 1956 ರಲ್ಲಿ **ಭಕ್ತವಿಜಯ, ಹರಿಭಕ್ತ** ಹಾಗೂ **ಓಹಿಲೇಶ್ವರ** ಚಿತ್ರಗಳಲ್ಲಿ ಅಭಿನಯಿಸಿದ ರಾಜಕುಮಾರ್ ಭಕ್ತಿ ಪ್ರಧಾನ ಚಿತ್ರಗಳಲ್ಲಿ ಸರಿಸಾಟಿಯಿಲ್ಲದ ಅಭಿನಯ ನೀಡಿದರು. ಮೊದಲ ಮೂರು ವರ್ಷಗಳೂ ಭಕ್ತಿ ಪ್ರಧಾನ ಚಿತ್ರಗಳಲ್ಲಿ ಅಭಿನಯಿಸಿದ್ದರಿಂದಾಗಿ 1957ರಲ್ಲಿ ತೆರೆಕಂಡ **ರಾಯರ ಸೊಸೆ** ಚಿತ್ರದ ಬಗ್ಗೆ ಎಲ್ಲರಲ್ಲೂ ಸಹಜವಾಗಿಯೇ ಕುತೂಹಲವಿತ್ತು. ರಾಜ್‌ಕುಮಾರ್ ಸಾಮಾಜಿಕ ಚಿತ್ರದಲ್ಲಿ ಹೇಗೆ ಕಾಣುತ್ತಾರೆ ಎಂಬ ಕೌತುಕವಿತ್ತು. ಇದು ರಾಜ್‌ಕುಮಾರ್ ಅಭಿನಯದ ಮೊದಲ ಸಾಮಾಜಿಕ ಚಿತ್ರವಾಯಿತು. ಇದರಲ್ಲೂ ಅವರ ಅಭಿನಯ ಪ್ರಶಂಸೆಗೆ ಪಾತ್ರವಾಯಿತು. ರಾಜಕುಮಾರ್‌ಗೆ ಅನಂತರ ಹಿನ್ನೆಡೆಯೇ ಇಲ್ಲ. ಅಣ್ಣ ತಂಗಿ, ಚಂದವಳ್ಳಿಯ ತೋಟ, ದೂರದ ಬೆಟ್ಟ, ಮೇಯರ್ ಮುತ್ತಣ್ಣ, ಮಣ್ಣಿನ ಮಗ, ಮೊದಲಾದ ಚಿತ್ರಗಳಲ್ಲಿ ಗ್ರಾಮೀಣ ಬದುಕಿನ ನೈಜ ಚಿತ್ರಣ. ಅಭಿನಯ ಕಂಡುಬಂದರೆ, ಸಂಧ್ಯಾರಾಗ, ನಾಂದಿ, ಕಸ್ತೂರಿ ನಿವಾಸ, ಬಂಗಾರದ ಮನುಷ್ಯ, ಜೀವನ ಚೈತ್ರಗಳಲ್ಲಿ ಮನ ಮಿಡಿಯುವ ಅಭಿನಯ ನೀಡಿದ್ದಾರೆ. ಭೂ ಕೈಲಾಸದ ರಾವಣ, ಮಹಿಷಾಸುರ ಮರ್ದಿನಿಯಲ್ಲಿ ಮಹಿಷಾಸುರ, ಸತಿಶಕ್ತಿಯಲ್ಲಿ ರಕ್ತಾಕ್ಷ, ಭಕ್ತ ಪ್ರಹ್ಲಾದದಲ್ಲಿ ಹಿರಣ್ಯಕಶಿಪು ದಾನವ ಪಾತ್ರಗಳನ್ನು ವಹಿಸಿಕೊಂಡು ತಮ್ಮ ಅಭಿನಯ ಸಾಮರ್ಥ್ಯ ಮೆರೆದಿದ್ದಾರೆ. ಇಮ್ಮಡಿ ಪುಲಿಕೇಶಿ, ರಣಧೀರ ಕಂಠೀರವ, ಶ್ರೀ ಕೃಷ್ಣ ದೇವರಾಯ, ಮಯೂರ ಐತಿಹಾಸಿಕ ಚಿತ್ರಗಳಲ್ಲೂ ಸೈ ಎನಿಸಿಕೊಂಡಿದ್ದಾರೆ. ಸತ್ಯ ಹರಿಶ್ಚಂದ್ರ, ಪುರಂದರದಾಸ, ಸಂತ ತುಕಾರಾಂ, ಕನಕದಾಸ, ಮಂತ್ರಾಲಯ ಮಹಾತ್ಮೆ, ಸರ್ವಜ್ಞ, ಕವಿರತ್ನ ಕಾಳಿದಾಸಗಳ ಮೂಲಕ ಭಕ್ತಿ ಪಾತ್ರಗಳ ತಲ್ಲೀನತೆಯನ್ನು ತೋರಿಸಿದ್ದಾರೆ. ಜೇಡರ ಬಲೆ ಮೂಲಕ ಸಿ. ಐ.ಡಿ 999 ತರಹದ ಬಾಂಡ್ ಪಾತ್ರಗಳಲ್ಲೂ ತಮ್ಮ ಅಭಿನಯ ಸಾಮರ್ಥ್ಯವನ್ನು ವಿಸ್ತರಿಸಿಕೊಂಡಿದ್ದಾರೆ. ರಾಜಕುಮಾರ್ ಅಭಿನಯದ 200 ಚಿತ್ರಗಳಲ್ಲೂ ವೈವಿಧ್ಯಮಯ ಅಭಿನಯ ಕಾಣಬಹುದು.

**ಭಾಗ್ಯದ ಬಾಗಿಲು** (1968) ಚಿತ್ರದ ಮೂಲಕ ಶತಚಿತ್ರಗಳನ್ನು ರಾಜಕುಮಾರ್ ಪೂರೈಸಿದಾಗ ಅದುವರೆಗೆ ವರನಟ ಎಂದು ಕರೆಸಿಕೊಳ್ಳುತ್ತಿದ್ದ ಅವರು "ನಟ ಸಾರ್ವಭೌಮ"ರಾದರು. ಶತಚಿತ್ರಗಳಲ್ಲಿ ಅಭಿನಯಿಸಿದ ಪ್ರಥಮ ನಟ ಎಂಬ ಕೀರ್ತಿಯೂ ಇವರದಾಯಿತು. ಈ ಸಂದರ್ಭದಲ್ಲಿ ನಾಡಿನಾದ್ಯಂತ

*ಕನ್ನಡ ಚಲನ ಚಿತ್ರೋದ್ಯಮಕ್ಕೆ ಧಕ್ಕೆ ಬಂದಾಗಲೆಲ್ಲ ರಾಜಕುಮಾರ್ ನೇತೃತ್ವದಲ್ಲಿ ಚಳವಳಿಯ ಸ್ಫೂರ್ತಿ.*






ಸನ್ಮಾನಗಳ ಸುರಿಮಳೆ. ಇವರ ಅಭಿನಯದ ನೂರು ಚಿತ್ರಗಳ ತುಣುಕುಗಳನ್ನೂ ಸೇರಿಸಿ "ನಟ ಸಾರ್ವಭೌಮ" ಎಂಬ ಚಿತ್ರ ತಯಾರಿಸಿದ್ದು ನಟನೊಬ್ಬನಿಗೆ ಸಂದ ಗೌರವ. ***ಗಂಧದ ಗುಡಿ*** (1973) ಚಿತ್ರದ ಮೂಲಕ ರಾಜ್‌ಕುಮಾರ್ 150 ಚಿತ್ರಗಳನ್ನು ಪೂರೈಸಿದ ನಟರೆನಿಸಿದಾಗ ಅವರನ್ನು ಸನ್ಮಾನಿಸಿ "ರಸಿಕರ ರಾಜ" ಬಿರುದು ನೀಡಲಾಯಿತು. ನಂತರದ ದಿನಗಳಲ್ಲಿ ರಾಜಕುಮಾರ್ ಅವರನ್ನು ಹುಡುಕಿಕೊಂಡು ಬಾರದ ಪ್ರಶಸ್ತಿಗಳಿಲ್ಲ. ರಾಜ್ ಅಭಿಮಾನಿಗಳ ಸಂಖ್ಯೆ ಬಹತ್ತಾಗಿ ಬೆಳೆಯಿತು. 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ರಾಜ್‌ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. 1983ರಲ್ಲಿ ಭಾರತ ಸರ್ಕಾರ "ಪದ್ಮಭೂಷಣ" ನೀಡಿ ಗೌರವಿಸಿತು. 1993ರಲ್ಲಿ ರಾಜ್ಯ ಸರ್ಕಾರ "ಕರ್ನಾಟಕ ರತ್ನ" ಪ್ರಶಸ್ತಿ ನೀಡಿ ಸನ್ಮಾನಿಸಿತು. 1996ರಲ್ಲಿ "ಫಾಲ್ಕೆ ಪ್ರಶಸ್ತಿ"ಯ ಕಿರೀಟ. **ದೇವತಾ ಮನುಷ್ಯ** (1989) ಚಿತ್ರದ ಮೂಲಕ ರಾಜಕುಮಾರ್ 200 ಚಿತ್ರಗಳ ಅಭಿನಯ ಪೂರೈಸಿದರು. (ಅಂಕಿ ಸಂಖ್ಯೆಗಳ ಪ್ರಕಾರ **ಶಿವ ಮೆಚ್ಚಿದ ಕಣ್ಣಪ್ಪ** ಅವರ 200 ನೇ ಚಿತ್ರವಾಗುತ್ತದೆ. ಆದರೆ ಆ ಚಿತ್ರದಲ್ಲಿ ಗೌರವ ನಟರಾಗಿರುವುದರಿಂದ ಅದನ್ನು ದಾಖಲೆಗೆ ಪರಿಗಣಿಸದೆ "ದೇವತಾ ಮನುಷ್ಯ" ಚಿತ್ರವನ್ನೇ 200ನೇ ಚಿತ್ರ ಎಂದು ಹೆಸರಿಸಲಾಗುತ್ತಿದೆ.)

ರಾಜ್‌ಕುಮಾರ್ ಅಭಿನಯಿಸಿದ ***ಬಂಗಾರದ ಮನುಷ್ಯ*** (1972) ಚಲನಚಿತ್ರರಂಗದಲ್ಲೇ ಒಂದು ದಾಖಲೆ ನಿರ್ಮಿಸಿತು. ಬೆಂಗಳೂರಿನ ಸ್ಟೇಟ್ಸ್ ಚಿತ್ರಮಂದಿರದಲ್ಲಿ ದಿನವಹಿ 3 ಪ್ರದರ್ಶನಗಳಲ್ಲಿ 77 ವಾರ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿತು. ನಂತರ ಕೆಂಪೇಗೌಡ ಚಿತ್ರಮಂದಿರದಲ್ಲಿ ಬೆಳಗಿನ ಆಟಗಳಲ್ಲಿ ಮುಂದುವರೆದು 104 ವಾರಗಳ ಕಾಲ ಪ್ರದರ್ಶನಗೊಂಡಿತು. ಈ ದಾಖಲೆಯನ್ನು ಬೇರೆ

"ಭಕ್ತ ಪ್ರಹ್ಲಾದ" ಚಿತ್ರದಲ್ಲಿ ಹಿರಣ್ಯಕಶಿಪುವಿನ ವೈಭವ



ಯಾವ ಚಿತ್ರವೂ ಸರಿಗಟ್ಟಿಲ್ಲ. ರಾಜ್‌ಕುಮಾರ್ ತ್ರಿಪಾತ್ರಗಳಲ್ಲಿ ಅಭಿನಯಿಸಿದ **ಶಂಕರ್ ಗುರು** ಮತ್ತೊಂದು ದಾಖಲೆ ನಿರ್ಮಿಸಿದ ಚಿತ್ರ. ಸತತವಾಗಿ ಒಂದು ವರ್ಷ ಕಾಲ ನಡೆದು ಈ ಚಿತ್ರ ಇತಿಹಾಸ ಸೃಷ್ಟಿಸಿತು. ನಂತರದ ದಿನಗಳಲ್ಲಿ ಆ ರೀತಿಯ ದಾಖಲೆ ಅವರದೇ ಅಭಿನಯದ **ಜೀವನ ಚೈತ್ರ** ದ್ದಾಗಿದೆ. ರಾಜ್‌ಕುಮಾರ್ ಅವರ ಯಶಸ್ಸಿನಲ್ಲಿ ಅವರ ಪತ್ನಿ ಶ್ರೀಮತಿ ಪಾರ್ವತಮ್ಮ ಅವರ ಪಾತ್ರವೂ ಬಹಳ ಮುಖ್ಯವಾದದ್ದು. ಚಲನಚಿತ್ರ ತಯಾರಿಕಾ ಸಂಸ್ಥೆ ಸ್ಥಾಪಿಸಿ, ಮಹತ್ವದ, ಉತ್ತಮ ಕಥಾ ವಸ್ತುಗಳಿರುವ ಚಿತ್ರಗಳನ್ನು ತಯಾರಿಸುತ್ತಿರುವ, ವಿತರಣಾ ಕ್ಷೇತ್ರದಲ್ಲಿಯೂ ಇರುವ ಶ್ರೀಮತಿ ಪಾರ್ವತಮ್ಮ ಚಿತ್ರರಂಗದಲ್ಲಿ ಗಣ್ಯ ನಿರ್ಮಾಪಕಿ ಎನಿಸಿದ್ದಾರೆ.


ರಾಜ್‌ಕುಮಾರ್ ಹಿನ್ನೆಲೆಗಾಯಕರೂ ಆಗುವ ಮೂಲಕ ವಾಕ್ಚಿತ್ರ ಪರಂಪರೆಯಲ್ಲಿ ಆರಂಭಕಾಲದ ಕೊಂಡಿಯನ್ನು ಉಳಿಸಿದ್ದಾರೆ. ವಾಕ್ಚಿತ್ರದ ಆರಂಭ ಕಾಲಕ್ಕೆ ಎಂ. ವಿ. ಸುಬ್ಬಯ್ಯ ನಾಯ್ಡು, ಆರ್. ನಾಗೇಂದ್ರ ರಾವ್, ಕೆಂಪರಾಜ್, ಹೊನ್ನಪ್ಪ ಭಾಗವತರ್ ಎಲ್ಲರೂ ನಾಯಕ ನಟರೂ ಆಗಿದ್ದರಲ್ಲದೆ, ತಮ್ಮ ಪಾತ್ರದ ಹಾಡುಗಳನ್ನು ತಾವೇ ಹಾಡಬೇಕಿತ್ತು. ಆ ಕಾಲದಲ್ಲಿ ಅಭಿನಯದ ಜತೆಗೆ ಕಂಠ ಕೂಡ ಕಲಾವಿದನೊಬ್ಬನಿಗೆ ಬಹಳ ಅಗತ್ಯ ಅರ್ಹತೆಯಾಗಿತ್ತು, ಆದರೆ ರಾಜ್‌ಕುಮಾರ್ ಚಿತ್ರರಂಗ ಪ್ರವೇಶಿಸುವ ವೇಳೆಗೆ (1954) ಹಿನ್ನೆಲೆಗಾಯಕರು ಕಾಣಿಸಿಕೊಂಡಿದ್ದರು. ಹಲವಾರು ಸಂಗೀತ ನಿರ್ದೇಶಕರೂ ಇದ್ದರು. ಹೀಗಾಗಿ ರಾಜಕುಮಾರ್ ಅವರಿಗೆ ಮೊದಲ ಚಿತ್ರದಲ್ಲೇ ಹಾಡುವ ಅವಕಾಶ ದೊರಕಲಿಲ್ಲ. ಆರಂಭದ ರಾಜಕುಮಾರ್ ಚಿತ್ರಗಳಲ್ಲಿ ಟಿ. ಎಂ. ಸೌಂದರರಾಜನ್, ಶೀರ್ಗಾಳಿ ಗೋವಿಂದರಾಜನ್, ಎಂ. ಎಂ. ರಾಜಾ ಮೊದಲಾದವರು ಹಿನ್ನೆಲೆ ಗಾಯಕರಾಗಿದ್ದರು. ನಂತರ ಪಿ. ಬಿ. ಶ್ರೀನಿವಾಸ್ ಅವರು ರಾಜಕುಮಾರ್ ಪಾತ್ರಗಳಿಗೆ ಹಾಡಲಾರಂಭಿಸಿದ್ದು ಹೊಸ ಬೆಳವಣಿಗೆಯಾಯಿತು. ಪಿ. ಬಿ. ಶ್ರೀನಿವಾಸ್ ಅವರ ಕಂಠ ರಾಜಕುಮಾರ್ ಅವರಿಗೆ ಕರಾರುವಾಕ್ಕಾಗಿ ಹೊಂದಿಕೆಯಾಗುತ್ತಿದ್ದುದರಿಂದ ಯಶಸ್ಸು ಕಟ್ಟಿಟ್ಟ ಬುತ್ತಿಯಾಯಿತು.



"ಇಮ್ಮಡಿ ಪುಲಿಕೇಶಿ" ಅಂದಿನ ಕಾಲದ ವೈಭವವನ್ನು ಹೊಸ ವಿನ್ಯಾಸದ ವೇಷಭೂಷಣಗಳಿಂದ ಪ್ರಸ್ತುತ ಪಡಿಸಿದ ಐತಿಹಾಸಿಕ ಚಿತ್ರ

1974ರಲ್ಲಿ ಕನ್ನಡ ಚಿತ್ರರಂಗದಲ್ಲಿ ಒಂದು ದೊಡ್ಡ ಬೆಳವಣಿಗೆ. ಅದು ರಾಜಕುಮಾರ್ ಗಾಯಕರಾಗಿ ಯಶಸ್ವಿಯಾದದ್ದು. ಆ ಹಾಡು ಅಭಿಮಾನಿಗಳಿಗೆ ಬಹಳ ಇಷ್ಟವಾದದ್ದು. ***ಸಂಪತ್ತಿಗೆ ಸವಾಲ್*** ಚಿತ್ರಕ್ಕಾಗಿ ರಾಜಕುಮಾರ್ "ಯಾರೇ ಕೂಗಾಡಲಿ ಊರೇ ಹೋರಾಡಲಿ... ನಿನ್ನ ನೆಮ್ಮದಿಗೆ ಭಂಗವಿಲ್ಲ... ಎಮ್ಮೇ‌ಽಽಽ ನಿನಗೆ ಸಾಟಿಯಿಲ್ಲ....." ಎಂದು ಹಾಡಿದರು. ಇದು ಅಪಾರ ಜನಪ್ರಿಯತೆ ಪಡೆಯಿತು. ನಟನಾಗಿ ರಾಜಕುಮಾರ್ ಎಷ್ಟು ಜನಪ್ರಿಯರೋ, ಗಾಯಕರಾಗಿಯೂ ಈಗ ಅಷ್ಟೇ ಜನಪ್ರಿಯ. ಜಿ. ಕೆ. ವೆಂಕಟೇಶ್

ಸಂಗೀತ ನಿರ್ದೇಶನದಲ್ಲಿ ರಾಜಕುಮಾರ್ ತಮ್ಮ ಪ್ರಥಮ ಗೀತೆ ಹಾಡಿದರು. ಆ ಪರಂಪರೆ ಹಾಗೆಯೇ ಮುಂದುವರಿಯಿತು. ಹಾಗೆ ನೋಡಿದರೆ ರಾಜಕುಮಾರ್ ಹಾಡಿರುವುದು ಇದೇ ಮೊದಲೇನಲ್ಲ. 1959ರಲ್ಲಿ "ಮಹಿಷಾಸುರ ಮರ್ದಿನಿ" ಚಿತ್ರದಲ್ಲಿ ರಾಜಕುಮಾರ್ ಅವರು ಯುಗಳ ಗೀತೆಯೊಂದನ್ನು ಹಾಡಿದ್ದಾರೆ. ಈ ಚಿತ್ರಕ್ಕೂ ಜಿ. ಕೆ. ವೆಂಕಟೇಶ್ ಅವರೇ ಸಂಗೀತ ನಿರ್ದೇಶಕರು. 1956ರಲ್ಲಿ **ಹರಿಭಕ್ತ** ಚಿತ್ರದಲ್ಲಿ ಮಧ್ಯಮಾವತಿ ಮತ್ತು ಮೋಹನರಾಗದಲ್ಲಿ ಶ್ಲೋಕವೊಂದನ್ನು ಹಾಡಿದ್ದಾರೆ. 1956ರಲ್ಲಿಯೇ **ಓಹಿಲೇಶ್ವರ** ಚಿತ್ರದಲ್ಲಿ ಘಂಟಸಾಲ ಅವರು ರೆಕಾರ್ಡಿಂಗ್‌ಗೆ ಬರಲಾಗದ್ದರಿಂದ ಶರಣು ಶಂಭೋ... ಎಂಬ ಶ್ಲೋಕವನ್ನೂ ಜಿ. ಕೆ. ವೆಂಕಟೇಶ್ ರಾಜಕುಮಾರ್ ಅವರಿಂದಲೇ ಹಾಡಿಸಿದರು.





"ಸಂಪತ್ತಿಗೆ ಸವಾಲ್" - ಎಮ್ಮೆ ಹಾಡು ತಂದ ಜನಪ್ರಿಯತೆ.

"ಕಸ್ತೂರಿ ನಿವಾಸ"

"ಶ್ರೀಕೃಷ್ಣ ರುಕ್ಮಿಣಿ, ಸತ್ಯಭಾಮೆ" ಯಲ್ಲಿ ಬಿ. ಸರೋಜಾದೇವಿ ಜೊತೆ



1962ರಲ್ಲಿ **ದೇವಸುಂದರಿ** ಎಂಬ ಚಿತ್ರದಲ್ಲಿ ರಾಜಕುಮಾರ್, ನರಸಿಂಹರಾಜು ಅವರ ಪಾತ್ರಕ್ಕೆ ಯುಗಳ ಗೀತೆಯೊಂದನ್ನೂ ಹಾಡಿದ್ದಾರೆ. ಈ ಹಾಸ್ಯ ಗೀತೆಯನ್ನು ರಾಜಕುಮಾರ್, ಸರೋಜಿನಿ ಪಟ್ಟಾಭಿ ಹಾಡಿದ್ದರು. ಆನಂತರ ರಾಜಕುಮಾರ್ ಬೇರೆ ಯಾವ ನಟನಿಗೂ ಕಂಠದಾನ ಮಾಡಿಲ್ಲ. ತಮ್ಮ ಪುತ್ರ ಶಿವರಾಜಕುಮಾರ್ ಅವರಿಗೆ 1994ರಲ್ಲಿ ರಾಜಕುಮಾರ್ ಕಂಠದಾನ ಮಾಡಿದ್ದಾರೆ. ***ಗಂಧದ ಗುಡಿ ಭಾಗ-2*** ಚಿತ್ರದಲ್ಲಿ "ನಾವಾಡುವ ನುಡಿಯೇ ಕನ್ನಡ ನುಡಿ" ಹಾಗೂ "ಸಮರ" (1995) ಚಿತ್ರದಲ್ಲಿನ ಹಾಡನ್ನು ಶಿವರಾಜಕುಮಾರ್ ಅವರಿಗಾಗಿಯೇ ಹಾಡಿದ್ದಾರೆ. ಕುಮಾರ್ ಬಂಗಾರಪ್ಪ ಅವರಿಗಾಗಿ ಅಶ್ವಮೇಧದಲ್ಲಿ ಹಾಡಿದ್ದಾರೆ. ತಾವೇ ನಾಯಕನಟನಾಗಿ, ತಮ್ಮ ಹಾಡುಗಳನ್ನು ತಾವೇ ಹಾಡುತ್ತಾ ವಾಕ್ಚಿತ್ರ ಆರಂಭಕಾಲದ ಪರಂಪರೆಯನ್ನು ಈಗಲೂ ಎತ್ತಿ ಹಿಡಿದಿರುವ ಭಾರತದ ಏಕೈಕ ನಟ ರಾಜಕುಮಾರ್ ನಾಯಕನಟನಾಗಿ ಚಿತ್ರರಂಗ ಪ್ರವೇಶಿಸಿರುವ ಅವರ ಮತ್ತೊಬ್ಬ ಪುತ್ರ ರಾಘವೇಂದ್ರ ರಾಜಕುಮಾರ್ ಈ ನಾಯಕ-ಗಾಯಕ ಪರಂಪರೆಯನ್ನು ಉಳಿಸಿಕೊಂಡು ಹೋಗುತ್ತಿದ್ದಾರೆ. ಅವರು ನಾಯಕರಾಗಿರುವ ಎಲ್ಲ ಚಿತ್ರಗಳಿಗೂ ಅವರೇ ಹಿನ್ನೆಲೆ ಗಾಯಕರು.



"ಕವಿರತ್ನ ಕಾಳಿದಾಸ"



"ಮಯೂರ" ಐತಿಹಾಸಿಕದಲ್ಲಿ ಕೆ. ಎಸ್. ಅಶ್ವತ್ಥ್ ಜೊತೆ



*ಸಂಪತ್ತಿಗೆ ಸವಾಲ್* ಎಮ್ಮೆ ಹಾಡಿನ ನಂತರ **ಮಯೂರ** ಎಂಬ ಐತಿಹಾಸಿಕ ಚಿತ್ರದಲ್ಲಿ "ನಾನಿರುವುದೆ ನಿಮಗಾಗಿ" ಎಂದು ಹಾಡಿ ಮತ್ತಷ್ಟು ಜನಪ್ರಿಯರಾದರು. ಆನಂತರದ ದಿನಗಳಲ್ಲಿ ಅವರ ಎಲ್ಲ ಚಿತ್ರದಲ್ಲೂ ಹಿನ್ನೆಲೆಗಾಯನ ಅವರ ಪಾಲಿನದೇ ಆದವು. ತಮ್ಮ ಹಾಡುಗಳಿಗೆ ಶಾಸ್ತ್ರೀಯ ಸಂಗೀತದ ಸ್ಪರ್ಶವನ್ನೂ ಅವರು ನೀಡುವುದರಿಂದಾಗಿ **ಜೀವನ ಚೈತ್ರ**ದ ಹಾಡುಗಳು ಜನಪ್ರಿಯವಾದವು. ಈ ಚಿತ್ರದ ಹಿನ್ನೆಲೆ ಗಾಯನಕ್ಕಾಗಿ ಅವರು 1992ರ ಸಾಲಿನ ಕೇಂದ್ರ ಸರ್ಕಾರದ ಶ್ರೇಷ್ಠ ಹಿನ್ನೆಲೆ ಗಾಯಕ ಪ್ರಶಸ್ತಿಯನ್ನೂ ಪಡೆದರು.

ಸಾಮಾಜಿಕ ಕಾಳಜಿ, ಕಳಕಳಿಯನ್ನು ಸಂದರ್ಭ ಬಂದಾಗಲೆಲ್ಲಾ ರಾಜಕುಮಾರ್ ವ್ಯಕ್ತಪಡಿಸಿದ್ದಾರೆ. 1962ರಲ್ಲಿ ಪ್ರವಾಹ ಪರಿಹಾರ ನಿಧಿ ಸಂಗ್ರಹ ಕಾರ್ಯಕ್ಕೆ ಉತ್ಸಾಹದಿಂದ ತಮ್ಮನ್ನು ತೊಡಗಿಸಿಕೊಂಡ ದಿನಗಳಿಂದ ಆರಂಭಿಸಿ, 1996 ರಲ್ಲಿ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಕನ್ನಡ ಚಿತ್ರಗಳಿಗೆ ಚಲನ ಚಿತ್ರಮಂದಿರಗಳನ್ನು ಒದಗಿಸಬೇಕೆಂಬ ಚಳವಳಿಯವರೆಗೆ ಅವರು ಮುಂಚೂಣಿಯಲ್ಲೇ ಇದ್ದಾರೆ. 1982ರಲ್ಲಿ ಗೋಕಾಕ್ ವರದಿ ಜಾರಿಗೆ ಒತ್ತಾಯಿಸಿ ರಾಜ್ಯದಾದ್ಯಂತ ನಡೆದ ಚಳವಳಿಯ ನೇತೃತ್ವವನ್ನು ರಾಜಕುಮಾರ್ ವಹಿಸಿದ್ದರು. ಚಳವಳಿಗೆ ಗಂಭೀರ ಸ್ವರೂಪ ಬಂದದ್ದು ಡಾ. ರಾಜಕುಮಾರ್ ಚಳವಳಿಗೆ ಧುಮುಕಿದಾಗಲೇ. ರಾಜಕುಮಾರ್ ಒಂದು ಶಕ್ತಿಯಾಗಿ ಗೋಚರಿಸಿದ್ದೂ ಆಗಲೇ.

**ಮೇರು ನಟನಿಗೆ ಬಂದ ಉನ್ನತ ಪ್ರಶಸ್ತಿ ರಾಷ್ಟ್ರಪತಿ ಶಂಕರದಯಾಳ ಶರ್ಮ ಅವರಿಂದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸ್ವೀಕಾರ.**

# ಹೊಸ ಪೀಳಿಗೆ

ಭಾರತದ ಚಿತ್ರರಂಗದಲ್ಲಿ ಕನ್ನಡ ಚಿತ್ರರಂಗಕ್ಕೆ ಈಗ ಬಂದು ಪ್ರತ್ಯೇಕ ಸ್ಥಾನವಿದೆ. 64 ವರ್ಷಗಳ ಹಾದಿ ತುಳಿದಿರುವ ಕನ್ನಡ ಚಿತ್ರರಂಗ ಈಗ ಪಕ್ವತೆಯ ಕಡೆ ಸಾಗುತ್ತಿರುವುದು ಸ್ಪಷ್ಟವಾಗಿದೆ. 64 ವರ್ಷಗಳ ಅನುಭವ ಯಾವುದೇ ಚಿತ್ರರಂಗಕ್ಕೆ ಉತ್ತಮ ತಳಪಾಯವೇ ಸರಿ. ಈ ಹಾದಿಯಲ್ಲಿ ಎಷ್ಟೊಂದು ಮಂದಿ ತಮ್ಮ ಶ್ರಮ ಸಾಧನೆಗಳನ್ನು ಚೆಲ್ಲಿದ್ದಾರೆ ಎಂಬ ಸಿಂಹಾವಲೋಕನ ಮಾಡಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ. ಹಲವಾರು ರೀತಿಯ ಸಾಧನೆಗಳು, ಮೈಲಿಗಲ್ಲುಗಳ ಮೇಲೆ ಕನ್ನಡ ಚಿತ್ರರಂಗದ 64 ವರ್ಷದ ಇತಿಹಾಸ ನಿಲ್ಲುತ್ತದೆ. ಪ್ರಸ್ತುತ ಕನ್ನಡ ಚಿತ್ರರಂಗ ಎತ್ತ ಸಾಗುತ್ತಿದೆ ಎಂಬುದನ್ನು ಗಮನಿಸುವುದೂ ಅಗತ್ಯ. ಹಿಂದೆ ಸಿನಿಮಾಕ್ಕೆ ಟಿವಿ. ಚಾನೆಲ್‌ಗಳ ಸ್ಪರ್ಧೆ ಇರಲಿಲ್ಲ. ಈಗ ದಿನದಿಂದ ದಿನಕ್ಕೆ ಸುಧಾರಣೆಗೊಳ್ಳುತ್ತಾ, ಆಧುನಿಕವಾಗುತ್ತಾ ನಡೆದಿರುವ ಟಿ. ವಿ. ಯ ಮೂಲಕ ದಿನದ ಇಪ್ಪತ್ತನಾಲ್ಕು



ಶಿವರಾಜ್‌ಕುಮಾರ್ ಯಶಸ್ಸಿನ ಹಾದಿ ಹಿಡಿದಿರುವ ಹೊಸಪೀಳಿಗೆಯ ಭರವಸೆ

ಗಂಟೆಗಳ ಕಾಲವೂ ಮನೆಯೊಳಗೇ ವಿವಿಧ ಭಾಷೆಯ ಚಲನಚಿತ್ರಗಳು ಪ್ರಸಾರವಾಗುತ್ತಿದೆ. ಮನೆಯೊಳಕ್ಕೆ ಚಲನಚಿತ್ರ ಸೇರಿ ವಿವಿಧ ಮನರಂಜನೆಗಳು ನುಗ್ಗಿರುವುದರಿಂದ ಚಲನಚಿತ್ರರಂಗ ನಿಜಕ್ಕೂ ಹಿನ್ನಡೆ ಕಾಣುವಂತಾಗಿದೆ. ಇತರ ಭಾಷಾ ಚಿತ್ರಗಳ ಮಾರುಕಟ್ಟೆ ವಿಶಾಲವಾಗಿರುವುದರಿಂದ ಅಲ್ಲಿ ಸಮಸ್ಯೆ ಇಲ್ಲ. ಕನ್ನಡಕ್ಕೆ ಸೀಮಿತ ಮಾರುಕಟ್ಟೆಯಿಂದಾಗಿ ಕಠಿಣ ಸ್ಪರ್ಧೆಯೇ ಕಂಡು ಬರುತ್ತಿದೆ. ಬೇರೆ ಭಾಷೆಗಳಿಗೆ ಹೋಲಿಸಿ, ಕನ್ನಡ ಚಿತ್ರಗಳೂ ವೈಭವ, ಶ್ರೀಮಂತಿಕೆ, ಅದ್ದೂರಿತನದಿಂದ ಕೂಡಿರಬೇಕೆಂದು ಪ್ರೇಕ್ಷಕ ಬಯಸುತ್ತಿರುವುದರಿಂದ ಕನ್ನಡ ಚಿತ್ರ ನಿರ್ಮಾಪಕರು ಆಲೋಚಿಸುವಂತಾಗಿದೆ. ಆದ್ದರಿಂದಲೇ 64 ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಚಿತ್ರರಂಗದ ಉಳಿವಿಗೆ ಸರ್ಕಾರದ ನೆರವು ಈಗಲೂ ಬೇಕಾಗಿದೆ. ಎಲ್ಲ ಕನ್ನಡ ಚಿತ್ರಗಳಿಗೂ ಶೇ. ನೂರರಷ್ಟು ತೆರಿಗೆ ವಿನಾಯಿತಿ. ಕರ್ನಾಟಕದಲ್ಲೇ ತಯಾರಾದ ಚಲನಚಿತ್ರಕ್ಕೆ ಸಬ್ಸಿಡಿ, ಎಲ್ಲ ಚಿತ್ರಮಂದಿರಗಳೂ ಕಡ್ಡಾಯವಾಗಿ ಮೂರು ತಿಂಗಳು ಕನ್ನಡ ಚಲನಚಿತ್ರ ಪ್ರದರ್ಶಿಸಬೇಕೆಂಬ ಸರ್ಕಾರದ ಆದೇಶ ಇವುಗಳೆಲ್ಲ ಕನ್ನಡ ಚಿತ್ರರಂಗವನ್ನು ಉಳಿಸುವ ಹಾಗೂ ಬೆಳೆಸುವ ನಿಟ್ಟಿನಲ್ಲಿ ಸಹಕಾರಿಯಾಗುತ್ತಿವೆ.

ಈ ಎಲ್ಲ ಸವಾಲುಗಳನ್ನು ಸ್ವೀಕರಿಸಿ ರವಿಚಂದ್ರನ್ ಅದ್ದೂರಿಯಾಗಿ ಕನ್ನಡ ಚಿತ್ರಗಳನ್ನು ನಿರ್ಮಿಸುತ್ತ ಕನ್ನಡ ಚಿತ್ರದ ಮೇಲೆ ಹಣ ಹೂಡಿದರೆ ಯಶಸ್ಸು ಖಚಿತ ಎಂಬುದನ್ನು ನಿರೂಪಿಸಿ ತೋರಿಸುತ್ತಿದ್ದಾರೆ.

ಅತಿಶೀಘ್ರಗತಿಯಲ್ಲಿ ಜನಪ್ರಿಯತೆ ಪಡೆದ ಸುಧಾರಾಣಿ ಈಗ ಚಿತ್ರರಂಗಕ್ಕೆ ವಿದಾಯ ಹೇಳಿದ್ದರೂ "ಮೈಸೂರು ಮಲ್ಲಿಗೆಯಂತಹ" ಚಿತ್ರಗಳ ಮೂಲಕ ನೆನಪಿನಲ್ಲಿ ಉಳಿಯುತ್ತಾರೆ

ಶೃತಿ - ಕನ್ನಡದಲ್ಲಿ ಗಟ್ಟಿಯಾಗಿ ನಿಂತ ಕನ್ನಡ ತಾರೆ. ಫಿಲಂ ಫೇರ್ ಪ್ರಶಸ್ತಿ ವಿಜೇತೆ





ಆದರೂ ಮೆಜೆಸ್ಟಿಕ್ ಪ್ರದೇಶದಲ್ಲಿ ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಸಿಗುತ್ತಿಲ್ಲ ಎಂಬ ಚಳವಳಿಗಳನ್ನು 1996ರಲ್ಲೂ ನಡೆಸಬೇಕಾಗಿ ಬಂದಿರುವ ಬೆಳವಣಿಗೆಗಳು ಕನ್ನಡ ಚಿತ್ರರಂಗದ ಆತಂಕದ ಸ್ಥಿತಿಯನ್ನೇ ತೋರುತ್ತಿವೆ.

1985ರ ನಂತರ ಕನ್ನಡ ಚಿತ್ರರಂಗಕ್ಕೆ ಹೊಸ ರಕ್ತದ ಮಹಾಪೂರ. ರಂಗಭೂಮಿಯಿಂದ, ಪೂನಾ, ಮದ್ರಾಸ್, ಫಿಲಂ ಇನ್‌ಸ್ಟಿಟ್ಯೂಟ್‌ಗಳಿಂದ ತರಬೇತಿ ಪಡೆದವರು ಬಂದಿದ್ದಾರೆ ತಾರೆಯರ ಪುತ್ರರು ಚಲನಚಿತ್ರರಂಗ ಪ್ರವೇಶಿಸಿದ್ದಾರೆ. ಒಟ್ಟಿನಲ್ಲಿ ಚಲನಚಿತ್ರರಂಗ ಇನ್ನೂ ಆಕರ್ಷಣೆಗೊಳಿಸುತ್ತಾ, ನೂರಾರು ಜನರನ್ನೂ ಆಕರ್ಷಿತರನ್ನಾಗಿಸುತ್ತಾ ಸಾಗಿದೆ. ಹೀಗಾಗಿ ಹೊಸ ಪೀಳಿಗೆಯ ನಟ ನಟಿಯರನ್ನು ನಾವೀಗ ಕಾಣುತ್ತಿದ್ದೇವೆ. ಆರಂಭದ ಕಾಲದಲ್ಲಿದ್ದ ಸುಬ್ಬಯ್ಯ ನಾಯ್ಡು, ಕೆಂಪರಾಜ್, ಇಂದುಶೇಖರ್, ಹೊನ್ನಪ್ಪ ಭಾಗವತರ್ ನಾಯಕ ನಟರುಗಳ ಕಾಲ 1954ರ ನಂತರ ರಾಜ್‌ಕುಮಾರ್, ಕಲ್ಯಾಣ್‌ಕುಮಾರ್, ಉದಯಕುಮಾರ್ ಅವರುಗಳ ಪ್ರವೇಶದ ನಂತರ ಮುಗಿದು ಹೋಯಿತು. ನಂತರದ ಅವಧಿಯಲ್ಲಿ ರಾಜೇಶ್, ಗಂಗಾಧರ್, ರಮೇಶ್ ಒಂದು ಕಾಲಾವಧಿಯಲ್ಲಿ ನಾಯಕ ನಟರಾದರು. ಕಾಲ ಕ್ರಮೇಣ ಆ ಸ್ಥಾನವನ್ನು ವಿಷ್ಣುವರ್ಧನ್, ಶ್ರೀನಾಥ್, ಲೋಕೇಶ್, ಅನಂತನಾಗ್, ಅಂಬರೀಷ್, ಶಂಕರನಾಗ್, ಪ್ರಭಾಕರ್ ಆಕ್ರಮಿಸಿದರು. ಅನಂತರ ಕೆಲ ಕಾಲ ರಾಮಕೃಷ್ಣ, ಜೈ ಜಗದೀಶ್, ಮಾನು, ಅಶೋಕ್ ನಾಯಕ ನಟರಾದರು. ಈಗ ಹೊಸ ಪೀಳಿಗೆಯಲ್ಲಿ ಶಿವರಾಜ್ ಕುಮಾರ್, ರವಿಚಂದ್ರನ್, ರಮೇಶ್,

ರಾಘವೇಂದ್ರರಾಜ್‌ಕುಮಾರ್ ನಾಯಕ - ನಾಯಕ ಪರಂಪರೆಯಲ್ಲಿ ಸಾಗುತ್ತಿರುವ ನಟ. ಜತೆಯಲ್ಲಿ ಭರವಸೆಯ ನಟಿ ನಿವೇದಿತಾ ಜೈನ್.

ರವಿಚಂದ್ರನ್ ಅದ್ದೂರಿ ಚಿತ್ರಗಳಿಗೆ ಹೆಸರು. ನಟ - ನಿರ್ದೇಶಕ





ದೇವರಾಜ್, ಶಶಿಕುಮಾರ್, ರಾಮ್‌ಕುಮಾರ್, ಕುಮಾರ್ ಗೋವಿಂದ್, ರಾಘವೇಂದ್ರ ರಾಜ್‌ಕುಮಾರ್, ಶ್ರೀಧರ್, ಜಗ್ಗೇಶ್, ವಿನೋದ್ ರಾಜ್, ಅಭಿಜಿತ್, ಸಾಯಿಕುಮಾರ್ ನಾಯಕನಟರಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ. ಶಿವರಾಜ್‌ಕುಮಾರ್ ಮತ್ತು ರವಿಚಂದ್ರನ್ ಜನಪ್ರಿಯನಾಯಕನಟರೆನಿಸಿದ್ದಾರೆ.


ಕಳೆದ ಹತ್ತು ವರ್ಷಗಳಲ್ಲಿ ಕನ್ನಡ ಚಲನಚಿತ್ರರಂಗ ಹೊಸತನಕ್ಕಾಗಿ ತಿಣುಕುತ್ತಿರುವುದು ಕಾಣುತ್ತಿದೆ. ಸುತ್ತಮುತ್ತಲ ರಾಜ್ಯಗಳಲ್ಲಿ ಅದ್ದೂರಿ, ಹೊಸತನ, ತಾಂತ್ರಿಕವಾಗಿ ಮುಂದುವರೆದ ಪರಿಸ್ಥಿತಿಗಳ ನಡುವೆ ಕಥೆ, ನಿರ್ದೇಶನ, ಸಂಗೀತ, ನಿರೂಪಣೆ ಎಲ್ಲದರಲ್ಲೂ ಹೊಸತನ್ನು ಕನ್ನಡ ಪ್ರೇಕ್ಷಕ ಕೇಳುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ವರ್ಷಕ್ಕೆ ಬಿಡುಗಡೆಯಾಗುವ ಸುಮಾರು 80 ಚಿತ್ರಗಳಲ್ಲಿ ಐದು ಚಿತ್ರಗಳು ಲಾಭದಾಯಕವಾಗಿ ನಡೆದು ಇತರ ಚಿತ್ರಗಳು ನಷ್ಟ ಅನುಭವಿಸುತ್ತಿರುವಾಗ ಮುಂದಿರುವ ದಾರುಣ ಸ್ಥಿತಿಯ ಅರಿವಾಗದಿರದು. **ಪ್ರೇಮಲೋಕ**, ಓಂ ಚಿತ್ರಗಳು ಯಶಸ್ವಿಯಾದ ಕೂಡಲೇ ಅದೇ ಸೂತ್ರಕ್ಕೆ ಕಟ್ಟುಬಿದ್ದು, ಅದೇ ಟ್ರೆಂಡ್ ಮುಂದುವರೆಸಲಾಗುತ್ತಿದೆ. **ಹಾಲುಂಡ** ತವರು ಯಶಸ್ವಾದರೆ, ಮುಂದೆ ಕಣ್ಣೀರ ಧಾರೆಯನ್ನೇ ಹರಿಸುವ ತವರು, ತೊಟ್ಟಿಲು, ತಾಳಿ.. ಹೆಸರಿನ, ಅದೇ ಮಾದರಿಯ ಸೂತ್ರದ ಚಿತ್ರಗಳ ಪರಂಪರೆಯೇ ಹರಿಯುತ್ತದೆ. ಹೀಗಾಗಿ ವೈವಿಧ್ಯದ ಕೊರತೆ ಎದ್ದು ಕಾಣುತ್ತಿದೆ. ಇಂತಹವುಗಳ ನಡುವೆ **ಮೈಸೂರು ಮಲ್ಲಿಗೆ**ಯಂತಹ ಕಾವ್ಯಮಯ ಚಿತ್ರ, **ಚಿನ್ನಾರಿ ಮುತ್ತ, ನಾಗಮಂಡಲ** ದಂತಹ ಚಿತ್ರಗಳನ್ನು ನಿರ್ದೇಶಿಸುತ್ತ ಟಿ. ಎಸ್. ನಾಗಾಭರಣ ಎದ್ದು ಕಾಣುತ್ತಿದ್ದಾರೆ. **ತರ್ಕ** ಚಿತ್ರದ ಮೂಲಕ



ನಿರ್ದೇಶಕರಾದ ಸುನೀಲ್ ಕುಮಾರ್ ದೇಸಾಯಿ ಭರವಸೆ ಮೂಡಿಸುವ ಹೊಸ ಪೀಳಿಗೆಯ ನಿರ್ದೇಶಕರಾಗಿದ್ದಾರೆ. ಉತ್ಕರ್ಷ (1990), ಸಂಘರ್ಷ (1993), ನಿಷ್ಕರ್ಷ (1993) ಬೆಳದಿಂಗಳ ಬಾಲೆ (1995), "ನಮ್ಮೂರ ಮಂದಾರ ಹೂವೆ" (1996) ಚಿತ್ರಗಳಲ್ಲಿ ಅವರು ವಿಭಿನ್ನತೆಯನ್ನು ತೋರಿದ್ದಾರೆ.

*ದೇವರಾಜ್ - ಖಳನಾಯಕ ಸ್ಥಾನದಿಂದ ನಾಯಕ ನಟ ಸ್ಥಾನಕ್ಕೇರಿದ ಕಲಾವಿದ. 'ವೀರಪ್ಪನ್' ಚಿತ್ರದ ಅಭಿನಯಕ್ಕಾಗಿ ಶ್ರೇಷ್ಠ ನಾಯಕ ನಟ ಪ್ರಶಸ್ತಿ ಪಡೆದ ಕಲಾವಿದ.*


"ಎ" ಶ್, ಓಂ, ಚಿತ್ರಗಳ ಮೂಲಕ ಉಪೇಂದ್ರ, "ರಾಜಕೀಯ", "ಗೋಲೀಬಾರ್"ಗಳ ಮೂಲಕ ನಿರ್ದೇಶಕರಾದ ಶಿವಮಣಿ, 1994ರಲ್ಲಿ "ಸ್ವಾತಿ", "ಜಾಣ", 1996ರಲ್ಲಿ "ಶಿವಸೈನ್ಯ", "ಮಿನುಗುತಾರೆ" ನಿರ್ದೇಶಿಸಿ ಗಮನ ಸೆಳೆದಿದ್ದಾರೆ. ಎಸ್. ನಾರಾಯಣ್, ಮಹೇಂದರ್, ಕೋಡ್ಲು ರಾಮಕೃಷ್ಣ, ಓಂ ಪ್ರಕಾಶ್, ಬಿ. ರಾಮಮೂರ್ತಿ, ವೇಮಗಲ್ ಜಗನ್ನಾಥ್, ನಾಗತಿಹಳ್ಳಿ ಚಂದ್ರಶೇಖರ್, ನಂಜುಂಡೇಗೌಡ, ವಿಜಯ್ -ನಂಜುಂಡಪ್ಪ, ಫಣಿ ರಾಮಚಂದ್ರ ನಿರ್ದೇಶಕರಾಗಿ ಗಮನ ಸೆಳೆದಿದ್ದಾರೆ. "ಶಂಖನಾದ"ಕ್ಕಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ ಉಮೇಶ್ ಕುಲಕರ್ಣಿ, "ಉತ್ತರ ಭೂಪ", "ಗಂಡು ಗೂಳಿಗಳು" ಮೂಲಕ ಸಮಾನಾಂತರ ಚಿತ್ರಗಳನ್ನು ತಯಾರಿಸಿದ್ದಾರೆ. "ಆಗಂತುಕ", "ಕಾಡಿನ ಬೆಂಕಿ", ಚಿತ್ರಗಳ ಮೂಲಕ ಸುರೇಶ್ ಹೆಬ್ಳೀಕರ್, "ಕೆಂಡದ ಮಳೆ" "ಏಳು ಸುತ್ತಿನ ಕೋಟೆ" ಚಿತ್ರಗಳ ಮೂಲಕ ಛಾಯಾಗ್ರಾಹಕ ಬಿ. ಸಿ. ಗೌರೀಶಂಕರ್ ಉತ್ತಮ ಯತ್ನವನ್ನೇನೂ ಮಾಡಿದರು. ಆದರದು ಕ್ರಿಯಾತ್ಮಕವಾಗಿ



ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ರಮೇಶ್ - ನಮ್ಮೂರ ಮಂದಾರ ಹೂವೇ, ವಿ. ಮನೋಹರ ನಿರ್ದೇಶನದ ಓ ಮಲ್ಲಿಗೆ, ಅಮೆರಿಕಾ ಅಮೆರಿಕಾ, ಮುಂಗಾರಿನ ಮಿಂಚು, ಎಸ್. ಎಸ್. ಶಂಕರ್ ನಿರ್ದೇಶನದ ಉಲ್ಟಾ ಪಲ್ಟಾ ಚಿತ್ರಗಳಲ್ಲಿ ನೆನಪಿನಲ್ಲಿ ಉಳಿಯುವ ಅಭಿನಯ. 1986ರಲ್ಲಿ ಗೀತಪ್ರಿಯ ನಿರ್ದೇಶನದ 'ಮೌನಗೀತೆ' ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ರಮೇಶ್, 1997ರಲ್ಲಿ ಕನ್ನಡ ಚಿತ್ರರಂಗದ ಜನಪ್ರಿಯ ನಟರಾಗಿದ್ದಾರೆ. ಈ ನಡುವೆ ತಮಿಳು ಚಿತ್ರರಂಗದಲ್ಲೂ ತಮ್ಮ ಅದೃಷ್ಟ ಪರೀಕ್ಷಿಸಿದ ಅವರು ಕೆ. ಬಾಲಚಂದರ್ ಸೇರಿದಂತೆ ಹಲವಾರು ನಿರ್ದೇಶಕರ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 1997ರಲ್ಲಿ ಅತಿ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ ಯಶಸ್ವಿನಟ.

ಮುಂದುವರೆಯಲಿಲ್ಲ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ **ಅಮೆರಿಕಾ ಅಮೆರಿಕಾ** 1997ರ ಸಾಲಿನ ಕೇಂದ್ರದ ಶ್ರೇಷ್ಠ ಪ್ರಾದೇಶಿಕ ಪ್ರಶಸ್ತಿ ಪಡೆದು ಗಮನ ಸೆಳೆದಿದೆ.

**ಆನಂದ್** (1986) ಮೂಲಕ ಬಂದ ಶಿವರಾಜಕುಮಾರ್, **ಪ್ರೇಮಲೋಕ** (1987) ಯಶಸ್ಸಿನ ನಂತರ ರವಿಚಂದ್ರನ್ ಹೊಸ ಪೀಳಿಗೆಯ ಭರವಸೆಯ ನಾಯಕನಟರಾಗಿದ್ದಾರೆ. ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದಲ್ಲಿ ತಯಾರಾದ **ಆನಂದ್** ಮೂಲಕ ಜನಪ್ರಿಯ ನಟ ಡಾ. ರಾಜಕುಮಾರ್ ಅವರ ಪುತ್ರ ಶಿವರಾಜ ಕುಮಾರ್ ಅವರು ಬೆಳ್ಳಿ ತೆರೆಗೆ ಪರಿಚಿತರಾದರು. ಯುವ ಪ್ರೇಮಿಗಳ ಕಥೆ, ನಾಯಕಿ



*ಶಶಿಕುಮಾರ್ - ಮಾಲಾಶ್ರೀ. ಮಾಲಾಶ್ರೀ ಅಲೆಯಲ್ಲಿ ಮೇಲೆ ಬಂದ ಹೀರೋ. ಈ ಜೋಡಿಯು ಕೆಲ ಕಾಲ ಜನಪ್ರಿಯ*

*ನಂಜುಂಡಿ ಕಲ್ಯಾಣದ ಮೂಲಕ ತೆರೆಗೆ ಬಂದ ಮಾಲಾಶ್ರೀಗೆ ದಿಢೀರ್ ಖ್ಯಾತಿ. ಐದು ವರ್ಷಗಳ ಕಾಲ ಕನ್ನಡ ಚಿತ್ರರಂಗದಲ್ಲಿ ನಾಯಕ ನಟನಷ್ಟೇ ಪ್ರಬಲವಾಗಿ ಮೆರೆದ ಏಕೈಕ ನಟಿ*



(ಸುಧಾರಾಣಿ) ಕೂಡ ಹೊಸ ಮುಖ, ಹಾಡು, ನೃತ್ಯ, ಕುಣಿತ, ಮನರಂಜನೆಗಳು ಯುವಜನಾಂಗದ ಹೊಸ ಅಭಿರುಚಿಯ ದ್ಯೋತಕವಾಗಿದ್ದವು. ಚಿತ್ರ ಯಶಸ್ವಿಯಾಯಿತು. 1986ರಲ್ಲೇ ಶಿವರಾಜ್ ಕುಮಾರ್ ಅಭಿನಯದ ಎರಡನೆಯ ಚಿತ್ರ ವಿಜಯ ಸಾಸನೂರ್ ಅವರ ಕಾದಂಬರಿ ಆಧರಿಸಿದ **ರಥಸಪ್ತಮಿ** ಕೂಡ ಯಶಸ್ವಿಯಾಗಿ ಪ್ರದರ್ಶನ ಕಂಡಿತು. 1987ರಲ್ಲಿ ಅವರ ಮೂರನೇ ಚಿತ್ರ, ಕುಂ. ವೀರಭದ್ರಪ್ಪ ಅವರ "ಬೇಟೆ" ಕಾದಂಬರಿ ಆಧರಿಸಿದ **ಮನ ಮೆಚ್ಚಿದ ಹುಡುಗಿ** ಕೂಡ ರಜತ ಮಹೋತ್ಸವ ಕಂಡಿತು. ಈ ಎರಡು ಚಿತ್ರಗಳನ್ನು ಎಂ. ಎಸ್. ರಾಜಶೇಖರ್ ನಿರ್ದೇಶಿಸಿದ್ದಾರೆ. ಮೊದಲ ಮೂರು ಚಿತ್ರಗಳೂ ರಜತ ಮಹೋತ್ಸವ ಆಚರಿಸಿ ಶಿವರಾಜಕುಮಾರ್ ಅವರನ್ನು ಯಶಸ್ವಿ ನಾಯಕನಟನನ್ನಾಗಿಸಿದವು.



ಶಿವರಾಜಕುಮಾರ್ ಅವರನ್ನಿಟ್ಟುಕೊಂಡು ಕೆಲವು ಹೊಸ ಪ್ರಯೋಗಗಳನ್ನು ಮಾಡುವ ಯತ್ನವನ್ನು ಕೆಲವು ನಿರ್ದೇಶಕರು ಮಾಡಿದರು. ಅವರ ತಂದೆ, ಖ್ಯಾತ ನಟ ಡಾ. ರಾಜಕುಮಾರ್ ಅಭಿನಯಿಸಿದ ಚಿತ್ರಗಳನ್ನು ಮತ್ತೆ ಅವರ ಪುತ್ರ ಶಿವರಾಜಕುಮಾರ್ ಅಭಿನಯದಲ್ಲಿ ಪುನರ್ ನಿರ್ಮಾಣ ಮಾಡುವುದು ಒಂದು ಯತ್ನ. ಮತ್ತೊಂದು ಪ್ರಯೋಗವೆಂದರೆ ಜನಪ್ರಿಯವಾದ ರಾಜಕುಮಾರ್ ಅಭಿನಯದ ಚಿತ್ರವೊಂದರ ಎರಡನೇ ಭಾಗ ನಿರ್ಮಿಸುವುದು. ಆದರೆ ಈ ಎರಡೂ ಪ್ರಯೋಗಗಳು ಉತ್ತಮ ಫಲ ಕೊಡಲಿಲ್ಲ. ಶಿವರಾಜಕುಮಾರ್ ಅಭಿನಯದ "ಶಿವ ಮೆಚ್ಚಿದ ಕಣ್ಣಪ್ಪ" (1988) ಇಂತಹ ಒಂದು ಪ್ರಯತ್ನದ ಚಿತ್ರ.

ಡಾ. ರಾಜಕುಮಾರ್ ಅವರ ಮೊದಲ ಚಿತ್ರ ***ಬೇಡರ ಕಣ್ಣಪ್ಪ*** (1954). 42 ವರ್ಷಗಳ ಹಿಂದೆ ರಾಜಕುಮಾರ್ ಅವರು ವಹಿಸಿದ್ದ ಅದೇ ಪಾತ್ರವನ್ನು 1988ರಲ್ಲಿ ಅವರ ಪುತ್ರ ಶಿವರಾಜ್‌ಕುಮಾರ್ ನಿರ್ವಹಿಸಿದ್ದರು. ಈ ಚಿತ್ರದಲ್ಲಿ ರಾಜ್‌ಕುಮಾರ್ ಕೂಡ ಈಶ್ವರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 1995ರಲ್ಲಿ ಮತ್ತೊಂದು ಬಗೆಯ ಪ್ರಯೋಗ. 1973ರಲ್ಲಿ ಅಪಾರ ಜನಪ್ರಿಯತೆ ಗಳಿಸಿದ್ದ ***ಗಂಧದ ಗುಡಿ***ಯ ಮುಂದುವರೆದ ಭಾಗವನ್ನಾಗಿ ***ಗಂಧದ ಗುಡಿ ಭಾಗ-2*** ಎಂಬ ಚಿತ್ರ ನಿರ್ಮಿಸಲಾಯಿತು. ಶಿವರಾಜಕುಮಾರ್, ಈ ಹಿಂದೆ ತಂದೆ ರಾಜಕುಮಾರ್ ವಹಿಸಿದ್ದ ಪಾತ್ರವನ್ನೇ ವಹಿಸಿದರು. ಈ ಚಿತ್ರದಲ್ಲೂ ಡಾ. ರಾಜಕುಮಾರ್ ಗೌರವನಟರಾಗಿ ಕಾಣಿಸಿಕೊಂಡರು. 1995ರಲ್ಲಿ ತೆರೆಕಂಡ **ಓಂ** ಶಿವರಾಜ್ ಕುಮಾರ್‌ಗೆ ಹೊಸ ಇಮೇಜ್ ಸೃಷ್ಟಿಸಿತು. ಜತೆಗೆ ಕನ್ನಡ ಚಿತ್ರರಂಗದಲ್ಲಿ ಒಂದು ಟ್ರೆಂಡನ್ನೂ ಸೃಷ್ಟಿ ಮಾಡಿತು. **ನಮ್ಮೂರ ಮಂದಾರ ಹೂವೇ** ಯಶಸ್ಸಿನ ನಂತರ ಬಂದ ನಾಗಾಭರಣ ನಿರ್ದೇಶನದ



*ಟಿ. ಎಸ್. ನಾಗಾಭರಣ ಯಶಸ್ವಿ ಚಿತ್ರ/ನಿರ್ದೇಶಕ*

*"ಪ್ರೇಮಲೋಕ" ಹೊಸಪೀಳಿಗೆಯ ಯುವಪೀಳಿಗೆಗೆ ರೋಮಾಂಚನ ನೀಡಿದ ಚಿತ್ರ.*










ಡಿ. ರಾಜೇಂದ್ರ ಬಾಬು
ನಾಗತಿಹಳ್ಳಿ ಚಂದ್ರಶೇಖರ್
ಉಪೇಂದ್ರ
ಎಸ್. ನಾರಾಯಣ್
ಫಣಿ ರಾಮಚಂದ್ರ
ಮಹೇಂದರ್
ಕೂಡ್ಲು ರಾಮಕೃಷ್ಣ
ದಿನೇಶ್ ಬಾಬು

**ಜನುಮದ ಜೋಡಿ** ಶಿವರಾಜ್‌ಕುಮಾರ್ ಅವರನ್ನು ಮತ್ತಷ್ಟು ಜನಪ್ರಿಯಗೊಳಿಸಿದ, ಅದ್ಭುತ ಯಶಸ್ಸು ಪಡೆದ ಮತ್ತೊಂದು ದಾಖಲೆ ಚಿತ್ರವಾಗಿದೆ. ಸಂಗೀತ ನಿರ್ದೇಶಕ ವಿ. ಮನೋಹರ್ ಹಾಗೂ ಸಂಭಾಷಣೆಕಾರ ಬರಗೂರು ರಾಮಚಂದ್ರಪ್ಪ ಅವರಿಗೂ ಈ ಚಿತ್ರ ಖ್ಯಾತಿ ತಂದಿದೆ.

ಡಾ. ರಾಜಕುಮಾರ್ ಅವರ ಮತ್ತೊಬ್ಬ ಪುತ್ರ ರಾಘವೇಂದ್ರ ರಾಜಕುಮಾರ್ ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ **ಚಿರಂಜೀವಿ ಸುಧಾಕರ್** (1988) ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ಆದರೆ **ನಂಜುಂಡಿ ಕಲ್ಯಾಣ** (1989) ಅವರಿಗೆ ಭಾರೀ ಹೆಸರು ತಂದು ಕೊಟ್ಟ ಚಿತ್ರ. ಈ ಚಿತ್ರದ ಮೂಲಕ ನಾಯಕಿಯಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಮಾಲಾಶ್ರೀ, ಐದು ವರ್ಷಗಳ ಕಾಲ ಸೂಪರ್ ಸ್ಟಾರ್ ಆಗಿ ಮೆರೆದರು. ಕನ್ನಡದ ಇನ್ನಾವ ನಟಿಯೂ ಗಳಿಸದಿದ್ದ ಜನಪ್ರಿಯತೆ ಮಾಲಾಶ್ರೀ ಪಾಲಿನದಾಯಿತು ಎಂಬುದು ಗಮನಾರ್ಹ. "ಗಜಪತಿ ಗರ್ವಭಂಗ" (1989). "ಅನುಕೂಲಕ್ಕೊಬ್ಬ ಗಂಡ" (1990). "ಅನುರಾಗದ ಅಲೆಗಳು" (1993), "ನಾವಿಬ್ಬರು ನಮಗಿಬ್ಬರು" (1993), "ಸಾಗರ ದೀಪ" (1994) "ಸೂತ್ರಧಾರ" (1996) ರಾಘವೇಂದ್ರ ರಾಜಕುಮಾರ್ ಅಭಿನಯದ ಇತರ ಚಿತ್ರಗಳು.

ರವಿಚಂದ್ರನ್ ಅವರ ಹೆಸರು ಹಲವಾರು ಕಾರಣಗಳಿಂದ ಉಲ್ಲೇಖಾರ್ಹ, ರವಿಚಂದ್ರನ್ ನಟರಷ್ಟೇ ಅಲ್ಲ, ನಿರ್ದೇಶಕರೂ ಕೂಡ. ಕನ್ನಡ ಚಿತ್ರಗಳಿಗೆ ತಾಂತ್ರಿಕ ಶ್ರೀಮಂತಿಕೆ ತುಂಬಿದ ಕೀರ್ತಿ ಅವರದು, ಹೊಸತನ ಅವರ ಚಿತ್ರಗಳ ವೈಶಿಷ್ಟ್ಯ. **ಖದೀಮ ಕಳ್ಳರು** ಅವರ ಮೊದಲ ಚಿತ್ರ. ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ಹೊರಬಂದ **ಚಕ್ರವ್ಯೂಹ** (1983) ಚಿತ್ರದಲ್ಲಿ ರವಿಚಂದ್ರನ್‌ಗೆ ಮತ್ತೊಂದು ಚಿಕ್ಕಪಾತ್ರ. ನಂತರದ ದಿನಗಳಲ್ಲಿ ನಾಯಕ ನಟನಾಗುತ್ತಾ ಹೆಜ್ಜೆ ಹಾಕಲು ಇದು ನಾಂದಿ. ಮರುವರ್ಷವೇ **ನಾನೇ ರಾಜದ** ನಾಯಕ. ನಂತರ ಅದನ್ನು ಹಿಂಬಾಲಿಸಿ **ಪ್ರೇಮಿಗಳ ಸವಾಲ್**, 1995ರಲ್ಲಿ ಈಶ್ವರಿ ಲಾಂಛನದಲ್ಲಿ ಹಾಸ್ಯ ಪ್ರಧಾನ **ಸಾವಿರ ಸುಳ್ಳು** ರವಿಚಂದ್ರನ್‌ರತ್ತ ದೃಷ್ಟಿ ಹಾಯಿಸಲು ಸಹಾಯಕವಾಯಿತು. ಮತ್ತೆ ಅದೇ ವರ್ಷ ಎನ್. ವೀರಾಸ್ವಾಮಿ ಅವರು, ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲೇ ತಯಾರಿಸಿದ



'ಬೆಳದಿಂಗಳ ಬಾಲೆ' - ಸದಭಿರುಚಿ ಹಾಗೂ ವಿಭಿನ್ನ ಜಾಡಿನ ಚಿತ್ರಗಳಿಗೆ ದಾರಿ ತೋರಿಸಿಕೊಟ್ಟಿತು. ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ ಈ ಚಿತ್ರ ಕನ್ನಡದಲ್ಲಿ ಹೊಸ ರೀತಿಯ ಚಿತ್ರಗಳ ಆರಂಭಕ್ಕೆ ನಾಂದಿ ಹಾಡಿತು.







ನಾನೂ ನನ್ನ ಹೆಂಡ್ತಿ ರವಿಚಂದ್ರನ್ ಅವರ ದಿಕ್ಕನ್ನೇ ಬದಲಾಯಿಸಿತು. ಡಿ. ರಾಜೇಂದ್ರ ಬಾಬು ನಿರ್ದೇಶನದ ಈ ಚಿತ್ರ ರವಿಚಂದ್ರನ್ ಅಷ್ಟೇ ಅಲ್ಲ ಹಾಸ್ಯನಟ ಎನ್. ಎಸ್. ರಾವ್, ಚಿತ್ರಸಾಹಿತಿ, ಸಂಗೀತ ನಿರ್ದೇಶಕ ಹಂಸಲೇಖ (ಪಿ. ಜಿ. ಗಂಗರಾಜ್) ಅವರೂ ಚಿತ್ರರಂಗದಲ್ಲಿ ಮಿನುಗಲು ಕಾರಣವಾಯಿತು.

ಈಶ್ವರಿ ಪಿಕ್ಚರ್ಸ್ ಲಾಂಛನದಲ್ಲಿ ರವಿಚಂದ್ರನ್ ತಾವೇ ಅಭಿನಯಿಸಿ ನಿರ್ದೇಶಿಸಿದ **ಪ್ರೇಮಲೋಕ** ಚಿತ್ರರಂಗದಲ್ಲಿ ಇತಿಹಾಸ ನಿರ್ಮಿಸಿತು. ರವಿಚಂದ್ರನ್ ಜತೆ ಹಿಂದಿ ಚಿತ್ರ ನಟಿ ಜೂಹಿ ಚಾವ್ಲಾ, ಲೀಲಾವತಿ, ಎನ್.ಎಸ್. ರಾವ್, ಶ್ರೀನಾಥ್ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರ ಪ್ರಚಂಡ ಯಶಸ್ಸು ಗಳಿಸಿ ರವಿಚಂದ್ರನ್ ಅವರಿಗೆ 'ಜನಪ್ರಿಯ ಹೀರೋ' ಪಟ್ಟ ಕಟ್ಟಿತು. ಈ ಚಿತ್ರದ ಮೂಲಕ ಹಂಸಲೇಖ ಸಂಗೀತ ನಿರ್ದೇಶಕರಾಗಿ ಖ್ಯಾತಿಗೆ ಬಂದರು. ನಂತರ ರವಿಚಂದ್ರನ್ ನಿರ್ದೇಶಿಸಿದ **ರಣಧೀರ** (1988)



ಭರವಸೆಯ ನಟರು

ರಾಮ್‌ಕುಮಾರ್

ಕುಮಾರ್ ಗೋವಿಂದ್

ಶ್ರೀಧರ್

ಪೊಲೀಸ್ ಹೆಸರಿನ ಚಿತ್ರಗಳ ಮೂಲಕ ದಿಢೀರ್ ಖ್ಯಾತಿಯ ಸಾಯಿಕುಮಾರ್

ಕೂಡ ಯಶಸ್ವಿ ಚಿತ್ರ. ನಂತರದ ದಿನಗಳು ರವಿಚಂದ್ರನ್ ಅವರ ಹರ್ಷದ ದಿನಗಳಾದವು. ಅಂಜದ ಗಂಡು (1988), ಯುದ್ಧಕಾಂಡ, ಯುಗಪುರುಷ, ಕಿಂದರಿಜೋಗಿ (1989), ಬಣ್ಣದ ಗೆಜ್ಜೆ, ಅಭಿಮನ್ಯು (1990), ರಾಮಾಚಾರಿ, ಶಾಂತಿ ಕ್ರಾಂತಿ, ಹಳ್ಳಿಮೇಷ್ಟ್ರು, ಗೋಪಿಕೃಷ್ಣ ಶ್ರೀರಾಮಚಂದ್ರ (1992), ಗಡಿಬಿಡಿಗಂಡ, ಅಣ್ಣಯ್ಯ, ಮನೆದೇವ್ರು (1993) ಹೀಗೆ ಯಶಸ್ವಿ ಚಿತ್ರಗಳು ಬಂದವು.




ಹಂಸಲೇಖ ಅವರ ಚಿತ್ರರಂಗ ಪ್ರವೇಶ ಈ ಕಾಲಾವಧಿಯ ಮಹತ್ವದ ಘಟನೆ (1987). **ಪ್ರೇಮಲೋಕ**ದಿಂದ ಸಂಗೀತ ನಿರ್ದೇಶನ ಆರಂಭಿಸಿದ ಹಂಸಲೇಖ ಒಂಬತ್ತೇ ವರ್ಷಗಳಲ್ಲಿ ನೂರು ಚಿತ್ರಗಳ ಸಂಗೀತ ನಿರ್ದೇಶಕರಾದದ್ದು. 1995ನೇ ಸಾಲಿನ ರಾಷ್ಟ್ರೀಯ ಉತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿಯನ್ನು **ಗಾನಯೋಗಿ ಪಂಚಾಕ್ಷರಿ** ಚಿತ್ರಕ್ಕಾಗಿ ಪಡೆದದ್ದು, ಫಿಲಂಫೇರ್ ಪ್ರಶಸ್ತಿ ಎಲ್ಲವೂ ಅವರ ಪ್ರತಿಭೆಗೆ ಸಾಕ್ಷಿ. ಅವರ ಸಾಹಿತ್ಯ ಹಾಗೂ ಸಹಜವಾಗಿ ಜನಸಾಮಾನ್ಯರಲ್ಲಿ ಹೊರಡುವ ಉದ್ಗಾರ, ಆಶ್ಚರ್ಯ, ಮಾತುಗಳು ಎಲ್ಲದಕ್ಕೂ ಸಂಗೀತದ ಸ್ಪರ್ಶ ನೀಡಿದ್ದು ಹಂಸಲೇಖ ಅವರ ವೈಶಿಷ್ಟ್ಯ. **ಕೋಣ ಈದೈತೆ** ಚಿತ್ರದಲ್ಲಿ ವಾದ್ಯ ಪರಿಕರ ಬಳಸದೆ ಧ್ವನಿಯಲ್ಲೇ ರೀರೆಕಾರ್ಡಿಂಗ್ ಮಾಡಿರುವುದು ಹಂಸಲೇಖರ ಹೊಸತನ. ಚಿಕ್ಕಂದಿನಿಂದ ಸಿನಿಮಾ, ಸಾಹಿತ್ಯದ ಗೀಳು ಹಚ್ಚಿಕೊಂಡಿದ್ದ ಹಂಸಲೇಖ ಅವರು ಹಲವಾರು ನಾಟಕಗಳನ್ನು ರಚಿಸಿ, ತಾವೇ 'ವಿವೇಕರಂಗ' ಎಂಬ ತಂಡ ಕಟ್ಟಿ ಪ್ರದರ್ಶನ ನಡೆಸಿದ್ದಾರೆ. **ರಾಹುಚಂದ್ರ** ಎಂಬ ಚಿತ್ರ ನಿರ್ಮಿಸಲು ಹೊರಟು ಅಪೂರ್ಣವಾಗಿದೆ. **ತ್ರಿವೇಣಿ** (1973) ಚಿತ್ರಕ್ಕಾಗಿ ಅವರು ಮೊದಲ



*ವಿ. ಮನೋಹರ್ "ಜನುಮದ ಜೋಡಿ" ಸಂಗೀತದ ಯಶಸ್ಸಿನ ನಂತರ ಭರವಸೆ ಮೂಡಿಸಿರುವ ಸಂಗೀತ ನಿರ್ದೇಶಕ. 'ಗೆಜ್ಜೆನಾದ' ಚಿತ್ರದ ಉತ್ತಮ ಗೀತರಚನೆಗಾಗಿ ರಾಜ್ಯ ಪ್ರಶಸ್ತಿ ಪಡೆದಿರುವ ಅವರು 'ಓ ಮಲ್ಲಿಗೆ' ಚಿತ್ರದ ಮೂಲಕ ನಿರ್ದೇಶಕರೂ ಆದರು.*

*ಸಣ್ಣ ಪುಟ್ಟ ಪಾತ್ರಗಳಲ್ಲಿ ಅಭಿನಯಿಸುತ್ತಾ ಖಳನಟಸ್ಥಾನದಿಂದ ಹಾಸ್ಯನಟನಾಗಿ ಬಡ್ತಿ ಹೊಂದಿ ಈಗ ನಾಯಕ ನಟ ಸ್ಥಾನ ಹಿಡಿದಿರುವ ಜಗ್ಗೇಶ್, ತಾವು ಹೇಳುವ ಡೈಲಾಗ್ ಶೈಲಿಯಿಂದ ಜನಪ್ರಿಯ.*



ಹಾಡು ಬರೆದರಾದರೂ ಅವರ ಪ್ರತಿಭೆ ಬೆಳಕಿಗೆ ಬಂದದ್ದು, **ನಾನೂ ನನ್ನ ಹೆಂಡ್ತಿ** ಚಿತ್ರದಲ್ಲಿ ಅವರು ಬರೆದ "ಯಾರೇ..... ನೀನು ಚೆಲುವೆ.. ನಿನ್ನಷ್ಟಕ್ಕೆ ನೀನೇ ನಗುವೆ..." ಎಂಬ ಹಾಡು ಜನಪ್ರಿಯವಾದ ನಂತರ. ಅವರು ರವಿಚಂದ್ರನ್ ಅವರ ಚಿತ್ರ ನಿರ್ಮಾಣದ ಖಾಯಂ ಸಂಗೀತ ನಿರ್ದೇಶಕರಾದರು. ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡ ಅವರು "ಹಂಸಲೋಕ" ಎಂಬ ಕ್ಯಾಸೆಟ್ ಕಂಪನಿಯನ್ನೂ ಆರಂಭಿಸಿದ್ದಾರೆ. ತಮ್ಮ ಪುತ್ರ ಅಲಂಕಾರ್ ಅಭಿನಯದ **ಸುಗ್ಗಿ** ಚಿತ್ರದ ಮೂಲಕ ನಿರ್ಮಾಪಕರೂ ಆಗಿದ್ದಾರೆ.

**ಚಿರಂಜೀವಿ ಸುಧಾಕರ್** (1988) ಚಿತ್ರದ ಮೂಲಕ ಖಳನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ಶಶಿಕುಮಾರ್ ಕಾಲಕ್ರಮೇಣ ನಾಯಕನಟನಾಗಿ ಪರಿವರ್ತನೆಗೊಂಡರು. ಮಾಲಾಶ್ರೀ-ಶಶಿಕುಮಾರ್ ಜೋಡಿಯ ಚಿತ್ರಗಳು ಜನಪ್ರಿಯಗೊಂಡು ಆ ಎಲ್ಲ ಚಿತ್ರಗಳೂ ಯಶಸ್ವಿಯಾದವು. 1990ರಲ್ಲಿ **ಪೋಲೀಸನ ಹೆಂಡ್ತಿ** ಶಶಿಕುಮಾರ್‌ಗೆ ಪೂರ್ಣಪ್ರಮಾಣದ ನಾಯಕ ಸ್ಥಾನ ಕಲ್ಪಿಸಿತು. ಆರಂಭದಲ್ಲಿ ಖಳನಟನಾಗಿದ್ದು ನಂತರ ಹೀರೋ ಆಗಿ ಪರಿವರ್ತನೆ ಆಗುವ ನಾಯಕರು ಕನ್ನಡದಲ್ಲಿ ಹೆಚ್ಚಾಗಿಯೇ ಇದ್ದಾರೆ. 1987ರಲ್ಲಿ **ಆಗಂತುಕ** ಚಿತ್ರದ ಮೂಲಕ ಖಳನಾಗಿ ಪ್ರವೇಶಿಸಿದ ದೇವರಾಜ್, ನಂತರದ ದಿನಗಳಲ್ಲಿ ನಾಯಕ ಸ್ಥಾನಕ್ಕೇರಿದರು. ಅಂಬರೀಷ್, ಪ್ರಭಾಕರ್ ಅವರುಗಳು ಕೂಡ ಇದೇ ಹಂತದಿಂದ ನಾಯಕರಾದವರು. ದೇವರಾಜ್ **ಉತ್ಕರ್ಷ** ದಲ್ಲಿ ಉತ್ತಮ ಅಭಿನಯ ನೀಡಿದರು. **ವೀರಪ್ಪನ್** (1990) ಚಿತ್ರದ ಅಭಿನಯಕ್ಕಾಗಿ ರಾಜ್ಯದ ಶ್ರೇಷ್ಠ ನಟ ಪ್ರಶಸ್ತಿ ಪಡೆದರು. ಇದೇ ರೀತಿ ಜಗ್ಗೇಶ್ ಕೂಡ ಖಳನಾಗಿ ಸಣ್ಣಪುಟ್ಟ ಪಾತ್ರ, ಹಾಸ್ಯ ನಟನಾಗಿ ಕೆಲ ಚಿತ್ರಗಳಲ್ಲಿ ಅಭಿನಯಿಸಿ ನಂತರ ನಾಯಕ ನಟರಾದರು. ಜಗ್ಗೇಶ್ ಸಂಭಾಷಣೆ ಹೇಳುವ ಶೈಲಿಯಿಂದಾಗಿ ಜನಪ್ರಿಯ. "ಭಂಡ ನನ್ನ ಗಂಡ". "ತರ್ಲೆ ನನ್ ಮಗ", "ಪೋಲೀಸ್ ಫೈಲ್",

ಬೆಂಗಳೂರಿನ ಅಕ್ಕಿಪೇಟೆಯಲ್ಲಿ ತಂದೆ ಕೆ. ಗೋವಿಂದರಾಜು ಸ್ಥಾಪಿಸಿದ್ದ ಗೀತಾ ಪವರ್ ಪ್ರೆಸ್‌ನಲ್ಲಿ ಕಂಪೋಸಿಟರ್ ಆಗಿದ್ದ ಗಂಗರಾಜು ಓದಿದ್ದು ಎಸ್.ಎಸ್.ಎಲ್.ಸಿ. ವರೆಗೆ ಮಾತ್ರ. ಬಾಲ್ಯದಿಂದಲೇ ಸಂಗೀತದ ಹುಚ್ಚು. ಅಣ್ಣ ಬಾಲಕೃಷ್ಣ ಅವರ ವಾದ್ಯಗೋಷ್ಠಿಯ ಮೂಲಕ ಹಾಡಲು ಪ್ರಾರಂಭಿಸಿದ ಹಂಸಲೇಖ ಈಗ ಕನ್ನಡ ಚಿತ್ರರಂಗ ಕಂಡ ಶೀಘ್ರ ನಡೆಯ ಸಂಗೀತ ನಿರ್ದೇಶಕ.

"ಸೂಪರ್ ನನ್ ಮಗ", "ಸರ್ವರ್ ಸೋಮಣ್ಣ", "ಸೋಮ", "ಪಟ್ಟಣಕ್ಕೆ ಬಂದ ಪುಟ್ಟಿ", ಚಿತ್ರಗಳಲ್ಲಿ ಜಗ್ಗೇಶ್ ನಾಯಕರಾಗಿದ್ದಾರೆ. ಈ ನಡುವೆ ಕಾಶೀನಾಥ್ ಕೂಡ ನಾಯಕನಾಗಿ ಕೆಲಕಾಲ ಮಿಂಚಿದರು. 1976ರಲ್ಲಿಯೇ "ಅಪರೂಪದ ಅತಿಥಿಗಳು" ಚಿತ್ರ ನಿರ್ಮಿಸಿದ್ದ ಕಾಶೀನಾಥ್ 1987ರಲ್ಲಿ "ಅನಾಮಿಕ" ಚಿತ್ರದ ಮೂಲಕ ಜನಪ್ರಿಯರಾದರು. ಈ ಚಿತ್ರದ ಯಶಸ್ಸು ಅವರಿಗೆ ನಾಯಕ ಪಟ್ಟ ಕಲ್ಪಿಸಿತು. ಅವರು ಅಭಿನಯಿಸಿದ "ಅವಳೇ ನನ್ನ ಹೆಂಡ್ತಿ" (1988) ರಜತೋತ್ಸವ ಕಂಡಿತು. ಅವರ ಸ್ವಂತ ತಯಾರಿಕೆ "ಅನಂತನ ಅವಾಂತರ" (1989) ಜನಪ್ರಿಯವಾದ ನಂತರ ಅದೇ ಜಾಡು ಹಿಡಿದ ಕಾಶೀನಾಥ್ ಚಿತ್ರಗಳು ಹಲವಾರು ಬಂದವು. "ಪೋಲೀಸ್ ಸ್ಟೋರಿ" ಚಿತ್ರದ ಮೂಲಕ ಇದ್ದಕ್ಕಿದ್ದಂತೆ ನಾಯಕನಟನಾಗಿ ಬೆಳೆದ ಸಾಯಿಕುಮಾರ್ ನಂತರ ಅದೇ ತರಹದ ಹಲವಾರು ಚಿತ್ರಗಳಲ್ಲಿ ನಾಯಕರಾದರು. 1984ರಲ್ಲಿ ಪುಟ್ಟಣ್ಣ ಕಣಗಾಲ್ "ಅಮೃತ ಘಳಿಗೆ"ಯ ಮೂಲಕ ತೆರೆಗೆ ಪರಿಚಯಿಸಿದ ಶ್ರೀಧರ್, ಮೌನಗೀತೆ (1986). ಆಸ್ಫೋಟ (1988), ಬಿಸಿಲು ಬೆಳದಿಂಗಳು (1989), ಸಂತ ಶಿಶುನಾಳ ಶರೀಫ (1990) ಮೊದಲಾದ ಚಿತ್ರಗಳಲ್ಲಿ ಗಮನ ಸೆಳೆದರು. ಗೆಜ್ಜೆನಾದ (1993)ದ ಮೂಲಕ ರಾಮ್‌ಕುಮಾರ್, "ಶ್" (1993) ಮೂಲಕ ಕುಮಾರ್ ಗೋವಿಂದ್, ಸುಂದರ ಸ್ವಪ್ನಗಳು (1986), ಮೌನಗೀತೆ (1986), ಪಂಚಮವೇದ (1990) ಗಳ ಮೂಲಕ ರಮೇಶ್, ಡ್ಯಾನ್ಸ್ ರಾಜಾ ಡ್ಯಾನ್ಸ್ (1987) ಮೂಲಕ ವಿನೋದರಾಜ್, ಚೈತ್ರದ ಪ್ರೇಮಾಂಜಲಿ (1992) ಮೂಲಕ ರಘುವೀರ್, ರಂಜಿತಾ (1993) ಮೂಲಕ ಅಭಿಜಿತ್ ನಾಯಕ ನಟನಾಗುವ ಹಂಬಲದಲ್ಲಿದ್ದಾರೆ. ವಿಜಯೋತ್ಸವ (1987) ಚಿತ್ರದ ಮೂಲಕ ಬೆಳ್ಳಿತೆರೆಗೆ ಬಂದ ಕುಮಾರ್ ಬಂಗಾರಪ್ಪ (ವಸಂತಕುಮಾರ್) ಶರವೇಗದ ಸರದಾರ (1989). ಆಂಗ್ಯೆಯಲ್ಲಿ ಅಪ್ಸರೆ (1993), ಕ್ಷೀರ ಸಾಗರ (1992) ಚಿತ್ರಗಳ ಮೂಲಕ ಭರವಸೆ ಮೂಡಿಸಿದ್ದರು.

ಹೊಸ ಪೀಳಿಗೆಯ ನಾಯಕಿಯರಲ್ಲಿ ಮಾಲಾಶ್ರೀ ಅವರದು ಇತಿಹಾಸ. ಅವರ ಸಾಧನೆಯೊಂದು ದಾಖಲೆ, ಮಾಲಾಶ್ರೀ ಒಬ್ಬರು ಚಿತ್ರದಲ್ಲಿದ್ದರೆ ಅದು ಗಲ್ಲಾಪೆಟ್ಟಿಗೆ ತುಂಬುವುದು ಖಚಿತ ಎಂಬ ಮಾತು 1989ರ ನಂತರ ಚಿತ್ರರಂಗದಲ್ಲಿ ಜನಜನಿತವಾಯಿತು. "ನಂಜುಂಡಿ ಕಲ್ಯಾಣ"ದಲ್ಲಿ ಗುಂಡಿನ ಹಾಡು ಅವರನ್ನು ಉನ್ನತ ಸ್ಥಾನಕ್ಕೆ ಏರಿಸಿತಲ್ಲದೇ, ಮಾಲಾಶ್ರೀ ಸ್ಟೈಲ್ ಆರಂಭವಾಯಿತು. "ಪೊಲೀಸನ ಹೆಂಡ್ತಿ". "ರಾಣಿ ಮಹಾರಾಣಿ", "ರೆಡಿಮೇಡ್ ಗಂಡ", "ಮಾಲಾಶ್ರೀ ಮಾಮಾಶ್ರೀ", "ಬೆಳ್ಳಿ ಕಾಲುಂಗುರ", "ಹೃದಯ ಹಾಡಿತು" ಮೊದಲಾದ ಚಿತ್ರಗಳ ಯಶಸ್ಸು ಮಾಲಾಶ್ರೀಯ ಮೋಡಿಯಿಂದಲೇ. ಇದೇ ಸಮಯದಲ್ಲಿ ನಾಯಕಿಯರಾಗಿದ್ದ ಸುಧಾರಾಣಿ, ಶೃತಿ, ಭವ್ಯ, ಅವರುಗಳು ಮಾಲಾಶ್ರೀ ನೀಡಿದ ತೀವ್ರ ಪೈಪೋಟಿಯ ನಡುವೆಯೂ ಕದಲದೆ ನಿಂತರಾದರೂ, ಮಾಲಾಶ್ರೀಯಷ್ಟು ಬಿರುಗಾಳಿಯಾಗಲಿಲ್ಲ. "ಮೈಸೂರು ಮಲ್ಲಿಗೆ"ಯಂತಹ ಚಿತ್ರಗಳಲ್ಲಿ ಸುಧಾರಾಣಿ ಉತ್ತಮ ಅಭಿನಯ ನೀಡಿದರು. "ರಂಜಿತಾ" (1993)ದಲ್ಲಿ ಶೃತಿ ಪ್ರಬುದ್ಧ ಅಭಿನಯ ನೀಡಿ ಮುಂದೆಯೂ ಅದನ್ನು ಉಳಿಸಿಕೊಂಡಿದ್ದಾರೆ. ತಾರಾ, ವಿನಯಾ ಪ್ರಸಾದ್, ಚಂದ್ರಿಕಾ, ಕಾವ್ಯ, ವನಿತಾವಾಸು, ಶಿವರಂಜಿನಿ, ಅಭಿನಯ ಮೊದಲಾದವರು ಹಲವಾರು ಅವಕಾಶಗಳಿಂದ ವಂಚಿತರಾದರೇನೋ ಎನಿಸುತ್ತದೆ. ಆದರೆ ಪೋಷಕ ಪಾತ್ರಗ[illegible]ಮಾಶ್ರೀ, ಗಿರಿಜಾ ಲೋಕೇಶ್, ಅಂಜಲಿ, ಕಾಮಿನೀಧರನ್ ಹೆಸರಾಗಿದ್ದಾರೆ. ನಟಿಯರಲ್ಲಿ ಶೃತಿ, ಶೀ[illegible]ನೇದಿತಾ ಜೈನ್, ಚಾರುಲತ ಜನಪ್ರಿಯರಾಗುತ್ತಿದ್ದಾರೆ.

ಹೊಸ ಪೀಳಿಗೆಯ ಜವಾಬ್ದಾರಿ ಈಗ ಹೆಚ್ಚಿದೆ. ನಟ-ನಟಿಯರು ಹೇರಳವಾಗಿ ಬರುತ್ತಿದ್ದಾರಾದರೂ, ಕತೆಗಾರರ, ಚಿತ್ರಕಥೆ, ಸಂಭಾಷಣೆ ಬರೆಯುವವರ ಬರದಿಂದ ಕನ್ನಡ ಚಿತ್ರರಂಗ ನರಳುತ್ತಿರುವುದು ಸ್ಪಷ್ಟವಿದೆ. ಹೊಸರಕ್ತಕ್ಕೆ ಚಿತ್ರರಂಗ ತನ್ನ ಬಾಗಿಲನ್ನು ಪೂರ್ಣವಾಗಿ ತೆರೆಯಬೇಕು. ಹೊಸ ರೀತಿಯ ಕತೆಗಳನ್ನು ಆಯಬೇಕು. ಹೊಸ ಪ್ರತಿಭೆಗಳನ್ನು ಬೆಳಕಿಗೆ ತರಬೇಕು. ಆಗ ಮಾತ್ರ ಕನ್ನಡ ಚಿತ್ರರಂಗ ಜಗತ್ತೇ ಬೆರಗುಗೊಳ್ಳಬಹುದಾದ ಸಾಧನೆ ಮಾಡಬಹುದು.